ಕರ್ನಾಟಕ ಸರ್ಕಾರ

# ಸಮಾಜ ವಿಜ್ಞಾನ

(ಪರಿಷ್ಕೃತ ಪಠ್ಯಪುಸ್ತಕ)

## ಭಾಗ – 2

# 8

## ಎಂಟನೆಯ ತರಗತಿ

©KTBS Not to be republished

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)

100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ,

ಬೆಂಗಳೂರು – 85

# ಪರಿವಿಡಿ


| ಕ್ರಮ ಸಂಖ್ಯೆ | ಶೀರ್ಷಿಕೆ | ಪುಟ ಸಂಖ್ಯೆ |
|---|---|---|
| | **ಇತಿಹಾಸ** | |
| 7. | ಮೌರ್ಯರು ಮತ್ತು ಕುಶಾಣರು | 1 |
| 8. | ಗುಪ್ತರು ಮತ್ತು ವರ್ಧನರು | 8 |
| 9. | ದಕ್ಷಿಣ ಭಾರತ – ಶಾತವಾಹನರು, ಕದಂಬರು ಮತ್ತು ಗಂಗರು | 15 |
| 10. | ಬಾದಾಮಿಯ ಚಾಳುಕ್ಯರು ಮತ್ತು ಕಂಚಿಯ ಪಲ್ಲವರು | 22 |
| 11. | ಮಾನ್ಯಖೇಟದ ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಳುಕ್ಯರು | 28 |
| 12. | ಚೋಳರು ಮತ್ತು ದ್ವಾರಸಮುದ್ರದ ಹೊಯ್ಸಳರು | 35 |
| | **ರಾಜ್ಯಶಾಸ್ತ್ರ** | |
| 3. | ಮಾನವ ಹಕ್ಕುಗಳು | 41 |
| 4. | ಸ್ಥಳೀಯ ಸರ್ಕಾರಗಳು | 47 |
| | **ಸಮಾಜಶಾಸ್ತ್ರ** | |
| 3. | ಸಾಮಾಜಿಕ ಸಂಸ್ಥೆಗಳು | 57 |
| 4. | ಸಮಾಜದ ಪ್ರಕಾರಗಳು | 62 |
| | **ಭೂಗೋಳ ವಿಜ್ಞಾನ** | |
| 3. | ವಾಯುಗೋಳ | 71 |
| 4. | ಜಲಗೋಳ | 84 |
| 5. | ಜೀವಗೋಳ | 92 |
| | **ಅರ್ಥಶಾಸ್ತ್ರ** | |
| 3. | ರಾಷ್ಟ್ರೀಯ ಆದಾಯ ಮತ್ತು ಭಾರತದ ಅರ್ಥವ್ಯವಸ್ಥೆಯ ವಿವಿಧ ವಲಯಗಳು | 98 |
| 4. | ಸರ್ಕಾರ ಮತ್ತು ಅರ್ಥವ್ಯವಸ್ಥೆ | 108 |
| | **ವ್ಯವಹಾರ ಅಧ್ಯಯನ** | |
| 2. | ವ್ಯವಹಾರ ಮತ್ತು ಕೈಗಾರಿಕೆ | 118 |
| 3. | ವಿವಿಧ ವ್ಯವಹಾರ ಸಂಘಟನೆಗಳು | 128 |


©KTBS Not to be re published

## ಅಧ್ಯಾಯ – 7

# ಮೌರ್ಯರು ಮತ್ತು ಕುಶಾಣರು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಭಾರತ ಕಂಡ ಮೊದಲ ಸಾಮ್ರಾಜ್ಯ ಮೌರ್ಯರು.*
- *ಮೌರ್ಯ ಸಾಮ್ರಾಜ್ಯದ ಸುಪ್ರಸಿದ್ಧ ದೊರೆ ಅಶೋಕನ ಸಾಧನೆ, ಆಡಳಿತ ಮತ್ತು ಕೊಡುಗೆಗಳು.*
- *ಕುಶಾಣರ ಇತಿಹಾಸ, ಹಾಗೂ ಕನಿಷ್ಕನ ಆಡಳಿತ ಮತ್ತು ವಾಸ್ತುಶಿಲ್ಪದ ಕೊಡುಗೆಗಳು.*
- *ಮೌರ್ಯರ ಕಾಲದಲ್ಲಿನ ಅಶೋಕನ ಸಾಮ್ರಾಜ್ಯದ ಪ್ರದೇಶವನ್ನು ಭಾರತದ ಭೂಪಟದಲ್ಲಿ ಗುರುತಿಸುವುದು.*

## ಮೌರ್ಯರು

ಭಾರತ ಕಂಡ ಮೊಟ್ಟಮೊದಲ ಸಾಮ್ರಾಜ್ಯ ಮೌರ್ಯರದು. ಇವರು ಮಗಧದಿಂದ ರಾಜ್ಯವನ್ನಾಳಿದರು. ಚಂದ್ರಗುಪ್ತಮೌರ್ಯ, ಬಿಂದುಸಾರ ಹಾಗೂ ಅಶೋಕ ಈ ಮನೆತನದ ರಾಜರುಗಳಲ್ಲಿಯೇ ಪ್ರಮುಖರು. ಈ ರಾಜಮನೆತನವು ಚಂದ್ರಗುಪ್ತಮೌರ್ಯನಿಂದ ಸ್ಥಾಪನೆಯಾಯಿತು. ಇವನ ಪ್ರಖ್ಯಾತಿಯನ್ನು ಗ್ರೀಕರ ರಾಯಭಾರಿಯಾಗಿದ್ದ ಮೆಗಸ್ತನೀಸನು 'ಇಂಡಿಕಾ'ದಲ್ಲಿ ದಾಖಲಿಸಿ ಅಮರಗೊಳಿಸಿದನು.

**ಆಕರಗಳು**

ಮೌರ್ಯ ಸಾಮ್ರಾಜ್ಯದ ಇತಿಹಾಸವನ್ನು ಅರಿಯಲು ನಮಗೆ ಲಭ್ಯವಿರುವ ಆಕರ(ಆಧಾರ)ಗಳು ಅತ್ಯಲ್ಪವಾದರೂ ಅವುಗಳು ನೀಡುವ ಮಾಹಿತಿ ಅಮೂಲ್ಯವಾಗಿವೆ. ಅವುಗಳನ್ನು ಈ ಕೆಳಗೆ ಗಮನಿಸಬಹುದು.

• **ಮೆಗಸ್ತನೀಸನ 'ಇಂಡಿಕಾ' :** ಮೆಗಸ್ತನೀಸನು ಗ್ರೀಕ್‌ನ ರಾಯಭಾರಿಯಾಗಿ ಚಂದ್ರಗುಪ್ತಮೌರ್ಯನ ಆಸ್ಥಾನಕ್ಕೆ ಬಂದನು. ಅವನು ಮೌರ್ಯರ ರಾಜಧಾನಿ 'ಪಾಟಲಿಪುತ್ರ'ದಲ್ಲಿನ ತನ್ನ ಅನುಭವಗಳನ್ನು 'ಇಂಡಿಕಾ' ಎಂಬ ಕೃತಿಯಲ್ಲಿ ದಾಖಲಿಸಿದ್ದಾನೆ. ಈ ಕೃತಿಯು ನಮಗೆ ಇಂದು ದೊರೆತಿಲ್ಲವಾದರೂ, ಅದರಲ್ಲಿನ ಸಂಗತಿಗಳನ್ನು ನಂತರ ಬಂದ ಗ್ರೀಕಿನ ಬರಹಗಾರರಾದ ಡಿಯೋಡೋರಸ್, ಸಿಕ್ಯುಲಸ್, ಸ್ಟ್ರಾಬೋ, ಪ್ಲಿನಿ ಮತ್ತು ಅರಿಯನ್ ಅವರುಗಳು ತಮ್ಮ ಗ್ರಂಥಗಳಲ್ಲಿ ದಾಖಲಿಸಿದ್ದಾರೆ. 'ಇಂಡಿಕಾ' ಕೃತಿಯು ಮೌರ್ಯರ ಕಾಲದ ನಗರಾಡಳಿತ, ಸಾಮಾಜಿಕ ಮತ್ತು ಆರ್ಥಿಕ ಸಂಗತಿಗಳನ್ನು ಕುರಿತು ತಿಳಿಸಿಕೊಡುತ್ತದೆ.

• **ಅರ್ಥಶಾಸ್ತ್ರ:** ಅರ್ಥಶಾಸ್ತ್ರವನ್ನು ಚಂದ್ರಗುಪ್ತಮೌರ್ಯನ ಗುರು ಹಾಗೂ ಪ್ರಧಾನಮಂತ್ರಿಯಾದ ಕೌಟಿಲ್ಯನು ಬರೆದಿದ್ದಾನೆ. ಅವನಿಗೆ ಚಾಣಕ್ಯ ಮತ್ತು ವಿಷ್ಣುಗುಪ್ತ ಎಂಬ ಹೆಸರುಗಳೂ ಇವೆ. ಅರ್ಥಶಾಸ್ತ್ರ ಗ್ರಂಥವು ಸಂಸ್ಕೃತ ಭಾಷೆಯಲ್ಲಿ ರಚಿಸಲ್ಪಟ್ಟಿದೆ. ಇದು ರಾಜನೊಬ್ಬನು ತಿಳಿಯಲೇಬೇಕಾದ ರಾಜ್ಯಾಡಳಿತ, ವಿದೇಶಾಂಗ ನೀತಿ, ನ್ಯಾಯದಾನದ ಸಂಗತಿಗಳನ್ನು ವಿವರವಾಗಿ ತಿಳಿಸುತ್ತದೆ. ಈ ಗ್ರಂಥದಿಂದ ಮೌರ್ಯರ ಕಾಲದ ರಾಜಕೀಯ, ಆರ್ಥಿಕ, ಆಡಳಿತಾತ್ಮಕ, ಸಾಮಾಜಿಕ ಮೊದಲಾದ ಸಂಗತಿಗಳನ್ನು ತಿಳಿಯಬಹುದು.

> ***ಅರ್ಥಶಾಸ್ತ್ರ** : 1902ರಲ್ಲಿ ಮೈಸೂರಿನ ಓರಿಯಂಟಲ್ ಗ್ರಂಥಾಲಯದಲ್ಲಿ ಆರ್.ಶಾಮಶಾಸ್ತ್ರಿಯವರು ಕೌಟಿಲ್ಯನು ರಚಿಸಿದ ಅರ್ಥಶಾಸ್ತ್ರದ ಹಸ್ತಪ್ರತಿಯನ್ನು ಪತ್ತೆಮಾಡಿದರು. ಇದು ಪಾಶ್ಚಾತ್ಯ ಜಗತ್ತು ಕಂಡುಕೊಂಡ ಅರ್ಥಶಾಸ್ತ್ರಕ್ಕಿಂತ ಭಿನ್ನವಾಗಿದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ರಾಜ್ಯಾಡಳಿತ ಕ್ರಮಗಳು, ಅರಸ, ಪ್ರಧಾನಿ ಮತ್ತಿತರರ ಜವಾಬ್ದಾರಿಗಳನ್ನು, ರಾಜ್ಯದ ಅಂಗಗಳು, ರಾಜ್ಯದ ಆದಾಯ ಮೂಲಗಳು, ತೆರಿಗೆ ಸಂಗ್ರಹಣೆಯ ಮಾರ್ಗದರ್ಶಿ ತತ್ವಗಳು, ಅಂತರರಾಜ್ಯ ಸಂಬಂಧಗಳು ಇತ್ಯಾದಿ ವಿಷಯಗಳನ್ನಲ್ಲದೆ ಹಣಕಾಸಿನ ನಿರ್ವಹಣೆಯನ್ನು ಚರ್ಚಿಸಲಾಗಿದೆ. ಗೂಢಾಚಾರ ಇಲಾಖೆ, ಸೈನ್ಯ ವ್ಯವಸ್ಥೆಯ ಬಗ್ಗೆ ವಿಶೇಷ ಒತ್ತನ್ನು ಅರ್ಥಶಾಸ್ತ್ರದಲ್ಲಿ ನೀಡಲಾಗಿದೆ. ಕೌಟಿಲ್ಯನ ಅರ್ಥಶಾಸ್ತ್ರವು ಸಾವಿರಾರು ವರ್ಷಗಳ ನಂತರವೂ ತನ್ನ ವೈಶಿಷ್ಟ್ಯತೆಯಿಂದಾಗಿ ಜಗತ್ತಿನಾದ್ಯಂತ ವಿದ್ವಾಂಸರನ್ನು ಆಕರ್ಷಿಸುತ್ತಿದೆ.*

©KTBS Not to be republished

• **ಮುದ್ರಾರಾಕ್ಷಸ:** ಇದು ವಿಶಾಖದತ್ತ ಬರೆದ ಒಂದು ಸಂಸ್ಕೃತ ನಾಟಕ. ಇದರಲ್ಲಿ ಕೌಟಿಲ್ಯನು ಚಂದ್ರಗುಪ್ತ ಮೌರ್ಯನನ್ನು ಅಧಿಕಾರಕ್ಕೆ ತಂದ ಕಥಾನಕವು ನಿರೂಪಿತವಾಗಿದೆ.

• **ದೀಪವಂಶ ಮತ್ತು ಮಹಾವಂಶ:** ಇವು ಶ್ರೀಲಂಕಾದ ಬೌದ್ಧ ಸಾಹಿತ್ಯ ಕೃತಿಗಳು. ಇದರಲ್ಲಿ ಅಶೋಕನು ಬೌದ್ಧಧರ್ಮವನ್ನು ಶ್ರೀಲಂಕಾಗೆ ವಿಸ್ತರಿಸಿದ ಬಗೆಗಿನ ವಿವರಗಳು ದೊರಕುತ್ತವೆ.

• **ಅಶೋಕನ ಶಾಸನಗಳು:** ಅಶೋಕನ ಬಗೆಗೆ ಅತ್ಯಂತ ಅಧಿಕೃತವಾಗಿ ಹೇಳುವ ದಾಖಲೆಗಳೆಂದರೆ ಶಾಸನಗಳು. ಈ ಶಾಸನಗಳಿಂದ ಅಶೋಕನ ಸಾಮ್ರಾಜ್ಯದ ವಿಸ್ತಾರ, ಅವನ ಧಮ್ಮ ಸಂದೇಶದ ವಿಚಾರ, ಕಳಿಂಗ ಯುದ್ಧದ ವಿವರ ಮೊದಲಾದ ಸಂಗತಿಗಳನ್ನು ತಿಳಿಯಬಹುದು.

## ಚಂದ್ರಗುಪ್ತಮೌರ್ಯ (ಸಾ.ಶ.ಪೂ. 321–298)

ಮೌರ್ಯ ಸಾಮ್ರಾಜ್ಯವನ್ನು ಚಂದ್ರಗುಪ್ತಮೌರ್ಯ ಸ್ಥಾಪಿಸಿದನು. ಚಂದ್ರಗುಪ್ತಮೌರ್ಯನು ತನ್ನ ಗುರುವಾದ ಕೌಟಿಲ್ಯನ ಮಾರ್ಗದರ್ಶನದಲ್ಲಿ ನಂದ ವಂಶದ ಕೊನೆಯ ದೊರೆಯನ್ನು ಪದಚ್ಯುತಗೊಳಿಸಿ ತನ್ನ 25ನೇ ವಯಸ್ಸಿನಲ್ಲಿ ಅಧಿಕಾರಕ್ಕೆ ಬಂದನು. ಈ ಹೊತ್ತಿಗೆ ವಾಯವ್ಯ ಭಾರತದಲ್ಲಿ ಪಂಜಾಬ್ ಪ್ರಾಂತ್ಯದವರೆಗಿನ ಈ ಪ್ರದೇಶವನ್ನು ಅಲೆಕ್ಸಾಂಡರನ ಉತ್ತರಾಧಿಕಾರಿಯಾದ ಸೆಲ್ಯೂಕಸ್ ನಿಕ್ಯಾಟರ್ ಆಳುತ್ತಿದ್ದನು. ಸಾ.ಶ.ಪೂ. 305ರಲ್ಲಿ ಅವನೊಂದಿಗೆ ಚಂದ್ರಗುಪ್ತಮೌರ್ಯನು ಯುದ್ಧ ಸಾರಿದನು. ಅಂತಿಮವಾಗಿ ಯುದ್ಧವು ಒಪ್ಪಂದದೊಂದಿಗೆ ಅಂತ್ಯಗೊಂಡಿತು. ಅದರಂತೆ, ಸೆಲ್ಯೂಕಸನು ಇಂದಿನ ಆಫ್ಘಾನಿಸ್ತಾನ ಮತ್ತು ಬಲೂಚಿಸ್ತಾನದ ಪ್ರದೇಶಗಳು ಸೇರಿದಂತೆ ನಾಲ್ಕು ಪ್ರಾಂತ್ಯಗಳನ್ನು ಚಂದ್ರಗುಪ್ತ ಮೌರ್ಯನಿಗೆ ವಹಿಸಿಕೊಟ್ಟನು. ಅಲ್ಲದೆ, ತನ್ನ ಮಗಳನ್ನು ಚಂದ್ರಗುಪ್ತಮೌರ್ಯನಿಗೆ ವಿವಾಹ ಮಾಡಿಕೊಟ್ಟನು. ಇದರಿಂದ ಮಗದ ಸಾಮ್ರಾಜ್ಯ ವಾಯವ್ಯ ವಿಭಾಗದಲ್ಲಿ ವಿಸ್ತಾರವಾದ ಭೂ ಪ್ರದೇಶಗಳಲ್ಲಿ ತನ್ನ ಅಧಿಪತ್ಯವನ್ನು ಸ್ಥಾಪಿಸಿತು.

ಜೈನಧರ್ಮದ ಒಂದು ಸಂಪ್ರದಾಯದ ಪ್ರಕಾರ ಚಂದ್ರಗುಪ್ತಮೌರ್ಯನು ತನ್ನ ಕೊನೆಯ ಕಾಲದಲ್ಲಿ ಜೈನ ಧರ್ಮವನ್ನು ಸ್ವೀಕರಿಸಿದನು. ಅವನು ಸಾಮ್ರಾಜ್ಯವನ್ನು ತನ್ನ ಮಗನಾದ ಬಿಂದುಸಾರನಿಗೆ ವಹಿಸಿ, ಜೈನ ಗುರು ಭದ್ರಬಾಹು ಹಾಗೂ ಕೆಲವು ಯತಿಗಳೊಡನೆ ಕರ್ನಾಟಕದ ಹಾಸನ ಜಿಲ್ಲೆಯಲ್ಲಿರುವ ಶ್ರವಣಬೆಳಗೊಳಕ್ಕೆ ಬಂದನು. ಈ ಸಂಪ್ರದಾಯವು ಅಂತಿಮವಾಗಿ, ಸಲ್ಲೇಖನ ವ್ರತವನ್ನು ಕೈಗೊಂಡು ಅಲ್ಲಿಯೇ ಮರಣ ಹೊಂದಿದನೆಂದು ಹೇಳುತ್ತದೆ.

## ಸಾಮ್ರಾಟ ಅಶೋಕ (ಸಾ.ಶ.ಪೂ. 273–232)


ಭಾರತದ ಇತಿಹಾಸದಲ್ಲಿಯೇ ಅಶೋಕನು ಈ ವಂಶದ ಅತ್ಯಂತ ಪ್ರಸಿದ್ಧ ದೊರೆ. ಬಿಂದುಸಾರನ ಮಗನಾದ ಅಶೋಕನು ತನ್ನ ತಂದೆಯ ಆಳ್ವಿಕೆಯ ಕಾಲದಲ್ಲಿ ಉಜ್ಜೈನಿ ಮತ್ತು ತಕ್ಷಶಿಲೆ ಪ್ರಾಂತ್ಯಗಳ ರಾಜ್ಯಪಾಲನಾಗಿ ಕಾರ್ಯ ನಿರ್ವಹಿಸಿದ್ದನು. ತಕ್ಷಶಿಲೆಯಲ್ಲಿ ಉಂಟಾದ ದಂಗೆಯನ್ನು ಯಶಸ್ವಿಯಾಗಿ ನಿಗ್ರಹಿಸಿದನು. ತಂದೆ ಬಿಂದುಸಾರನ ಮರಣಾನಂತರ ಸಿಂಹಾಸನಕ್ಕಾಗಿ ತನ್ನ 99 ಮಂದಿ ಸೋದರರನ್ನು ಕೊಂದು ಅಧಿಕಾರಕ್ಕೆ ಬಂದನೆಂದು ಬೌದ್ಧ ಐತಿಹ್ಯಗಳು ಹೇಳುತ್ತವೆ. ಬಹುಶಃ ಸೋದರರೊಡನೆ ನಾಲ್ಕು ವರ್ಷಗಳ ಕಾಲ ಅಂತಃಕಲಹ ಏರ್ಪಟ್ಟಿರಬಹುದು. ಸಾ.ಶ.ಪೂ. 269ರಲ್ಲಿ ಸಿಂಹಾಸನಕ್ಕೆ ಬಂದನೆಂದು ಊಹಿಸಲಾಗಿದೆ. ತನ್ನ ಆಳ್ವಿಕೆಯ ಎಂಟನೇ ವರ್ಷದಲ್ಲಿ ಅಶೋಕನು ಕಳಿಂಗ ರಾಜ್ಯದ ಮೇಲೆ ಯುದ್ಧ ಸಾರಿದನು. ರಾಜನಾದ ನಂತರ ಅಶೋಕನು ನಡೆಸಿದ ಏಕೈಕ ಯುದ್ಧ ಇದಾಗಿತ್ತು.

## ಕಳಿಂಗ ಯುದ್ಧ

ಮೌರ್ಯ ಸಾಮ್ರಾಜ್ಯದ ಅಧಿಪತ್ಯವನ್ನು ಒಪ್ಪಿಕೊಳ್ಳದ ಕಳಿಂಗ ರಾಜ್ಯವನ್ನು ಆಕ್ರಮಿಸಿಕೊಳ್ಳಲು ಸಾ.ಶ.ಪೂ. 261ರಲ್ಲಿ ಅಶೋಕನು ಯುದ್ಧ ಸಾರಿದನು. ಈ ಯುದ್ಧದ ಬಗೆಗೆ ಅಶೋಕನ 13ನೇ ಬಂಡೆಗಲ್ಲು ಶಾಸನವು

Not to be republished ©KTBS

ಮಾಹಿತಿ ನೀಡುತ್ತದೆ. ಅದರ ಪ್ರಕಾರ: ಅಶೋಕನು ಅಧಿಕಾರಕ್ಕೆ ಬಂದ ಎಂಟನೇ ವರ್ಷ ಕಳಿಂಗದ ಮೇಲೆ ಯುದ್ಧ ಸಾರಿದನು. ಯುದ್ಧದಲ್ಲಿ ಒಂದು ಲಕ್ಷದ ಐವತ್ತು ಸಾವಿರ ಜನರು ಸೆರೆಯಾಳುಗಳಾದರು. ಒಂದು ಲಕ್ಷ ಜನರು ಹತರಾದರು. ಹಲವು ಪಟ್ಟು ಜನರು ನಿರಾಶ್ರಿತರಾದರು. ಕಳಿಂಗವನ್ನು ಅಶೋಕ ಗೆದ್ದನಾದರೂ, ಯುದ್ಧದ ಸಾವು ನೋವು ಅವನ ಮನ ಕಲಕಿತು. ಅಲ್ಲದೆ, ಮತ್ತೆಂದೂ ಯುದ್ಧ ಮಾಡದಿರಲು ನಿರ್ಧರಿಸಿದನು. ದಿಗ್ವಿಜಯಕ್ಕಿಂತ ಧರ್ಮದ ವಿಜಯವೇ ಅತ್ಯುನ್ನತ ವಿಜಯವೆಂದು ಅಶೋಕನು ಭಾವಿಸಿದನು. ಯುದ್ಧವು ಸೃಷ್ಟಿಸಿದ ದುಃಖದಿಂದ ಪಶ್ಚಾತ್ತಾಪದ ಕಡೆ ತೆರಳಿದನು. ಬೌದ್ಧ ಧರ್ಮದ ಕಡೆಗೆ ಪ್ರೇರಿತನಾಗಿ ತನ್ನ ಉಳಿದ ಜೀವನವನ್ನು ಶಾಂತಿ ಪ್ರತಿಪಾದನೆಗೆ ಮೀಸಲಿಟ್ಟನು.




© KTBS Not to be republished

## ಬೌದ್ಧ ಧರ್ಮ ಮತ್ತು ಅಶೋಕ

ಕಳಿಂಗ ಯುದ್ಧದ ನಂತರ ಅಶೋಕನು ಬೌದ್ಧಧರ್ಮವನ್ನು ಸ್ವೀಕರಿಸಿದನು. ಬೌದ್ಧ ವಿಹಾರ ಮತ್ತು ಚೈತ್ಯಗಳಿಗೆ ದಾನ ನೀಡಿದನು. ತನ್ನ ಸಾಮ್ರಾಜ್ಯದಲ್ಲಿ ಪ್ರಾಣಿ, ಪಕ್ಷಿಗಳ ಹತ್ಯೆಯನ್ನು ನಿಷೇಧಿಸಿದನು. ಅಶೋಕನು, ಪ್ರಜೆಗಳೆಲ್ಲರೂ ನನ್ನ ಮಕ್ಕಳಿದ್ದಂತೆ ಎಂದು ಸಾರಿದನು. ತಂದೆ ತಾಯಿಗಳಿಗೆ ವಿಧೇಯರಾಗಿರಬೇಕೆಂದೂ, ಗುರು ಹಿರಿಯರನ್ನು ಗೌರವಿಸಬೇಕೆಂದು ಹೇಳಿದನು. ಅಲ್ಲದೆ, ದೀನರು ಮತ್ತು ಗುಲಾಮರ ಬಗೆಗೆ ದಯೆಯನ್ನು ತೋರುವಂತೆಯೂ ಹೇಳಿದನು. ತಾವೂ ಬದುಕಿ, ಇತರರನ್ನು ಬದುಕಲು ಬಿಡಿ ಎಂದು ಬೋಧಿಸಿದನು. ಅಶೋಕನು ಸಾಮ್ರಾಜ್ಯದಲ್ಲಿ ಧರ್ಮ ಪ್ರಚಾರ ಮಾಡಲು 'ಧರ್ಮಮಹಾಮಾತ್ರ' ಎಂಬ ಅಧಿಕಾರಿಗಳನ್ನು ನೇಮಿಸಿದನು. ಸಾಮ್ರಾಜ್ಯದ ಉದ್ದಗಲಕ್ಕೂ ಧರ್ಮ ಸಂದೇಶ ಸಾರುವ ಶಾಸನಗಳನ್ನು ಹಾಕಿಸಿದನು. ದೇಶವಿದೇಶಗಳಿಗೂ ಧರ್ಮ ಪ್ರಚಾರಕರನ್ನು ಕಳುಹಿಸಿದನು. ಬನವಾಸಿಗೆ ರಕ್ಷಿತ, ಮಹಿಷಮಂಡಲಕ್ಕೆ (ಮೈಸೂರು) ಮಹಾದೇವ ಎಂಬ ಪ್ರಚಾರಕರನ್ನು ಕಳುಹಿಸಿದನು. ಅಲ್ಲದೆ, ಸಿಲೋನಿಗೆ ತನ್ನ ಮಗ ರಾಹುಲ ಮತ್ತು ಮಗಳು ಸಂಘಮಿತ್ರೆಯನ್ನು ಕಳುಹಿಸಿಕೊಟ್ಟನು. ಸಾ.ಶ.ಪೂ. 250ರಲ್ಲಿ ಮೂರನೇ ಬೌದ್ಧ ಸಮ್ಮೇಳನವನ್ನು ಪಾಟಲೀಪುತ್ರದಲ್ಲಿ ನೆರವೇರಿಸಿದನು.



ನಾಲ್ಕು ಸಿಂಹಗಳ
ಪೀಠದಲ್ಲಿ ಆಕರ್ಷಕ ಧರ್ಮಚಕ್ರ

**ಅಶೋಕನ ಶಾಸನಗಳು :** ಅಶೋಕನನ್ನು 'ಶಾಸನಗಳ ಪಿತಾಮಹ' ಎಂದು ಕರೆಯಲಾಗುತ್ತದೆ. ಈವರೆಗೆ ಓದಲಾಗಿರುವ ಮೊತ್ತಮೊದಲ ಶಾಸನಗಳೆಂದು ಅಶೋಕನ ಶಾಸನಗಳನ್ನು ಗುರುತಿಸಲಾಗಿದೆ. 1837ರಲ್ಲಿ ಬ್ರಿಟಿಷ್ ಅಧಿಕಾರಿಯಾದ ಜೇಮ್ಸ್ ಪ್ರಿನ್ಸೆಪ್ ಅವರು ಅಶೋಕನ ಶಾನಸಗಳನ್ನು ಮೊತ್ತಮೊದಲ ಬಾರಿಗೆ ಓದಿದರು. 1915ರವರೆಗೆ ದೊರೆತ ಅಶೋಕನ ಎಲ್ಲಾ ಶಾಸನಗಳಲ್ಲಿಯೂ ಅವನ ಹೆಸರಿನ ಬದಲು 'ದೇವನಾಂಪ್ರಿಯ' 'ಪ್ರಿಯದರ್ಶಿ' ಎಂಬ ಬಿರುದುಗಳು ಮಾತ್ರ ಇದ್ದವು. ಚಾರ್ಲ್ಸ್ ಬೇಡೆನ್ ಎಂಬ ಬ್ರಿಟಿಷ್ ಎಂಜಿನಿಯರ್ ಒಬ್ಬರು 1915ರಲ್ಲಿ ಕರ್ನಾಟಕದ ರಾಯಚೂರು ಜಿಲ್ಲೆಯ ಮಸ್ಕಿಯಲ್ಲಿ ಅಶೋಕನ ಶಾಸನವನ್ನು ಪತ್ತೆ ಮಾಡಿದರು. ಈ ಶಾಸನದಲ್ಲಿ ಮೊತ್ತಮೊದಲ ಬಾರಿಗೆ 'ದೇವನಾಂಪ್ರಿಯ ಪ್ರಿಯದರ್ಶಿ ಅಶೋಕ' ಎಂಬ ಉಲ್ಲೇಖ ಕಂಡುಬಂದಿತು. ಇದರಿಂದ ಪುರಾಣಗಳಲ್ಲಿ ಮತ್ತು ಬೌದ್ಧ ಸಾಹಿತ್ಯಗಳಲ್ಲಿ ಕಂಡುಬರುವ ಅಶೋಕ ಮತ್ತು ಶಾಸನಗಳಲ್ಲಿ ಉಲ್ಲೇಖಗೊಂಡಿರುವ ದೇವನಾಂಪ್ರಿಯ, ಪ್ರಿಯದರ್ಶಿ ಒಬ್ಬನೇ ಎಂಬ ಅಭಿಪ್ರಾಯಕ್ಕೆ ಬರಲಾಯಿತು. ಆನಂತರ ಇನ್ನೂ ಕೆಲವು ಶಾಸನಗಳಲ್ಲಿ ಅಶೋಕನ ಹೆಸರು ಕಂಡುಬಂದಿತು.

*ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿಯಲ್ಲಿಯೂ ಅಶೋಕನ ಶಿಲಾಶಾಸನಗಳು ಪತ್ತೆಯಾಗಿವೆ. ಅಶೋಕನ ಸಾರನಾಥ ಕಂಭವೊಂದರಲ್ಲಿ ವ್ಯಕ್ತವಾಗಿರುವ ಚಿಹ್ನೆಯನ್ನು ಇಂದು ನಾವು ಭಾರತದ ರಾಜಲಾಂಛನವಾಗಿ ಬಳಸಿಕೊಂಡಿದ್ದೇವೆ. ಅವನ ಶಾಸನಗಳು ಭಾರತ ಉಪಖಂಡ ಮತ್ತು ಅಫ್ಘಾನಿಸ್ಥಾನದ 45 ಸ್ಥಳಗಳಲ್ಲಿ, 181 ಆವೃತ್ತಿಗಳಲ್ಲಿ ಲಭ್ಯವಾಗಿವೆ. ಮೌರ್ಯ ಸಾಮ್ರಾಜ್ಯದ ಬಹುತೇಕ ಭಾಗಗಳಲ್ಲಿರುವ ಅಶೋಕನ ಶಾಸನಗಳು ಬ್ರಾಹ್ಮಿ ಲಿಪಿ ಮತ್ತು ಪ್ರಾಕೃತ ಭಾಷೆಯಲ್ಲಿವೆ. ಅಶೋಕನ ಶಾಸನಗಳು ವಾಯವ್ಯ ಭಾರತದ ಕೆಲವು ಪ್ರದೇಶಗಳಲ್ಲಿ ಅರಮಿಕ್ ಮತ್ತು ಖರೋಷ್ಟಿ ಲಿಪಿಗಳಲ್ಲಿದ್ದರೆ, ಆಫ್ಘಾನಿಸ್ತಾನದಲ್ಲಿ ಅರಮಿಕ್ ಮತ್ತು ಗ್ರೀಕಿನ ಲಿಪಿ ಹಾಗೂ ಭಾಷೆಗಳಲ್ಲಿರುವುದು ವಿಶೇಷ.*

©KTBS Not to be re published

**ಮೌರ್ಯರ ಅರ್ಥವ್ಯವಸ್ಥೆ :** ಮೌರ್ಯರ ಕಾಲದಲ್ಲಿ ಕೆರೆ ನೀರಾವರಿ ಮತ್ತು ಕಾಲುವೆ ನೀರಾವರಿ ವ್ಯವಸ್ಥೆ ಉತ್ತಮವಾಗಿದ್ದುದಕ್ಕೆ ನಿದರ್ಶನಗಳಿವೆ. ಚಂದ್ರಗುಪ್ತಮೌರ್ಯನ ರಾಜ್ಯಪಾಲನಾದ ಪುಷ್ಯಗುಪ್ತನು ಗುಜರಾತಿನ ಜುನಾಗಡದ ಬಳಿ 'ಸುದರ್ಶನ ಸರೋವರ' ಎಂಬ ಅಣೆಕಟ್ಟನ್ನು ನಿರ್ಮಿಸಿದನು. ಅಶೋಕನ ಕಾಲದಲ್ಲಿ ಈ ಅಣೆಕಟ್ಟಿಗೆ ತುಷಸ್ಪ ಎಂಬ ಅಧಿಕಾರಿಯು ಕಾಲುವೆಯನ್ನು ನಿರ್ಮಾಣ ಮಾಡಿಸಿದನು. ನೀರಾವರಿ ಕಾಲುವೆಗಳ ಬಗೆಗೆ ಮೆಗಸ್ತನೀಸ್ ಕೂಡ ದಾಖಲಿಸಿದ್ದಾನೆ. ಕೃಷಿ ಕ್ಷೇತ್ರವನ್ನು ಸರ್ಕಾರವೇ ನಿರ್ವಹಿಸುತ್ತಿತ್ತು. ಯುದ್ಧ ಖೈದಿಗಳನ್ನು, ಗುಲಾಮರನ್ನು ಕೃಷಿಕಾರ್ಯದಲ್ಲಿ ತೊಡಗಿಸುತ್ತಿದ್ದರು. ಭೂ ಕಂದಾಯವು ರಾಜ್ಯಾದಾಯದ ಪ್ರಮುಖ ಭಾಗವಾಗಿತ್ತು. ರೈತ ಅವನ ಉತ್ಪಾದನೆಯ $\frac{1}{4}$ ಭಾಗವನ್ನು ತೆರಿಗೆಯಾಗಿ ರಾಜ್ಯಕ್ಕೆ ಪಾವತಿಸಬೇಕಾಗಿತ್ತು. ಸಮಾಹರ್ಥ ಮತ್ತು ಸನ್ನಿಧಾತ ಎಂಬ ಅಧಿಕಾರಿಗಳು ತೆರಿಗೆ ಸಂಗ್ರಹ ಮತ್ತು ರಾಜಭಂಡಾರದ ಪಾಲಕರಾಗಿದ್ದರು. ಮೌರ್ಯರ ಕಾಲದಲ್ಲಿ ಲೋಹಗಳನ್ನು ಕರಗಿಸಿ ಮಿಶ್ರಗೊಳಿಸುವ ತಾಂತ್ರಿಕ ನೈಪುಣ್ಯತೆ ಬೆಳೆಯಿತು. ಇದರಿಂದ ಕೃಷಿಯ ಜೊತೆಗೆ ನಗರಾಧಾರಿತ ಆರ್ಥಿಕ ಚಟುವಟಿಕೆಗಳಾದ ಕರಕುಶಲ ವಸ್ತುಗಳ ಉತ್ಪಾದನೆ ಮತ್ತು ಅವುಗಳ ವ್ಯಾಪಾರ ಮೌರ್ಯರ ಅರ್ಥವ್ಯವಸ್ಥೆಯಲ್ಲಿ ಸ್ಥಾನ ಪಡೆದುಕೊಂಡವು. ಮೌರ್ಯರ ರಾಜಧಾನಿ ಪಾಟಲೀಪುತ್ರದಿಂದ ಇತರ ಭಾಗಗಳಿಗೆ ಸಂಚರಿಸಲು ಹೆದ್ದಾರಿಗಳಿದ್ದವು. ರಾಜಧಾನಿಯಿಂದ ವೈಶಾಲಿ, ಚಂಪಾರಣ್ಯ ಮಾರ್ಗವಾಗಿ ನೇಪಾಳಕ್ಕೆ ಹೋಗುವ ರಾಜಮಾರ್ಗವಿತ್ತು. ಕೌಶಾಂಬಿಯಿಂದ ಪ್ರಮುಖ ಹೆದ್ದಾರಿ ಆಧುನಿಕ ದೆಹಲಿಯನ್ನು ಹಾಯ್ದು ಪಂಜಾಬಿನ ಮೂಲಕ ತಕ್ಷಶಿಲಾ ನಗರವನ್ನು ಸೇರುತ್ತಿತ್ತು. ವ್ಯಾಪಾರಿಗಳು ಈ ಮಾರ್ಗಗಳ ಮೂಲಕ ಕರಕುಶಲ ಸಾಮಗ್ರಿಗಳನ್ನು ಸಾಮ್ರಾಜ್ಯದೊಳಗೆ ಮತ್ತು ಹೊರಗಿನ ಮಾರುಕಟ್ಟೆಗಳಲ್ಲಿ ಮಾರುತ್ತಿದ್ದರು. ಕಚ್ಚು ಗುರುತಿನ ಬೆಳ್ಳಿನಾಣ್ಯಗಳು ಮೌರ್ಯ ಸಾಮ್ರಾಜ್ಯದಲ್ಲಿ ಚಲಾವಣೆಯಲ್ಲಿದ್ದವು. ಈ ಕಾಲವನ್ನು ನಗರೀಕರಣದ ಎರಡನೆ ಹಂತ ಎಂದು ಚರಿತ್ರೆಕಾರರು ಗುರುತಿಸಿದ್ದಾರೆ.

**ಸಾಮಾಜಿಕ ವ್ಯವಸ್ಥೆ:** ವೈದಿಕ ಕಾಲದಲ್ಲಿ ಆರಂಭವಾಗಿದ್ದ ವರ್ಗಾಧಾರಿತ ವಿಭಜನೆಯ ತಳಹದಿಯ ಮೇಲೆಯೇ ಸಾಮಾಜಿಕ ವ್ಯವಸ್ಥೆ ರೂಪುಗೊಳ್ಳುತ್ತಿತ್ತು. ಆದರೂ ಈ ಕಾಲದಲ್ಲಿ ಮೇಲ್ವರ್ಣದಲ್ಲಿ ಹುಟ್ಟಿದ್ದ ವ್ಯಕ್ತಿಗಳು, ಒಂದು ವರ್ಣದಿಂದ ಇನ್ನೊಂದು ವರ್ಣದೊಳಗೆ ಪ್ರವೇಶಿಸಿ ಸಾಮಾಜಿಕ ಮನ್ನಣೆ, ಗೌರವಗಳನ್ನು ಪಡೆಯಬಹುದಾದ ಅವಕಾಶಗಳು ಸ್ವಲ್ಪಮಟ್ಟಿಗಿದ್ದವು. ಬ್ರಾಹ್ಮಣರು ಮತ್ತು ಕ್ಷತ್ರಿಯರು ತಮ್ಮ ಸ್ಥಾನಮಾನಗಳನ್ನು ಪರಸ್ಪರ ಬದಲಾಯಿಸಿಕೊಳ್ಳಬಹುದಿತ್ತು. ಸಮಾಜ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ನಾಲ್ಕು ವರ್ಣಗಳಲ್ಲಿ ವಿಂಗಡಣೆಯಾಗಿದ್ದರೂ ಈ ವರ್ಣಗಳಲ್ಲಿ ಜಾತಿಗಳಿದ್ದವು. ಮೆಗಸ್ತನೀಸ್ ತನ್ನ ಇಂಡಿಕಾ ಕೃತಿಯಲ್ಲಿ ಮೌರ್ಯರ ಸಮಾಜದಲ್ಲಿ ಏಳು ಜಾತಿಗಳಿದ್ದವೆಂದು ತಿಳಿಸುತ್ತಾನೆ. ಬೌದ್ಧ ಮೂಲಗಳೂ ಸಹ ವರ್ಣಗಳಲ್ಲಿ ಜಾತಿಗಳಿದ್ದವೆಂಬುದನ್ನು ಸಮರ್ಥಿಸುತ್ತವೆ. ಮುಂದಿನ ಕಾಲಘಟ್ಟಗಳಲ್ಲಿ ಕಾಣುವಷ್ಟು ಕಟ್ಟುನಿಟ್ಟಾದ ಜಾತಿ ಪದ್ಧತಿ ಕಂಡುಬರದಿದ್ದರೂ, ಮೌರ್ಯರ ಕಾಲದಲ್ಲಿ ವರ್ಣಗಳ ಆಧಾರದ ಮೇಲೆಯೇ ಜಾತಿ ಪದ್ಧತಿ ಹೆಪ್ಪುಗಟ್ಟಲು ಆರಂಭಿಸಿತು. ಇಂಡಿಕಾ ಕೃತಿ ಮೌರ್ಯರ ಸಮಾಜದಲ್ಲಿ ಎಲ್ಲಿಯೂ ದಾಸರು ಮತ್ತು ಗುಲಾಮರಿದ್ದುದ್ದನ್ನು ಉಲ್ಲೇಖಿಸುವುದಿಲ್ಲ. ಗುಲಾಮ ಪದ್ಧತಿಯು ಮೌರ್ಯರ ಕಾಲದಲ್ಲಿಯೂ ಆಚರಣೆಯಲ್ಲಿತ್ತಾದರೂ ಪ್ರಾಚೀನ ಗ್ರೀಕ್ ಮತ್ತು ರೋಮ್ ಸಮಾಜದ ಮಾದರಿಯಲ್ಲಿದ್ದಂತೆ ತೀವ್ರವಾಗಿರಲಿಲ್ಲ. ಚಾತುರ್ವರ್ಣಗಳಲ್ಲಿ ಕೊನೆಯವರಾದ ಶೂದ್ರರು ಮೌರ್ಯರ ಕಾಲದಲ್ಲಿ ಕೃಷಿ ಕಾರ್ಮಿಕರಾಗಿ, ಮನೆಯ ಆಳುಗಳಾಗಿ ದುಡಿಯುತ್ತಿದ್ದರು.

**ಆಡಳಿತ ವ್ಯವಸ್ಥೆ:** ಮೌರ್ಯ ಸಾಮ್ರಾಜ್ಯವು ಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಹೊಂದಿತ್ತು. ಅಧಿಕಾರವು ರಾಜನಲ್ಲಿ ಕೇಂದ್ರೀಕೃತವಾಗಿತ್ತು. ಆದ್ದರಿಂದ ವಿಶಾಲ ಮೌರ್ಯ ಸಾಮ್ರಾಜ್ಯವನ್ನು ಆಳುವ ಸಲುವಾಗಿ ಹಿಂದೆಂದೂ ಕಾಣದಷ್ಟು ಅಧಿಕಾರಿ ವರ್ಗವು ಅಸ್ತಿತ್ವಕ್ಕೆ ಬಂದಿತು. ಬಲಿಷ್ಠ ಗೂಢಚಾರ ವ್ಯವಸ್ಥೆ ಅಸ್ತಿತ್ವದಲ್ಲಿತ್ತು. ರಾಜನ ಅಧೀನದಲ್ಲಿ ಮಂತ್ರಿ, ಪುರೋಹಿತ, ಸೇನಾಪತಿ ಮತ್ತು ಯುವರಾಜ ಅತ್ಯುನ್ನತ ಅಧಿಕಾರಿಗಳಾಗಿದ್ದರು.

©KTBS Not to be republished

ಸಾಮ್ರಾಜ್ಯವನ್ನು ಪ್ರಾಂತ್ಯಗಳಾಗಿ ವಿಂಗಡಿಸಲಾಗಿತ್ತು. ಪ್ರಾಂತ್ಯಗಳನ್ನು ಯುವರಾಜ ಅಥವಾ ರಾಜ ಪರಿವಾರಕ್ಕೆ ಸಂಬಂಧಿಸಿದವರು ಆಳುತ್ತಿದ್ದರು. ತಕ್ಷಶಿಲೆ, ಉಜ್ಜೈನಿ, ದೌಲಿ, ಸುವರ್ಣಗಿರಿ ಮತ್ತು ಗಿರ್ನಾರ್‌ಗಳು ಪ್ರಾಂತೀಯ ಆಡಳಿತ ಕೇಂದ್ರಗಳಾಗಿದ್ದವು. ರಜುಕ (ನ್ಯಾಯಿಕ ಅಧಿಕಾರಿ), ಯುಕ್ತ (ಮಾಹಿತಿಗಳನ್ನು ದಾಖಲಿಸುವ ಅಧಿಕಾರಿ) ಮೊದಲಾದ ಅಧಿಕಾರಿಗಳಿದ್ದರು. ರಾಜಧಾನಿ ಪಾಟಲೀಪುತ್ರದ ಆಡಳಿತವನ್ನು 30 ಅಧಿಕಾರಿಗಳನ್ನು ಒಳಗೊಂಡ ಆರು ಸಮಿತಿಗಳು ನಿರ್ವಹಿಸುತ್ತಿದ್ದವು.

**ಕಲೆ ಮತ್ತು ವಾಸ್ತುಶಿಲ್ಪ:** ಕಲೆ ಮತ್ತು ವಾಸ್ತುಶಿಲ್ಪಕ್ಕೆ ಮೌರ್ಯರು ನೀಡಿದ ಕೊಡುಗೆ ಅಪಾರ. ಮೆಗಸ್ತನೀಸನ ಇಂಡಿಕಾವು ಪಾಟಲೀಪುತ್ರದಲ್ಲಿ ಮೌರ್ಯರ ವೈಭವಪೂರ್ಣ ಅರಮನೆಯನ್ನು ಕುರಿತು ದಾಖಲಿಸುತ್ತದೆ. ಅರಮನೆ ಮತ್ತು ಸುತ್ತುವರೆದ ಮರದ ಕೋಟೆಯ ಕೆಲವು ಅವಶೇಷಗಳು ಉತ್ಖನನದ ವೇಳೆ ದೊರೆತಿದೆ. ಅಶೋಕನ ಕಾಲದಲ್ಲಿ ಅನೇಕ ಸ್ತೂಪಗಳು ಮತ್ತು ಸ್ತಂಭಗಳು ನಿರ್ಮಾಣಗೊಂಡಿವೆ. ಅವುಗಳಲ್ಲಿ ಇಂದು ದೊರೆತಿರುವ ಅತ್ಯಂತ ದೊಡ್ಡ ಸ್ತೂಪ ಸಾಂಚಿ ಸ್ತೂಪ. 30ಕ್ಕೂ ಹೆಚ್ಚು ಸ್ತಂಭಗಳು ದೊರೆತಿದ್ದು, ಅವುಗಳನ್ನು ಅತ್ಯಂತ ನುಣುಪಾಗಿ ನಯಗೊಳಿಸಲಾಗಿದೆ. ಸ್ತಂಭದ ಮೇಲೆ ಸಿಂಹ ಅಥವಾ ಗೂಳಿಯ ಶಿಲ್ಪಗಳನ್ನು ಕಡೆಯಲಾಗಿದೆ. ನಮ್ಮ ರಾಷ್ಟ್ರ ಲಾಂಛನ ನಾಲ್ಕು ತಲೆಯ ಸಿಂಹವನ್ನು ಸಾರನಾಥದ ಅಶೋಕ ಸ್ತಂಭದಿಂದ ಪಡೆಯಲಾಗಿದೆ. ಇವಲ್ಲದೆ, ಅಶೋಕನು ಬರಾಬರ್ ಬೆಟ್ಟದಲ್ಲಿ ಮೂರು ಶಿಲಾಚ್ಛೇದಿತ ಗುಹೆ (Rock Cut Caves)ಗಳನ್ನು ಹಾಗೂ ಅವನ ಮಗ ದಶರಥನು ನಾಗಾರ್ಜುನಿ ಬೆಟ್ಟದಲ್ಲಿ ಮೂರು ಶಿಲಾಚೇದಿತ ಗುಹೆಗಳನ್ನು ನಿರ್ಮಿಸಿದ್ದಾನೆ. ಈ ಗುಹೆಗಳು ಕೂಡ ಮೌರ್ಯರ ಕಾಲದ ಪ್ರಮುಖ ನಿರ್ಮಾಣಗಳಾಗಿವೆ.

## ಕುಶಾಣರು

ಗ್ರೀಕರ ನಂತರ ಭಾರತೀಯ ಚರಿತ್ರೆ ಹಾಗೂ ಸಂಸ್ಕೃತಿಯ ಮೇಲೆ ಪ್ರಭಾವ ಬೀರಿದವರು ಕುಶಾಣರು. ಬೌದ್ಧ ಧರ್ಮಕ್ಕೆ ವಿಶೇಷ ಚಲನೆಯನ್ನು ನೀಡಿದವರು ಇವರು. ಮಹಾಯಾನ ಪಂಥವು ಇವರ ಆಶ್ರಯದಲ್ಲಿ ಹೆಚ್ಚಿನ ಪ್ರೋತ್ಸಾಹವನ್ನು ಪಡೆಯಿತು. ಗಾಂಧಾರ ಶಿಲ್ಪಕಲೆಯು ಇವರಿಂದ ವಿಕಸಿತಗೊಂಡಿತು.

ಮೌರ್ಯರ ನಂತರದಲ್ಲಿ ಕಾಣುವ ಪ್ರಮುಖ ರಾಜಮನೆತನವೇ ಕುಶಾಣರದು. ಮಧ್ಯ ಏಷ್ಯಾದಿಂದ ಭಾರತಕ್ಕೆ ವಲಸೆ ಬಂದ ಅಲೆಮಾರಿ ಜನಾಂಗದ ಮೂಲ ಹೊಂದಿದವರು ಕುಶಾಣರು. ಇವರು ಯೂಚಿ ಸಂತತಿಯವರು. ಇದೇ ಸಮಯದಲ್ಲಿ ಶಕರು ಹಾಗೂ ಪಾರ್ಥಿಯನ್ನರು ವಾಯುವ್ಯ ಭಾಗದಲ್ಲಿ ನೆಲಸಿದ್ದ ವಿದೇಶಿ ಸಮುದಾಯಗಳು. ಕುಶಾಣರು ಶಕ ಮತ್ತು ಪಾರ್ಥಿಯನ್ನರನ್ನು ಸೋಲಿಸಿ ಗಾಂಧಾರ ಪ್ರದೇಶದಲ್ಲಿ ನೆಲಸಿದರು.


ಗಾಂಧಾರ ಶೈಲಿಯ ಬುದ್ಧ

ಕುಜಲಕಡ್‌ಫೀಸಸ್ ಈ ರಾಜಮನೆತನದ ಸಂಸ್ಥಾಪಕ. ವಿಮಕಡ್‌ಫೀಸಸ್ ಮತ್ತು ಕನಿಷ್ಕ ಈ ವಂಶದ ಮುಖ್ಯ ದೊರೆಗಳು. ಯೂಚಿಗಳು ಮೂಲತಃ ಬುಡಕಟ್ಟುಗಳಿಗೆ ಸೇರಿದವರು. ಕುಜಲ ಕಡ್‌ಫೀಸಸ್‌ನ ನೇತೃತ್ವದಲ್ಲಿ ಯೂಚಿ ಬಣಗಳು ಐಕ್ಯಗೊಂಡವು. ಈತನು ಹಿಂದುಕುಷ್‌ನ ಬೆಟ್ಟಗಳನ್ನು ದಾಟಿ ಕಾಬುಲ್ ಹಾಗೂ ಕಾಶ್ಮೀರದಲ್ಲಿ ಬಂದು ನೆಲೆಸಿದನು. ವಿಮಕಡ್‌ಫೀಸಸ್ ಕಾಲದಲ್ಲಿ ಚಿನ್ನದ ನಾಣ್ಯಗಳನ್ನು ಹೊರಡಿಸಲಾಯಿತು. ಇಲ್ಲಿಂದ ಮುಂದಕ್ಕೆ ಕುಶಾಣರು ಸಾಮಾನ್ಯವಾಗಿ ಚಿನ್ನದ ಹಾಗೂ ತಾಮ್ರದ ನಾಣ್ಯಗಳನ್ನೇ ಟಂಕಿಸಿದರು.



©KTBS Not to be republished

ವಿಮಕಡ್‌ಫೀಸಸ್‌ನ ನಂತರ ಬಂದವನೇ ಕನಿಷ್ಕ. ಇವನ ಆಳ್ವಿಕೆಯಡಿಯಲ್ಲಿ ಕುಶಾಣರ ಮನೆತನವು ವ್ಯಾಪಕವಾಗಿ ಬೆಳೆಯಿತು. ಇವನು ಸಾ.ಶ. 78ರಲ್ಲಿ ರಾಜಾಳ್ವಿಕೆಯನ್ನು ಪ್ರಾರಂಭಿಸಿ ಹೊಸ ಯುಗವೊಂದಕ್ಕೆ ನಾಂದಿಹಾಡಿದನು. ಇದನ್ನು 'ಶಕ'ಯುಗವೆಂದು ಕರೆಯುತ್ತಾರೆ.

ಭಾರತದಲ್ಲಿ ಕನಿಷ್ಕನ ಆಳ್ವಿಕೆಯ ವ್ಯಾಪ್ತಿಯು ದಕ್ಷಿಣದ ಸಾಂಚಿ ಹಾಗೂ ಪೂರ್ವದ ಬನಾರಸ್ಸಿನವರೆಗೆ ಹರಡಿತ್ತು. ಮಧ್ಯ ಏಷ್ಯಾವನ್ನು ಒಳಗೊಂಡ ಇವನ ಆಳ್ವಿಕೆಯು ವಿಶಾಲವಾದ ಸಾಮ್ರಾಜ್ಯವನ್ನು ಹೊಂದಿತ್ತು. ಪುರುಷಪುರವು ಕನಿಷ್ಕನ ರಾಜಧಾನಿ. ಇವನ ಕಾಲದ ಮತ್ತೊಂದು ಮುಖ್ಯನಗರ ಮಥುರಾ.

ಕನಿಷ್ಕನು ಬೌದ್ಧಧರ್ಮಕ್ಕೆ ನೀಡಿದ ಆಶ್ರಯದಿಂದಾಗಿ ಅದು ಮತ್ತಷ್ಟು ಸಮೃದ್ಧಿಯಿಂದ ಬೆಳೆಯಲು ಸಾಧ್ಯವಾಯಿತು. ಅಶ್ವಘೋಷ, ವಸುಮಿತ್ರ, ಸಂಗರಕ್ಷ ಮುಂತಾದ ಬೌದ್ಧ ವಿದ್ವಾಂಸರನ್ನು ಇವನ ಕಾಲದಲ್ಲಿ ಕಾಣುತ್ತೇವೆ. ನಾಲ್ಕನೆಯ ಬೌದ್ಧ ಸಮಾವೇಶವನ್ನು ಕಾಶ್ಮೀರದಲ್ಲಿ ಕನಿಷ್ಕನ ನೇತೃತ್ವದಲ್ಲಿಯೇ ನಡೆಸಲಾಯಿತು. ಈತನೂ ಅಶೋಕನ ರೀತಿಯಲ್ಲಿಯೇ ಬೌದ್ಧಧರ್ಮ ಪ್ರಚಾರಕ್ಕಾಗಿ ಮಧ್ಯಏಷ್ಯ ಹಾಗೂ ಚೀನಾಗಳಿಗೆ ನಿಯೋಗಗಳನ್ನು ಕಳುಹಿಸಿದ್ದನು. ಇವನ ಕಾಲದಲ್ಲಿ ಕಲೆ ಮತ್ತು ವಾಸ್ತುಶಿಲ್ಪವೂ ಸಹ ಪ್ರೋತ್ಸಾಹವನ್ನು ಪಡೆಯಿತು.

## ಅಭ್ಯಾಸಗಳು

**I. ಕೆಳಕಂಡ ವಾಕ್ಯಗಳನ್ನು ಪೂರ್ಣಗೊಳಿಸಿ.**

1. ಚಾಣಕ್ಯನು __________ ಎಂದು ಪ್ರಖ್ಯಾತನಾದವನು.
2. ಮೆಗಸ್ತನೀಸನ ಕೃತಿ __________ .
3. ಮೌರ್ಯರ ರಾಜಧಾನಿ __________ .
4. ಕುಶಾಣ ರಾಜಮನೆತನದ ಸಂಸ್ಥಾಪಕ __________ .
5. ಕನಿಷ್ಕನ ರಾಜಾಳ್ವಿಕೆಯ ಹೊಸ ಯುಗವನ್ನು __________ ಎಂದು ಕರೆಯುತ್ತಾರೆ.

**II. ಸಂಕ್ಷಿಪ್ತವಾಗಿ ಉತ್ತರಿಸಿ.**

1. ಮೌರ್ಯರ ಇತಿಹಾಸವನ್ನು ತಿಳಿಸುವ ಆಕರಗಳ ಪಟ್ಟಿ ಮಾಡಿ.
2. ಅಶೋಕನ ಕಾಲದ ಪ್ರಮುಖ ನಗರಗಳನ್ನು ಹೆಸರಿಸಿ.
3. ಅಶೋಕನನ್ನು ಒಬ್ಬ ಮಹಾಶಯನೆಂದು ಇತಿಹಾಸಕಾರರು ಬಣ್ಣಿಸಿದ್ದಾರೆ. ಕಾರಣವನ್ನು ವಿಶ್ಲೇಷಿಸಿ.
4. ಅಶೋಕನ ಆಡಳಿತದ ಬಗ್ಗೆ ವಿವರಣೆ ಕೊಡಿರಿ.
5. ಕುಶಾಣರು ಯಾವ ಸಂತತಿಗೆ ಸೇರಿದವರು?
6. ಕನಿಷ್ಕನ ಸಾಮ್ರಾಜ್ಯದ ವಿಸ್ತರಣೆ ಎಲ್ಲಿಯವರೆಗೆ ಹರಡಿತ್ತು?

**III. ಚಟುವಟಿಕೆಗಳು.**

1. ಗಾಂಧಾರ ಕಲೆಯ ಬಗ್ಗೆ ವಿವರಣೆ ತಿಳಿದುಕೊಳ್ಳಿ.
2. ಕನಿಷ್ಕನ ಕಾಲದಲ್ಲಿ ನಡೆದ ಬೌದ್ಧ ಸಮ್ಮೇಳನದ ಬಗ್ಗೆ ನಿಮ್ಮ ಉಪಾಧ್ಯಾಯರಿಂದ ಹೆಚ್ಚಿನ ವಿವರಣೆ ಪಡೆದುಕೊಳ್ಳಿ.

*****

©KTBS Not to be re published

## ಅಧ್ಯಾಯ – 8

# ಗುಪ್ತರು ಮತ್ತು ವರ್ಧನರು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಗುಪ್ತ ಸಾಮ್ರಾಜ್ಯದ ಪ್ರಸಿದ್ಧ ದೊರೆಗಳು, ರಾಜಕೀಯ ಸಾಧನೆಗಳು.*
- *ಗುಪ್ತ ಸಾಮ್ರಾಜ್ಯದ ಸಾಹಿತ್ಯಕ ಮತ್ತು ವಿಜ್ಞಾನದ ಕೊಡುಗೆಗಳು.*
- *ವರ್ಧನ ಸಾಮ್ರಾಜ್ಯದ ಬೆಳವಣಿಗೆ, ಸಾಹಿತ್ಯಕ ಮತ್ತು ಶೈಕ್ಷಣಿಕ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳು.*
- *ಗುಪ್ತರ ಸಾಮ್ರಾಜ್ಯದ ವ್ಯಾಪ್ತಿಯನ್ನು ಭಾರತದ ಭೂಪಟದಲ್ಲಿ ಗುರುತಿಸುವುದು.*

ಮೌರ್ಯರು ಹಾಗೂ ಕುಶಾಣರ ನಂತರ ಉದಯವಾದ ಸಾಮ್ರಾಜ್ಯವೇ ಗುಪ್ತರ ಸಾಮ್ರಾಜ್ಯ. ಮೌರ್ಯ ಸಾಮ್ರಾಜ್ಯದ ಪತನದ ನಂತರ ಉತ್ತರದಲ್ಲಿ ಕುಶಾಣರು ಹಾಗೂ ದಕ್ಷಿಣದಲ್ಲಿ ಶಾತವಾಹನರು ಆಳ್ವಿಕೆ ನಡೆಸಿದರು. ಈ ಎರಡೂ ಸಾಮ್ರಾಜ್ಯಗಳು ಸಾಮಾನ್ಯ ಶಕೆ 3ನೆಯ ಶತಮಾನದ ಮಧ್ಯಭಾಗದಲ್ಲಿ ಕೊನೆಗೊಂಡವು. ಗುಪ್ತರು ಉತ್ತರ ಪ್ರದೇಶದಲ್ಲಿ ಕುಶಾಣ ಸಾಮಂತರಾಗಿದ್ದು ಅವರ ಅವನತಿಯ ನಂತರ ಮೌರ್ಯರಂತೆ ವಿಶಾಲವಾದ ಸಾಮ್ರಾಜ್ಯ ಸ್ಥಾಪನೆಗೆ ಬುನಾದಿಯನ್ನು ಹಾಕಿದರು. ಸಾಮಾನ್ಯ ಶಕೆ 335 ರಿಂದ 455 ರವರೆಗೆ ಉತ್ತರ ಭಾರತವನ್ನು ಒಗ್ಗಟ್ಟಿನಲ್ಲಿರಿಸಿದರು.

ಗುಪ್ತರ ಸಂತತಿಯು ಸಾ.ಶ. 275ರಲ್ಲಿ ಅಧಿಕಾರಕ್ಕೆ ಬಂದಿತು. ಶ್ರೀಗುಪ್ತ ಈ ವಂಶದ ಮೂಲ ಸ್ಥಾಪಕ. ಪ್ರಯಾಗದಿಂದ ತಮ್ಮ ಆಳ್ವಿಕೆಯನ್ನು ಆರಂಭಿಸಿದರು. ಗುಪ್ತರು ಪಾಟಲೀಪುತ್ರವನ್ನು ತಮ್ಮ ರಾಜಧಾನಿಯಾಗಿ ಮಾಡಿಕೊಂಡರು. ಪಾಟಲಿಪುತ್ರ ಮತ್ತೊಮ್ಮೆ ದೊಡ್ಡ ಸಾಮ್ರಾಜ್ಯದ ಕೇಂದ್ರವಾಯಿತು. ಗುಪ್ತರು ತಮ್ಮ ಅವಧಿಯಲ್ಲಿ ಧರ್ಮ, ಸಾಹಿತ್ಯ, ಕಲೆ, ವಿಜ್ಞಾನಕ್ಕೆ ಪ್ರೋತ್ಸಾಹ ನೀಡಿದರು.

### ಆಕರಗಳು

ಗುಪ್ತರ ಇತಿಹಾಸವನ್ನು ತಿಳಿದುಕೊಳ್ಳಲು ಸಹಾಯಕವಾಗುವ ಆಕರಗಳು ಯಾವುವೆಂದರೆ:

1. ಅಲಹಾಬಾದ್ ಸ್ತಂಭ ಶಾಸನ
2. ಮೆಹ್ರೌಲಿಯ ಸ್ತಂಭ ಶಾಸನ
3. ವಿಶಾಖದತ್ತನ ಮುದ್ರಾರಾಕ್ಷಸ ಮತ್ತು ದೇವಿ ಚಂದ್ರಗುಪ್ತ
4. ರಾಜಶೇಖರನ ಕಾವ್ಯಮೀಮಾಂಸೆ
5. ಕಾಳಿದಾಸನ ಕೃತಿಗಳು
6. ವಿಜ್ಜಿಕೆಯ ಕೌಮುದಿಮಹೋತ್ಸವ
7. ಫಾಹಿಯಾನ ಮತ್ತು ಇತ್ಸಿಂಗ್‌ರ ಬರವಣಿಗೆಗಳು

**ನಿಮಗಿದು ತಿಳಿದಿರಲಿ.**

ಇತಿಹಾಸಕಾರರಾದ ವಿ.ಎ. ಸ್ಮಿತ್‌ರವರು ಗುಪ್ತರ ಕಾಲವನ್ನು ಸುವರ್ಣಯುಗವೆಂದು ಕರೆದಿದ್ದಾರೆ. ಆದರೆ ಈ ಅಭಿಪ್ರಾಯವನ್ನು ಬಹುತೇಕ ಇತಿಹಾಸಕಾರರು ಒಪ್ಪುವುದಿಲ್ಲ.


### ರಾಜಕೀಯ ಇತಿಹಾಸ

ಗುಪ್ತರ ಮೊದಲ ಐತಿಹಾಸಿಕ ಪುರುಷನೆಂದು ಒಂದನೇ ಚಂದ್ರಗುಪ್ತನನ್ನು ಕರೆಯುತ್ತಾರೆ. ಈತ ಲಿಚ್ಛವಿ ರಾಜಕುಮಾರಿಯಾದ ಕುಮಾರದೇವಿಯನ್ನು ಮದುವೆಯಾದನು. ಇದರಿಂದ ಗುಪ್ತರ ಬಲ ಮತ್ತು ಪ್ರತಿಷ್ಠೆ ಹೆಚ್ಚಾಯಿತು. ಒಂದನೇ ಚಂದ್ರಗುಪ್ತನು ಸಾ.ಶ. 319–20ರಲ್ಲಿ ಪಟ್ಟಕ್ಕೆ ಬಂದಾಗ ಗುಪ್ತ ಶಕೆ ಆರಂಭವಾಯಿತು.

©KTBS Not to be republished


**ಸಮುದ್ರಗುಪ್ತ (ಸಾ.ಶ. 335 – 380)**

ಚಂದ್ರಗುಪ್ತನ ನಂತರ ಇವನ ಮಗ ಸಮುದ್ರಗುಪ್ತನು ಅಧಿಕಾರಕ್ಕೆ ಬಂದನು. ಹರಿಸೇನನು ರಚಿಸಿದ ಅಲಹಾಬಾದ್ ಶಾಸನದಿಂದ ಅವನ ಸಾಧನೆಗಳು ಅಮರಗೊಂಡಿವೆ. ಇದು ಸಂಸ್ಕೃತ ಭಾಷೆಯಲ್ಲಿದ್ದು, ಅಶೋಕನ ಸ್ತಂಭಶಾಸನವೊಂದರ ಮೇಲೆ ಕೆತ್ತಲಾಗಿದೆ. ಭಾರತದ ಬಹುಭಾಗವು ಇವನ ಕಾಲದಲ್ಲಿ ಗುಪ್ತರ ಆಳ್ವಿಕೆಗೆ ಒಳಪಟ್ಟಿತ್ತು. ಇವನ ಅಶ್ವಮೇಧಯಾಗವು ವೈದಿಕ ವಿಧಿ ವಿಧಾನಗಳನ್ನು ಮರುಕಳಿಸಿತು. ಸಮುದ್ರಗುಪ್ತನು ಕೇವಲ ಆಕ್ರಮಣಕಾರಿಯಲ್ಲ. ಇವನು ಮಹಾಕವಿ ಹಾಗೂ ಸಂಗೀತಪ್ರಿಯನೂ ಆಗಿದ್ದನು. ಇವನ ಸಂಗೀತದ ವ್ಯಾಮೋಹವು ಅವನ ಕಾಲದ ಚಿನ್ನದ ನಾಣ್ಯಗಳಲ್ಲಿ ವೀಣೆಯನ್ನು ನುಡಿಸುತ್ತಿರುವ ಚಿತ್ರದ ಮೂಲಕ ವ್ಯಕ್ತವಾಗಿದೆ.




©KTBS Not to be republished

> **ನಿಮಗಿದು ತಿಳಿದಿರಲಿ**
>
> ದೆಹಲಿಯ ಕುತುಬ್ ಮಿನಾರ್ ಬಳಿ ಇರುವ ಮೆಹರೂಲಿಯಲ್ಲಿರುವ ಕಬ್ಬಿಣದ ಸ್ತಂಭ ಇದಾಗಿದೆ. ಇದು 23 ಅಡಿ ಹಾಗೂ 8 ಅಂಗುಲ ಉದ್ದವಿದ್ದು 6000 ಕಿ.ಲೋ ಗ್ರಾಂ ತೂಕವಿದೆ. ಇದು ಅಂದಿನ ತಾಂತ್ರಿಕ ಸಾಧನೆಗೆ ಸಾಕ್ಷಿ. ಇದು ಇಂದಿಗೂ ತುಕ್ಕು ಹಿಡಿಯದೆ ನಿಂತಿದೆ. ಆಗಿನ ಕಾಲದಲ್ಲಿಯೇ ಅಂತಹ ಒಳ್ಳೆಯ ಗುಣಮಟ್ಟದ ಕಬ್ಬಿಣವನ್ನು ತಯಾರಿಸುವ ಕಲೆಯನ್ನು ಭಾರತೀಯರು ತಿಳಿದಿದ್ದರು.



ಮೆಹರೂಲಿಯಲ್ಲಿರುವ ಕಬ್ಬಿಣದ ಸ್ತಂಭ

### ಎರಡನೆಯ ಚಂದ್ರಗುಪ್ತ (ಸಾ.ಶ.380–412)

ಸಮುದ್ರಗುಪ್ತನ ಸಾಮ್ರಾಜ್ಯವನ್ನು ಎರಡನೇ ಚಂದ್ರಗುಪ್ತನು ಮತ್ತಷ್ಟು ವಿಸ್ತರಿಸಿ ಸ್ಥಿರತೆಯನ್ನು ತಂದನು. ಇವನು ಶಕರನ್ನು ಸೋಲಿಸಿ ಪಶ್ಚಿಮ ಭಾರತವನ್ನು ಗುಪ್ತರ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು. ಭಾರತದ ಅನೇಕ ರಾಜ ಮನೆತನಗಳೊಂದಿಗೆ ಈತನು ಮದುವೆ ಮೂಲಕ ಸಂಬಂಧವನ್ನು ಬೆಳೆಸಿ ಪ್ರಭಾವಿಯಾಗಿ ವಿಕ್ರಮಾದಿತ್ಯನೆಂಬ ಬಿರುದನ್ನು ಪಡೆದನು. ಇವನ ಕಾಲದಲ್ಲಿ ಯುದ್ಧಗಳಿಗಿಂತ ಸಾಹಿತ್ಯ ಹಾಗೂ ಕಲೆಗೆ ನೀಡಿದ ಪೋಷಣೆಯು ಸ್ಮರಣೀಯವಾಗಿದೆ. ಸುಪ್ರಸಿದ್ಧ ಸಂಸ್ಕೃತ ಕವಿ ಹಾಗೂ ನಾಟಕಕಾರ ಕಾಳಿದಾಸನು ಇದೇ ಕಾಲಕ್ಕೆ ಸೇರಿದವನು. ಮೇಘದೂತ, ರಘುವಂಶ, ಕುಮಾರಸಂಭವ ಹಾಗೂ ಋತುಸಂಹಾರ ಅವನ ಕಾವ್ಯಗಳು. ಅಭಿಜ್ಞಾನ ಶಾಕುಂತಲವು ಅವನ ಶ್ರೇಷ್ಠ ನಾಟಕಗಳಲ್ಲಿ ಒಂದು. ಶೂದ್ರಕನ ಮೃಚ್ಛಕಟಿಕ ಹಾಗೂ ವಿಶಾಖದತ್ತನ ಮುದ್ರಾರಾಕ್ಷಸ ಈ ಕಾಲದ ಇತರ ಕೃತಿಗಳು.

> **ನಿಮಗಿದು ತಿಳಿದಿರಲಿ**
>
> **ಮೇಘದೂತ :** ಇದು ಕಾಳಿದಾಸನು ರಚಿಸಿದ ಕಾವ್ಯ. ಇದು ಅವನ ಸುಪ್ರಸಿದ್ಧ ಕೃತಿಗಳಲ್ಲಿ ಒಂದು. ಕುಬೇರ ರಾಜನು ಯಕ್ಷನನ್ನು ಕರ್ತವ್ಯ ಲೋಪಕ್ಕಾಗಿ ಒಂದು ವರ್ಷ ಗಡಿಪಾರು ಮಾಡುತ್ತಾನೆ. ಈ ಸಂದರ್ಭದಲ್ಲಿ ಕೈಲಾಸ ಪರ್ವತ ಪ್ರದೇಶದಲ್ಲಿ ಇರುವ ತನ್ನ ಪತ್ನಿಗೆ ಪ್ರೀತಿಯ ಸಂದೇಶವನ್ನು ತಲುಪಿಸಲು ಯಕ್ಷನು ಹಾದು ಹೋಗುತ್ತಿರುವ ಮೋಡವೊಂದಕ್ಕೆ ಒಪ್ಪಿಸುತ್ತಾನೆ. ಚಲಿಸುವ ಮೋಡಕ್ಕೆ ಅವಳನ್ನು ತಲುಪುವ ದಾರಿಯಲ್ಲಿ ಕಂಡುಬರುವ ರಮಣೀಯ ದೃಶ್ಯಗಳನ್ನು ಯಕ್ಷನು ವಿವರಿಸುವ ಕಥನವು ಮೇಘದೂತದಲ್ಲಿದೆ. ಇದು ಇಂದಿಗೂ ಜಗತ್ತಿನಾದ್ಯಂತ ಹೆಸರುವಾಸಿಯಾದ ಕಾವ್ಯ. ಭಾರತದ ಎಲ್ಲ ಭಾಷೆಗಳಲ್ಲಿ ಹಾಗೂ ಜಗತ್ತಿನ ಪ್ರಮುಖ ಭಾಷೆಗಳಲ್ಲಿ ಇದರ ಅನುವಾದ ಪ್ರಕಟಗೊಂಡಿದೆ. ಮೇಘದೂತದ ನಾಟಕವನ್ನು ಎಲ್ಲರೂ ನೋಡಿ ಇಂದಿಗೂ ಆನಂದಿಸುತ್ತಿದ್ದಾರೆ.

ಹೂಣರ ದಾಳಿಗೆ ನಿರಂತರವಾಗಿ ಒಳಗಾಗಿ ಗುಪ್ತರ ಸಾಮ್ರಾಜ್ಯವು ಪತನ ಕಂಡಿತು. ಗುಪ್ತರು ಬೃಹತ್ ಸುಸಜ್ಜಿತ ಸೇನೆಯನ್ನೇನೂ ಹೊಂದಿರಲಿಲ್ಲ. ಸಾಮಂತರು ಸೈನ್ಯದ ಅವಶ್ಯಕತೆಯನ್ನು ಯುದ್ಧಗಳ ಸಮಯದಲ್ಲಿ ನೀಗುತ್ತಿದ್ದರು. ಹೀಗಾಗಿಯೇ ಸಾಮಂತರು ಇವರ ಕಾಲದಲ್ಲಿ ಬಹಳಷ್ಟು ಅಧಿಕಾರವನ್ನು ಚಲಾಯಿಸುತ್ತಿದ್ದರು. ಅಧಿಕಾರ ವರ್ಗವು ಕುಮಾರ ಅಮಾತ್ಯರಿಂದ ಕೂಡಿತ್ತು. ವಿವಿಧ ಹುದ್ದೆಗಳನ್ನು ಕುಮಾರ ಅಮಾತ್ಯರು ಹೊಂದಿದ್ದರು. ಆಡಳಿತವು ವಿಕೇಂದ್ರೀಕೃತಗೊಂಡಿತ್ತು. ಪುರೋಹಿತರು ಅನೇಕ ದಾನ ದತ್ತಿಗಳನ್ನು ಪಡೆಯುತ್ತಿದ್ದರು. ಭೂದಾನವಾಗಿ ಅನೇಕ ಹಳ್ಳಿಗಳನ್ನು ಒಳಗೊಂಡ ಹಾಗೆ ಇವರುಗಳಿಗೆ ನೀಡಲಾಗುತ್ತಿತ್ತು.

© KTBS Not to be republished

ಅನೇಕ ದೇವಾಲಯಗಳೂ ಇದರಿಂದ ಅಭಿವೃದ್ಧಿಯನ್ನು ಕಂಡವು. ಇಂತಹ ಪ್ರದೇಶಗಳು ಅನೇಕ ಆರ್ಥಿಕ ಹಾಗೂ ಆಡಳಿತಾತ್ಮಕ ವಿನಾಯತಿಗಳನ್ನು ಪಡೆದುದಲ್ಲದೆ ಎಲ್ಲ ವ್ಯವಹಾರದಲ್ಲಿಯು ಸ್ವತಂತ್ರ ಪ್ರದೇಶಗಳಾದವು. ಕ್ರಮೇಣವಾಗಿ ಆ ಪ್ರದೇಶದ ನಿವಾಸಿಗಳು, ಕೃಷಿಕರು, ಕುಶಲಕರ್ಮಿಗಳು, ಭೂಮಾಲೀಕರ ಕಟ್ಟುಪಾಡಿಗೆ ಅಧೀನರಾದರು. ಹೀಗೆ ಸಮಾಜವು ಸಂಕೀರ್ಣ ಹಾದಿಯತ್ತ ಸಾಗಿತ್ತು.

**ಅಭಿಜ್ಞಾನ ಶಾಕುಂತಲ**



ಶಾಕುಂತಲ

ಈ ಕೃತಿಯು ಕಾಳಿದಾಸನ ಸರ್ವಶ್ರೇಷ್ಠ ನಾಟಕ. ಶಾಕುಂತಲೆಯ ಕಥೆಯು ಮಹಾಭಾರತದಲ್ಲಿದೆ. ಕಥೆಯಲ್ಲಿ ದುಶ್ಯಂತ ರಾಜನು ಬೇಟೆಯಾಡುತ್ತಾ ಕಣ್ವ ಮಹರ್ಷಿಗಳ ಆಶ್ರಮಕ್ಕೆ ಬರುತ್ತಾನೆ. ಅಲ್ಲಿ ದುಶ್ಯಂತನು ಶಕುಂತಲೆಯನ್ನು ಕಂಡು ಮೋಹಗೊಂಡು, ಅವರಿಬ್ಬರು ಗಂಧರ್ವ ವಿವಾಹವಾಗುತ್ತಾರೆ. ಇವೆಲ್ಲವು ಕಣ್ವ ಮಹರ್ಷಿಗಳ ಅನುಪಸ್ಥಿತಿಯಲ್ಲಿ ನಡೆಯುತ್ತದೆ. ಕೆಲಕಾಲದ ಬಳಿಕ ದುಶ್ಯಂತನು ಶಕುಂತಲೆಯನ್ನು ಆಶ್ರಮದಲ್ಲಿಯೇ ಬಿಟ್ಟು ರಾಜಧಾನಿಗೆ ಹಿಂದಿರುಗುವನು. ಅಗಲಿಕೆಯ ಈ ಸಂದರ್ಭದಲ್ಲಿ ದುರ್ವಾಸ ಮುನಿಗಳು ಕಣ್ವರ ಆಶ್ರಮಕ್ಕೆ ಬಂದರು. ಅವರನ್ನು ಉಪಚರಿಸಲು ಮರೆತು ದುಶ್ಯಂತನ ಧ್ಯಾನದಲ್ಲಿ ಕುಳಿತಿದ್ದ ಶಕುಂತಲೆಯನ್ನು ಕಂಡು 'ಯಾರ ನೆನಪಿನಲ್ಲಿ ಮೈಮರೆತು ಕೂತಿರುವೆಯೋ ಅವನು ನಿನ್ನನ್ನು ಮರೆತು ಹೋಗಲಿ' ಎಂದು ಶಪಿಸುತ್ತಾರೆ. ಅಪಚಾರದ ಅರಿವಾದ ಮೇಲೆ ದುರ್ವಾಸರು ಶಾಪ ವಿಮೋಚನೆಯಾಗಿ ದುಶ್ಯಂತನು ನೀಡಿರುವ ವಸ್ತುವೊಂದನ್ನು ಕಂಡ ಬಳಿಕ ಮತ್ತೆ ಅವನಿಗೆ ನೆನಪುಗಳು ಮರುಕಳಿಸುತ್ತವೆ ಎಂಬುದನ್ನು ಸಹ ಸೂಚಿಸುತ್ತಾರೆ. ಆ ವಸ್ತು ದುಶ್ಯಂತನು ಶಕುಂತಲೆಗೆ ಕೊಟ್ಟಿದ್ದ ಉಂಗುರ. ದುರ್ವಾಸರು ಹೇಳಿದಹಾಗೆಯೆ ದುಶ್ಯಂತನು ಶಕುಂತಲೆಯನ್ನು ಮರೆತುಬಿಟ್ಟ. ಕಾಲಾಂತರದಲ್ಲಿ ತುಂಬು ಗರ್ಭಿಣಿಯಾದ ಶಕುಂತಲೆ ಮತ್ತು ದುಶ್ಯಂತನನ್ನು ಸೇರಿಸಲು ಕಣ್ವರ ಶಿಷ್ಯರು ಶಕುಂತಲೆಯನ್ನು ದುಶ್ಯಂತನ ಆಸ್ಥಾನಕ್ಕೆ ಕರೆದುಕೊಂಡು ಹೋಗುತ್ತಾರೆ. ದಾರಿಯಲ್ಲಿ ಶಕುಂತಲೆಯು ರಾಜನ ನೆನಪನ್ನು ಪ್ರೇರೇಪಿಸುವ ಅವನೇ ನೀಡಿದ್ದ ಉಂಗುರವನ್ನು ಕಳೆದುಕೊಳ್ಳುತ್ತಾಳೆ. ಹೀಗಾಗಿ ದುಶ್ಯಂತರಾಜನು ಅವಳನ್ನು ಗುರುತಿಸಲು ಅಶಕ್ತನಾಗುತ್ತಾನೆ. ಅವಮಾನದಿಂದ ಶಕುಂತಲೆಯು ಹೊರಟುಹೋಗುತ್ತಾಳೆ. ಕೆಲವು ದಿನಗಳ ನಂತರ ಮೀನೊಂದರ ಹೊಟ್ಟೆಯಲ್ಲಿ ಉಂಗುರವು ಪತ್ತೆಯಾಗಿ ಅದು ಅವನ ನೆನಪನ್ನು ಮೂಡಿಸಲು ಸಹಾಯವಾಗುತ್ತದೆ. ಪಶ್ಚಾತ್ತಾಪವು ದುಶ್ಯಂತನಲ್ಲಿ ಆವರಿಸುತ್ತದೆ. ಇದಾದ ಕೆಲವು ದಿನಗಳ ನಂತರ ದುಶ್ಯಂತನು ಬರುವ ದಾರಿಯಲ್ಲಿ ಮರೀಚರ ಆಶ್ರಮಕ್ಕೆ ಭೇಟಿಯನ್ನು ನೀಡುತ್ತಾನೆ. ಅಲ್ಲಿ ಸಿಂಹದ ಮರಿಗಳ ಜೊತೆಯಲ್ಲಿ ಆಡುತ್ತಿದ್ದ ಬಾಲಕನನ್ನು ನೋಡಿ ಅವನ ಪೂರ್ವಾಪರಗಳನ್ನು ತಿಳಿದಾಗ ಆತ ತನ್ನ ಮಗನಾದ ಸರ್ವದಾಮನೆಂದು ಹರ್ಷಿಸುತ್ತಾನೆ. ಹೀಗೆ ದುಶ್ಯಂತನಿಗೆ ತನ್ನ ಪತ್ನಿ ಶಕುಂತಲೆ ಮತ್ತು ಮಗನ ಜೊತೆ ಪುನರ್ಮಿಲನವಾಗುತ್ತದೆ. ಅಭಿಜ್ಞಾನ ಶಾಕುಂತಲವು ಜಗತ್ತಿನ ಸರ್ವಶ್ರೇಷ್ಠ ನಾಟಕಗಳಲ್ಲೊಂದಾಗಿದೆ. ಜಗತ್ತಿನಾದ್ಯಂತ ಈ ನಾಟಕವು ಅಪಾರ ಜನಮನ್ನಣೆ ಗಳಿಸಿದೆ.

© KTBS Not to be Republished

ಈ ಕಾಲದಲ್ಲಿ ಪಾಶ್ಚಿಮಾತ್ಯರೊಂದಿಗೆ ಗುಪ್ತರಿಗಿದ್ದ ವ್ಯಾಪಾರ ಕುಸಿಯಿತು. ಇದರಿಂದಾಗಿ ಗುಪ್ತರ ಆರ್ಥಿಕ ವ್ಯವಸ್ಥೆ ಕುಂಠಿತಗೊಂಡಿತು. ಸಾಮ್ರಾಜ್ಯದ ಮೇಲೆ ಹೇರಲಾದ ನಿರ್ಬಂಧಗಳು ಆಂತರಿಕ ವ್ಯಾಪಾರವನ್ನು ಸಹ ಸ್ಥಗಿತಗೊಳಿಸಿತು. ವ್ಯಾಪಾರವು ಈಗ ಗ್ರಾಮಗಳಿಗೆ ಸೀಮಿತಗೊಂಡಿತು. ವ್ಯಾಪಾರಗಳಲ್ಲಿ ಕಂಡ ಕುಸಿತವು ನಗರಕೇಂದ್ರಗಳ ಅವನತಿಗೆ ಕಾರಣವಾಯಿತು. ಈ ಸಂದರ್ಭದಲ್ಲಿ ಪಾಟಲೀಪುತ್ರವು ಕೇವಲ ಒಂದು ಗ್ರಾಮವಾಗಿ ಬದಲಾಯಿತು.

ಭಕ್ತಿಯನ್ನು ಆಧರಿಸಿದ ವಿವಿಧ ಧರ್ಮಗ್ರಂಥಗಳಾದ ಧರ್ಮಶಾಸ್ತ್ರಗಳು ಹಾಗೂ ಪುರಾಣಗಳ ಸೃಷ್ಟಿಯ ಪರ್ವಕಾಲವಿದು. ವರಾಹಮಿಹಿರ, ಭಾಸ್ಕರ, ಆರ್ಯಭಟ, ಚರಕ ಹಾಗೂ ಶುಶ್ರುತ ಈ ಕಾಲದ ಶ್ರೇಷ್ಠ ವಿಜ್ಞಾನಿಗಳು. ವರಾಹಮಿಹಿರ, ಭಾಸ್ಕರ ಮತ್ತು ಆರ್ಯಭಟ ಜ್ಯೋತಿಷ್ಯಶಾಸ್ತ್ರ, ಖಗೋಳ ಹಾಗೂ ಗಣಿತ ಅಧ್ಯಯನಕ್ಕೆ ಮಹತ್ವದ ಕೊಡುಗೆಯನ್ನು ನೀಡಿದವರು. ಚರಕ ಹಾಗೂ ಶುಶ್ರುತರು ವೈದ್ಯಕೀಯ ಅಧ್ಯಯನವನ್ನು ಮಾಡಿದರು. ಚರಕನು ಚರಕ ಸಂಹಿತೆಯನ್ನು ರಚಿಸಿದನು. ಶುಶ್ರುತನು ಶಸ್ತ್ರಚಿಕಿತ್ಸೆಯನ್ನು ಕುರಿತಾದ ಶುಶ್ರುತ ಸಂಹಿತೆಯನ್ನು ರಚಿಸಿದನು.

**ಗುಪ್ತರ ಕಾಲದ ವಿಜ್ಞಾನಿಗಳು**

***1. ಧನ್ವಂತರಿ:*** *ವೈದ್ಯಕೀಯ ಕ್ಷೇತ್ರದಲ್ಲಿ ಪ್ರಸಿದ್ಧ ವಿದ್ವಾಂಸನಾಗಿದ್ದನು. ಇವನು ಆಯುರ್ವೇದ ಶಾಸ್ತ್ರದ ತಜ್ಞನಾಗಿದ್ದನು. ಭಾರತದ ವೈದ್ಯಶಾಸ್ತ್ರದ ಪಿತಾಮಹ. ಆಯುರ್ವೇದ ನಿಘಂಟುವನ್ನು ವೈದ್ಯಶಾಸ್ತ್ರಕ್ಕೆ ಕೊಡುಗೆಯಾಗಿ ನೀಡಿದನು.*

***2. ಚರಕ:*** *ವೈದ್ಯವಿಜ್ಞಾನಿಯಾಗಿದ್ದನು. 'ಚರಕ ಸಂಹಿತೆ' ಎಂಬ ಗ್ರಂಥವನ್ನು ರಚಿಸಿ ವೈದ್ಯಕೀಯ ಕ್ಷೇತ್ರಕ್ಕೆ ಮಹತ್ತರ ಕೊಡುಗೆಯನ್ನು ನೀಡಿದ್ದಾನೆ.*

***3. ಶುಶ್ರುತ:*** *ಶಸ್ತ್ರ ಚಿಕಿತ್ಸಾ ವೈದ್ಯನಾಗಿದ್ದನು. ಭಾರತೀಯ ಪರಂಪರೆಯಲ್ಲಿ ಶಸ್ತ್ರ ಚಿಕಿತ್ಸೆಯನ್ನು ನೀಡುವ ಕ್ರಮವನ್ನು ಮೊದಲು ತಿಳಿಸಿದವನು ಇವನು. ಅಂದಿನಕಾಲದಲ್ಲಿ ಸೈನಿಕರ ಚಿಕಿತ್ಸೆಗಾಗಿ ಶುಶ್ರುತನು ಪ್ರತ್ಯೇಕ ವಿಭಾಗ ಇತ್ತೆಂದು ತಿಳಿಸಿದ್ದಾನೆ. ಆಧುನಿಕ ಕಾಲದಲ್ಲಿ ನಡೆಸುವ ಶಸ್ತ್ರ ಚಿಕಿತ್ಸೆಗಳಂತೆ ಶುಶ್ರುತನು ಶಸ್ತ್ರ ಚಿಕಿತ್ಸೆಯನ್ನು ನೆಡೆಸುವಲ್ಲಿ ಪ್ರಾವಿಣ್ಯತೆಯನ್ನು ಪಡೆದು ವೈದ್ಯಕೀಯ ಕ್ಷೇತ್ರಕ್ಕೆ ಗುರುತರವಾದ ಕಾಣಿಕೆ ನೀಡಿದ್ದಾನೆ.*

***4. ಆರ್ಯಭಟ:*** *ಈತನು ಖಗೋಳ ಮತ್ತು ಗಣಿತ ಶಾಸ್ತ್ರಗಳ ಪ್ರಖ್ಯಾತ ವಿಜ್ಞಾನಿಯಾಗಿದ್ದನು. ಇವನು ವರಾಹಮಿಹಿರನ ನಂತರದಲ್ಲಿ ಬರುವ ಪ್ರಮುಖ ವಿಜ್ಞಾನಿಯಾಗಿದ್ದನು. ಈತನು ಖಗೋಳ ಮತ್ತು ಗಣಿತ ಕ್ಷೇತ್ರಗಳಿಗೆ ನೀಡಿದ ಕೊಡುಗೆ ಮಹತ್ತರವಾದುದು. ಈ ಕಾರಣಕ್ಕಾಗಿಯೇ ಸರ್ವಶ್ರೇಷ್ಠ ವಿಜ್ಞಾನಿಗಳಿಗೆ ಭಾರತ ಸರ್ಕಾರವು ಆರ್ಯಭಟ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಭಾರತದ ಪ್ರಥಮ ಉಪಗ್ರಹಕ್ಕೂ ಆರ್ಯಭಟನ ಹೆಸರಿಡಲಾಗಿದೆ. ಇವನು ಸೊನ್ನೆಯನ್ನು ಕಂಡುಹಿಡಿದನೆಂದು ಅಭಿಪ್ರಾಯಪಡಲಾಗಿದೆ. ಬೀಜಗಣಿತ ಪದ್ಧತಿಯನ್ನು ಭಾರತದಲ್ಲಿ ಮೊದಲಿಗೆ ತಿಳಿಸಿದವನಾಗಿದ್ದಾನೆ. ಸೂರ್ಯ ಹಾಗೂ ಚಂದ್ರಗ್ರಹಣಗಳಾಗುವುದು ರಾಹುವಿನಿಂದ ಅಲ್ಲ. ಪೃಥ್ವಿಯು ತನ್ನ ಕಕ್ಷೆಯಲ್ಲಿ ಪ್ರತಿದಿನವೂ ಸುತ್ತುತ್ತಾ ಸೂರ್ಯನನ್ನು ಪ್ರದಕ್ಷಿಣೆ ಮಾಡುವುದರಿಂದ ಎಂಬುದನ್ನು ಮನವರಿಕೆ ಮಾಡಿಕೊಟ್ಟನು.*

***5. ವರಾಹಮಿಹಿರ:*** *ಇವನು ಪ್ರಖ್ಯಾತ ಖಗೋಳಶಾಸ್ತ್ರಜ್ಞನಾಗಿದ್ದನು. ಪಂಚಸಿದ್ಧಾಂತಿಕಾ ಎಂಬ ಖಗೋಳ ಶಾಸ್ತ್ರದ ಗ್ರಂಥವನ್ನು ರಚಿಸಿದನು. ಈ ಗ್ರಂಥವನ್ನು 'ಖಗೋಳಶಾಸ್ತ್ರದ ಬೈಬಲ್' ಎಂದು ಕರೆಯುವರು. ಬೃಹತ್ ಸಂಹಿತಾ, ಬೃಹತ್ ಜಾತಕ, ಲಘು ಜಾತಕ ಎಂಬ ಗ್ರಂಥಗಳನ್ನು ಇವನು ರಚಿಸಿದ್ದಾನೆ. ಖಗೋಳಶಾಸ್ತ್ರ, ಜ್ಯೋತಿಷ್ಯ, ಭೂಗೋಳ, ಹವಾಮಾನ, ಮುಂತಾದ ಕ್ಷೇತ್ರಗಳಲ್ಲಿ ವಿದ್ವಾಂಸನಾಗಿದ್ದನು.*

©KTBS Not to be republished

# ವರ್ಧನರು

ಎರಡು ಶತಮಾನಗಳ ಕಾಲ ರಾಜ್ಯವನ್ನಾಳಿದ ಗುಪ್ತರ ಸಾಮ್ರಾಜ್ಯವು ಸುಮಾರು ಸಾಶ.ಪೂ.6ನೆಯ ಶತಮಾನದ ವೇಳೆಗೆ ವಿಘಟನೆಯನ್ನು ಕಂಡಿತು. ಅನೇಕ ಪುಟ್ಟರಾಜ್ಯಗಳು ಈ ಸಂದರ್ಭದಲ್ಲಿ ಹುಟ್ಟಿಕೊಂಡವು. ಅವುಗಳಲ್ಲಿ ವರ್ಧನರ ರಾಜ್ಯವೂ ಒಂದು. ಇವರು 6ನೆಯ ಶತಮಾನದಲ್ಲಿ ಥಾಣೇಶ್ವರದಿಂದ ರಾಜ್ಯವನ್ನಾಳಿದರು. ಕೆಲವು ತಾಮ್ರ ಶಾಸನಗಳು, ಬಾಣನ 'ಹರ್ಷಚರಿತೆ' ಹಾಗೂ ಚೀನಾದ ಪ್ರವಾಸಿ ಹ್ಯೂಯನ್‌ತ್ಸಾಂಗನ ಬರವಣಿಗೆಗಳು ಈ ಕಾಲದ ಬಗ್ಗೆ ಬೆಳಕನ್ನು ಚೆಲ್ಲುತ್ತವೆ.

ಪುಷ್ಯಭೂತಿಯು ಈ ವಂಶದ ಸಂಸ್ಥಾಪಕ. ಪ್ರಭಾಕರವರ್ಧನ ಹಾಗೂ ಹರ್ಷವರ್ಧನರು ಈ ಮನೆತನದ ಪ್ರಮುಖ ದೊರೆಗಳು. ಹರ್ಷನ ತಂದೆಯಾದ ಪ್ರಭಾಕರವರ್ಧನ ಹಾಗೂ ಸೋದರನಾದ ರಾಜವರ್ಧನನ ಮರಣದ ನಂತರ ಇವನು ಥಾಣೇಶ್ವರದ ಅಧಿಪತಿಯಾದನು. ಇವನ ಸೋದರಿ ರಾಜಶ್ರೀಯನ್ನು ಕನೋಜಿನ ರಾಜನಿಗೆ ಕೊಟ್ಟು ಮದುವೆಮಾಡಿದನು.

**ನಳಂದ**



**ನಳಂದ ವಿಶ್ವವಿದ್ಯಾಲಯ**

*ಬುದ್ಧನ ಪೂರ್ವಾಪರಜನ್ಮದ ಮತ್ತೊಂದು ಹೆಸರು ನಳಂದ ಎಂಬುದು ಅವನ ಅನುಯಾಯಿಗಳ ನಂಬಿಕೆ. ಇದೊಂದು ಪ್ರಾಚೀನ ವಿಶ್ವವಿದ್ಯಾಲಯದ ನೆಲೆಯಾಗಿ ಪ್ರಸಿದ್ಧಿಯನ್ನು ಹೊಂದಿದೆ. ಬುದ್ಧನು ನಳಂದಕ್ಕೆ ಭೇಟಿ ನೀಡಿದ್ದನು. ಹರ್ಷವರ್ಧನನು 25 ಮೀಟರ್ ಎತ್ತರದ ಕಂಚಿನ ಬುದ್ಧ ಪ್ರತಿಮೆಯನ್ನು ನಳಂದಕ್ಕೆ ಕಾಣಿಕೆ ನೀಡಿದನೆಂಬ ಉಲ್ಲೇಖವಿದೆ. ಕುಮಾರಗುಪ್ತನು ಇಲ್ಲಿ ಲಲಿತ ಕಲಾ ಶಾಲೆಯೊಂದಕ್ಕೆ ಕೊಡುಗೆಯನ್ನು ನೀಡಿದ್ದನು. ಇಲ್ಲಿ ಮಾಧ್ಯಮಿಕ ಸೂತ್ರದ ಪ್ರತಿಪಾದಕ ನಾಗಾರ್ಜುನ, ದಿನ್ನಗ ಮತ್ತು ಧರ್ಮಪಾಲರೆಂಬ ಪ್ರಸಿದ್ಧ ವಿದ್ವಾಂಸರು ಬೋಧಿಸಿದ್ದರು. ಚೀನಾದ ಪ್ರವಾಸಿಗ ಹ್ಯೂಯನ್‌ತ್ಸಾಂಗನು ಇಲ್ಲಿಗೆ ಭೇಟಿ ನೀಡಿ, ಕೆಲಕಾಲವಿದ್ದು ಈ ಪ್ರದೇಶದ ಬಗ್ಗೆ ಸವಿವರವಾದ ಬಣ್ಣನೆಯನ್ನು ಮಾಡಿದ್ದಾನೆ. ಈ ಪ್ರದೇಶದಲ್ಲಿ ಅನೇಕ ಸ್ತೂಪಗಳು, ಚೈತ್ಯ-ವಿಹಾರಗಳು, ವಿಶ್ರಾಂತಿಗೃಹಗಳು, ಅಲ್ಲಲ್ಲಿ ಕುಳಿತು ವಿಶ್ರಮಿಸಲು ಮೆಟ್ಟಿಲುಗಳು, ಧ್ಯಾನ ಕೊಠಡಿಗಳು, ಬೋಧನಾ ಕೊಠಡಿಗಳು ಹಾಗೂ ಇಲ್ಲಿನ ಇನ್ನಿತರ ಕಟ್ಟಡಗಳು ಇದರ ವೈಭವವನ್ನು ಸಾರುತ್ತವೆ. ಅಶೋಕ, ಗುಪ್ತರ ದೊರೆಗಳು ಹಾಗೂ ಹರ್ಷವರ್ಧನ ಇದರ ಸುಪ್ರಸಿದ್ಧ ಪೋಷಕರು, ಬೆಂಕಿ ಅಪಘಾತವೊಂದಕ್ಕೆ ಆಹುತಿಯಾಗಿ ನಳಂದದಲ್ಲಿದ್ದ ಅನೇಕ ಕೃತಿಗಳು ದಹಿಸಿಹೋದವು.*

ಬಂಗಾಳದ ದೊರೆಯಾದ ಶಶಾಂಕನು ಕನೋಜಿನ ದೊರೆಯನ್ನು ಕೊಂದ ನಂತರ ಹರ್ಷನು ಕನೋಜನ್ನು ವಶಪಡಿಸಿಕೊಂಡನು. ಬಂಗಾಳದ ರಾಜನ ಮೇಲೆ ದಂಡೆತ್ತಿಹೋದನು. ಬಂಗಾಳ ಹಾಗೂ ಮಗಧ ಇವನ ಆಳ್ವಿಕೆಗೆ ಒಳಪಟ್ಟವು. ಆದರೆ ದಕ್ಷಿಣದಲ್ಲಿನ ನರ್ಮದಾ ನದಿಯನ್ನು ದಾಟಲು ಅವನಿಗೆ ಸಾಧ್ಯವಾಗಲಿಲ್ಲ. ಚಾಲುಕ್ಯರ ಕನ್ನಡದ ದೊರೆ ಎರಡನೇ ಪುಲಿಕೇಶಿಯು ಇವನ ಅತಿಕ್ರಮಣವನ್ನು

© KTBS Not to be republished

ಅಲ್ಲಿಯೇ ತಡೆದನು. ಹರ್ಷವರ್ಧನನನ್ನು ಈ ಮೂಲಕ ಪುಲಿಕೇಶಿಯು ಹಿಮ್ಮೆಟ್ಟಿಸಿದನು. ಇವನ ಈ ಸಾಧನೆಯು ಪುಲಿಕೇಶಿಯ ಆಸ್ಥಾನ ಕವಿಯಾದ ರವಿಕೀರ್ತಿಯು ರಚಿಸಿದ ಪ್ರಶಸ್ತಿಯೊಂದರ ವಿವರಣೆಯಲ್ಲಿ ವ್ಯಕ್ತವಾಗಿದೆ. ಪುಲಿಕೇಶಿಯ ವಿರುದ್ಧ ಪರಾಭವಗೊಂಡ ಹರ್ಷನ 'ಹರ್ಷ'ವನ್ನು ಇದು ಇಂಗಿಸಿತೆಂದು ಅತ್ಯಂತ ರಂಜನೀಯವಾಗಿ ರವಿಕೀರ್ತಿಯು ವ್ಯಕ್ತಪಡಿಸಿದ್ದಾನೆ. ರಾಜನ ಆಳ್ವಿಕೆಯಲ್ಲಿ ಮಂತ್ರಿಮಂಡಲವು ಸಹಕರಿಸುತ್ತಿತು. ಮಹಾಸಂಧಿವಿಗ್ರಹ (ಅನುಸಂಧಾನಗಳನ್ನು ಮಾಡುವವ), ಮಹಾಬಲಾಧಿಕೃತ (ಮಹಾಸೇನಾಪತಿ), ಭೋಗಪತಿ (ಕಂದಾಯ ಅಧಿಕಾರಿ), ದೂತ ಮುಂತಾದವರಿಂದ ಅಧಿಕಾರ ವರ್ಗವು ಕೂಡಿತ್ತು. ರಾಜ್ಯವು ಪ್ರಾಂತ್ಯಗಳಾಗಿ ವಿಂಗಡಿಸಲ್ಪಟ್ಟಿತ್ತು.

ಭೂಕಂದಾಯವೇ ರಾಜ್ಯದ ಮುಖ್ಯ ಆದಾಯವಾಗಿತ್ತು. ಸಾಮಂತ ರಾಜರುಗಳು ಇವನಿಗೆ ಕಪ್ಪವನ್ನು ಕೊಡುತ್ತಿದ್ದರು. ರಾಜನು ಇವರಿಗೆ ಭೂಮಿಯನ್ನು ಕೊಡುಗೆಯಾಗಿ ಕೊಟ್ಟು ಪ್ರತಿಯಾಗಿ ಸೈನ್ಯದ ಸಹಾಯವನ್ನು ಪಡೆಯುತ್ತಿದ್ದನು. ಅರಸನು ದುರ್ಬಲಗೊಂಡಾಗ ಸಾಮಂತರು ಸ್ವತಂತ್ರರಾದರು.

ಭೂದಾನವನ್ನು ಇತರೆ ಸಮುದಾಯಗಳಿಗೆ ಹಾಗೂ ಧರ್ಮದವರಿಗೆ ನೀಡಲಾಗುತ್ತಿತ್ತು. ಹರ್ಷನು ಬೌದ್ಧ ಧರ್ಮಕ್ಕೆ ಪ್ರಾಶಸ್ತ್ಯವನ್ನು ನೀಡಿದ್ದನು. ಈ ಕಾಲದಲ್ಲಿಯೂ ವ್ಯಾಪಕವಾಗಿದ್ದ ಬೌದ್ಧಧರ್ಮದ ವಿವರಣೆಯನ್ನು ಹ್ಯೂಯನ್‌ತ್ಸಾಂಗನ ಬರವಣಿಗೆಯಿಂದ ತಿಳಿಯಬಹುದು. ಬೌದ್ಧರ ನಳಂದ ವಿಶ್ವವಿದ್ಯಾಲಯವು ಈ ಕಾಲದಲ್ಲಿ ಅತ್ಯಂತ ಚಟುವಟಿಕೆಯಿಂದ ಕೂಡಿತ್ತು. ಅದಕ್ಕೆ ರಾಜನ ಆಶ್ರಯವಿತ್ತು.

## ಅಭ್ಯಾಸಗಳು

**I. ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1. ಗುಪ್ತರು ತಮ್ಮ ನೆಲೆಯನ್ನು ____________ ಪ್ರದೇಶದಿಂದ ಕಂಡುಕೊಂಡರು.
2. ಮೊದಲನೆಯ ಚಂದ್ರಗುಪ್ತನು ____________ ಎಂದು ಕರೆಸಿಕೊಂಡನು.
3. ಕಾಳಿದಾಸನ ಶ್ರೇಷ್ಠ ನಾಟಕಗಳಲ್ಲಿ ____________ ಒಂದು.
4. ವಿಶಾಖದತ್ತನ ಕೃತಿ ____________ .
5. ಶೂದ್ರಕನು ಬರೆದ ಕೃತಿ ____________ .
6. ವರ್ಧನ ವಂಶದ ಸ್ಥಾಪಕ ____________ .

**II. ಕೆಳಕಂಡ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.**

1. ಎರಡನೇ ಚಂದ್ರಗುಪ್ತನ ಬಗ್ಗೆ ವಿವರಿಸಿ.
2. ಗುಪ್ತರ ಸಾಮ್ರಾಜ್ಯದ ಪತನಕ್ಕೆ ಕಾರಣಗಳೇನು?
3. ಗುಪ್ತರ ಕಾಲದ ಶ್ರೇಷ್ಠ ವಿಜ್ಞಾನಿಗಳನ್ನು ಹೆಸರಿಸಿ.
4. ವರ್ಧನರ ಆಡಳಿತವು ಯಾವ ರೀತಿ ನಡೆಯುತ್ತಿತ್ತು?

**III. ಚಟುವಟಿಕೆಗಳು.**

1 ಕಾಳಿದಾಸನ ಎಲ್ಲ ಕೃತಿಗಳ ಬಗ್ಗೆ ತಿಳಿದುಕೊಳ್ಳಿ.

2 ಗುಪ್ತರ ಕಾಲದ ವಿಜ್ಞಾನಿಗಳ ವಿವರಣೆ ಹಾಗೂ ಚಿತ್ರಗಳನ್ನು ಸಂಗ್ರಹಿಸಿ.

*****

Not to be republished ©KTBS

## ಅಧ್ಯಾಯ – 9

# ದಕ್ಷಿಣ ಭಾರತ

## (ಸಾ.ಶ.ಪೂ. 3ನೇ ಶತಮಾನದಿಂದ ಸಾ.ಶ. 13ನೇ ಶತಮಾನದವರೆಗೆ)

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ದಕ್ಷಿಣ ಭಾರತದಲ್ಲಿ ಶಾತವಾಹನ ವಂಶದ ಬೆಳವಣಿಗೆ, ಪ್ರಮುಖ ಗೌತಮಿಪುತ್ರ ಶಾತಕರ್ಣಿಯ, ಸಾಧನೆ, ಆಡಳಿತ, ಕಲೆ, ವಾಸ್ತುಶಿಲ್ಪ ಕ್ಷೇತ್ರಗಳು.*
- *ಕರ್ನಾಟಕದಲ್ಲಿ ಸ್ಥಾಪನೆಯಾದ ಮೊದಲ ರಾಜವಂಶ ಕದಂಬರು.*
- *ಕದಂಬರ ಶ್ರೇಷ್ಠ ದೊರೆ ಮಯೂರವರ್ಮನ ಆಡಳಿತ ಪದ್ಧತಿ, ಕಲೆ, ವಾಸ್ತುಶಿಲ್ಪ, ಧಾರ್ಮಿಕ ಕ್ಷೇತ್ರದ ಕೊಡುಗೆಗಳು.*
- *ಗಂಗವಂಶ ಸ್ಥಾಪನೆ ಮತ್ತು ಕಲೆ, ವಾಸ್ತುಶಿಲ್ಪ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ ಕೊಡುಗೆಗಳು.*
- *ಕದಂಬರ, ಗಂಗರ ಸಾಮ್ರಾಜ್ಯವನ್ನು ಭೂಪಟದಲ್ಲಿ ಗುರುತಿಸುವುದು.*

ವಿಂಧ್ಯ ಪರ್ವತಗಳು ಉತ್ತರ ಮತ್ತು ದಕ್ಷಿಣ ಭಾರತವನ್ನು ಪ್ರತ್ಯೇಕಿಸುತ್ತವೆ. ವಿಂಧ್ಯ ಪರ್ವತದ ದಕ್ಷಿಣ ಭಾಗದಿಂದ ಕನ್ಯಾಕುಮಾರಿಯವರೆಗಿನ ಪ್ರದೇಶವನ್ನು ದಕ್ಷಿಣ ಭಾರತ ಅಥವಾ ದಖನ್ ಪ್ರಾಂತ್ಯ ಎಂದು ಕರೆಯಲಾಗಿದೆ. ಶಾತವಾಹನರು, ಕದಂಬರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಪಲ್ಲವರು ಈ ಪ್ರದೇಶವನ್ನು ಆಳಿದವರಲ್ಲಿ ಪ್ರಮುಖರು.

©KTBS Not to be re published

## ಶಾತವಾಹನರು (ಸಾ.ಶ.ಪೂ. 230 – ಸಾ.ಶ. 220)

ಶಾತವಾಹನ ವಂಶವು ದಖನ್‌ನಲ್ಲಿ ಸ್ಥಾಪನೆಗೊಂಡ ಮೊದಲ ರಾಜವಂಶವಾಗಿದೆ. ಚಂದ್ರಗುಪ್ತಮೌರ್ಯನ ಕಾಲದಲ್ಲಿ ಗೋದಾವರಿ, ಕೃಷ್ಣಾ ನದಿಗಳ ಮಧ್ಯೆ ನೆಲೆಸಿದ್ದು, ಸಾಮಂತರಾಗಿ ಕಪ್ಪಕಾಣಿಕೆಯನ್ನು ಸಲ್ಲಿಸುತ್ತಾ, ಸಾ.ಶ.ಪೂ. 220ರ ವೇಳೆಗೆ ಸಿಮುಖನು ಸ್ವತಂತ್ರನಾಗಿ ಶ್ರೀಕಾಕುಲಂನ್ನು ರಾಜಧಾನಿಯನ್ನಾಗಿ ಮಾಡಿಕೊಂಡನು.

### ಗೌತಮಿಪುತ್ರ ಶಾತಕರ್ಣಿ

ಈ ವಂಶದ ಪ್ರಮುಖ ದೊರೆ ಗೌತಮಿಪುತ್ರ ಶಾತಕರ್ಣಿ. ಸಾಮ್ರಾಜ್ಯಕ್ಕೆ ಕಂಠಕರಾಗಿದ್ದ ಶಖರನ್ನು ಭಾರತದ ಗಡಿಯಿಂದ ಹೊರಗಟ್ಟಿ ಸಾಹಸವನ್ನು ಮೆರೆದನು. ಇವನಿಂದ ಶಾಲಿವಾಹನ ಶಕೆಯು ಪ್ರಾರಂಭಗೊಂಡಿತೆಂದು ನಂಬಲಾಗಿದೆ. ಕೊಂಕಣ, ಬೀರಾರ್, ಸೌರಾಷ್ಟ್ರ, ಮಾಳವಗಳಲ್ಲದೆ ಅನೇಕ ಹೊಸ ಪ್ರದೇಶಗಳನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಇವನಿಗೆ ತ್ರೈ ಸಮುದ್ರತೋಯಪೀತವಾಹನ, ಶಾತವಾಹನ ಕುಲಯಶಃ ಪ್ರತಿಷ್ಠಾಪನಕಾರ ಎಂಬ ಬಿರುದುಗಳಿದ್ದವು.

ಯಜ್ಞ ಶ್ರೀ ಶಾತಕರ್ಣಿಯು ಈ ವಂಶದ ಕೊನೆಯರಸ. ಅವನ ಕಾಲದಲ್ಲಿ ಶಕಕ್ಷತ್ರಪರವು ನಿರಂತರ ದಾಳಿಯಿಂದಾಗಿ ಸಾಮ್ರಾಜ್ಯವು ಪತನಗೊಂಡಿತು.

ಶಾತವಾಹನರ ಕಾಲದಲ್ಲಿ ರಾಜನೇ ರಾಜ್ಯದ ಸರ್ವೋಚ್ಚ ಅಧಿಕಾರಿ. ಆಡಳಿತದ ಅನುಕೂಲತೆಗಾಗಿ ರಾಜ್ಯವನ್ನು ಜನಪದ ಎಂಬ ಜಿಲ್ಲೆಗಳನ್ನಾಗಿ ವಿಭಾಗಿಸಿ, ಅವುಗಳಿಗೆ ಅಧಿಕಾರಿಗಳನ್ನು ನೇಮಿಸಲಾಗಿತ್ತು. ನಗರ ಮತ್ತು ಗ್ರಾಮಗಳ ವ್ಯವಸ್ಥೆಯನ್ನು ಸ್ವಯಮಾಡಳಿತ ಸಂಸ್ಥೆಗಳು ನೋಡಿಕೊಳ್ಳುತ್ತಿದ್ದವು.

ಸಮಾಜದಲ್ಲಿ ವರ್ಣಭೇದವಿರಲಿಲ್ಲ. ಸ್ತ್ರೀಯರೂ ಸಹ ಉನ್ನತ ಅಧಿಕಾರ ಸ್ಥಾನಮಾನಗಳನ್ನು ಹೊಂದಿದ್ದರು. ರೈತ, ವ್ಯಾಪಾರಿ, ಅಕ್ಕಸಾಲಿಗ, ಮೀನುಗಾರ, ಬಡಗಿ, ನೇಕಾರ, ಔಷಧ ತಯಾರಿಸುವವ ಮುಂತಾದ ಕಸುಬುದಾರರಿದ್ದರು. ಕಸುಬುದಾರರ ಸಂಘಗಳು ಇದ್ದವು. ಇದೇ ಮುಂದೆ ವಾಣಿಜ್ಯ ಮತ್ತು ವ್ಯಾಪಾರಿ ಸಂಘಗಳಾಗಿ ಕಾರ್ಯ ನಿರ್ವಹಿಸಿದವು. ವಿದೇಶೀ ವ್ಯಾಪಾರಕ್ಕೂ ಪ್ರೋತ್ಸಾಹ ನೀಡಿದ್ದರಲ್ಲದೆ, ನಾಸಿಕ್, ಕಲ್ಯಾಣ್, ಬ್ರೋಚ್, ಭಟ್ಕಳ ವ್ಯಾಪಾರ ಕೇಂದ್ರಗಳಾಗಿದ್ದವು.



ಕಾರ್ಲೆಯ ಚೈತ್ಯಾಲಯ

ವೈದಿಕ ಮತಸ್ಥರಾದ ಶಾತವಾಹನರು ಇತರೆ ಧರ್ಮಗಳಾದ ಬೌದ್ಧ ಹಾಗೂ ಜೈನಮತಕ್ಕೂ ಪ್ರೋತ್ಸಾಹ ನೀಡಿ ಸಹಮತ ಭಾವನೆಯಿಂದ ಬಾಳುತ್ತಿದ್ದರು.

ಕಲೆ, ಸಾಹಿತ್ಯ, ವಿದ್ಯಾಭ್ಯಾಸಕ್ಕೆ ಉತ್ತೇಜನ ನೀಡಿದರು. ವಿದ್ವಾಂಸರ ಹಾಗೂ ಸಾಮಾನ್ಯ ಜನರ ಭಾಷೆಯಾಗಿದ್ದ ಪ್ರಾಕೃತ ಭಾಷೆಯಲ್ಲಿ ಸಾಹಿತ್ಯ ಸೃಷ್ಟಿಯಾಯಿತು. ಹಾಲನು ಬರೆದ ಗ್ರಂಥ ಗಾಥಾ ಸಪ್ತಶತೀ ಇದಕ್ಕೆ ಉದಾಹರಣೆಯಾಗಿದೆ.

ಇವರ ಕಾಲದಲ್ಲಿ ಅಜಂತ ಮತ್ತು ಅಮರಾವತಿಯ ಚಿತ್ರಕಲೆಗಳು ರಚನೆಗೊಂಡವು. ದೇವಾಲಯ, ವಿಹಾರ ಮತ್ತು ಚೈತ್ಯಾಲಯಗಳನ್ನು ಕಟ್ಟಲಾಯಿತು. ಕಾರ್ಲೆಯಲ್ಲಿ ಚೈತ್ಯಾಲಯವನ್ನು ಬನವಾಸಿಯ ಶ್ರೀಮಂತ ವರ್ತಕ ಭೂತಪಾಲನು ನಿರ್ಮಿಸಿದನು. ಒಟ್ಟಿನಲ್ಲಿ ಶಾತವಾಹನರ ಕಾಲದಲ್ಲಿ ಕನ್ನಡ ನಾಡು ಸಮೃದ್ಧಿಯಿಂದ ಕೂಡಿತ್ತು ಮತ್ತು ಇವರು ಸಾಹಸಿಗಳೂ, ಸಮರ್ಥ ಆಡಳಿತಗಾರರಾಗಿದ್ದು, ಭಾರತದ ಸಂಸ್ಕೃತಿಗೆ ತಮ್ಮದೇ ಆದ ಕೊಡುಗೆಗಳನ್ನು ನೀಡಿ ಶ್ರೀಮಂತಗೊಳಿಸಿದ್ದಾರೆ.

## ಕದಂಬರು (ಸಾ.ಶ. 325 ರಿಂದ ಸಾ.ಶ. 540)

ಕರ್ನಾಟಕದಲ್ಲಿ ಸ್ಥಾಪನೆಗೊಂಡ ಮೊದಲ ಸ್ಥಳೀಯ ರಾಜವಂಶ ಇದಾಗಿದೆ. ಇವರ ರಾಜಧಾನಿ ಬನವಾಸಿ, ಈಗಿನ ಉತ್ತರ ಕನ್ನಡ ಜಿಲ್ಲೆಯಲ್ಲಿದೆ. ಮಯೂರವರ್ಮನು ಈ ಸಂತತಿಯ ಸ್ಥಾಪಕ ಮತ್ತು ಶ್ರೇಷ್ಠನಾದ ರಾಜನು. ಪಲ್ಲವರಾಜ ಶಿವಸ್ಕಂದವರ್ಮನಿಂದ ಅಪಮಾನಗೊಂಡಾಗ ಮಯೂರಶರ್ಮ ತನ್ನ ವರ್ಣವನ್ನು ತ್ಯಜಿಸಿ ಕ್ಷತ್ರಿಯ ವರ್ಣ ಸ್ವೀಕರಿಸಿ ಮಯೂರವರ್ಮನಾದನು. ಪಲ್ಲವರನ್ನು ಸೋಲಿಸಿ ಕದಂಬರಾಜ್ಯ ಸ್ಥಾಪಿಸಿದನು. ಇವನು ಕನ್ನಡಿಗರ ಸ್ವಾಭಿಮಾನದ ಸಂಕೇತ.

ಕರ್ನಾಟಕ ಮತ್ತು ಭಾರತೀಯ ಸಂಸ್ಕೃತಿಗೆ ಕದಂಬರ ಕೊಡುಗೆ ವೈಶಿಷ್ಟ್ಯಪೂರ್ಣವಾಗಿದೆ. ಕದಂಬರು ಆಳಿದ ಪ್ರದೇಶವು ಸುಮಾರು ಮೂರು ಶತಮಾನಗಳ ಕಾಲ ರಾಜಕೀಯ ಐಕ್ಯತೆಗೆ ಒಳಗಾಗಿತ್ತು. ಆಡಳಿತದಲ್ಲಿ ಮಾಂಡಲಿಕರು, ರಾಜ ಪುರೋಹಿತರು, ಮಂತ್ರಿಗಳು, ಸೇನಾಧಿಪತಿಗಳು ಪ್ರಮುಖ ಪಾತ್ರವಹಿಸಿದ್ದರು. ಆಡಳಿತದ ಅನುಕೂಲಕ್ಕಾಗಿ ಪ್ರಾಂತ್ಯಾಧಿಕಾರಿಗಳನ್ನು ಪ್ರಾಂತ್ಯವನ್ನು ನೋಡಿಕೊಳ್ಳುವಂತೆ ನೇಮಿಸುತ್ತಿದ್ದರು.


ಭೂಕಂದಾಯ ರಾಜ್ಯದ ಮುಖ್ಯ ಆದಾಯವಾಗಿತ್ತು. ಬಡಗಿ, ಅಕ್ಕಸಾಲಿಗ, ಕಮ್ಮಾರ, ನೇಕಾರ, ಗಾಣಿಗ, ಕುಂಬಾರ ಮುಂತಾದ ಕಸುಬುಗಳು ಮುಖ್ಯವಾಗಿದ್ದವು.

*ಚಿತ್ರದುರ್ಗದ ಚಂದ್ರವಳ್ಳಿಯ ಶಾಸನದ ಪ್ರಕಾರ ಮಯೂರವರ್ಮನು ಚಂದ್ರವಳ್ಳಿ ಕೆರೆಯ ಒಡ್ಡನ್ನು ಎತ್ತರಿಸಿದನೆಂದು ತಿಳಿದು ಬರುತ್ತದೆ.*

©KTBS Not to be republished

ವ್ಯವಸಾಯ, ವ್ಯಾಪಾರಗಳಿಗೆ ಹೆಚ್ಚಿನ ಪ್ರೋತ್ಸಾಹವಿದ್ದಿತು. ಸಮಾಜದಲ್ಲಿ ಬಹುತೇಕ ಜನರು ವರ್ಣಾಶ್ರಮ ಧರ್ಮವನ್ನು ಪಾಲಿಸುತ್ತಿದ್ದರು.  ಪಿತೃ ಪ್ರಧಾನವಾದ ಕುಟುಂಬ ಹಾಗೂ ಅವಿಭಕ್ತ ಕುಟುಂಬಕ್ಕೆ ಹೆಚ್ಚು ಪ್ರಾಧಾನ್ಯವಿತ್ತು.

### ಕದಂಬರ ಸಾಮ್ರಾಜ್ಯದ ನಕ್ಷೆ




©KTBS Not to be republished



**ಮಧುಕೇಶ್ವರ ದೇವಾಲಯ, ಬನವಾಸಿ**

ಕದಂಬರು ವೈದಿಕ ಧರ್ಮಾನುಯಾಯಿಗಳಾದರೂ ಜೈನ ಮತ್ತು ಬೌದ್ಧಧರ್ಮಗಳನ್ನು ಪ್ರೋತ್ಸಾಹಿಸಿದರು. ಹಾನಗಲ್, ಪುಲಿಗೆರೆ ಮುಂತಾದ ಸ್ಥಳಗಳಲ್ಲಿ ಜೈನ ದೇವಾಲಯಗಳಿಗೆ ಮತ್ತು ವಿದ್ವಾಂಸರುಗಳಿಗೆ ದಾನದತ್ತಿಗಳನ್ನು ನೀಡಿ ಕರ್ನಾಟಕದಲ್ಲಿ ಜೈನ ಸಂಸ್ಕೃತಿಯು ಹರಡಲು ಉತ್ತೇಜನ ನೀಡಿದರು.

ಕದಂಬರ ನಾಡಿನಲ್ಲಿ ಬೌದ್ಧ ಧರ್ಮವು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಇದು ಎರಡು ಪ್ರಮುಖ ಕೇಂದ್ರಗಳಾದ ಅಜಂತ ಮತ್ತು ಬನವಾಸಿಯನ್ನು ಒಳಗೊಂಡಿತ್ತು. ದೇವಾಲಯಗಳು ಹಬ್ಬ, ಉತ್ಸವಗಳ ಕೇಂದ್ರವಾಗಿದ್ದವು. ಪ್ರಾಕೃತ–ಸಂಸ್ಕೃತ ಭಾಷೆಗೆ ಪ್ರೋತ್ಸಾಹ ನೀಡಿದ್ದು, ಮೊದಲು ಪ್ರಾಕೃತ ನಂತರ ಸಂಸ್ಕೃತ ರಾಜಭಾಷೆಯಾಯಿತು. ಕನ್ನಡವೂ ಜನರ ಭಾಷೆ ಆಗಿತ್ತು. ಅತ್ಯಂತ ಪ್ರಾಚೀನವಾದ ಹಲ್ಮಿಡಿ ಶಾಸನವು ಐದನೆಯ ಶತಮಾನದಲ್ಲಿ ರೂಢಿಯಲ್ಲಿದ್ದ ಕನ್ನಡ ಭಾಷೆಯ ಸ್ವರೂಪವನ್ನು ತೋರಿಸಿಕೊಡುತ್ತದೆ. ಇದೇ ಕನ್ನಡದಲ್ಲಿ ದೊರೆತ ಮೊದಲ ಶಾಸನವಾಗಿದೆ.

ಕರ್ನಾಟಕದಲ್ಲಿ ವಾಸ್ತುಶಿಲ್ಪ ಕಲೆಗೆ ತಳಹದಿಯನ್ನು ಕದಂಬರು ಹಾಕಿದರು. ಬನವಾಸಿಯಲ್ಲಿ ಅನೇಕ ದೇವಾಲಯಗಳನ್ನು ಮತ್ತು ಬಸದಿಗಳನ್ನು ನಿರ್ಮಿಸಿದರು. ಕದಂಬರ ಕಾಲದಲ್ಲಿ ಪ್ರಾಥಮಿಕ ಮತ್ತು ಉನ್ನತ ಶಿಕ್ಷಣ ಅಭಿವೃದ್ಧಿಗೊಂಡು ಶಿಕ್ಷಣ ಕೇಂದ್ರಗಳಾದ ಅಗ್ರಹಾರಗಳು, ಬ್ರಹ್ಮಪುರಿಗಳು ಮತ್ತು ಘಟಿಕ ಸ್ಥಾನಗಳು ಸ್ಥಾಪನೆಗೊಂಡವು. ಆ ಕಾಲದ ಪ್ರಮುಖ ಅಗ್ರಹಾರಗಳು ತಾಳಗುಂದ ಮತ್ತು ಬಳ್ಳಿಗಾವೆಯಲ್ಲಿದ್ದವು. ಅಗ್ರಹಾರಗಳು ಗುರುಕುಲಗಳಾಗಿದ್ದು ವಸತಿ ಶಾಲೆಗಳಂತೆ ನಡೆಯುತ್ತಿದ್ದವು.

> **ನಿಮಗಿದು ತಿಳಿದಿರಲಿ.**
> ಮಳವಳ್ಳಿ ಶಾಸನವು ಪ್ರಾಕೃತ ಭಾಷೆಯ ಪರಿಚಯ ನೀಡುತ್ತದೆ. ತಾಳಗುಂದ ಶಾಸನವು ಕರ್ನಾಟಕದಲ್ಲಿ ದೊರೆತಿರುವ ಪ್ರಥಮ ಸಂಸ್ಕೃತ ಶಾಸನವಾಗಿದೆ.

## ಗಂಗರು (ಸಾ.ಶ. 350 – ಸಾ.ಶ. 1004)

ಗಂಗರಾಜ ವಂಶದ ಉನ್ನತಿ ಮತ್ತು ಅವನತಿ ಕರ್ನಾಟಕದ ಇತಿಹಾಸದ ಆದಿಭಾಗದ ಒಂದು ಮುಖ್ಯ ಅಧ್ಯಾಯವಾಗಿದೆ. ಗಂಗವಂಶದ ಸಂಸ್ಥಾಪಕರು ತಮ್ಮನ್ನು ಇಕ್ಷ್ವಾಕು ವಂಶದವರೆಂದು ಹೇಳಿಕೊಂಡರು. ಕುವಲಾಲ, ತಲಕಾಡು ಹಾಗೂ ಮಾನ್ಯಪುರ (ಈಗಿನ ಮಣ್ಣೆ, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ) ಗಳಿಂದ ರಾಜ್ಯವಾಳಿದರು.

ದಡಿಗನಿಂದ ಪ್ರಾರಂಭವಾದ ಗಂಗವಾಡಿ ರಾಜ್ಯವು ಸುಮಾರು 27 ಮಂದಿ ರಾಜರುಗಳಿಂದ ಆಳಲ್ಪಟ್ಟಿತು. ದುರ್ವಿನೀತನು ಗಂಗರಸರಲ್ಲಿ ಪ್ರಸಿದ್ಧನಾದವನು. ಅಪ್ರತಿಮ ವೀರ ಹಾಗೂ ವಿದ್ವಾಂಸ. ದೀರ್ಘಕಾಲ ಆಳಿದ ಇವನು ತನ್ನ ರಾಜ್ಯವನ್ನು ಬಲಪಡಿಸಿಕೊಳ್ಳಲು ಪುನ್ನಾಟವನ್ನು ಗೆದ್ದುಕೊಂಡನು. ಇವನು ಅನೇಕ ಕೆರೆಗಳನ್ನು ನೀರಾವರಿಗಾಗಿ ಕಟ್ಟಿಸಿದನೆಂದು ನಲ್ಲಾಳ ತಾಮ್ರ ಪಟಗಳಿಂದ ತಿಳಿದುಬರುತ್ತದೆ. ಈತನು ಸಾಹಿತ್ಯ ಪ್ರೇಮಿಯಾಗಿದ್ದನಲ್ಲದೆ ಸ್ವತಃ ಸಂಸ್ಕೃತ ಮತ್ತು ಕನ್ನಡ ಭಾಷೆಯಲ್ಲಿ ಸಾಹಿತ್ಯ ರಚಿಸಿದ್ದಾನೆ. ಗುಣಾಢ್ಯನ ವಡ್ಡಕಥಾ ಗ್ರಂಥವನ್ನು ಪ್ರಾಕೃತದಿಂದ ಸಂಸ್ಕೃತಕ್ಕೆ ಭಾಷಾಂತರಿಸಿದ್ದಾನೆ.

©KTBS Not to be republished

## ಗಂಗರ ಕೊಡುಗೆಗಳು

ರಾಜನಿಗೆ ಸಹಾಯಕವಾಗಿ ಮಂತ್ರಾಲೋಚನೆ ಸಭೆಯಿತ್ತು. ಮಂತ್ರಿಗಳು ವಿವಿಧ ಆಡಳಿತ ಶಾಖೆಗಳ ಮೇಲ್ವಿಚಾರಣೆ ನಡೆಸುತ್ತಿದ್ದರು. ಗ್ರಾಮಾಡಳಿತವು ಸುವ್ಯವಸ್ಥಿತವಾಗಿತ್ತು. ಗ್ರಾಮಸಭೆಯು ಭೂಕಂದಾಯ, ತೆರಿಗೆ, ನ್ಯಾಯ, ನೈರ್ಮಲ್ಯ, ರಕ್ಷಣೆಗಳನ್ನು ಗಮನಿಸುತ್ತಿದ್ದಿತು. ವ್ಯವಸಾಯವು ಮುಖ್ಯ ಕಸುಬಾಗಿದ್ದಿತು. ನೇಯ್ಗೆ, ಕಮ್ಮಾರಿಕೆ ಮುಂತಾದ ಕಸುಬುಗಳಿದ್ದವು. ಇತರ ರಾಷ್ಟ್ರಗಳೊಡನೆ ವ್ಯಾಪಾರ ಸಂಬಂಧವನ್ನಿಟ್ಟುಕೊಂಡಿದ್ದರು.

ಗಂಗರ ಕಾಲದ ಸಮಾಜ ಹಲವು ಪಂಗಡ ಜಾತಿಗಳಾಗಿ ವಿಭಜಿತವಾಗಿದ್ದರೂ ಪರಸ್ಪರಾವಲಂಬಿಗಳಾಗಿದ್ದರು. ಪಿತೃ ಪ್ರಧಾನ ಅವಿಭಕ್ತ ಕುಟುಂಬ ಪದ್ಧತಿ ಸಾಮಾನ್ಯವಾಗಿತ್ತು. ಸಮಾಜದಲ್ಲಿ ಸತ್ಯಶೀಲತೆ, ಸ್ವಾಮಿನಿಷ್ಠೆ, ಶೌರ್ಯ ಮತ್ತು ತಾಳ್ಮೆ ಎಂಬ ಸಾಮಾಜಿಕ ಮೌಲ್ಯಗಳು ಪ್ರಭಾವಿಯಾಗಿದ್ದವು.

ಚೈತ್ಯಾಲಯ, ದೇವಾಲಯ, ಮಠ ಹಾಗೂ ಅಗ್ರಹಾರಗಳು ಶಿಕ್ಷಣ ನೀಡುವ ಕೇಂದ್ರಗಳಾಗಿದ್ದವು. ಉನ್ನತ ವಿದ್ಯಾಭ್ಯಾಸಕ್ಕೆ ಬ್ರಹ್ಮಪುರಿ ಮತ್ತು ಘಟಿಕ ಸ್ಥಾನಗಳಿದ್ದವು. ತಲಕಾಡು, ಶ್ರವಣಬೆಳಗೊಳ, ಬಂಕಾಪುರ ಮತ್ತು ಪೆರೂರುಗಳನ್ನು ಜ್ಞಾನಾರ್ಜನೆಯ ಕೇಂದ್ರಗಳೆಂದು ಹೆಸರಿಸಲಾಗಿದೆ.

ಗಂಗರು ಜೈನ ಮತಾವಲಂಬಿಗಳಾದುದರಿಂದ ಜೈನಮತವು ಅಭಿವೃದ್ಧಿಗೆ ಬಂದಿತು. ಪೂಜ್ಯಪಾದ, ವಜ್ರನಂದಿ, ಅಜಿತಸೇನ ಮುಂತಾದವರುಗಳಿಂದ ಈ ಧರ್ಮವು ಜನಪ್ರಿಯವಾಯಿತು. ಅಲ್ಲದೆ ಶ್ರವಣಬೆಳಗೊಳದಲ್ಲಿ 58 ಅಡಿ ಏಕಶಿಲಾ ಗೊಮ್ಮಟೇಶ್ವರ ಪ್ರತಿಮೆಯನ್ನು ಪ್ರತಿಷ್ಠಾಪನೆಗೊಳಿಸಿ ಅದನ್ನು ಅತ್ಯಂತ ಪ್ರಸಿದ್ಧ ಕೇಂದ್ರವನ್ನಾಗಿ ಮಾರ್ಪಡಿಸಿದರು. ಹನ್ನೆರಡು ವರ್ಷಗಳಿಗೊಮ್ಮೆ ಮಹಾಮಸ್ತಕಾಭಿಷೇಕ ಗೊಮ್ಮಟೇಶ್ವರನಿಗೆ ಇಂದಿಗೂ ನಡೆಯುತ್ತಿರುವುದನ್ನು ನೀವು ಗಮನಿಸಿದ್ದೀರಲ್ಲವೇ ?

**ಬಾಹುಬಲಿ – ಗೊಮ್ಮಟೇಶ್ವರ**



**ಶ್ರವಣಬೆಳಗೊಳದ ಗೊಮ್ಮಟೇಶ್ವರ**

*ಶ್ರವಣಬೆಳಗೊಳದ ಗೊಮ್ಮಟೇಶ್ವರ (ಬಾಹುಬಲಿ) ಮೂರ್ತಿಯು ವಿರಕ್ತ ಜೀವನದ ಸಂಕೇತವಾಗಿದೆ. ನಾಲ್ಕನೇ ರಾಚಮಲ್ಲನ ಮಂತ್ರಿಯಾಗಿದ್ದ ಚಾವುಂಡರಾಯನು ಇದನ್ನು ನಿರ್ಮಿಸಿದವನು. 100 ಜನ ಸಹೋದರರಲ್ಲಿ ಭರತ ಹಿರಿಯವ, ಬಾಹುಬಲಿ ಕಿರಿಯವ. ಭರತನಿಗೆ ರಾಜ್ಯಾಭಿಷೇಕವಾದ ಮೇಲೆ ಒಂದು ಚಕ್ರರತ್ನ ದೊರಕಿ ಎಲ್ಲಾ ರಾಜ್ಯಗಳನ್ನು ಗೆದ್ದು ಚಕ್ರಾಧಿಪತಿಯಾಗುತ್ತಾನೆ. ಅದಕ್ಕೂ ಮೊದಲು ಎಲ್ಲಾ ತಮ್ಮಂದಿರೂ ಅವನ ಅಧಿಪತ್ಯವನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಬಾಹುಬಲಿ ಒಪ್ಪದಿದ್ದಾಗ, ಯುದ್ಧಕ್ಕೆ ಅಣಿಯಾಗುತ್ತಾರೆ. ದೃಷ್ಟಿಯುದ್ಧ, ಜಲಯುದ್ಧ, ಮಲ್ಲಯುದ್ಧದಲ್ಲಿ ಭರತ ಸೋಲುತ್ತಾನೆ. ಮಲ್ಲಯುದ್ಧದ ಅಂತ್ಯದಲ್ಲಿ ಬಾಹುಬಲಿ ಭರತನನ್ನು ಚಕ್ರದಂತೆ ತಿರುಗಿಸಿ ಇನ್ನೇನು ಬಿಸಾಡಬೇಕು ಎನ್ನುವಷ್ಟರಲ್ಲಿ ಬಾಹುಬಲಿಯ ಮನದಲ್ಲಿ ವಿರಕ್ತಿ ಉಂಟಾಗಿ, ಅಣ್ಣನನ್ನು ಕೆಳಗಿಳಿಸಿ ನಮಸ್ಕಾರ ಮಾಡಿ ನಿರ್ವಾಣಕ್ಕೆ ಹೋಗಿ ನಿಂತೇ ತಪಸ್ಸು ಮಾಡುತ್ತಾನೆ. ಆದರೂ ಮುಕ್ತಿಯಾಗದಿದ್ದಾಗ, ಬಾಹುಬಲಿಯು ತನ್ನ ಅಣ್ಣನ ಸಾಮ್ರಾಜ್ಯದಲ್ಲಿ ನಿಂತು ತಪಸ್ಸು ಮಾಡುತ್ತಿರುವುದರಿಂದ ಅವನಿಗೆ ನಿರ್ವಾಣ ದೊರಕುತ್ತಿಲ್ಲವೆಂದು ತಿಳಿಯುತ್ತದೆ. ಆಗ ಭರತನೇ ಬಂದು ಬಾಹುಬಲಿಗೆ ಇಡೀ ಸಾಮ್ರಾಜ್ಯವೇ ಬಾಹುಬಲಿಯದೆಂದೂ, ಅದನ್ನು ಆಳುತ್ತಿರುವವನು ತಾನೆಂದು ತಿಳಿಸಿದಾಗ ಮೋಕ್ಷ ಲಭಿಸುತ್ತದೆ.*

©KTBS
Not to be republished

ಗಂಗರಾಜರು ಕಲೆ ಮತ್ತು ವಾಸ್ತುಶಿಲ್ಪಗಳಿಗೆ ಪ್ರೋತ್ಸಾಹ ನೀಡಿದ್ದರು. ಇವರು ಸುಂದರ ದೇವಾಲಯಗಳನ್ನು, ಬಸದಿಗಳನ್ನು ಕಟ್ಟಿಸಿದರು. ಮಣ್ಣೆಯಲ್ಲಿರುವ ಕಪಿಲೇಶ್ವರ ದೇವಸ್ಥಾನ, ತಲಕಾಡಿನ ಪಾತಾಳೇಶ್ವರ ಮತ್ತು ಮರುಳೇಶ್ವರ, ಕೋಲಾರದ ಕೋಲಾರಮ್ಮ, ಬೇಗೂರಿನ ನಾಗರೇಶ್ವರ, ಶ್ರವಣಬೆಳಗೊಳದ ಗೊಮ್ಮಟೇಶ್ವರ ಮುಂತಾದವು. ಗಂಗರ ವಿಶಿಷ್ಟ ಕೊಡುಗೆಯೆಂದರೆ ಎತ್ತರದ ಮಾನಸ್ತಂಭ ಮತ್ತು ಬ್ರಹ್ಮ ಮಾನಸ್ತಂಭಗಳು.

ಸಾಹಿತ್ಯಾಭಿಮಾನಿಗಳಾದ ಗಂಗರಾಜರು ಸಂಸ್ಕೃತ, ಪ್ರಾಕೃತ ಮತ್ತು ಕನ್ನಡ ಭಾಷೆಗಳಿಗೆ ಪ್ರೋತ್ಸಾಹ ನೀಡಿದ್ದರಿಂದ ಗ್ರಂಥ ರಚನೆಗಳಾದುವು. ಇಮ್ಮಡಿ ಮಾಧವನು ‘ದತ್ತಕ ಸೂತ್ರ’ಕ್ಕೆ ಟಿಪ್ಪಣಿ ಬರೆದನು. ದುರ್ವಿನೀತನು ‘ಶಬ್ದಾವತಾರ’ ಸಂಸ್ಕೃತ ಕೃತಿಯನ್ನು ರಚಿಸಿದನಲ್ಲದೇ, ಗುಣಾಢ್ಯನ ‘ವಡ್ಡಕತೆ’ಯನ್ನು ಸಂಸ್ಕೃತಕ್ಕೆ ಅನುವಾದ ಮಾಡಿದನು. ಶ್ರೀ ಪುರುಷನು ‘ಗಜಶಾಸ್ತ್ರ’ವನ್ನು, ಎರಡನೇ ಶಿವಮಾಧವನು ‘ಗಜಾಷ್ಟಕ’ ಕನ್ನಡ ಕೃತಿಯನ್ನು ರಚಿಸಿದನು. ಕವಿ ಹೇಮಸೇನನು ‘ರಾಘವ ಪಾಂಡವೀಯ’ವನ್ನು, ವಾದೀಬಸಿಂಹನು ‘ಗದ್ಯ ಚಿಂತಾಮಣಿ’ ಮತ್ತು ‘ಷಾತ್ರ ಚೂಡಾಮಣಿ’ಯನ್ನು, ನೇಮಿಚಂದ್ರನು ‘ದ್ರವ್ಯಸಾರ ಸಂಗ್ರಹ’ವನ್ನು, ಚಾವುಂಡರಾಯನು ‘ಚಾವುಂಡ ಪುರಾಣ’ವನ್ನು ರಚಿಸಿ ಪ್ರಸಿದ್ಧರಾದರು.



**ತಲಕಾಡಿನ ಪಾತಾಳೇಶ್ವರ ದೇವಾಲಯ**

## ಅಭ್ಯಾಸಗಳು

**I. ಕೆಳಕಂಡ ವಾಕ್ಯಗಳನ್ನು ಪೂರ್ಣಗೊಳಿಸಿ.**

1. ಸಿಮುಖನು ______________ ನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು.
2. ಹಾಲನು ಬರೆದ ಗ್ರಂಥ ______________ .
3. ಕನ್ನಡದಲ್ಲಿ ದೊರೆತ ಮೊದಲ ಶಾಸನ ______________ .

©KTBS Not to be Published

4. ಕದಂಬರ ರಾಜಧಾನಿ ಬನವಾಸಿಯು ಈಗಿನ ______________ ಜಿಲ್ಲೆಯಲ್ಲಿದೆ.

5. ಗಂಗರ ಪ್ರಮುಖ ರಾಜ ______________ .

6. ಚಾವುಂಡರಾಯನು ರಚಿಸಿದ ಗ್ರಂಥ ______________ .

**II. ಸಂಕ್ಷೇಪವಾಗಿ ಉತ್ತರಿಸಿ.**

1 ಶಾತವಾಹನರ ಕೊನೆಯ ಅರಸನಾರು? ಈ ಸಂತತಿಯು ಹೇಗೆ ಕ್ಷೀಣಿಸಿತು?

2 ಶಾತವಾಹನ ಕಲೆಯ ಬಗ್ಗೆ ಬರೆಯಿರಿ.

3 ಗಂಗರ ಸಮಾಜವು ಯಾವ ಮೌಲ್ಯಗಳಿಂದ ಪ್ರಭಾವಿತವಾಗಿದ್ದಿತು?

4 ಗಂಗರ ಕಾಲದ ನಾಲ್ಕು ಗ್ರಂಥಗಳನ್ನು ಹೆಸರಿಸಿ.

**III. ಚಟುವಟಿಕೆಗಳು.**

1. ಶಾಸನವನ್ನು ಓದುವ ಬಗ್ಗೆ ಶಿಕ್ಷಕರ ಜೊತೆ ಚರ್ಚಿಸಿ.
2. ಹತ್ತಿರವಿರುವ ಒಂದು ಐತಿಹಾಸಿಕ ದೇವಾಲಯಕ್ಕೆ ಭೇಟಿ ನೀಡಿ ವಿವರಗಳನ್ನು ಸಂಗ್ರಹಿಸಿ. ಸಹಪಾಠಿಗಳೊಡನೆ ಹಂಚಿಕೊಳ್ಳಿ.

**IV. ಯೋಜನೆಗಳು.**

1. ಶಾಸನಗಳನ್ನು ಓದುವ ಅಭ್ಯಾಸವನ್ನು ಮಾಡುವುದು.
2. ಯಾವುದಾದರೂ ಒಂದು ಶಾಸನವನ್ನು ನೋಡಿ ಅದರ ಬಗ್ಗೆ ಯೋಜನೆ ಮಾಡಿ.
3. ಗಂಗರ ರಾಜಧಾನಿಗಳಿಗೆ ಭೇಟಿ ನೀಡಿ. ವಿಷಯ ಸಂಗ್ರಹಿಸಿ.

*****

©KTBS Not to be republished

## ಅಧ್ಯಾಯ – 10

# ಬಾದಾಮಿಯ ಚಾಳುಕ್ಯರು ಮತ್ತು ಕಂಚಿಯ ಪಲ್ಲವರು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಬಾದಾಮಿ ಚಾಳುಕ್ಯರ ಆರಂಭ, ಪ್ರಸಿದ್ಧ ದೊರೆ ಇಮ್ಮಡಿ ಪುಲಿಕೇಶಿಯ ಕಾಲದಲ್ಲಿನ ಸಾಮ್ರಾಜ್ಯ ವಿಸ್ತರಣೆ.*
- *ಧಾರ್ಮಿಕ, ಸಾಮಾಜಿಕ, ಸೇನಾಡಳಿತ, ಹಾಗೂ ನ್ಯಾಯಾಡಳಿತ ವ್ಯವಸ್ಥೆ.*
- *ಭೂಪಟದ ಮೂಲಕ ಬಾದಾಮಿ ಚಾಳುಕ್ಯರ ಸಾಮ್ರಾಜ್ಯದ ವ್ಯಾಪ್ತಿ.*
- *ಕಂಚಿಯ ಪಲ್ಲವರ ಸಾಹಿತ್ಯ, ಧರ್ಮ, ಕಲೆ ಮತ್ತು ವಾಸ್ತುಶಿಲ್ಪ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳು.*

## ಬಾದಾಮಿಯ ಚಾಳುಕ್ಯರು (ಸಾಶ. 540 – 753)

ಸಾ.ಶ. 6ನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಮಹಾನ್ ಶಕ್ತಿಶಾಲಿ ರಾಜರುಗಳು ಆಳಿದರು. ಅವರೇ ಬಾದಾಮಿಯ ಚಾಳುಕ್ಯರು. ಕರ್ನಾಟಕದಲ್ಲಿ ತಮ್ಮ ಸಾರ್ವಭೌಮಾಧಿಕಾರವನ್ನು ಸ್ಥಾಪಿಸಿ ಸುಮಾರು ಎರಡು ಶತಮಾನಗಳ ಕಾಲ ಅವಿಚ್ಛಿನ್ನವಾಗಿ, ಅಪಾರ ವೈಭವದಿಂದ ರಾಜ್ಯಭಾರ ಮಾಡಿದರು. ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಮುಖ ಪಾತ್ರವಹಿಸಿದ ಚಾಳುಕ್ಯ ರಾಜಮನೆತನವು ಭಾರತದ ಪ್ರಬಲ ರಾಜಮನೆತನಗಳಲ್ಲೊಂದು.


ಚಾಳುಕ್ಯರ ಆಳ್ವಿಕೆ ಆರನೆಯ ಶತಮಾನದಿಂದ ಆರಂಭಗೊಂಡು ಎಂಟನೆಯ ಶತಮಾನದ ಮಧ್ಯಭಾಗದಲ್ಲಿ ಕೊನೆಗೊಂಡಿತು. ರಾಜಾ ಜಯಸಿಂಹನು ಈ ವಂಶದ ಸಂಸ್ಥಾಪಕನು. ಈ ರಾಜವಂಶದ ಅತ್ಯಂತ ಶಕ್ತಿಶಾಲಿ ಮತ್ತು ಹೆಸರಾಂತ ಚಕ್ರವರ್ತಿಯೆಂದರೆ ಇಮ್ಮಡಿ ಪುಲಿಕೇಶಿ. ಗಂಗರು, ಕದಂಬರು ಮತ್ತು ಅಳುಪರನ್ನು ಗೆದ್ದು, ಈತನು ತನ್ನ ಚಕ್ರಾಧಿಪತ್ಯವನ್ನು ವಿಸ್ತರಿಸಿದನು.

ದಕ್ಷಿಣ ದಖ್ಖನ್ನಿನಲ್ಲಿ ಪಲ್ಲವರು ತಮ್ಮ ವೈಭವ ಕಾಲದಲ್ಲಿದ್ದರು. ದೊರೆ ಮಹೇಂದ್ರವರ್ಮನು ಪುಲಿಕೇಶಿಯ ಪರಮಾಧಿಕಾರತ್ವವನ್ನು ಒಪ್ಪಿಕೊಳ್ಳದ ಕಾರಣ ಪುಲಿಕೇಶಿಯು ಆತನನ್ನು ಸೋಲಿಸಿದನು. ಉತ್ತರ ಭಾರತವನ್ನು ಆಳುತ್ತಿದ್ದ ಹರ್ಷವರ್ಧನನನ್ನು ನರ್ಮದಾ ನದಿಯ ದಂಡೆಯಲ್ಲಿ ತಡೆಗಟ್ಟಿ ಸೋಲಿಸಿ, 'ದಕ್ಷಿಣಾ ಪಥೇಶ್ವರ', 'ತ್ರಿಸಾಗರಗಳಿಂದಾವೃತವಾದ ಪ್ರದೇಶದ ಅಧಿಪತಿ' ಎಂಬ ಬಿರುದಾಂಕಿತನಾದನು.

ಇಮ್ಮಡಿ ಪುಲಿಕೇಶಿಗೆ ತನ್ನ ಚಕ್ರಾಧಿಪತ್ಯವೆಲ್ಲವನ್ನೂ ಒಂದೇ ಕೇಂದ್ರದಿಂದ ಆಳಲು ಸಾಧ್ಯವಾಗಲಿಲ್ಲ. ಆದುದರಿಂದ ತನ್ನ ತಮ್ಮನಾದ ಕುಬ್ಜ ವಿಷ್ಣುವರ್ಧನನನ್ನು ವೆಂಗಿ ಮತ್ತು ಜಯಸಿಂಹನನ್ನು ಗುಜರಾತ್ ಪ್ರಾಂತ್ಯದ ಅಧಿಕಾರಿಗಳನ್ನಾಗಿ ನೇಮಿಸಿದನು. ಮುಂದಿನ ವರ್ಷಗಳಲ್ಲಿ ಇದು ವೆಂಗಿಯ ಚಾಳುಕ್ಯರು ಎನ್ನುವ ಹೆಸರಿನಲ್ಲಿ ಸುಮಾರು ಐದು ಶತಮಾನಗಳ ಕಾಲ ರಾಜ್ಯಭಾರ ನಡೆಸಿತು.

ಹ್ಯೂಯೆನ್‌ತ್ಸಾಂಗನು ಚಾಳುಕ್ಯ ರಾಜಧಾನಿಗೆ ಭೇಟಿ ನೀಡಿದ್ದನು. ಇಮ್ಮಡಿ ಪುಲಿಕೇಶಿ ಮತ್ತು ಚಾಳುಕ್ಯ ರಾಜ್ಯದ ಬಗ್ಗೆ ವಿವರಣೆಗಳನ್ನು ನೀಡಿದ್ದಾನೆ. ದೊರೆಯು ನ್ಯಾಯವಾದಿ ಹಾಗೂ ಕರುಣಾಳುವಾಗಿದ್ದನು. ಸೈನ್ಯವು ಶಿಸ್ತಿನಿಂದ ಕೂಡಿದ್ದು, ಸೈನಿಕರು ಮರಣಕ್ಕೆ ಹೆದರದೆ ಮೈಮರೆತು ಕಾದಾಡುವ ಯೋಧರಾಗಿದ್ದರು. ಪ್ರಜೆಗಳು ಸತ್ಯಪ್ರಿಯರಾಗಿದ್ದರು. ಸಂತೋಷಚಿತ್ತರು, ಸ್ವಾಭಿಮಾನಿಗಳು, ಸಂಪದ್ಭರಿತರೂ, ಗೌರವ ಪ್ರಿಯರು ಮತ್ತು ರಾಜನಿಷ್ಠರಾಗಿದ್ದರು. ರಾಜನಲ್ಲಿ ಅತ್ಯಂತ ಗೌರವ, ಅಂತೆಯೇ ರಾಜನಿಗೆ ಪ್ರಜೆಗಳಲ್ಲಿ ಅಪಾರ ಪ್ರೀತಿ ಇದ್ದಿತು ಎಂದು ಬರೆದಿದ್ದಾನೆ.

©KTBS Not to be republished




**ಚಾಳುಕ್ಯರ ಸಾಮ್ರಾಜ್ಯದ ನಕ್ಷೆ**

©KTBS Not to be re published

ಇಮ್ಮಡಿ ಪುಲಿಕೇಶಿಯು ಆಶಾವಾದಿ ಚಕ್ರವರ್ತಿ ಆಗಿದ್ದನು. ವಿದೇಶಿ ದೊರೆಗಳೊಂದಿಗೂ ಕೂಡ ಸ್ನೇಹಮಯ ಸಂಬಂಧಗಳನ್ನು ಈತನು ಹೊಂದಿದ್ದನು. ಪರ್ಶಿಯನ್ ದೊರೆಯಾದ ಇಮ್ಮಡಿ ಖುಸ್ರುವಿನೊಡನೆ ರಾಯಭಾರಿ ಸಂಬಂಧಗಳನ್ನು ಹೊಂದಿದ್ದನೆಂದು ಅರಬ್ ಇತಿಹಾಸಕಾರರು ತಿಳಿಸುತ್ತಾರೆ.

ಕೆಲವು ವರ್ಷಗಳ ನಂತರ ತನ್ನ ತಂದೆಯಾದ ಮಹೇಂದ್ರವರ್ಮನಿಗೆ ಉಂಟಾದ ಸೋಲಿಗೆ ಪಲ್ಲವರ ದೊರೆಯಾದ ಪ್ರಥಮ ನರಸಿಂಹವರ್ಮನು ಚಾಳುಕ್ಯರ ಮೇಲೆ ಸೇಡು ತೀರಿಸಿಕೊಂಡನು. ಚಾಳುಕ್ಯ ರಾಜ್ಯವನ್ನು ಆಕ್ರಮಿಸಿ ವಾತಾಪಿಯನ್ನು ವಶಪಡಿಸಿಕೊಂಡನು. ಚಾಲುಕ್ಯರ ಕಡೆಯ ದೊರೆ ಕೀರ್ತಿವರ್ಮನ ಕಾಲದಲ್ಲಿ ರಾಷ್ಟ್ರಕೂಟರು ಈ ಸಾಮ್ರಾಜ್ಯವನ್ನು ಆಕ್ರಮಿಸಿದರು.

**ಚಾಳುಕ್ಯರ ಕೊಡುಗೆಗಳು**

ಕನ್ನಡ ನಾಡು, ನುಡಿ, ಸಂಸ್ಕೃತಿಗಳನ್ನು ಬೆಳೆಸಿ, ಪೋಷಿಸಿ, ರಕ್ಷಿಸಿ, ಧರ್ಮ, ಸಾಹಿತ್ಯ, ಕಲೆ, ವಾಸ್ತುಶಿಲ್ಪದಲ್ಲಿ ಅಗಾಧ ಕೊಡುಗೆ ನೀಡಿದವರು. ಈ ದೇಶಕ್ಕೆ 'ಕರ್ನಾಟಕ' ಎಂಬ ಹೆಸರು ಕೊಟ್ಟವರು ಇವರೇ. ಕರ್ನಾಟಕ ಚರಿತ್ರೆಯಲ್ಲಿ ಬಾದಾಮಿ ಚಾಳುಕ್ಯರ ಆಳ್ವಿಕೆ ಅತ್ಯಂತ ಶ್ರೇಷ್ಠವೂ ವೈಭವಯುಕ್ತವೂ ಆದ ಒಂದು ಯುಗ. ಈ ಯುಗವು ಸೈನಿಕ ಕ್ಷೇತ್ರದಲ್ಲಿ ಅಲ್ಲದೆ ಕಲೆ ಮತ್ತು ಸಾಹಿತ್ಯ ರಂಗಗಳಲ್ಲಿಯೂ ಹಾಗೆಯೇ ಗಮನಾರ್ಹವಾದುದು.

ಸುಮಾರು 200 ವರ್ಷಗಳ ಕಾಲ ಆಡಳಿತ ನಡೆಸಿದರು. ರಾಜ ಸಕ್ರಿಯವಾಗಿ ಆಡಳಿತದಲ್ಲಿ ಭಾಗವಹಿಸುತ್ತಿದ್ದನು. ರಾಜ್ಯವನ್ನು ವಿಷಯ (ಜಿಲ್ಲೆ) ಎಂಬುದಾಗಿ ವಿಂಗಡಿಸಿ ವಿಷಯಾಧಿಪತಿಯು ನೋಡಿಕೊಳ್ಳುತ್ತಿದ್ದನು. ಗ್ರಾಮವು ಆಡಳಿತ ಘಟಕಗಳಲ್ಲಿ ಅತ್ಯಂತ ಚಿಕ್ಕದು. ಗ್ರಾಮ ಮುಖ್ಯಸ್ಥರು ಲೆಕ್ಕಪತ್ರಗಳ ವಹಿವಾಟನ್ನು ನೋಡಿಕೊಳ್ಳುತ್ತಿದ್ದರು.

ಚಾಳುಕ್ಯರು ಶೈವ, ವೈಷ್ಣವ, ಜೈನ ಮುಂತಾದ ಎಲ್ಲ ಪಂಥಗಳ ಸಂಪ್ರದಾಯಗಳನ್ನು ಪ್ರೋತ್ಸಾಹಿಸಿದರು. ಜೈನ ದೇವಾಲಯಗಳ ನಿರ್ಮಾಣಕ್ಕೆ ಇವರು ಪ್ರೋತ್ಸಾಹ ನೀಡಿದರು. ಬೌದ್ಧ ವಿಹಾರಗಳೂ ಕೂಡ ಪ್ರೋತ್ಸಾಹಿಸಲ್ಪಟ್ಟವು.

ಬಾದಾಮಿಯ ಚಾಳುಕ್ಯರು ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದರು. ಕನ್ನಡ ಹಾಗೂ ಸಂಸ್ಕೃತ ಭಾಷೆಗಳು ಚೆನ್ನಾಗಿ ಬೆಳೆದವು. ಕನ್ನಡವು ಅವರ ದೇಶ ಭಾಷೆಯಾಗಿತ್ತು. ಈ ಕಾಲದ ಕಾವ್ಯದಲ್ಲಿ ತ್ರಿಪದಿ ಶೈಲಿಯು ಬೆಳವಣಿಗೆಯಾಯಿತು. ಕನ್ನಡದಲ್ಲಿ ಕೃತಿಗಳು ಇಲ್ಲವಾದರೂ ಅನೇಕ ಶಾಸನಗಳು ಕನ್ನಡದಲ್ಲಿ ಬರೆಯಲ್ಪಟ್ಟಿವೆ. ಬಾದಾಮಿಯ ಕಪ್ಪೆ ಅರಭಟ್ಟನ ಶಾಸನದ ಒಂದು ಪದ್ಯವು ತ್ರಿಪದಿ ಶೈಲಿಯಲ್ಲಿರುವುದು ಕಂಡುಬರುತ್ತದೆ.

ಈ ಕಾಲದ ಸಂಸ್ಕೃತ ವಿದ್ವಾಂಸರುಗಳೆಂದರೆ ರವಿಕೀರ್ತಿ, ವಿಜ್ಜಿಕ ಮತ್ತು ಅಕಳಂಕರು. ಎರಡನೇ ಪುಲಿಕೇಶಿಯ ಸೊಸೆಯಾದ ವಿಜ್ಜಿಕ ಎಂಬ ಕವಿಯತ್ರಿಯು ಬರೆದ 'ಕೌಮುದೀಮಹೋತ್ಸವ', ಶಿವಭಟ್ಟಾರಕನ 'ಹರ ಪಾರ್ವತೀಯ' ಮುಖ್ಯವಾದ ಸಂಸ್ಕೃತ ನಾಟಕಗಳಾಗಿವೆ.




**ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು**

©KTBS Not to be republished

ಬಾದಾಮಿಯ ಚಾಳುಕ್ಯರು ಮಹಾನ್ ನಿರ್ಮಾಪಕರು ಹಾಗೂ ಕಲಾ ಪ್ರೇಮಿಗಳೂ ಆಗಿದ್ದರು. ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳಲ್ಲಿ ಸೊಗಸಾದ ಅತ್ಯುತ್ಕೃಷ್ಟವಾದ ದೇವಾಲಯಗಳನ್ನು ನಿರ್ಮಿಸಿದರು. ಇವರು 'ಚಾಳುಕ್ಯ ಶೈಲಿ' ಎಂಬ ವಿಶಿಷ್ಟ ಶಿಲ್ಪಕಲಾ ಶೈಲಿಯನ್ನು ಭಾರತೀಯ ವಾಸ್ತುಶಿಲ್ಪದಲ್ಲಿ ಪ್ರಾರಂಭಿಸಿದರು. ಬಾದಾಮಿಯಲ್ಲಿರುವ ಶಿಲೆಯಲ್ಲಿ ಕೊರೆದ ಗುಹಾಂತರ ದೇವಾಲಯಗಳನ್ನು ಇವರು ನಿರ್ಮಿಸಿದರು. ಅನೇಕ ಕಲಾವಿದರು ಮತ್ತು ಶಿಲ್ಪಕಾರರಿಗೆ ಇವರು ಪ್ರೋತ್ಸಾಹ ನೀಡಿದರು.

ಕಪ್ಪೆ ಅರಭಟ್ಟನ ಶಾಸನದ ತ್ರಿಪದಿ ಪದ್ಯ



ಸಾಧುಗೆ ಸಾಧು
ಮಾಧುರ್ಯಂಗೆ ಮಾಧುರ್ಯಂ
ಬಾಧಿಪ್ಪ ಕಲಿಗೆ
ಕಲಿಯುಗ ವಿಪರೀತನ್
ಮಾಧವನೀತನ್ ಪೆರನಲ್ಲ ॥

ಒಳ್ಳೆಯವರಿಗೆ ಒಳ್ಳೆಯವನು. ಮಧುರಗುಣ ಉಳ್ಳವರಿಗೆ ಮಧುರವಾಗಿ ವರ್ತಿಸುವವನು. ತೊಂದರೆಪಡಿಸುವ ದುಷ್ಟರಿಗೆ ದುಷ್ಟರಂತೆ ಕಾಣಿಸುವವನು. ಈತನು ಅಸಾಮಾನ್ಯನಾದ ಮಾಧವನೇ ಆಗಿರುವನು.

ಚಾಳುಕ್ಯ ಶೈಲಿಯ ಅತ್ಯುತ್ತಮ ದೇವಾಲಯಗಳು ಐಹೊಳೆ ಮತ್ತು ಪಟ್ಟದಕಲ್ಲಿನಲ್ಲಿವೆ. ದೇವಾಲಯ ವಾಸ್ತುಶಿಲ್ಪದ ತೊಟ್ಟಿಲುಗಳಲ್ಲಿ ಐಹೊಳೆಯು ಒಂದಾಗಿದೆ.

ದೇವಾಲಯ ವಾಸ್ತುಶಿಲ್ಪದ ಕ್ರಮಸರಣಿಯ ವಿಕಾಸದಲ್ಲಿನ ಪ್ರಯೋಗಗಳನ್ನು ಇಲ್ಲಿ ನಡೆಸಲಾಯಿತು. ಈ ಶೈಲಿಯು ಪಟ್ಟದಕಲ್ಲಿನಲ್ಲಿ ಸಂಪೂರ್ಣ ವಿಕಾಸ ಹೊಂದಿತು. ಅಂತೆಯೇ ಅಲ್ಲಿ ಲೋಕೇಶ್ವರ (ವಿರೂಪಾಕ್ಷ) ಮತ್ತು ತ್ರೈಲೋಕೇಶ್ವರ (ಮಲ್ಲಿಕಾರ್ಜುನ) ಮುಂತಾದ ಪ್ರಸಿದ್ಧ ದೇವಾಲಯಗಳನ್ನು ಕಾಣಬಹುದು. ಬಾದಾಮಿಯ ಗುಹೆಗಳಲ್ಲಿರುವ ವಿಷ್ಣು, ವರಾಹ, ಹರಿಹರ, ಅರ್ಧನಾರೀಶ್ವರರ ಎತ್ತರದ ವಿಗ್ರಹಗಳು ಚಾಳುಕ್ಯರ ಕಲಾತ್ಮಕ ಸಾಧನೆಯ ಅತ್ಯುತ್ತಮ ಕುರುಹುಗಳಾಗಿವೆ. ಚಿತ್ರಕಲೆಗೂ ಇಲ್ಲಿ ಪ್ರೋತ್ಸಾಹ ಸಿಕ್ಕಿತು. ಈ ಕಾಲದ ಅಜಂತ ಕಲೆಯು ಲೋಕ ವಿಖ್ಯಾತವಾದುದು.

## ಕಂಚಿಯ ಪಲ್ಲವರು (ಸಾ.ಶ. 350 – 895)

ಪಲ್ಲವರು ತಮಿಳುನಾಡಿನ ಪ್ರಪ್ರಥಮ ರಾಜರುಗಳು. ದಕ್ಷಿಣ ಭಾರತವನ್ನು ಆಳಿದ ವಂಶಗಳಲ್ಲಿ ಇವರಿಗೆ ವಿಶೇಷ ಸ್ಥಾನವಿದೆ. ಸಾ.ಶ. 4ನೇ ಶತಮಾನದಿಂದ ಸಾ.ಶ. 9ನೇ ಶತಮಾನದವರೆಗೆ ಆಳಿದರು. ಪ್ರಾರಂಭದಲ್ಲಿ ಇವರು ಶಾತವಾಹನರ ಅಧಿಕಾರಿಗಳಾಗಿದ್ದರು. ಶಾತವಾಹನ ರಾಜ್ಯವು ಅವನತಿಯಾದಾಗ ಪಲ್ಲವರು ತಮ್ಮನ್ನು ತಾವೇ ಸ್ಥಳೀಯ ರಾಜರುಗಳೆಂದು ಘೋಷಿಸಿಕೊಂಡರು.

ಶಿವಸ್ಕಂದವರ್ಮನು ಈ ಸಂತತಿಯ ಮೊದಲ ದೊರೆಯಾಗಿದ್ದನು. ಪಲ್ಲವರು ಮತ್ತು ಕದಂಬರು ನಿರಂತರ ಶತ್ರುತ್ವ ಹೊಂದಿದ್ದರು. ಆನಂತರ ಚಾಲುಕ್ಯ ವಂಶದ ಇಮ್ಮಡಿ ಪುಲಿಕೇಶಿಯು ಪಲ್ಲವರ ಮಹೇಂದ್ರವರ್ಮನನ್ನು ಸೋಲಿಸಿದನು. ಮುಂದೆ ಬಂದ ಪ್ರಥಮ ನರಸಿಂಹವರ್ಮನು ಪಲ್ಲವ ರಾಜರುಗಳಲ್ಲಿ ಅತ್ಯಂತ ಪ್ರಸಿದ್ಧನು. ತನಗೆ ಚಾಲುಕ್ಯರ ಮೇಲಿದ್ದ ಸೇಡನ್ನು ತೀರಿಸಿಕೊಂಡು ಇಮ್ಮಡಿ ಪುಲಿಕೇಶಿಯನ್ನು ಸೋಲಿಸಿ ವಾತಾಪಿಯನ್ನು ವಶಪಡಿಸಿಕೊಂಡನು. ಇದರಿಂದ ಈತನು 'ಮಹಾಮಲ್ಲ' ಮತ್ತು 'ವಾತಾಪಿಕೊಂಡ' ಎಂಬ ಬಿರುದುಗಳನ್ನು ಹೊಂದಿದ್ದನು. ಈತನ ಆಳ್ವಿಕೆಯ ಕಾಲದಲ್ಲಿ ಹ್ಯೂಯೆನ್‌ತ್ಸಾಂಗನು ಕಂಚಿಯನ್ನು ದರ್ಶಿಸಿದ್ದನು. ಕಂಚಿ ಬಳಿಯಲ್ಲಿನ ಸಮುದ್ರ ತೀರದಲ್ಲಿ ನರಸಿಂಹವರ್ಮನು ಒಂದು ನಗರವನ್ನು ನಿರ್ಮಿಸಿ, ಅದಕ್ಕೆ 'ಮಹಾಬಲಿಪುರಂ' ಎಂಬ ಹೆಸರನ್ನು ಇಟ್ಟನು. ಅನೇಕ ಏಕಶಿಲಾ ದೇವಾಲಯಗಳು ಈತನಿಂದ ನಿರ್ಮಾಣವಾದವು. ಅಪರಾಜಿತ ಪಲ್ಲವನ ಆಳ್ವಿಕೆಯ ಕಾಲದಲ್ಲಿ ಪಲ್ಲವ ಸಾಮ್ರಾಜ್ಯ ಚೋಳರ ಆದಿತ್ಯನಿಂದ ಕೊನೆಗೊಂಡಿತು.

©KTBS
Not to be republished

## ಪಲ್ಲವರ ಕೊಡುಗೆಗಳು

ತಮಿಳುನಾಡಿನಲ್ಲಿ ಆಡಳಿತವನ್ನು ವ್ಯವಸ್ಥೆಗೊಳಿಸಿದ್ದರು. ಸಾಹಿತ್ಯ, ಧರ್ಮ, ಕಲೆ ಮತ್ತು ವಾಸ್ತುಶಿಲ್ಪ ಹಾಗೂ ಶಿಕ್ಷಣಗಳಲ್ಲಿ ಇವರ ಕಾಣಿಕೆಯು ಗಮನಾರ್ಹವಾದುದು. ವಾತಾಪಿಯಲ್ಲಿ ಚಾಲುಕ್ಯರೂ, ಕಂಚಿಯಲ್ಲಿ ಪಲ್ಲವರೂ ಆಳುತ್ತಿದ್ದ ಕಾಲವೇ ದಕ್ಷಿಣದಲ್ಲಿ ವೀರಯುಗ. ಇವರ ರಾಜ್ಯವು ಸದೃಢ, ಸುವ್ಯಸ್ಥಿತವಾಗಿದ್ದು, ಮಂತ್ರಿ ಮತ್ತು ಪ್ರಾಂತಾಧಿಕಾರಿಗಳಿದ್ದರು. ರಾಜ್ಯವನ್ನು ಮಂಡಲ, ನಾಡು, ಗ್ರಾಮಗಳಾಗಿ ವಿಭಾಗಿಸಿದ್ದರು. ಗ್ರಾಮಸಭೆಯು ಗ್ರಾಮದ ಸಮಸ್ಯೆಗಳನ್ನು ಗಮನಿಸುತ್ತಿದ್ದಿತು. ಗ್ರಾಮಭೋಜಕ ಗ್ರಾಮದ ಆಡಳಿತ ನೋಡಿಕೊಳ್ಳುತ್ತಿದ್ದನು.

ಪಲ್ಲವರು ಸಂಸ್ಕೃತ ಮತ್ತು ತಮಿಳು ಭಾಷೆಗಳೆರಡಕ್ಕೂ ಪ್ರೋತ್ಸಾಹ ನೀಡಿದರು. ಕಂಚಿಯು ಸಂಸ್ಕೃತ ಸಾಹಿತ್ಯದ ಕೇಂದ್ರವಾಗಿತ್ತು. ಪಲ್ಲವರ ಆಸ್ಥಾನದಲ್ಲಿದ್ದ ಕವಿಗಳು ಭಾರವಿ (ಕಿರಾತಾರ್ಜುನೀಯ) ಹಾಗೂ ದಂಡಿ (ದಶಕುಮಾರ ಚರಿತ). ರಾಜ ಮಹೇಂದ್ರವರ್ಮನು ಸ್ವತಃ 'ಮತ್ತ ವಿಲಾಸ ಪ್ರಹಸನ' ಎಂಬ ಸಾಮಾಜಿಕ ನಾಟಕವನ್ನು ಹಾಗೂ 'ಭಗವದುಜ್ಜುಕ' ಗ್ರಂಥವನ್ನು ರಚಿಸಿದ್ದಾನೆ. ಪಲ್ಲವರು ಎಲ್ಲಾ ಮತಗಳಿಗೂ ಪ್ರೋತ್ಸಾಹ ನೀಡಿದರು. ಮೊದಲು ಪಲ್ಲವ ದೊರೆಗಳು ಬೌದ್ಧಮತೀಯರಾಗಿದ್ದರು. ನಳಂದ ವಿಶ್ವವಿದ್ಯಾನಿಲಯದ ಮಹಾನ್ ವಿದ್ವಾಂಸ ಧರ್ಮಪಾಲನು ಕಂಚಿಯಲ್ಲಿ ಜನಿಸಿದವನು. ಮಹೇಂದ್ರವರ್ಮನು ಜೈನ ಮತಾವಲಂಬಿಯಾದುದರಿಂದ ನಾಡಿನಲ್ಲಿ ಅನೇಕ ಜೈನರಿದ್ದರು.

> *7ನೇ ಶತಮಾನದಲ್ಲಿ ಶೈವ– ವೈಷ್ಣವ ಭಕ್ತಿ ಪಂಥಗಳು ಜನಪ್ರಿಯವಾದವು. ನಾಯನ್ಮಾರರು ಎಂಬ 63 ಯತಿ ಶ್ರೇಷ್ಠರು ಶೈವ ಮತವನ್ನು ಪ್ರಚಾರಗೊಳಿಸಿದರು. 12 ಮಂದಿ ಆಳ್ವಾರರುಗಳು ವೈಷ್ಣವ ಮತವನ್ನು ಪ್ರಚಾರಗೊಳಿಸಿದರು.*

ಈ ಯುಗವು ಭಕ್ತಿ ಚಳುವಳಿಯ ಉದಯವನ್ನು ಕಂಡಿತು. ವೈದಿಕ ಧರ್ಮದ ಪುನರುಜ್ಜೀವನಕ್ಕೂ ಸಹಾಯ ಮಾಡಿತು. ತಮಿಳಿನಲ್ಲಿ ಶ್ಲೋಕಗಳು ರಚನೆಯಾದವು. ಇದೇ ತಮಿಳು ಸಾಹಿತ್ಯದ ನಿಧಿಯಾಗಿದೆ.


**ಮಹಾಬಲಿಪುರ ಪಂಚರಥಗಳು**

ಪಲ್ಲವರು ಕಲೆ ಮತ್ತು ವಾಸ್ತುಶಿಲ್ಪದ ಪ್ರೇಮಿಗಳಾಗಿದ್ದರು. ತಮ್ಮ ರಾಜ್ಯದಲ್ಲಿ ಇವರು ಅನೇಕ ದೇವಾಲಯಗಳನ್ನು ನಿರ್ಮಿಸಿದರು. ಈ ದೇವಾಲಯಗಳಲ್ಲಿ ಅತ್ಯುತ್ತಮ ಕಲಾಕೌಶಲತೆಯನ್ನು ಕಾಣಬಹುದು. ಪಲ್ಲವರ ವಾಸ್ತುಶಿಲ್ಪವನ್ನು ಕಲ್ಲಿನಲ್ಲಿ ಕೊರೆದು ಮಾಡಿದ ದೇವಾಲಯಗಳು ಮತ್ತು ರಚನಾ ವಿನ್ಯಾಸದ ದೇವಾಲಯಗಳು ಎಂಬುದಾಗಿ ವಿಂಗಡಿಸಬಹುದು.

ಮಹಾಬಲಿಪುರದಲ್ಲಿ ಕಲ್ಲಿನಲ್ಲಿ ಕೊರೆದು ಮಾಡಿದ ಅನೇಕ ದೇವಾಲಯಗಳನ್ನು ಕಾಣಬಹುದು. ಏಕಶಿಲೆಗಳಲ್ಲಿ ಅದ್ಭುತ ವಿಗ್ರಹಗಳನ್ನು ಕೆತ್ತಿ, ಬಿಡಿಸಲಾಗಿದೆ. ಇವುಗಳು ಮಹಾಭಾರತದ ಹಾಗೂ ಭಾಗವತದ ಕಥೆಗಳನ್ನು ಹೊಂದಿವೆ. ಇಲ್ಲಿನ ಪಂಚ ರಥಗಳು ಸುಪ್ರಸಿದ್ಧ ಏಕಶಿಲಾ ದೇವಾಲಯಗಳಾಗಿವೆ. 'ಅರ್ಜುನನ ತಪಸ್ಸು' ಎನ್ನುವ ಕೆತ್ತನೆ ದೃಶ್ಯವು ಅತ್ಯುತ್ತಮ ಕಲಾಕೃತಿಯಾಗಿದೆ.

ಕಂಚಿಯಲ್ಲಿನ ಕೈಲಾಸನಾಥ, ಏಕಾಂಬರನಾಥ ಮತ್ತು ವೈಕುಂಠ ಪೆರುಮಾಳರ ದೇವಾಲಯಗಳು, ಮಹಾಬಲಿಪುರದ ಕಡಲದಂಡೆಯ ದೇವಾಲಯ ಪ್ರಾಚೀನ ಭಾರತ ವಾಸ್ತುಶಿಲ್ಪದ ಅತ್ಯುತ್ತಮ ನಿದರ್ಶನಗಳಾಗಿವೆ.

©KTBS Not to be re published

ದೇವಾಲಯಗಳು ಧಾರ್ಮಿಕ ಹಾಗೂ ಕಲಾತ್ಮಕ ಚಟುವಟಿಕೆಗಳ ಕೇಂದ್ರಗಳಾದವು. ದೇವಾಲಯದ ಅಂಗಳಗಳಲ್ಲಿ ಸಂಜೆ ಸಮಯದಲ್ಲಿ ಗ್ರಾಮೀಣ ಜನರು ಕಲೆತು ಅನೇಕ ವಿಷಯಗಳನ್ನು ಚರ್ಚಿಸುತ್ತಿದ್ದರು. ವಿರಾಮ ವೇಳೆಯಲ್ಲಿ ಜನರು ಇಲ್ಲಿ ಸಭೆ ಸೇರುತ್ತಿದ್ದು, ಪುರಾಣ ಶ್ರವಣ ಅಥವಾ ಭಕ್ತಿಗೀತೆಗಳನ್ನು ಹಾಡುತ್ತಿದ್ದರು. ಹೀಗಾಗಿ ದೇವಾಲಯಗಳು ಸಾಮಾಜಿಕ, ಶೈಕ್ಷಣಿಕ ಕೇಂದ್ರಗಳಾಗಿದ್ದವು.

ಪಲ್ಲವರು ಒಳ್ಳೆಯ ನೌಕಾಬಲವನ್ನು ಹೊಂದಿದ್ದರು. ಇಲ್ಲಿನ ವರ್ತಕರು ಮಲಯ, ಇಂಡೋನೇಷಿಯಾ ಹಾಗೂ ಇತರೆ ಆಗ್ನೇಯ ಏಷ್ಯಾ ರಾಷ್ಟ್ರಗಳೊಡನೆ ವಾಣಿಜ್ಯ ಸಂಬಂಧಗಳನ್ನು ಹೊಂದಿದ್ದರು. ಭಾರತೀಯ ಭಾಷೆ ಮತ, ಸಂಪ್ರದಾಯ, ಸಂಸ್ಕೃತಿಗಳು ಆ ದೇಶಗಳಲ್ಲಿಯೂ ಪ್ರಭಾವ ಬೀರಿರುವುದನ್ನು ಕಾಣಬಹುದು.

## ಅಭ್ಯಾಸಗಳು

**I. ಬಿಟ್ಟ ಸ್ಥಳಗಳಲ್ಲಿ ಭರ್ತಿ ಮಾಡಿ.**

1. ಪುಲಿಕೇಶಿಯು ಸೋಲಿಸಿದ ಪಲ್ಲವರ ದೊರೆ ______________ .
2. ಕರ್ನಾಟಕ ಎಂಬ ಹೆಸರನ್ನು ಕೊಟ್ಟ ರಾಜವಂಶದವರು ______________ .
3. 'ಹರ ಪಾರ್ವತೀಯ' ಸಂಸ್ಕೃತ ನಾಟಕದ ಕರ್ತೃ ______________ .
4. 'ವಾತಾಪಿಕೊಂಡ' ಎಂಬ ಬಿರುದು ಪಡೆದ ಪಲ್ಲವರ ರಾಜ ______________ .
5. 'ಅರ್ಜುನನ ತಪಸ್ಸು' ಎಂಬ ಕಲಾಕೃತಿಯು ______________ ದಲ್ಲಿದೆ.

**II. ಸಂಕ್ಷೇಪವಾಗಿ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

1. ಎರಡನೇ ಪುಲಿಕೇಶಿ ಸಾಮ್ರಾಜ್ಯವನ್ನು ಹೇಗೆ ವಿಸ್ತರಿಸಿದನು?
2. ಚಾಳುಕ್ಯರ ಆಡಳಿತ ವ್ಯವಸ್ಥೆ ಬಗ್ಗೆ ತಿಳಿಸಿ.
3. ಚಾಳುಕ್ಯರು ಸಾಹಿತ್ಯಪ್ರಿಯರು ಎನ್ನುವುದನ್ನು ಉದಾಹರಣೆ ಸಹಿತ ವಿವರಿಸಿ.
4. ಕಂಚಿಯನ್ನಾಳಿದ ಪಲ್ಲವ ಅರಸರುಗಳನ್ನು ಹೆಸರಿಸಿ.
5. ಸಂಸ್ಕೃತಕ್ಕೆ ಮತ್ತು ತಮಿಳಿಗೆ ಪಲ್ಲವರು ಯಾವ ರೀತಿ ಪ್ರೋತ್ಸಾಹ ನೀಡಿದರು?

**III. ಚಟುವಟಿಕೆಗಳು.**

1. ಕನ್ನಡ ಭಾಷೆಗೆ ಚಾಳುಕ್ಯರ ಕೊಡುಗೆಗಳೇನೆಂಬುದನ್ನು ಗುಂಪಿನಲ್ಲಿ ಚರ್ಚಿಸಿ.
2. ತ್ರಿಪದಿಯ ಬಗ್ಗೆ ಕನ್ನಡ ಭಾಷಾ ಶಿಕ್ಷಕರು ಮತ್ತು ಕನ್ನಡ ಪುಸ್ತಕಗಳಿಂದ ಹೆಚ್ಚಿನ ಮಾಹಿತಿ ತಿಳಿಯಿರಿ.
3. ಕಂಚಿಪುರ – ಮಹಾಬಲಿಪುರ ಪ್ರದೇಶಗಳಿಗೆ ಒಂದು ಪ್ರವಾಸ ಏರ್ಪಡಿಸುವುದು.

**IV. ಯೋಜನೆಗಳು.**

1. ಯಾವುದಾದರೂ ಸ್ಥಳೀಯ ಐತಿಹಾಸಿಕ ಸ್ಥಳಗಳಿಗೆ ಭೇಟಿ ನೀಡಿ ವಿಷಯ ಸಂಗ್ರಹಿಸಿ.
2. ದೇವಾಲಯಗಳ ಚಿತ್ರ ಬಿಡಿಸಿ, ಸಂಗ್ರಹಿಸಿರಿ. ಒಂದು ಆಲ್ಬಂ ತಯಾರಿಸಿ.

*****

© KTBS Not to be republished

## ಅಧ್ಯಾಯ – 11

# ಮಾನ್ಯಖೇಟದ ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಳುಕ್ಯರು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ರಾಷ್ಟ್ರಕೂಟ ವಂಶ ಸ್ಥಾಪಕ, ದಂತಿದುರ್ಗ, ಪ್ರಮುಖ ದೊರೆ ಅಮೋಘವರ್ಷ.
- ಆಡಳಿತ, ಸಾಹಿತ್ಯ ಮತ್ತು ವಾಸ್ತುಶಿಲ್ಪ ಕ್ಷೇತ್ರಕ್ಕೆ ರಾಷ್ಟ್ರಕೂಟರು ನೀಡಿದ ಕೊಡುಗೆಗಳು.
- ಕಲ್ಯಾಣದ ಚಾಳುಕ್ಯರ ಅಭಿವೃದ್ಧಿ ಮತ್ತು ಆಡಳಿತ, ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳು.
- ರಾಷ್ಟ್ರಕೂಟರ ಕಾಲದ ಸಾಮ್ರಾಜ್ಯದ ವ್ಯಾಪ್ತಿಯನ್ನು ಭಾರತದ ಭೂಪಟದಲ್ಲಿ ಗುರುತಿಸುವುದು.

## ರಾಷ್ಟ್ರಕೂಟರು (ಸಾ.ಶ. 753 – 973)

ರಾಷ್ಟ್ರಕೂಟರು ಕನ್ನಡಿಗರು. ಪ್ರಾರಂಭದಲ್ಲಿ ಚಾಲುಕ್ಯರ ಸಾಮಂತರಾಗಿದ್ದವರು. ಅನಂತರ ಸ್ವತಂತ್ರರಾಗಿ ದಕ್ಷಿಣದಲ್ಲಿ ವಿಸ್ತಾರವಾದ ಸಾಮ್ರಾಜ್ಯದ ಒಡೆಯರಾಗಿ ಪ್ರಸಿದ್ಧರಾದವರು. ಕನ್ನಡನಾಡಿನ ಇತಿಹಾಸದಲ್ಲಿ ರಾಷ್ಟ್ರಕೂಟರ ಯುಗವು ಪ್ರಮುಖವಾದುದು. ಕರ್ನಾಟಕ ಸಾಮ್ರಾಜ್ಯದ ವೈಭವವನ್ನು ಪರಾಕಾಷ್ಠತೆಗೆತ್ತಿದ್ದ ಕೀರ್ತಿಯು ಇವರಿಗೆ ಸಲ್ಲುತ್ತದೆ. ಉತ್ತರದ ನರ್ಮದಾ ನದಿಯಿಂದ ದಕ್ಷಿಣದ ಕಾವೇರಿ ನದಿಯವರೆಗೆ ಹರಡಿದ ಸಾಮ್ರಾಜ್ಯ, ಎಲ್ಲೋರಾದ ಕೈಲಾಸನಾಥ ದೇವಾಲಯ, ಕನ್ನಡದ ಮೊದಲ ಗ್ರಂಥ 'ಕವಿರಾಜಮಾರ್ಗ' ಇವೆಲ್ಲವೂ ಇವರನ್ನು ಅಜರಾಮರರನ್ನಾಗಿಸಿದೆ.

ದಂತಿದುರ್ಗನಿಂದ ಪ್ರಾರಂಭವಾದ ಸಾಮ್ರಾಜ್ಯ ಕೃಷ್ಣ, ಇಮ್ಮಡಿ ಗೋವಿಂದ, ಧ್ರುವ, ಮುಮ್ಮಡಿ ಗೋವಿಂದ, ಅಮೋಘವರ್ಷ ಮುಂತಾದವರಿಂದ ಮುಂದುವರೆದು, ಪರಾಕಾಷ್ಠತೆಯನ್ನು ಮುಟ್ಟಿತು. ಅಮೋಘವರ್ಷನ ಪ್ರಾರಂಭಿಕ ಆಳ್ವಿಕೆಯು ಅನೇಕ ಅಡೆತಡೆಗಳಿಂದ ಕೂಡಿತ್ತು. ಆದರೆ ಕದನಗಳಲ್ಲಿ ಇಷ್ಟವಿಲ್ಲದ ಇವನು ಪ್ರಶಾಂತ ವಾತಾವರಣ ಬಯಸಿದನು. ಗಂಗರೊಡನೆ ಹಾಗೂ ಪಲ್ಲವರೊಡನೆ ವಿವಾಹ ಸಂಬಂಧದಿಂದ ವೈಷಮ್ಯವನ್ನು ನಿವಾರಿಸಿದನು. ಶಾಂತಿಪ್ರಿಯನಾದುದರಿಂದ ಉತ್ತರದ ಕೆಲವು ಸಾಮ್ರಾಜ್ಯಗಳನ್ನು ಕಳೆದುಕೊಂಡನು. ಪಶ್ಚಿಮ ಕರಾವಳಿಯಲ್ಲಿನ ಬಂದರುಗಳು ಮಹಾನ್ ವಾಣಿಜ್ಯ ಕೇಂದ್ರಗಳಾಗಿದ್ದುದರಿಂದ, ಪರ್ಶಿಯಾ, ಅರೇಬಿಯಾಗಳೊಂದಿಗೆ ವ್ಯಾಪಾರ ಸಂಬಂಧಗಳನ್ನು ಹೊಂದಿ ಅಪಾರ ಐಶ್ವರ್ಯವನ್ನು ಗಳಿಸಿತು. ಅನೇಕ ಪ್ರವಾಸಿಗರು, ವರ್ತಕರು ಈ ಸಂದರ್ಭದಲ್ಲಿ ಚಕ್ರಾಧಿಪತ್ಯವನ್ನು ಸಂದರ್ಶಿಸಿದರು. ಅವರಲ್ಲಿ ಪ್ರಮುಖನಾದವನು ಅರಬ್ ಯಾತ್ರಿಕ ಸುಲೈಮಾನ್. ಇವನು ಅಮೋಘವರ್ಷನನ್ನು ಕುರಿತು, 'ಜಗತ್ತಿನ ನಾಲ್ವರು ಪ್ರಬಲ ಚಕ್ರವರ್ತಿಗಳಲ್ಲಿ ಒಬ್ಬನೆಂದಿದ್ದಾನೆ'.


ಅಮೋಘವರ್ಷನು ಶೂರನೂ ಹಾಗೂ ಶಾಂತಿಪ್ರಿಯನು. ಎಲ್ಲಾ ಮತಗಳಿಗೂ ಪ್ರೋತ್ಸಾಹ ನೀಡಿದನು. ಇವನ ನಂತರ ಇಮ್ಮಡಿ ಕೃಷ್ಣ, ಮುಮ್ಮುಡಿ ಇಂದ್ರ, ಮುಮ್ಮುಡಿ ಕೃಷ್ಣ ಆಳ್ವಿಕೆ ನಡೆಸಿದರು. ಎರಡನೇ ಕರ್ಕನ ಕಾಲದಲ್ಲಿನ ಆಡಳಿತ ದುರ್ಬಲತೆಯು ಸಾಮಂತರಾಗಿದ್ದ ಕಲ್ಯಾಣ ಚಾಲುಕ್ಯ ಎರಡನೇ ತೈಲಪನ ಉದಯಕ್ಕೆ ದಾರಿಯಾಗಿ ಇದು ರಾಷ್ಟ್ರಕೂಟರ ಆಳ್ವಿಕೆಯನ್ನು ಕೊನೆಗೊಳಿಸಿತು.

### ರಾಷ್ಟ್ರಕೂಟರ ಕೊಡುಗೆಗಳು

ರಾಷ್ಟ್ರಕೂಟರ ರಾಜತ್ವವು ವಂಶಪಾರಂಪರ್ಯವಾಗಿತ್ತು. ಅರಸರಿಗೆ ಸಹಾಯ ಮಾಡಲು ಮಂತ್ರಿ ಮಂಡಲವಿರುತ್ತಿತ್ತು. ಮಂತ್ರಿ ಮಂಡಲದಲ್ಲಿ ವಿದೇಶೀ ವ್ಯವಹಾರ ನೋಡಿಕೊಳ್ಳುವ ಮಹಾ ಸಂಧಿವಿಗ್ರಹಿಯೆಂಬ

©KTBS Not to be republished

ಗಣ್ಯನು ಇದ್ದನು. ಆಡಳಿತದ ಅನುಕೂಲಕ್ಕಾಗಿ ಸಾಮ್ರಾಜ್ಯ ವನ್ನು ರಾಷ್ಟ್ರ (ಮಂಡಲ), ವಿಷಯ, ನಾಡು, ಗ್ರಾಮಗಳಾಗಿ ವಿಭಜಿಸಲಾಗಿತ್ತು.




**ರಾಷ್ಟ್ರಕೂಟರ ಸಾಮ್ರಾಜ್ಯದ ನಕ್ಷೆ**

ಗ್ರಾಮದ ಮುಖ್ಯಸ್ಥನಿಗೆ ಗ್ರಾಮಪತಿ ಅಥವಾ ಪ್ರಭುಗಾವುಂಡ ಎಂದು ಕರೆಯುತ್ತಿದ್ದರು. ಗ್ರಾಮ ಸೈನ್ಯಕ್ಕೆ ಈತನೇ ಮುಖ್ಯಸ್ಥ. ಗ್ರಾಮ ಲೆಕ್ಕಿಗ ಈತನ ಸಹಾಯಕ. ಗ್ರಾಮ ಸಭೆಗಳೂ ಇದ್ದವು. ನಾಡುಗಳಲ್ಲಿ ನಾಡಗಾವುಂಡ ಎಂಬ ಅಧಿಕಾರಿ ಇರುತ್ತಿದ್ದನು. ಇದೇ ರೀತಿ ವಿಷಯ ಮತ್ತು ರಾಷ್ಟ್ರಗಳ ಮೇಲೂ ಅಧಿಕಾರಿಗಳಿದ್ದರು. ವಿಷಯಪತಿ ಮತ್ತು ರಾಷ್ಟ್ರಪತಿ ಜಿಲ್ಲೆ ಅಥವಾ ವಿಷಯಕ್ಕೂ ಹಾಗೂ ರಾಷ್ಟ್ರಕ್ಕೂ ಅಧಿಕಾರಿಗಳಾಗಿದ್ದರು.

ಭೂಕಂದಾಯ, ಸರಕು, ಮನೆ, ಅಂಗಡಿಗಳ ಮೇಲಿನ ಸುಂಕ, ನದಿ ದಾಟಿಸುವಂತಹ ವೃತ್ತಿಗಳ ಮೇಲಿನ ತೆರಿಗೆ ಮೊದಲಾದವು ರಾಜ್ಯದ ಆದಾಯವಾಗಿದ್ದವು. ವಿದೇಶಿ ವ್ಯಾಪಾರದಿಂದ ರಾಜ್ಯಕ್ಕೆ ಅಪಾರ ಸುಂಕ ಬರುತ್ತಿತ್ತು.


ರಾಷ್ಟ್ರಕೂಟರ ಕಾಲದಲ್ಲಿ ರಾಜರು ಕನ್ನಡ ಮತ್ತು ಸಂಸ್ಕೃತ ಎರಡಕ್ಕೂ ಪ್ರೋತ್ಸಾಹ ನೀಡಿದ್ದರು. ಸಂಸ್ಕೃತದಲ್ಲಿ ಅತ್ಯುತ್ತಮ ಗ್ರಂಥಗಳು ರಚನೆಯಾದವು. ತ್ರಿವಿಕ್ರಮನು 'ನಳಚಂಪು' ಎಂಬ ಸಂಸ್ಕೃತ ಸಾಹಿತ್ಯದ ಪ್ರಥಮ ಚಂಪೂಕೃತಿಯನ್ನು ರಚಿಸಿದನು. ಹಲಾಯುಧನು 'ಕವಿರಹಸ್ಯ'ವನ್ನು ಬರೆದನು, ಜಿನಸೇನ, ಗಣಿತಜ್ಞ ಮಹಾವೀರಾಚಾರ್ಯ, ವ್ಯಾಕರಣ ಶಾಸ್ತ್ರಜ್ಞನಾದ ಶಕಟಾಯನ, ಗುಣಭದ್ರ, ವೀರಸೇನ, ಅಮೋಘವರ್ಷನ ಆಸ್ಥಾನದಲ್ಲಿದ್ದರು. ಆದಿಕವಿ ಪಂಪನು 'ಆದಿಪುರಾಣ', 'ವಿಕ್ರಮಾರ್ಜುನ ವಿಜಯ'ವನ್ನು ಕನ್ನಡದಲ್ಲಿ ಬರೆದನು. ಉಭಯಕವಿ ಚಕ್ರವರ್ತಿ ಪೊನ್ನನು 'ಶಾಂತಿಪುರಾಣ'ವನ್ನು ರಚಿಸಿದನು.

©KTBS Not to be re published

ಅಮೋಘವರ್ಷನ ಆಸ್ಥಾನದಲ್ಲಿದ್ದ ಶ್ರೀ ವಿಜಯ 'ಕವಿರಾಜಮಾರ್ಗ'ವನ್ನು ರಚಿಸಿದನು. ಇದು ಕನ್ನಡದ ಮೇರುಕೃತಿಯಾಗಿದೆ. ಇದರಿಂದ ಕನ್ನಡ ಸಾಹಿತ್ಯವು ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿರುವುದನ್ನು ತಿಳಿಯಬಹುದು.

ಆದಿಕವಿ ಪಂಪನ ಹೆಸರಿನಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯವು, 'ನಾಡೋಜ' ಎಂಬ ಪ್ರಶಸ್ತಿಯನ್ನು ಕರ್ನಾಟಕದ ಹಿರಿಯ ಸಾಧಕರಿಗೆ ನೀಡುತ್ತಾ ಬಂದಿದೆ.

ರಾಷ್ಟ್ರಕೂಟರ ಕಾಲದ ಇನ್ನೊಂದು ಸಂಪನ್ನವಾದ ಗದ್ಯಕೃತಿ 'ವಡ್ಡಾರಾಧನೆ', ಶಿವಕೋಟ್ಯಾಚಾರ್ಯ ಇದರ ಕರ್ತೃ. ಇದು ಜೈನ ಧಾರ್ಮಿಕ ಕಥೆಗಳ ಸಂಗ್ರಹ. ಇಲ್ಲಿ ಕನ್ನಡ ದೇಸಿಗೆ ವಿಶೇಷ ಪ್ರಾಧಾನ್ಯತೆ ದೊರಕಿದೆ. ಸನ್ನಿವೇಶ, ರಚನೆ, ಪಾತ್ರಸೃಷ್ಟಿ, ಸಂವಾದಗಳಲ್ಲಿ ಸಜೀವತೆ ಇದೆ. ಪಂಪ ಪೂರ್ವಯುಗದ ಶ್ರೇಷ್ಠ ಗದ್ಯ ಗ್ರಂಥವಾಗಿದ್ದು, ಇಡೀ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಚಿರಂತರವಾಗಿ ನಿಲ್ಲತಕ್ಕ ಕೃತಿಯಾಗಿದೆ.



ನಾಡೋಜ ಪಂಪ



ಕೈಲಾಸ ದೇವಾಲಯ, ಎಲ್ಲೋರ

©KTBS Not to be republished

ಅಗ್ರಹಾರಗಳು, ಮಠಗಳು ಅಂದಿನ ಪ್ರಮುಖ ಶೈಕ್ಷಣಿಕ ಕೇಂದ್ರಗಳಾಗಿದ್ದವು. ಸಂಸ್ಕೃತ, ವೇದ, ಜ್ಯೋತಿಷ್ಯ, ತರ್ಕಶಾಸ್ತ್ರ, ಪುರಾಣಗಳಲ್ಲಿ ಶಿಕ್ಷಣ ನೀಡುತ್ತಿದ್ದರು. ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಸಾಲೊಟಗಿ ಪ್ರಮುಖ ವಿದ್ಯಾ ಕೇಂದ್ರಗಳಲ್ಲೊಂದಾಗಿತ್ತು.

ರಾಷ್ಟ್ರಕೂಟ ಅರಸರು ಶಿವ ಮತ್ತು ವಿಷ್ಣುವಿನ ಆರಾಧಕರಾಗಿದ್ದರು. ಜೈನ ಮತ ರಾಜಾಶ್ರಯ ಪಡೆದ ಪ್ರಬಲ ಮತವಾಗಿತ್ತು. ಆದರೂ ಎಲ್ಲಾ ಮತಗಳಿಗೂ ಪ್ರೋತ್ಸಾಹ ನೀಡಿದ್ದರು. ಅನೇಕ ಶಿವ, ವಿಷ್ಣು ದೇವಾಲಯಗಳನ್ನು ನಿರ್ಮಿಸಿದ್ದಾರೆ.

ರಾಷ್ಟ್ರಕೂಟ ಅರಸರು ಕಲಾಪೋಷಕರಾಗಿದ್ದರು. ಎಲ್ಲೋರ ಮತ್ತು ಎಲಿಫೆಂಟಾಗಳಲ್ಲಿ ಕಲ್ಲಿನಲ್ಲಿ ಕೊರೆದು ಮಾಡಿರುವ ದೇವಾಲಯಗಳು ಭಾರತೀಯ ಕಲೆಗೆ ಇವರು ನೀಡಿರುವ ಉತ್ತಮ ಕಾಣಿಕೆಗಳಾಗಿವೆ. ಒಂದನೇ ಕೃಷ್ಣನು ಕೊರೆಸಿದ ಎಲ್ಲೋರಾದ ಕೈಲಾಸ ಮಂದಿರವು ಏಕಶಿಲೆಯ ಅದ್ಭುತ ರಚನೆಯಾಗಿದೆ. 100 ಅಡಿ ಎತ್ತರ, 276 ಅಡಿ ಉದ್ದ ಹಾಗೂ 154 ಅಡಿ ಅಗಲವಾಗಿದ್ದು, ಬೃಹತ್ ಬಂಡೆಯನ್ನು ಕೊರೆದು ಕಟ್ಟಲಾಗಿದೆ. ಅಲ್ಲಿಯೇ ಪ್ರಸಿದ್ಧ ದಶಾವತಾರ ಗುಹಾಲಯವಿದೆ. ಮುಂಬೈ ಬಳಿಯ ಎಲಿಫೆಂಟಾದ ಗುಹೆಗಳಲ್ಲಿಯ ಶಿಲ್ಪಕಲೆಯು ರಾಷ್ಟ್ರಕೂಟರ ಕಾಲದ ಶಿಲ್ಪಕಲೆಗೆ ಮುಕುಟಪ್ರಾಯವಾಗಿದೆ. ಅರ್ಧನಾರೀಶ್ವರ, ಮಹೇಶಮೂರ್ತಿ (ತ್ರಿಮುಖ) ವಿಗ್ರಹಗಳನ್ನು ಸೊಗಸಾಗಿ ಕೆತ್ತಲಾಗಿದೆ. ರಾಯಚೂರು ಜಿಲ್ಲೆ ಶಿರವಾಳದಲ್ಲಿ ಇವರ ಕಾಲದ ದೇವಾಲಯಗಳಿವೆ. ಪಟ್ಟದಕಲ್ಲಿನಲ್ಲಿ ಸುಂದರ ಜಿನದೇವಾಲಯವಿದೆ.

## ಕಲ್ಯಾಣದ ಚಾಳುಕ್ಯರು (ಸಾ.ಶ. 973 – ಸಾ.ಶ. 1189)

ಕಲ್ಯಾಣದ ಚಾಳುಕ್ಯರ ಕಾಲವು ಭಾರತದ ಚರಿತ್ರೆಯಲ್ಲಿಯೇ ಗೌರವಯುತವಾದ ಸ್ಥಾನವನ್ನು ಪಡೆದಿದೆ. ಇವರು ಕಲೆ, ಸಾಹಿತ್ಯ, ಶಿಕ್ಷಣಗಳಿಗೆ ವಿಶೇಷ ಪ್ರೋತ್ಸಾಹ ನೀಡಿದರು. ಕನ್ನಡ ಮತ್ತು ಸಂಸ್ಕೃತ ಭಾಷೆಗಳ ಬೆಳವಣಿಗೆಗೆ ವಿಶೇಷ ಪ್ರೋತ್ಸಾಹ ನೀಡಿ ಅವಕಾಶಗಳನ್ನು ಕಲ್ಪಿಸಿಕೊಟ್ಟರು. ಪ್ರಸಿದ್ಧ ಕನ್ನಡ ಕವಿಗಳಾದ ದುರ್ಗಸಿಂಹ, ರನ್ನ, ನಾಗಚಂದ್ರ, ಮುಂತಾದವರಿಗೆ ಆಶ್ರಯ ನೀಡಿದರು. ಇದೇ ಕಾಲದಲ್ಲಿ ಬೆಳಕಿಗೆ ಬಂದದ್ದು ವಚನ ಸಾಹಿತ್ಯ. ಕಲ್ಯಾಣವೆಂಬ ಹೊಸ ನಗರವನ್ನು ಕಟ್ಟಿ ರಾಜಧಾನಿಯನ್ನಾಗಿ ಮಾಡಿದ ಕೀರ್ತಿ ಒಂದನೇ ಸೋಮೇಶ್ವರನಿಗೆ ಸಲ್ಲುತ್ತದೆ.

ರಾಷ್ಟ್ರಕೂಟರ ಸಾಮಂತನಾಗಿದ್ದ ಎರಡನೇ ತೈಲಪನು ರಾಷ್ಟ್ರಕೂಟರ ರಾಜ ಎರಡನೇ ಕರ್ಕನನ್ನು ಪರಾಭವಗೊಳಿಸಿ ಮಾನ್ಯಖೇಟವನ್ನು ವಶಪಡಿಸಿಕೊಂಡು ಕಲ್ಯಾಣ ಚಾಳುಕ್ಯ ಸಾಮ್ರಾಜ್ಯ ಸ್ಥಾಪಿಸಿದನು. ಸುಮಾರು 24 ವರ್ಷಗಳ ಕಾಲ ಆಡಳಿತ ನಡೆಸಿದನು. ಈ ವಂಶದ ಪ್ರಮುಖ ಅರಸರಲ್ಲಿ ಒಂದನೇ ಸೋಮೇಶ್ವರ ಪ್ರಮುಖನಾದವನು. ಕಲ್ಯಾಣವೆಂಬ ಹೊಸ ನಗರವನ್ನು ಕಟ್ಟಿಸಿ ರಾಜಧಾನಿಯನ್ನಾಗಿ ಮಾಡಿಕೊಂಡನು. ಇದೇ ಬೀದರ್ ಜಿಲ್ಲೆಯ ಬಸವ ಕಲ್ಯಾಣ ಎನಿಸಿದೆ. ಈತನು ಅನೇಕ ಯುದ್ಧಗಳನ್ನು ಮಾಡಬೇಕಾಗಿ ಬಂದರೂ ಸಾಮ್ರಾಜ್ಯವು ಗಾತ್ರದಲ್ಲಿ ಕುಂದದಂತೆ ನೋಡಿಕೊಂಡನು. ಚೋಳರ ರಾಜಾಧಿರಾಜನನ್ನು 'ಕೊಪ್ಪಂ' ಎಂಬಲ್ಲಿ ಸೋಲಿಸಿದನು.

(ಸಾ.ಶ. 1076ರಲ್ಲಿ) ಒಂದನೇ ಸೋಮೇಶ್ವರನ ಮಗನಾದ ಆರನೆಯ ವಿಕ್ರಮಾದಿತ್ಯನು ಈ ವಂಶದ ಶ್ರೇಷ್ಠನಾದ ಅರಸ. ಅಸಾಧಾರಣ ವೀರ, ಉತ್ತಮ ಆಡಳಿತಗಾರ. ಇವನು ಸಾ.ಶ. 1076ರಲ್ಲಿ ಚಾಳುಕ್ಯ ವಿಕ್ರಮ ಶಕೆಯನ್ನು ಆರಂಭಿಸಿದನು. ಇವನು ಹೊಯ್ಸಳರ ವಿಷ್ಣುವರ್ಧನನ ಬಂಡಾಯ ಅಡಗಿಸಿದನು. ಶ್ರೀಲಂಕೆಯ ಅರಸನಾದ ವಿಜಯಬಾಹುವಿನೊಂದಿಗೆ ಸಂಪರ್ಕ ಹೊಂದಿದ್ದನು.

Not to be republished ©KTBS

ಆರನೇ ವಿಕ್ರಮಾದಿತ್ಯ ಹಾಗೂ ಮೂರನೇ ಸೋಮೇಶ್ವರನ ನಂತರ ಬಂದ ರಾಜರುಗಳ ಕಾಲದಲ್ಲಿ ಅದರಲ್ಲೂ ನಾಲ್ಕನೇ ಸೋಮೇಶ್ವರನ ಕಾಲದಲ್ಲಿ ರಾಜ್ಯವು ಕ್ಷೀಣಿಸಿ, ಕಲಚುರಿ ಬಿಜ್ಜಳನು ಕಲ್ಯಾಣವನ್ನು ಆಕ್ರಮಿಸಿ ಸ್ವತಂತ್ರವಾಗಿ ಆಳತೊಡಗಿದನು. ಇದೇ ಕಾಲದಲ್ಲಿ ಬೆಳಕಿಗೆ ಬಂದವರು ಸಾಮಾಜಿಕ, ಧಾರ್ಮಿಕ ಕ್ರಾಂತಿಯನ್ನುಂಟು ಮಾಡಿದ ಶ್ರೀಜಗಜ್ಯೋತಿ ಬಸವೇಶ್ವರರು. ಇವರು ವೀರಶೈವ ಪಂಥದ ಮೌಲ್ಯಗಳನ್ನು ಜನಸಾಮಾನ್ಯರಿಗೂ ತಲುಪಿಸುವ ಕೈಂಕರ್ಯದಲ್ಲಿ ತೊಡಗಿಸಿಕೊಂಡರು.

ಇವನ ಕಾಲದಲ್ಲಿದ್ದ ವಿಜ್ಞಾನೇಶ್ವರನು (ಮಿತಾಕ್ಷರದ ಕರ್ತೃ) ಕ್ಷಿತಿ ತಲದಲ್ಲಿ ಕಲ್ಯಾಣದಂತಹ ನಗರ ಹಿಂದಿರಲಿಲ್ಲ, ಮುಂದಿರಲಾರದು. ವಿಕ್ರಮಾದಿತ್ಯನಂತಹ ದೊರೆಯನ್ನು ಕಂಡಿಲ್ಲ, ಕೇಳಿಲ್ಲ ಎಂದು ಹೇಳಿದ್ದಾನೆ.

*ಬಸವೇಶ್ವರರು ಮೃದುವಾದ ಉಪದೇಶ, ಕಟುವಾದ ವಿಡಂಬನೆ (ಟೀಕೆ), ಉಗ್ರವಾದ ಎಚ್ಚರಿಕೆ ಎಂಬ ಮೂರು ಪ್ರಕಾರಗಳಲ್ಲಿ ಉಪದೇಶ ಮಾಡಿದರು. ಶಿವನಲ್ಲಿ ಅನನ್ಯ ಭಕ್ತಿಯಿಂದ ಶರಣು ಹೋಗುವುದೊಂದೇ ಮುಕ್ತಿಗೆ ಮಾರ್ಗ ಎಂದು ಬೋಧಿಸಿದರು. ಅಲ್ಲದೆ ಅವರು* ***'ಕಾಯಕವೇ ಕೈಲಾಸ'*** *ಎಂದು ಸಾರಿದರು. ಅನುಭವ ಮಂಟಪವನ್ನು ಸಾ.ಶ. 1162ರಲ್ಲಿ ಸ್ಥಾಪಿಸಿದರು. ಜನರಿಗೆ ಮಾತನಾಡುವ ತಿಳಿಗನ್ನಡದಲ್ಲಿ ವಚನಗಳನ್ನು ರಚಿಸಿ ಮನಸ್ಸಿಗೆ ನಾಟುವಂತೆ ಮಾಡಿದರು.*



**ಬಸವೇಶ್ವರರು**

## ಕಲ್ಯಾಣ ಚಾಲುಕ್ಯರ ಕೊಡುಗೆಗಳು

ಕಲ್ಯಾಣದ ಚಾಲುಕ್ಯರು ಬಾದಾಮಿಯ ಚಾಲುಕ್ಯರಂತೆಯೇ ವಿಶೇಷ ಕೊಡುಗೆಗಳನ್ನು ನೀಡಿದ್ದಾರೆ. ರಾಜತ್ವವು ವಂಶಪಾರಂಪರ್ಯವಾಗಿತ್ತು. ರಾಜ್ಯವನ್ನು ಪ್ರಾಂತ್ಯಗಳಾಗಿಯೂ (ಮಂಡಲ) ಮತ್ತು ಕಿರು ಪ್ರಾಂತ್ಯಗಳಾಗಿಯೂ (ನಾಡುಗಳು) ವಿಂಗಡಿಸಲಾಗಿತ್ತು. ಇದಲ್ಲದೆ ಕಂಪಣಗಳು (ಈಗಿನ ಹೋಬಳಿ) ಇದ್ದು ಗ್ರಾಮಗಳ ಆಡಳಿತಕ್ಕೆ ಸಹಾಯಕವಾಗಿದ್ದವು.



**ನಾಣ್ಯಗಳು**

ಭೂ ಕಂದಾಯವು ರಾಜ್ಯದ ಮೂಲಾದಾಯವಾಗಿತ್ತು. ಆದಾಯದ ಇತರೆ ಮೂಲಗಳಲ್ಲಿ ಮಾರಾಟ ತೆರಿಗೆ, ಸುಂಕ, ವೃತ್ತಿ ತೆರಿಗೆ ಸೇರಿದ್ದವು. ಭೂಕಂದಾಯದ ವ್ಯವಸ್ಥೆಗಾಗಿಯೇ 'ಕಡಿತವೆರ್ಗಡೆ' ಎಂಬ ಅಧಿಕಾರಿಯನ್ನು ನೇಮಿಸಲಾಗಿತ್ತು. ವ್ಯಾಪಾರದಲ್ಲಿ ಹಾಗೂ ವ್ಯವಹಾರಗಳಲ್ಲಿ ವಿವಿಧ ಶ್ರೇಣಿಗಳಿದ್ದವು. ಚಾಲುಕ್ಯರ ಕಾಲದಲ್ಲಿ ಸಾಹಿತ್ಯಕ್ಕೆ ಪ್ರೋತ್ಸಾಹ ದೊರಕಿತು. ಜೈನ ವಿದ್ವಾಂಸರ ನೆರವಿನಿಂದ ಕನ್ನಡ ಸಾಹಿತ್ಯವು ಅಭಿವೃದ್ಧಿ ಹೊಂದಿತು. ರನ್ನನು ಬರೆದ 'ಗದಾಯುದ್ಧ' (ಸಾಹಸಭೀಮ ವಿಜಯ), ದುರ್ಗಸಿಂಹನ 'ಪಂಚತಂತ್ರ', ಬಿಲ್ಹಣನ 'ವಿಕ್ರಮಾಂಕದೇವ ಚರಿತ', ನಯಸೇನನ 'ಧರ್ಮಾಮೃತ' ಹಾಗೂ ವಿಜ್ಞಾನೇಶ್ವರನು ಬರೆದ ಕಾನೂನು ಗ್ರಂಥ 'ಮಿತಾಕ್ಷರ' ಮುಖ್ಯವಾದ ಗ್ರಂಥಗಳಾಗಿವೆ. ರಾಜ ಮೂರನೆಯ

© KTBS Not to be republished

ಸೋಮೇಶ್ವರನು ಬರೆದ 'ಮಾನಸೋಲ್ಲಾಸ' ಸಂಸ್ಕೃತ ವಿಶ್ವಕೋಶವೆನಿಸಿದೆ. ಚಾಲುಕ್ಯರ ಕಾಲದ ವಿಶಿಷ್ಟ ಕೊಡುಗೆ ವಚನ ಸಾಹಿತ್ಯ. ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ಮಾಚಯ್ಯ ಮುಂತಾದವರು ಗಣ್ಯ ವಚನಕಾರರಾಗಿದ್ದರು.

*ಗದ್ಯಾಣ, ಪಣ, ದ್ರುಮ್ಮ, ಪೊನ್, ಸುವರ್ಣ ಎಂಬ ನಾಣ್ಯಗಳನ್ನು ಟಂಕಿಸಲು ಲಕ್ಕುಂಡಿ ಹಾಗೂ ಸೂಡಿ ಎಂಬಲ್ಲಿ ಟಂಕಸಾಲೆಗಳನ್ನು ಸ್ಥಾಪಿಸಿದರು.*

ಸಾಹಿತ್ಯಾಭಿಮಾನಿಗಳಾದ ಚಾಳುಕ್ಯರು ಕಲಾರಾಧಕರಾಗಿದ್ದರು. ಕಲೆಯ ಕ್ಷೇತ್ರದಲ್ಲಿ ನೀಡಿದ ಕೊಡುಗೆ ಅಪಾರ. ಲಕ್ಕುಂಡಿಯ ಕಾಶಿವಿಶ್ವೇಶ್ವರ, ಇಟಗಿಯ ಮಹಾದೇವ ದೇವಾಲಯ, ಕುರುವತ್ತಿಯ ಮಲ್ಲಿಕಾರ್ಜುನ ಮಂದಿರ, ಗದಗಿನ ತ್ರಿಕೂಟೇಶ್ವರ ಮುಂತಾದ ಪ್ರಸಿದ್ಧ ದೇವಾಲಯಗಳು ಇವರ ಕೊಡುಗೆಯಾಗಿವೆ. ಈ ವಂಶದ ಅರಸರು ನೂರಾರು ದೇವಾಲಯಗಳನ್ನು ನಿರ್ಮಿಸಿ ಕನ್ನಡ ನಾಡನ್ನು ಕಲೆಗಳ ಬೀಡನ್ನಾಗಿ ಪರಿವರ್ತಿಸುವಲ್ಲಿ ಅಮೂಲ್ಯ ಕೊಡುಗೆ ನೀಡಿದ್ದಾರೆ.

ಇವರ ಕಾಲದಲ್ಲಿ ಸಂಗೀತ ನೃತ್ಯಗಳೂ ಅಭಿವೃದ್ಧಿಗೊಂಡವು. ಸಂಗೀತ, ನೃತ್ಯ ಸೇವೆಗೆ ಕಲಾವಿದರನ್ನು ನೇಮಿಸುತ್ತಿದ್ದರು. ಮಹಾರಾಣಿ ಚಂದ್ರಲೇಖೆಯು ಅನೇಕ ಸಂಗೀತ ವಿದ್ವಾಂಸರಿಗೆ ಮತ್ತು ನೃತ್ಯಗಾರ್ತಿಯರಿಗೆ ಆಶ್ರಯ ನೀಡಿದ್ದಳು. ಸಂಗೀತ, ನೃತ್ಯ, ಕಲೆ, ಆಭರಣ ಮುಂತಾದ ವಿಷಯಗಳು 'ಮಾನಸೋಲ್ಲಾಸ' ಹಾಗೂ ಎರಡನೆಯ ಜಗದೇಕಮಲ್ಲನ 'ಸಂಗೀತ ಚೂಡಾಮಣಿ' ಗ್ರಂಥಗಳಲ್ಲಿ ವ್ಯಕ್ತವಾಗಿವೆ.



**ಕಾಶೀವಿಶ್ವೇಶ್ವರ ದೇವಾಲಯ, ಲಕ್ಕುಂಡಿ**

©KTBS Not to be republished

# ಅಭ್ಯಾಸಗಳು

**I. ಬಿಟ್ಟ ಸ್ಥಳಗಳಲ್ಲಿ ಭರ್ತಿ ಮಾಡಿ.**

1. ರಾಷ್ಟ್ರಕೂಟ ವಂಶದ ಸಂಸ್ಥಾಪಕ ______________ .
2. ರಾಷ್ಟ್ರಕೂಟರ ಅವನತಿಗೆ ಕಾರಣನಾದ ಕಲ್ಯಾಣದ ಚಾಲುಕ್ಯರ ಅರಸ ______________ .
3. 'ಕವಿರಹಸ್ಯ' ಕೃತಿಯನ್ನು ಬರೆದವನು ______________ .
4. ಪೊನ್ನನು ರಚಿಸಿದ ಪ್ರಸಿದ್ಧ ಕಾವ್ಯ ______________ .
5. ಕಲ್ಯಾಣ ಚಾಳುಕ್ಯರ ಪ್ರಸಿದ್ಧ ದೊರೆ ______________ .
6. 'ಸಾಮಾಜಿಕ ಕ್ರಾಂತಿಯ ಹರಿಕಾರ' ಎಂದು ಕರೆಯಬಹುದಾದವರು______________ .

**II. ಕೆಳಕಂಡ ಪ್ರಶ್ನೆಗಳಿಗೆ ಸಂಕ್ಷೇಪವಾಗಿ ಉತ್ತರಿಸಿ.**

1. ರಾಷ್ಟ್ರಕೂಟರ ಆಡಳಿತ ವ್ಯವಸ್ಥೆ ಹೇಗಿತ್ತು?
2. ರಾಷ್ಟ್ರಕೂಟರ ಶೈಕ್ಷಣಿಕ ವ್ಯವಸ್ಥೆಯ ಬಗ್ಗೆ ಬರೆಯಿರಿ.
3. ಎಲ್ಲೋರದ ಕೈಲಾಸ ದೇವಸ್ಥಾನದ ಬಗ್ಗೆ ಬರೆಯಿರಿ.
4. ಕಲ್ಯಾಣ ಚಾಳುಕ್ಯರು ಸಾಹಿತ್ಯಕ್ಕೆ ಯಾವ ರೀತಿ ಉತ್ತೇಜನ ನೀಡಿದರು?

**III. ಚಟುವಟಿಕೆಗಳು.**

1. ರಾಷ್ಟ್ರಕೂಟರ ಕಾಲದ ದೇವಾಲಯಗಳಿಗೆ ಭೇಟಿ ನೀಡಿದ್ದ ಯಾರಾದರೂ ವಿದ್ಯಾರ್ಥಿಗಳು/ ಶಿಕ್ಷಕರುಗಳ ಜೊತೆ ವಿಷಯ ಹಂಚಿಕೊಳ್ಳುವುದು.
2. ಮಾನ್ಯಖೇಟ, ಎಲ್ಲೋರ ಯಾವುದಾದರೂ ಕೇಂದ್ರಗಳಿಗೆ ಒಂದು ಪ್ರವಾಸ ಏರ್ಪಡಿಸಿ.

**IV. ಯೋಜನೆಗಳು.**

1. ನಾಲ್ಕು ಗುಂಪುಗಳನ್ನು ಮಾಡಿ ಎಲ್ಲೋರದ ಸುಪ್ರಸಿದ್ಧ ಗುಹಾ ದೇವಾಲಯಗಳ ಬಗ್ಗೆ ಚರ್ಚೆ ಮಾಡಿ ಒಂದು ಪ್ರಬಂಧ ಬರೆಯಿರಿ.
2. ಮಾನ್ಯಖೇಟದ ಚಿತ್ರಗಳನ್ನು ಸಂಗ್ರಹಿಸಿ.
3. ಬಸವಣ್ಣನವರ ಜೀವನ ಚರಿತ್ರೆಯ ಬಗ್ಗೆ ಒಂದು ಪ್ರಬಂಧ ಬರೆಯಿರಿ.

©KTBS Not to be re published

*****

## ಅಧ್ಯಾಯ – 12

# ಚೋಳರು ಮತ್ತು ದ್ವಾರಸಮುದ್ರದ ಹೊಯ್ಸಳರು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಚೋಳ ಸಾಮ್ರಾಜ್ಯದ ವಿಸ್ತರಣೆ ಮತ್ತು ಅವರ ವಿವಿಧ ಕ್ಷೇತ್ರಗಳಿಗೆ ನೀಡಿದ ಕೊಡುಗೆಗಳು.*
- *ಹೊಯ್ಸಳ ಸಾಮ್ರಾಜ್ಯದ ಸ್ಥಾಪನೆ ಮತ್ತು ಧಾರ್ಮಿಕ, ಸಾಹಿತ್ಯದ ಹಾಗೂ ಕಲೆ, ವಾಸ್ತುಶಿಲ್ಪ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳು.*

## ಚೋಳರು (ಸಾ.ಶ. 850 – 1279)

ಇವರು ತಮಿಳುನಾಡಿನ ಪಲ್ಲವರ ನಂತರ ದಕ್ಷಿಣದಲ್ಲಿ 9ನೇ ಶತಮಾನದಿಂದ 13ನೆಯ ಶತಮಾನದವರೆಗೆ ತಮಿಳುನಾಡು, ಆಂಧ್ರ ಮತ್ತು ಕರ್ನಾಟಕದ ಅನೇಕ ಪ್ರದೇಶಗಳ ಮೇಲೆ ಹಿಡಿತ ಸಾಧಿಸಿ, ಭಾರತೀಯ ಸಂಸ್ಕೃತಿಯು ವಿದೇಶಗಳಲ್ಲಿ ಹರಡಲು ಕಾರಣವಾದರು. ಭವ್ಯ ದೇವಾಲಯಗಳನ್ನು ನಿರ್ಮಿಸಿದರು. 'ಬೃಹದೀಶ್ವರ' ದೇವಾಲಯ ಇವರ ಕೊಡುಗೆ. ತಮಿಳು ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿ ಪ್ರಸಿದ್ಧರಾದರು.



ಬೃಹದೀಶ್ವರ ದೇವಾಲಯ

©KTBS Not to be re published

ಚೋಳರು ಪಲ್ಲವರ ಆಶ್ರಯದಲ್ಲಿದ್ದು, ಆನಂತರ ಸ್ವತಂತ್ರರಾದವರು. ಸಂಗಮ್ ಸಾಹಿತ್ಯದ ಪ್ರಕಾರ ಕರಿಕಾಲ ಚೋಳನು ಈ ವಂಶದ ಮೂಲಪುರುಷ. ವಿಜಯಾಲಯ ಚೋಳ ರಾಜ್ಯವನ್ನು ಪುನರುಜ್ಜೀವನಗೊಳಿಸಿ ತಂಜಾವೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡನು.

ಚೋಳರ ಪ್ರಮುಖ ರಾಜ ಒಂದನೆಯ ರಾಜರಾಜ. ಶೂರ, ಶ್ರೇಷ್ಠ ಯೋಧ ಹಾಗೂ ದಕ್ಷ ಆಡಳಿತಗಾರನಾಗಿದ್ದನು. ಚೋಳ ರಾಜ್ಯದ ಶಿಲ್ಪಿಯಾಗಿ ಅದರ ತಳಹದಿಯನ್ನು ಭದ್ರಮಾಡಿ ತನ್ನ ರಾಜ್ಯವನ್ನು ವಿಸ್ತರಿಸಿದನು. ಚೇರರನ್ನು, ಗಂಗರನ್ನು ಮತ್ತು ಪಾಂಡ್ಯರನ್ನು ಸೋಲಿಸಿದನು. ನೌಕಾ ಸೈನ್ಯವನ್ನು ನಿರ್ಮಿಸಿ ಶ್ರೀಲಂಕಾವನ್ನು ವಶಪಡಿಸಿಕೊಂಡನು. ಮಲೇಶಿಯಾ, ಸಿಂಗಪುರಗಳಲ್ಲಿ ಇಂದಿಗೂ ತಮಿಳರ ಪ್ರಾಬಲ್ಯವನ್ನು ಗಮನಿಸಬಹುದು. ಅಲ್ಲದೆ ಅವರು ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪ್ರಭಾವಶಾಲಿಗಳಾಗಿರುವುದನ್ನು ನೀವು ಗಮನಿಸಬಹುದು. ಈ ಮೂಲಕ ಸಾಗರೋತ್ತರ ವಾಣಿಜ್ಯ ವ್ಯವಹಾರಗಳನ್ನು ಪ್ರಾರಂಭಿಸಿ ಇಂದಿಗೂ ಮುಂದುವರಿಸಿಕೊಂಡು ಬಂದಿದೆ. ಈತನು ಕಟ್ಟಿದ ತಂಜಾವೂರಿನ ಬೃಹದೀಶ್ವರ ದೇವಾಲಯವು ಅತ್ಯಂತ ಪ್ರಸಿದ್ಧವಾದುದು. ಮೂರನೆಯ ರಾಜೇಂದ್ರನ ಕಾಲದಲ್ಲಿ ಚೋಳ ರಾಜ್ಯವು ಕ್ಷೀಣಿಸಿ, ಪಾಂಡ್ಯರು ಮೇಲುಗೈ ಸಾಧಿಸಿದರು.

**ಚೋಳರ ಕೊಡುಗೆಗಳು**

ಚೋಳರು ಉತ್ತಮವಾದ ಹಾಗೂ ದಕ್ಷ ಆಡಳಿತ ವ್ಯವಸ್ಥೆಯನ್ನು ತಮ್ಮ ರಾಜ್ಯದಲ್ಲಿ ಏರ್ಪಡಿಸಿದ್ದರು. ರಾಜ್ಯವನ್ನು ಮಂಡಲಂ, ಕೊಟ್ಟಂಗಿ, ನಾಡು, ಕುರ್ರಂ ಅಥವಾ ಗ್ರಾಮ ಸಮುದಾಯ ಹಾಗೂ ತರ–ಕುರ್ರಂ ಎಂದು ವಿಭಾಗಿಸಲಾಗಿತ್ತು. ಪ್ರತಿ ಗ್ರಾಮದಲ್ಲೂ 'ಊರ್' ಎಂಬ ಪ್ರಜೆಗಳ ಸಭೆ ಇತ್ತು.

ಚೋಳರ ಆಳ್ವಿಕೆಯ ಪ್ರಮುಖ ಲಕ್ಷಣವೆಂದರೆ ಗ್ರಾಮದ ಸ್ವಯಮಾಧಿಪತ್ಯದ ಬೆಳವಣಿಗೆ. ಗ್ರಾಮ ಸಭೆಗಳು ಪ್ರಥಮ ಸಭೆಗಳಾಗಿದ್ದವು. ತರ–ಕುರ್ರಂ ಒಂದು ಹಳ್ಳಿ. ಪ್ರತಿ ಕುರ್ರಂಗೂ 'ಮಹಾಸಭಾ' ಎನ್ನುವ ಗ್ರಾಮಸಭೆ ಇದ್ದಿತು. ಇದನ್ನು 'ಪೆರುಂಗುರಿ' ಎಂದು, ಅದರ ಸದಸ್ಯರನ್ನು 'ಪೆರುಮಕ್ಕಳ್' ಎಂದು ಕರೆಯಲಾಗುತ್ತಿತ್ತು. ಸದಸ್ಯರನ್ನು ಚುನಾವಣೆ ಮೂಲಕ ಆರಿಸಲಾಗುತ್ತಿತ್ತು. ಸಂಸ್ಕೃತ ವಿದ್ವಾಂಸರು ಹಾಗೂ ಶ್ರೀಮಂತರು ಮಾತ್ರ ಈ ಚುನಾವಣೆಗೆ ಅರ್ಹರಾಗಿದ್ದರು.

ಭೂ ಆದಾಯದ ಆರನೆಯ ಒಂದು ಭಾಗವನ್ನು ಕಂದಾಯವನ್ನಾಗಿ ವಸೂಲಿ ಮಾಡುತ್ತಿದ್ದರು. ನೀರಾವರಿ ವ್ಯವಸ್ಥೆಗೆ ವಿಶೇಷ ಗಮನ ಕೊಟ್ಟಿದ್ದರು. ಅನೇಕ ಕೆರೆಗಳನ್ನು ಕಟ್ಟಿಸಿದ್ದರು. ಬೆಂಗಳೂರು ಬಳಿಯ ಬೆಳ್ಳಂದೂರು ಕೆರೆ ಇವರ ರಚನೆಯಾಗಿದೆ. ಗಂಗೈಕೊಂಡ ಚೋಳಪುರದಲ್ಲಿ ಒಂದು ವಿಶಾಲ ಸರೋವರವನ್ನು ಕಟ್ಟಿಸಿದರು.

ಚೋಳರು ಶೈವರಾಗಿದ್ದು, ಇವರು ಅನೇಕ ಶಿವಾಲಯಗಳನ್ನು ಕಟ್ಟಿಸಿದರು. ತಂಜಾವೂರಿನ ಬೃಹದೀಶ್ವರ ಮಂದಿರ 500 ಅಡಿ ಉದ್ದ, 250 ಅಡಿ ಅಗಲದ ವಿಶಾಲ ಪ್ರಾಕಾರದಲ್ಲಿದೆ. ಅದರ ಶಿಖರ 200 ಅಡಿ ಎತ್ತರವಾಗಿದೆ. ರಾಜೇಂದ್ರನು ಕಟ್ಟಿಸಿದ ಚೋಳೇಶ್ವರ (ಗಂಗೈಕೊಂಡ ಚೋಳಪುರ), ಚನ್ನಪಟ್ಟಣ ಹತ್ತಿರದ ಅಪ್ರಮೇಯ, ಬೆಂಗಳೂರು ಬಳಿ ಬೇಗೂರಿನ ಚೋಳೇಶ್ವರ, ಬಿನ್ನಮಂಗಲದ ಮುಕ್ತೇಶ್ವರ ಕರ್ನಾಟಕದಲ್ಲಿನ ಇವರ ದೇವಾಲಯಗಳಾಗಿವೆ. ದೇವಾಲಯಗಳು ಆರ್ಥಿಕ, ಸಾಂಸ್ಕೃತಿಕ ಕೇಂದ್ರಗಳಾಗಿ ಕೆಲಸ ಮಾಡುತ್ತಿದ್ದವು. ಇವರ ಕಾಲದಲ್ಲಿನ ಶಿವ, ಗಣಪತಿ, ವಿಷ್ಣು, ದುರ್ಗೆ, ಕಾರ್ತಿಕೇಯರ ಮೂರ್ತಿಗಳು ಪ್ರಸಿದ್ಧವಾದವು.


ಚೋಳರು ವಿದ್ಯೆಗೆ ಪ್ರೋತ್ಸಾಹ ನೀಡಲು ಅನೇಕ ಅಗ್ರಹಾರಗಳನ್ನು ಸ್ಥಾಪಿಸಿದರು. ಉತ್ತರ ಮೇರೂರು ಅಗ್ರಹಾರ ಇದರಲ್ಲಿ ಪ್ರಸಿದ್ಧವಾದದು. ದೇವಾಲಯಗಳು ವಿದ್ಯಾಕೇಂದ್ರಗಳಾಗಿದ್ದವು. ಇವು ಧಾರ್ಮಿಕ ಚಟುವಟಿಕೆಗಳ ಕೇಂದ್ರಗಳಾಗಿದ್ದವು. ತಮಿಳು ಸಾಹಿತ್ಯದ ಸರ್ವತೋಮುಖ ಪ್ರಗತಿಯ ಕಾಲವಿದು.

©KTBS Not to be republished

ಕಂಬ ರಚಿಸಿದ ರಾಮಾಯಣ, ಸೆಕ್ಕಿಲರ್ ರಚಿಸಿದ ಪೆರಿಯ ಪುರಾಣ, ತಿರುಕ್ಕಾದೇವನ ಜೀವಕ ಚಿಂತಾಮಣಿ ಮುಂತಾದವುಗಳು ಪ್ರಮುಖವಾಗಿವೆ.

## ದ್ವಾರಸಮುದ್ರದ ಹೊಯ್ಸಳರು (ಸಾ.ಶ. 984 – ಸಾ.ಶ. 1346)

ಚಾಲುಕ್ಯರು ಕ್ಷೀಣಿಸಿದ ನಂತರ ಕರ್ನಾಟಕದಲ್ಲಿ ತಲೆ ಎತ್ತಿದವರು ಹೊಯ್ಸಳರು. ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ ಸೊಸೆವೂರು (ಈಗಿನ ಅಂಗಡಿ) ಹಳ್ಳಿಯ ಬಳಿ ಈ ಮನೆತನದ ಮೂಲ ಪುರುಷ ಸಳನು ಜೈನಮುನಿಯಾದ ಸುದತ್ತ ಮುನಿಯ ಆದೇಶದಂತೆ ಹುಲಿಯೊಡನೆ ಕಾದಾಡಿ ಅದನ್ನು ಕೊಂದು 'ಹೊಯ್‌ಸಳ' ಎನಿಸಿಕೊಂಡು ಈ ವಂಶದ ಸ್ಥಾಪಕನಾದನು. ಇವರು ಸಾಹಿತ್ಯ, ಶಿಕ್ಷಣ, ಕಲೆ ಮತ್ತು ವಾಸ್ತುಶಿಲ್ಪ, ನೀರಾವರಿ ಇವೆಲ್ಲಕ್ಕೂ ವಿಶೇಷವಾಗಿ ಕೊಡುಗೆ ನೀಡಿದವರು.



ಹೊಯ್ಸಳರ ಲಾಂಛನ



ರಾಮಾನುಜಾಚಾರ್ಯರು

ನೃಪಕಾಮ, ಎರೆಯಂಗ, ಬಲ್ಲಾಳರ ನಂತರ ಹೊಯ್ಸಳರ ಪ್ರಮುಖ ರಾಜನಾದವನು ವಿಷ್ಣುವರ್ಧನ. ಈ ವಂಶದ ಶ್ರೇಷ್ಠ ದೊರೆಯಾದ ಈತನು ಚೋಳರಿಂದ ಗಂಗವಾಡಿಯನ್ನು ಗೆದ್ದು 'ತಲಕಾಡುಗೊಂಡ' ಎಂಬ ಬಿರುದು ಪಡೆದನು. ಈ ವಿಜಯದ ನೆನಪಿಗಾಗಿ ತಲಕಾಡಿನಲ್ಲಿ ಕೀರ್ತಿನಾರಾಯಣ ದೇವಾಲಯವನ್ನು ಹಾಗೂ ಬೇಲೂರಿನ ಚೆನ್ನಕೇಶವ (ವಿಜಯ ನಾರಾಯಣ) ದೇವಾಲಯವನ್ನು ಕಟ್ಟಿಸಿದನು. ರಾಜ್ಯವನ್ನು ವಿಸ್ತರಿಸಲು ಪ್ರಯತ್ನಿಸಿ ಚಾಲುಕ್ಯರ 6ನೇ ವಿಕ್ರಮಾದಿತ್ಯನಿಂದ ಸೋತನು.

ರಾಮಾನುಜಾಚಾರ್ಯರು ತಮ್ಮ ವಿಶಿಷ್ಟಾದ್ವೈತ ತತ್ವವನ್ನು ಚೋಳ ರಾಜ್ಯದಲ್ಲಿ ಪ್ರಚಾರ ಮಾಡಲಾಗದೇ ಬಿಟ್ಟಿದೇವನ (ವಿಷ್ಣುವರ್ಧನ) ಆಶ್ರಯದಲ್ಲಿ ಬಂದು ನೆಲೆ ನಿಂತು ಕರ್ನಾಟಕದಾದ್ಯಂತ ಪ್ರಚಾರ ಮಾಡಿದರು. ಮೂರನೇ ಬಲ್ಲಾಳನ ಕಾಲದಲ್ಲಿ ಈ ರಾಜ್ಯವು ಕ್ಷೀಣಿಸಿತು. ಇದೇ ವೇಳೆಯಲ್ಲೇ ವಿಜಯನಗರ ಸಾಮ್ರಾಜ್ಯವು ಅಧಿಕಾರಕ್ಕೆ ಬಂದಿತು.

### ಹೊಯ್ಸಳರ ಕೊಡುಗೆಗಳು

ಹೊಯ್ಸಳರು ಪ್ರಾಂತಾಡಳಿತ ವ್ಯವಸ್ಥೆಯನ್ನು ಜಾರಿಗೊಳಿಸಿದ್ದರು. ಆಡಳಿತವನ್ನು ಯುವರಾಜ, ರಾಣಿ ಮತ್ತು ಅರಸು ಮನೆತನದವರಿಗೆ ಕೊಡಲಾಗುತ್ತಿತ್ತು. ನಾಡು ಮತ್ತು ವಿಷಯಗಳ ಆಡಳಿತವನ್ನು ಅಧಿಕಾರಿಗಳು ನೋಡಿಕೊಳ್ಳುತ್ತಿದ್ದರು. ಹಳ್ಳಿಗಳಲ್ಲಿ ಗೌಡ, ಶಾನುಭೋಗ, ತಳವಾರ ಮುಂತಾದ ಸರಕಾರದ ಪ್ರತಿನಿಧಿಗಳಿರುತ್ತಿದ್ದರು.


ಕೃಷಿಗೆ ಬೆಂಬಲ ಸೂಚಿಸುವ ಸಲುವಾಗಿ ಹೊಯ್ಸಳರು ಶಾಂತಿಸಾಗರ, ಬಲ್ಲಾಳರಾಯ ಸಮುದ್ರ, ವಿಷ್ಣು ಸಮುದ್ರ ಮುಂತಾದ ನೂರಾರು ಕೆರೆಗಳನ್ನು ಕಟ್ಟಿಸಿದರು. ಪಟ್ಟಣಗಳಲ್ಲಿ ಕಸುಬುದಾರರ, ವೈಣಿಕರ ಶ್ರೇಣಿಗಳಿದ್ದವು. ಭೂಕಂದಾಯವು ರಾಜ್ಯದ ಬಹುಮುಖ್ಯ ಆದಾಯವಾಗಿತ್ತು. ಸಮಾಜದ ವೈಶಿಷ್ಟ್ಯತೆ ಎಂದರೆ ಅರಸನಿಗೆ 'ಗರುಡ'ರೆಂಬ ವಿಶೇಷ ಅಂಗರಕ್ಷಕ ದಳವಿರುತ್ತಿತ್ತು. ಅವರು ರಾಜನು ಮರಣ ಹೊಂದಿದಾಗ ತಾವೂ ಪ್ರಾಣತ್ಯಾಗ ಮಾಡುತ್ತಿದ್ದರು.

©KTBS Not to be republished

ಹೊಯ್ಸಳರ ಕಾಲದಲ್ಲಿ ಜೈನ, ಬೌದ್ಧ, ಶೈವ, ವೈಷ್ಣವ, ವೀರಶೈವ, ಶ್ರೀ ವೈಷ್ಣವ ಮತಗಳು ಪ್ರಚಲಿತವಾಗಿದ್ದವು ಅಗ್ರಹಾರಗಳು, ಮಠಗಳು, ದೇವಾಲಯಗಳು ಶಿಕ್ಷಣದ ಕೇಂದ್ರಗಳಾಗಿದ್ದವು. ಮೇಲುಕೋಟೆ, ಸಾಲಗಾಮೆ, ಅರಸೀಕೆರೆ ಮುಂತಾದವು ಗಣ್ಯ ಶಿಕ್ಷಣ ಕೇಂದ್ರಗಳಾಗಿದ್ದವು. ವೇದ, ವೇದಶಾಸ್ತ್ರ, ಕನ್ನಡ, ಸಂಸ್ಕೃತಗಳ ಅಧ್ಯಯನವು ನಡೆಯುತ್ತಿತ್ತು.

ಕನ್ನಡ ಸಾಹಿತ್ಯವು ವಿಪುಲವಾಗಿ ಬೆಳೆಯಿತು. ರುದ್ರಭಟ್ಟನು 'ಜಗನ್ನಾಥ ವಿಜಯ'ವನ್ನು ಕವಿಚಕ್ರವರ್ತಿ ಜನ್ನನು 'ಯಶೋಧರ ಚರಿತೆ'ಯನ್ನು, ಹರಿಹರನು 'ಗಿರಿಜಾ ಕಲ್ಯಾಣ' ಎಂಬ ಚಂಪೂಕಾವ್ಯವನ್ನು, ರಾಘವಾಂಕನು 'ಹರಿಶ್ಚಂದ್ರ ಕಾವ್ಯ' ಹಾಗೂ ಕೇಶೀರಾಜನು 'ಶಬ್ದಮಣಿ ದರ್ಪಣ'ವನ್ನು ರಚಿಸಿದ್ದಾರೆ. ಸಂಸ್ಕೃತದಲ್ಲೂ ರಾಮಾನುಜಾಚಾರ್ಯರ ಶ್ರೀಭಾಷ್ಯ, ಪರಾಶರಭಟ್ಟರ ಶ್ರೀ ಗುಣ ರತ್ನಕೋಶ ಮುಂತಾದವುಗಳು ರಚಿತವಾದವು.

ಹೊಯ್ಸಳರ ಶಿಲ್ಪಕಲೆ ಜಗದ್ವಿಖ್ಯಾತವಾದುದು. ಬಳಪದ ಮೃದು ಕಲ್ಲಿನಿಂದ ಹೊಯ್ಸಳರು ಅಸಂಖ್ಯಾತ ದೇವಾಲಯಗಳನ್ನು ರಚಿಸಿದರು. ಇವರ ದೇವಾಲಯಗಳಲ್ಲಿ ನಕ್ಷತ್ರಾಕಾರದ ಗರ್ಭಗೃಹ, ಉಪಪೀಠ (ಜಗತಿ), ಭಿತ್ತಿ ಅಲಂಕರಣ, ಶಿಖರ ಹಾಗೂ ಕಂಬಗಳೆಂಬ ಐದು ಲಕ್ಷಣಗಳನ್ನು ನೋಡಬಹುದು.



**ಬೇಲೂರಿನ ಚೆನ್ನಕೇಶವ ದೇವಾಲಯ**


ಬೇಲೂರಿನ ಚೆನ್ನಕೇಶವ ದೇವಾಲಯದ ಕಂಬಗಳ ಚಾಚುಪೀಠಗಳಲ್ಲಿ ಸುಂದರ ಮದನಿಕೆಯರ ವಿಗ್ರಹಗಳಿವೆ. ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯವನ್ನು ದಂಡನಾಯಕ ಕೇತಮಲ್ಲನು ಕಟ್ಟಿಸಿದನು. ಸೋಮದಂಡ ನಾಯಕನು ಕಟ್ಟಿಸಿದ ಸೋಮನಾಥಪುರದ ಕೇಶವ ದೇವಾಲಯವು ಪ್ರಸಿದ್ಧವಾದುದು. ಇದಲ್ಲದೆ ತಲಕಾಡು, ಅರಸೀಕೆರೆ, ಗೋವಿಂದನಹಳ್ಳಿ, ದೊಡ್ಡಗದ್ದವಳ್ಳಿ, ಭದ್ರಾವತಿ, ಶ್ರವಣಬೆಳಗೊಳ ಮುಂತಾದೆಡೆ ಅನೇಕ ದೇವಾಲಯಗಳೂ, ಬಸದಿಗಳೂ ಇವೆ. ಇವೆಲ್ಲವೂ ಅತಿ ಸೂಕ್ಷ್ಮ ಕುಸುರಿ ಕೆತ್ತನೆಗೆ ಹೆಸರುವಾಸಿಯಾಗಿವೆ. ವಾಸ್ತುಶಿಲ್ಪಗಳಲ್ಲಿ ಅಳಿಸಲಾಗದ ಪ್ರಭಾವ ಬೀರಿವೆ. ಹೊಯ್ಸಳರ ಕಾಲದಲ್ಲಿ ದಾಸೋಜ, ಚಾವಣ, ಜಕಣ, ಮಲ್ಲತಮ್ಮ, ಕೇದಾರೋಜ ಮುಂತಾದ ಖ್ಯಾತ ಶಿಲ್ಪಿಗಳನ್ನು ಹೆಸರಿಸಬಹುದು.



ಶಿಲಾಬಾಲಿಕೆ

©KTBS Not to be re-published

ಸರ್ವಧರ್ಮ ಸಮನ್ವಯ ಭಾವನೆಯನ್ನು ಬೇಲೂರಿನ ದೇವಾಲಯದಲ್ಲಿರುವ ಕೆಳಕಂಡ ಪದ್ಯವು ಸಾರುತ್ತದೆ.



ಯಂ ಶೈವಾಸ್ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ
ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ
ಅರ್ಹಶ್ಚೇತಿ ಹ ಜೈನಶಾಸನಮತಿಃ ಕರ್ಮೇತಿ ಮೀಮಾಂಸಕಾಃ
ಸೋಽಯಂ ವೋ ವಿದಧಾತು ವಾಂಛಿತಫಲಂ ಶ್ರೀ ಕೇಶವೇಶಸ್ಸದಾ ||

ಶೈವರು ಶಿವನೆಂದು, ವೇದಾಂತಿಗಳು ಬ್ರಹ್ಮವೆಂದು, ಬೌದ್ಧರು ಬುದ್ಧನೆಂದು, ಪ್ರಮಾಣದಲ್ಲಿ ಸಮರ್ಥರಾದ ನೈಯಾಯಿಕರು ಕರ್ತೃವೆಂದು, ಜೈನರು ಅರ್ಹನೆಂದು, ಮೀಮಾಂಸಕರು ಕರ್ಮವೆಂದು ಯಾವನನ್ನು ಉಪಾಸನೆ ಮಾಡುವರೋ ಅವನೇ ಆದ—ಈ ಶ್ರೀ ಕೇಶವನೆಂಬ ಈಶನು ನಿಮಗೆ ಇಷ್ಟಾರ್ಥವನ್ನು ಪಾಲಿಸಲಿ.

## ಅಭ್ಯಾಸಗಳು

**I. ಬಿಟ್ಟ ಸ್ಥಳಗಳಲ್ಲಿ ಭರ್ತಿ ಮಾಡಿರಿ.**

1. ಚೋಳರ ರಾಜಧಾನಿ ________________ .
2. ಚೋಳರ ಕಾಲದಲ್ಲಿದ್ದ ಪ್ರತಿ ಗ್ರಾಮಗಳ ಪ್ರಜಾಪ್ರತಿನಿಧಿಗಳ ಸಭೆಗೆ ________________ ಎನ್ನುತ್ತಿದ್ದರು.

3. ಅತ್ಯಂತ ಪ್ರಸಿದ್ಧವಾದ ಚೋಳ ವಿದ್ಯಾಕೇಂದ್ರ ಅಥವಾ ಅಗ್ರಹಾರ ______________ ಆಗಿತ್ತು.

4. ಚೋಳರು ಕಟ್ಟಿಸಿದ ಬೆಂಗಳೂರು ಬಳಿ ಇರುವ ಬೇಗೂರಿನ ದೇವಾಲಯ______________ .

5. ಹೊಯ್ಸಳರ ಕಾಲದ ಅಂಗರಕ್ಷಕ ಪಡೆ ______________ .

6. ರಾಘವಾಂಕನು ರಚಿಸಿದ ಕಾವ್ಯ ______________ .

**II. ಕೆಳಕಂಡ ಪ್ರತಿ ಪ್ರಶ್ನೆಗೂ ಸಂಕ್ಷೇಪವಾಗಿ ಉತ್ತರಿಸಿ.**

1. ಚೋಳ ಸಾಮ್ರಾಜ್ಯದ ಶಿಲ್ಪಿ ಯಾರು?
2. ಚೋಳರ ಆಳ್ವಿಕೆಯ ಪ್ರಮುಖ ಲಕ್ಷಣಗಳ ಬಗ್ಗೆ ಬರೆಯಿರಿ.
3. ಹೊಯ್ಸಳರು ಸಾಹಿತ್ಯಕ್ಕೆ ಯಾವ ರೀತಿ ಪ್ರೋತ್ಸಾಹ ನೀಡಿದ್ದರು ಎಂಬುದನ್ನು ತಿಳಿಸಿ.

**III. ಚಟುವಟಿಕೆಗಳು.**

1. ನಿಮಗೆ ಹತ್ತಿರವಿರುವ ಯಾವುದಾದರೂ ಒಂದು ದೇವಾಲಯದ ಭೇಟಿಯ ಬಗ್ಗೆ ತರಗತಿಯಲ್ಲಿ ಚರ್ಚಿಸಿ.
2. ಬೇಲೂರಿನ ಶಿಲಾಬಾಲಿಕೆ ಶಿಲ್ಪಗಳ ಬಗ್ಗೆ ನಿಮ್ಮ ಉಪಾಧ್ಯಾಯರಿಂದ ಹೆಚ್ಚು ತಿಳಿದುಕೊಳ್ಳಿ.

**IV. ಯೋಜನೆಗಳು.**

1. ಬೇಲೂರು – ಹಳೇಬೀಡು ಸ್ಥಳಗಳಿಗೆ ಭೇಟಿ ನೀಡಿ ಅಲ್ಲಿನ ವಿಶೇಷತೆಗಳಿಗೆ ಸಂಬಂಧಿಸಿದಂತೆ ಪ್ರಬಂಧ ಬರೆಯಿರಿ.
2. ಹೊಯ್ಸಳ ಕಲೆಯ ಬಗ್ಗೆ ವಿವರವಾಗಿ ಓದಿ.

*****

©KTBS Not to be re published

## ಅಧ್ಯಾಯ – 3

# ಮಾನವ ಹಕ್ಕುಗಳು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಮಾನವ ಹಕ್ಕುಗಳ ಅರ್ಥ ಮತ್ತು ಬೆಳವಣಿಗೆ.*
- *ಮಾನವ ಹಕ್ಕುಗಳ ಘೋಷಣೆ.*
- *ಮಾನವ ಹಕ್ಕುಗಳು ಮತ್ತು ಭಾರತ ಸಂವಿಧಾನ.*
- *ಮಾನವ ಹಕ್ಕುಗಳ ಅನುಷ್ಠಾನ ಮಾರ್ಗಗಳು.*

ಮಾನವ ಹಕ್ಕುಗಳ ಪರಿಕಲ್ಪನೆ ನಾಗರಿಕತೆಯ ಬೆಳವಣಿಗೆಯೊಂದಿಗೆ ಉಗಮವಾಗಿದೆ. ಇದು ಮಾನವನ ಅಭಿವೃದ್ಧಿ ಮತ್ತು ಶಾಂತಿ ಹಾಗೂ ಸಹಬಾಳ್ವೆಯ ಜೀವನ ನಿರ್ವಹಣೆಗೆ ಅಗತ್ಯವಾಗಿದೆ. ಹಕ್ಕುಗಳು ಪ್ರಜಾಪ್ರಭುತ್ವ ರಾಷ್ಟ್ರದ ಆಧಾರಸ್ತಂಭಗಳಾಗಿರುತ್ತವೆ. ಶ್ರೇಷ್ಠ ರಾಜಕೀಯ ಚಿಂತಕರಾದ ಪ್ರೊ. ಎಚ್.ಜೆ.ಲಾಸ್ಕಿರವರು ಒಂದು ರಾಷ್ಟ್ರವನ್ನು ಅಲ್ಲಿನ ಮಾನವ ಹಕ್ಕುಗಳ ಮೂಲಕ ಗುರುತಿಸಬೇಕೆಂದು ತಿಳಿಸಿದ್ದಾರೆ. ಮಾನವ ಹಕ್ಕುಗಳಿಂದ ಪ್ರತಿಯೊಬ್ಬರು ಉತ್ತಮ ಜೀವನ ನಡೆಸಲು ಸಾಧ್ಯವಾಗುತ್ತದೆ. ಇದರಿಂದ ಉತ್ತಮ ಸಮಾಜ ನಿರ್ಮಾಣವಾಗಲು ಸಹಕಾರಿಯಾಗುತ್ತದೆ. ಆದ್ದರಿಂದ ವಿಶ್ವಸಂಸ್ಥೆಯು ಮಾನವ ಹಕ್ಕುಗಳನ್ನು ಘೋಷಿಸಿ, ಅವುಗಳನ್ನು ರಕ್ಷಿಸುವುದು ಪ್ರತಿಯೊಂದು ರಾಷ್ಟ್ರಗಳ ಆಡಳಿತ ವ್ಯವಸ್ಥೆಯ ಹೊಣೆಗಾರಿಕೆ ಎಂದು ಸ್ಪಷ್ಟಪಡಿಸಿದೆ.

### ಮಾನವ ಹಕ್ಕುಗಳ ಅರ್ಥ ಮತ್ತು ಬೆಳವಣಿಗೆ

ಪ್ರತಿಯೊಬ್ಬ ಮಾನವನು ಗೌರವ ಮತ್ತು ಘನತೆಯಿಂದ ಬದುಕಲು ಮಾನವ ಹಕ್ಕುಗಳು ಅಗತ್ಯವಾಗಿರುತ್ತವೆ. ಮಾನವನ ಸರ್ವತೋಮುಖ ಅಭಿವೃದ್ಧಿಗೆ ಅಗತ್ಯವಾದ ಅಂಶಗಳೇ ಮಾನವನ ಹಕ್ಕುಗಳಾಗಿರುತ್ತವೆ.

ಮಾನವನ ಹಕ್ಕುಗಳ ಮೂಲವನ್ನು ಪ್ರಾಚೀನ ಗ್ರೀಕ್ ಮತ್ತು ರೋಮನ್ ನಗರ ರಾಜ್ಯಗಳಾದ ಅಥೆನ್ಸ್ ಮತ್ತು ಸ್ಪಾರ್ಟಾಗಳಲ್ಲಿ ಗುರುತಿಸಲಾಗುತ್ತದೆ. ಸಾಕ್ರೆಟೀಸ್, ಪ್ಲೇಟೋ ಮತ್ತು ಅರಿಸ್ಟಾಟಲ್‌ರ ಚಿಂತನೆಗಳಲ್ಲಿ ರಾಜ್ಯ ಮತ್ತು ಜನತೆಯ ನಡುವಿನ ಸಂಬಂಧಗಳ ಬಗ್ಗೆ ವಿಶ್ಲೇಷಿಸುವಾಗ ವ್ಯಕ್ತಿಯ ಹಕ್ಕುಗಳನ್ನು ಕುರಿತು ಚರ್ಚಿತವಾಗಿರುವುದನ್ನು ಗುರುತಿಸಲಾಗಿದೆ.

### ಮ್ಯಾಗ್ನಕಾರ್ಟ (ಸಾ.ಶ. 1215)

ಮ್ಯಾಗ್ನಕಾರ್ಟ ಅಥವಾ ಮಹಾಸನ್ನದು ಇಂಗ್ಲಿಷ್ ಸಾಂವಿಧಾನಿಕ ಕಾನೂನುಗಳ ರಚನೆಯ ಮೇಲೆ ಪ್ರಭಾವ ಬೀರಿರುವ ಐತಿಹಾಸಿಕ ಮಹತ್ವಪೂರ್ಣವಾದ ಸನ್ನದು ಆಗಿದೆ. ಸಾ.ಶ. 1215ರಲ್ಲಿ ಇಂಗ್ಲೆಂಡಿನ ರಾಜ ಜಾನ್‌ನು ಅನೇಕ ಪ್ರಾಚೀನ ನಿಯಮಗಳನ್ನು ಮತ್ತು ಸಂಪ್ರದಾಯಗಳನ್ನು ಉಲ್ಲಂಘಿಸಿದನು. ಇದರಿಂದಾಗಿ ಪ್ರಜೆಗಳು ತಮ್ಮ ಹಕ್ಕುಗಳನ್ನು ನೀಡುವಂತೆ ಹೋರಾಟ ಮಾಡಿದರು. ಇದರ ಪರಿಣಾಮವಾಗಿ ರಾಜನು ಮ್ಯಾಗ್ನಕಾರ್ಟಗೆ ಸಹಿ ಮಾಡಿದನು. ಇದರಿಂದಾಗಿ ಚರ್ಚ್ ಸರ್ಕಾರದ ಮಧ್ಯಪ್ರವೇಶದಿಂದ ಮುಕ್ತವಾಯಿತು. ಎಲ್ಲ ಪ್ರಜೆಗಳು ಸ್ವಂತ ಹಾಗೂ ಪಿತ್ರಾರ್ಜಿತ ಆಸ್ತಿ ಹೊಂದುವ ಹಕ್ಕನ್ನು ಪಡೆದುಕೊಂಡರು. ಕಾನೂನಿನ ಮುಂದೆ ಸಮಾನತೆಯ ತತ್ವವನ್ನು ಪ್ರತಿಪಾದಿಸಲಾಯಿತು. ಮ್ಯಾಗ್ನಕಾರ್ಟ ಆಧುನಿಕ ಪ್ರಜಾಪ್ರಭುತ್ವ ಬೆಳವಣಿಗೆಯಲ್ಲಿ ಒಂದು ಮಹತ್ವದ ಕಾನೂನಾತ್ಮಕ ದಾಖಲೆಯಾಗಿದೆ.

©KTBS Not to be republished

ವ್ಯಕ್ತಿಯ ನೈಸರ್ಗಿಕ ಹಕ್ಕುಗಳ ಕುರಿತು ಜಾನ್‌ಲಾಕ್ ಮೊದಲ ಬಾರಿಗೆ ವ್ಯವಸ್ಥಿತವಾದ ಚಿಂತನೆಯನ್ನು ಮಾಡಿದರು. ಅವರ ಪ್ರಕಾರ ವ್ಯಕ್ತಿಗೆ ಹಕ್ಕುಗಳು ಯಾರಿಂದಲೂ ನೀಡಲ್ಪಟ್ಟವುಗಳಲ್ಲ. ಪ್ರತಿಯೊಬ್ಬ ವ್ಯಕ್ತಿಯು ಹುಟ್ಟಿನಿಂದಲೇ ಜೀವಿಸುವ ಮತ್ತು ಸ್ವಾಂತಂತ್ರ್ಯದ ಹಕ್ಕುಗಳನ್ನು ಪಡೆದಿರುತ್ತಾನೆ. ಇದರಿಂದಾಗಿ ವ್ಯಕ್ತಿಯ ಹಕ್ಕುಗಳಿಗೆ ಪ್ರಾಮುಖ್ಯತೆ ಹೆಚ್ಚಾಯಿತು. ಇದಕ್ಕೆ ಪೂರಕವಾಗಿ 1688ರಲ್ಲಿ ಇಂಗ್ಲೆಂಡಿನಲ್ಲಿ ನಡೆದ ರಕ್ತರಹಿತ ಕ್ರಾಂತಿಯ ಪ್ರತಿಫಲವಾಗಿ 1689ರಲ್ಲಿ 'ಬಿಲ್ ಆಫ್ ರೈಟ್ಸ್' ಜಾರಿಗೊಳಿಸಲಾಯಿತು. ಇದರಲ್ಲಿ ಮೊದಲ ಬಾರಿಗೆ ಶಾಸನ ರೂಪದಲ್ಲಿ ಮಾನವ ಹಕ್ಕುಗಳಿಗೆ ಭದ್ರತೆಯನ್ನು ನೀಡಲಾಯಿತು.

ಜಾನ್‌ಲಾಕ್, ರೂಸೋ ಹಾಗೂ ಮಾಂಟೆಸ್ಕ್ಯೂ ಚಿಂತಕರ ಚಿಂತನೆಗಳ ಪ್ರಭಾವದಿಂದಾಗಿ ಅಮೆರಿಕ ಮತ್ತು ಫ್ರಾನ್ಸ್‌ನಲ್ಲಿ ಕ್ರಾಂತಿಗಳು ನಡೆದವು. ಈ ಕ್ರಾಂತಿಗಳ ಪ್ರತಿಫಲವಾಗಿ ಅಮೆರಿಕ ಸ್ವಾತಂತ್ರ್ಯದ ಘೋಷಣೆಯಾಯಿತು. ಅಮೆರಿಕ ಸಂವಿಧಾನದ ಮೊದಲ ತಿದ್ದುಪಡಿಯೊಂದಿಗೆ 15 ಡಿಸೆಂಬರ್ 1791ರಂದು ಮಾನವ ಹಕ್ಕುಗಳ ಪಟ್ಟಿಯನ್ನು ಅಮೆರಿಕ ಸಂವಿಧಾನಕ್ಕೆ ಸೇರ್ಪಡೆ ಮಾಡಲಾಯಿತು. 1789ರಲ್ಲಿ ಫ್ರಾನ್ಸ್‌ನಲ್ಲಿಯ ಮಾನವ ಹಕ್ಕುಗಳ ಘೋಷಣೆಯು ಮಾನವ ಹಕ್ಕುಗಳ ಇತಿಹಾಸದಲ್ಲಿ ಒಂದು ದೊಡ್ಡ ಮೈಲಿಗಲ್ಲಾಗಿದೆ. ಇದರಿಂದ ಫ್ರಾನ್ಸ್‌ನಲ್ಲಿ ನಿರಂಕುಶ ಪ್ರಭುತ್ವವನ್ನು ತೆಗೆದುಹಾಕಲಾಯಿತು ಹಾಗೂ ಮೊದಲ ಫ್ರೆಂಚ್ ಗಣರಾಜ್ಯ ಸ್ಥಾಪನೆ ಮಾಡಲಾಯಿತು. ಈ ಘೋಷಣೆಯು ಎಲ್ಲಾ ಪ್ರಜೆಗಳಿಗೂ ಸ್ವಾತಂತ್ರ್ಯ, ಸಮಾನತೆ, ಆಸ್ತಿ ಮತ್ತು ಭದ್ರತೆ, ಇತ್ಯಾದಿ ಭರವಸೆಯನ್ನು ನೀಡಿತು.

ಮಾನವ ಹಕ್ಕುಗಳ ಬೆಳವಣಿಗೆ ಯಾವುದೇ ಒಂದು ಪ್ರದೇಶಕ್ಕೆ ಸೀಮಿತವಾಗಿರದೆ ವಿಶ್ವಸ್ವರೂಪವನ್ನು ಹೊಂದಿದೆ. ಮೊದಲ ಜಾಗತಿಕ ಮಹಾಯುದ್ಧದ ನಂತರ ಸ್ಥಾಪಿಸಲ್ಪಟ್ಟ ರಾಷ್ಟ್ರಗಳ ಸಂಘ (ಲೀಗ್ ಆಫ್ ನೇಷನ್ಸ್) ಮಾನವ ಹಕ್ಕುಗಳ ಸಂರಕ್ಷಣೆಗೆ ಪೂರಕವಾದ ಒಂದು ಕಾರ್ಯಸೂಚಿಯನ್ನು ಹೊಂದಿತ್ತು. ಎರಡನೇ ಜಾಗತಿಕ ಮಹಾಯುದ್ಧದ ನಂತರ ಮಾನವ ಹಕ್ಕುಗಳ ಸಂರಕ್ಷಣೆ ಉದ್ದೇಶದಿಂದ ರೂಸ್‌ವೆಲ್ಟ್, ಸ್ಟಾಲಿನ್ ಮತ್ತು ಚರ್ಚಿಲ್ ಇವರುಗಳ ಪ್ರಯತ್ನದಿಂದ ವಿಶ್ವಸಂಸ್ಥೆ ಸ್ಥಾಪಿತವಾಯಿತು.

ವಿಶ್ವಸಂಸ್ಥೆಯ ಪ್ರಸ್ತಾವನೆಯಲ್ಲಿ ಹೇಳಿರುವಂತೆ "ವಿಶ್ವದ ಜನರಾದ ನಾವುಗಳು ವಿನಾಶಕಾರಿ ಯುದ್ಧಗಳಿಂದ ನಮ್ಮ ಮುಂದಿನ ಮನುಕುಲದ ಪೀಳಿಗೆಯನ್ನು ಉಳಿಸುವುದಕ್ಕಾಗಿ ನಿಶ್ಚಯಿಸಿದ್ದೇವೆ. ಯುದ್ಧವು ನಮ್ಮ ಜೀವಿತಾವಧಿಯಲ್ಲಿ ಎರಡು ಬಾರಿ ದುಃಖಕ್ಕೆ ಎಳೆದಿದೆ" ಆದ್ದರಿಂದ ವಿಶ್ವಸಂಸ್ಥೆಯ ಸ್ಥಾಪನೆಯ ಮೂಲ ಉದ್ದೇಶ ಜಗತ್ತಿನ ಯಾವುದೇ ಒಂದು ಭಾಗದಲ್ಲಿ ಯಾವುದೇ ರೀತಿಯ ಮಾನವ ಹಕ್ಕುಗಳ ಉಲ್ಲಂಘನೆಯಾಗದಂತೆ ತಡೆಯುವುದೇ ಆಗಿದೆ. ಈ ಕಾರ್ಯಕ್ಕಾಗಿ ವಿಶ್ವಸಂಸ್ಥೆ 1948 ಡಿಸೆಂಬರ್ 10ರಂದು ಪ್ರತಿಯೊಂದು ರಾಷ್ಟ್ರಗಳು ಕಡ್ಡಾಯವಾಗಿ ಎಲ್ಲಾ ರೀತಿಯ ಮಾನವ ಹಕ್ಕುಗಳನ್ನು ಸಂರಕ್ಷಿಸುವ ಕುರಿತು ನಿರ್ದೇಶಿಸಿದೆ.

## ಮಾನವ ಹಕ್ಕುಗಳು ಮತ್ತು ಭಾರತ ಸಂವಿಧಾನ

ವಿಶ್ವಸಂಸ್ಥೆಯು ಘೋಷಿಸಿರುವ ಮಾನವ ಹಕ್ಕುಗಳ ಅಂಶಗಳನ್ನು ನಮ್ಮ ಸಂವಿಧಾನದ ಪ್ರಸ್ತಾವನೆ ಹಾಗೂ ಮೂಲಭೂತ ಹಕ್ಕುಗಳಲ್ಲಿ ತಿಳಿಸಲಾಗಿದೆ. ಪ್ರಸ್ತಾವನೆಯಲ್ಲಿ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಬಗ್ಗೆ ತಿಳಿಸಲಾಗಿದೆ. ಸಂವಿಧಾನದ 3ನೆಯ ಭಾಗದ ಮೂಲಭೂತ ಹಕ್ಕುಗಳಲ್ಲಿ ವಿಧಿ 12ರಿಂದ ವಿಧಿ 35ರ ಅಡಿಯಲ್ಲಿ ತಿಳಿಸಲಾಗಿದೆ. ಮೂಲ ಸಂವಿಧಾನದಲ್ಲಿ ಏಳು ಮೂಲಭೂತ ಹಕ್ಕುಗಳನ್ನು ನೀಡಲಾಗಿತ್ತು. 1978ರಲ್ಲಿ ಸಂವಿಧಾನದ 44ನೆಯ ತಿದ್ದುಪಡಿ ಕಾಯ್ದೆಯನ್ವಯ ಆಸ್ತಿಯ ಹಕ್ಕನ್ನು ಮೂಲಭೂತ ಹಕ್ಕುಗಳ ಭಾಗದಿಂದ ತೆಗೆದು ವಿಧಿ 300A ಅಡಿಯಲ್ಲಿ ಶಾಸನೀಯ ಹಕ್ಕಾಗಿ ಸೇರ್ಪಡೆ ಮಾಡಲಾಗಿದೆ. ಇದರಿಂದಾಗಿ ಪ್ರಸ್ತುತ ಆರು ಮೂಲಭೂತ ಹಕ್ಕುಗಳಿವೆ.

©KTBS Not to be republished




**ನಿಮಗಿದು ತಿಳಿದಿರಲಿ**

*ಸಂವಿಧಾನದ 86ನೇ ತಿದ್ದುಪಡಿ ಮಾಡಿ 21 'ಎ' ವಿಧಿಯನ್ವಯ 2002 ರಲ್ಲಿ ಶಿಕ್ಷಣವನ್ನು ಒಂದು ಹಕ್ಕನ್ನಾಗಿ ಪರಿಗಣಿಸಲಾಗಿದೆ. ಇದರ ಅನ್ವಯ 6 ರಿಂದ 14 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೂ ರಾಜ್ಯವೇ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕು.*

### ಮಾನವ ಹಕ್ಕು ಮತ್ತು ಮೂಲಭೂತ ಹಕ್ಕುಗಳ ನಡುವಿನ ವ್ಯತ್ಯಾಸ

ಮಾನವ ಹಕ್ಕುಗಳು ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿಗೆ ಅಗತ್ಯವಾಗಿರುತ್ತವೆ ಹಾಗೂ ವಿಶಾಲವಾಗಿರುತ್ತವೆ. ಪ್ರಕೃತಿದತ್ತವಾಗಿ ಮಾನವನಿಗೆ ದೊರೆತವುಗಳಾಗಿರುತ್ತವೆ. ಇವುಗಳು ಮಾನವನ ಘನತೆ ಗೌರವಗಳನ್ನು ಹೆಚ್ಚಿಸುತ್ತವೆ. ಇವುಗಳ ಉಲ್ಲಂಘನೆಯಾದಾಗ ನ್ಯಾಯಾಲಯದ ನಿರ್ದಿಷ್ಟ ರಕ್ಷಣೆ ಇರುವುದಿಲ್ಲ. ಮೂಲಭೂತ ಹಕ್ಕುಗಳು ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿಗೆ ಅಗತ್ಯವಾಗಿದ್ದು, ಸಂವಿಧಾನದಿಂದ ರಕ್ಷಿಸಲ್ಪಟ್ಟಿರುತ್ತವೆ. ಇವುಗಳ ಉಲ್ಲಂಘನೆಯಾದಾಗ ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳು ಆಜ್ಞೆ(ರಿಟ್) ಹೊರಡಿಸುವ ಮೂಲಕ ರಕ್ಷಿಸುತ್ತವೆ. ಇವುಗಳು ನಿರ್ದಿಷ್ಟವಾಗಿದ್ದು, ಸಂವಿಧಾನದಿಂದ ನೀಡಲ್ಪಟ್ಟಿರುತ್ತವೆ.

## ಮಾನವ ಹಕ್ಕುಗಳ ಸಂರಕ್ಷಣಾ ಸಂಸ್ಥೆಗಳು

ಮಾನವ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ 1966ರಲ್ಲಿ ವಿಶ್ವಸಂಸ್ಥೆಯು ಸದಸ್ಯ ರಾಷ್ಟ್ರಗಳೊಂದಿಗೆ ಸಭೆಯನ್ನು ನಡೆಸಿ ಪ್ರತಿಯೊಂದು ರಾಷ್ಟ್ರಗಳು ಮಾನವ ಹಕ್ಕುಗಳ ರಕ್ಷಣೆಗೆ ಬದ್ಧವಾಗಿರಬೇಕೆಂದು ನಿರ್ದೇಶಿಸಿದೆ. ಮಾನವ ಹಕ್ಕುಗಳ ಸಂರಕ್ಷಣೆಗಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಅಂತರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವನ್ನು ರಚಿಸಲಾಗಿದೆ. ಇದಕ್ಕೆ ಪೂರಕವಾಗಿ ರಾಷ್ಟ್ರಮಟ್ಟದಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ರಾಜ್ಯಮಟ್ಟದಲ್ಲಿ ರಾಜ್ಯ ಮಾನವ ಹಕ್ಕುಗಳ ಆಯೋಗಗಳನ್ನು ಸ್ಥಾಪಿಸಲಾಗಿದೆ.

**ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ :** ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಶಾಸನಾತ್ಮಕ ಸಂಸ್ಥೆಯಾಗಿದೆ. 1993ರಲ್ಲಿ ಸಂಸತ್ತಿನ ಶಾಸನದ ಮೂಲಕ ರಚಿಸಲಾಗಿದೆ. ಇದು ಒಬ್ಬ ಅಧ್ಯಕ್ಷರು ಮತ್ತು ನಾಲ್ಕು ಸದಸ್ಯರನ್ನು ಒಳಗೊಂಡಿರುತ್ತದೆ. ಅಧ್ಯಕ್ಷರು ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾಗಿರಬೇಕು. ಸದಸ್ಯರುಗಳು ಸರ್ವೋಚ್ಚ ನ್ಯಾಯಾಲಯದ ಸೇವೆಯಲ್ಲಿರುವ ಅಥವಾ ನಿವೃತ್ತ ನ್ಯಾಯಾಧೀಶರಾಗಿರಬೇಕು, ಉಚ್ಚ ನ್ಯಾಯಾಲಯದ ನಿವೃತ್ತ ಅಥವಾ ಸೇವೆಯಲ್ಲಿರುವ ನ್ಯಾಯಾಧೀಶರಾಗಿರಬೇಕು ಮತ್ತು ಇಬ್ಬರು ಸದಸ್ಯರು ಮಾನವ ಹಕ್ಕುಗಳ ಸಂರಕ್ಷಣಾ ಪ್ರಾಯೋಗಿಕ ಅಥವಾ ವಿಶೇಷ ಜ್ಞಾನ ಹೊಂದಿದವರಾಗಿರಬೇಕು. ಈ ಆಯೋಗವು ನಾಲ್ಕು ಪದನಿಮಿತ್ತ ಸದಸ್ಯರುಗಳನ್ನು ಹೊಂದಿರುತ್ತದೆ.

©KTBS Not to be re-published

ಅಧ್ಯಕ್ಷ ಮತ್ತು ಸದಸ್ಯರನ್ನು ರಾಷ್ಟ್ರಾಧ್ಯಕ್ಷರು ನೇಮಕ ಮಾಡುತ್ತಾರೆ. ಇವರ ಅಧಿಕಾರವಧಿ 5 ವರ್ಷಗಳು ಅಥವಾ 70 ವರ್ಷಗಳನ್ನು ಹೊಂದುವವರೆಗೆ ಇವುಗಳಲ್ಲಿ ಪ್ರಥಮವಾಗಿರುವುದನ್ನು ಪರಿಗಣಿಸಲಾಗುತ್ತದೆ. ಇವರು ಕೇಂದ್ರ ಸರ್ಕಾರ ನಿಗದಿಪಡಿಸಿದ ಸಂಬಳ, ಭತ್ಯೆ ಸೌಲಭ್ಯಗಳನ್ನು ಪಡೆಯುತ್ತಾರೆ. ಈ ಆಯೋಗವು ನಿಷ್ಪಕ್ಷಪಾತವಾಗಿ, ಸ್ವತಂತ್ರವಾಗಿ ಮತ್ತು ಸ್ವಾಯತ್ತವಾಗಿ ಕಾರ್ಯನಿರ್ವಹಿಸುವಂತೆ ಅಧಿಕಾರಗಳನ್ನು ನೀಡಲಾಗಿದೆ.

**ರಾಜ್ಯ ಮಾನವ ಹಕ್ಕುಗಳ ಆಯೋಗ :** ಮಾನವ ಹಕ್ಕುಗಳ ಕಾಯ್ದೆ 1993ರನ್ವಯ ರಾಜ್ಯಗಳಲ್ಲಿ ರಾಜ್ಯ ಮಾನವ ಹಕ್ಕುಗಳ ಆಯೋಗವನ್ನು ರಚಿಸಲಾಗಿರುತ್ತದೆ. ಇದು ಮಾನವ ಹಕ್ಕುಗಳ ಉಲ್ಲಂಘನೆಯ ವಿಚಾರಣೆಯನ್ನು ಮಾಡುತ್ತದೆ. ಈ ಆಯೋಗವು ಒಬ್ಬ ಅಧ್ಯಕ್ಷರು ಮತ್ತು ಇಬ್ಬರು ಸದಸ್ಯರನ್ನು ಒಳಗೊಂಡಿರುತ್ತದೆ. ಅಧ್ಯಕ್ಷರು ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶರಾಗಿರಬೇಕು. ಸದಸ್ಯರು ಉಚ್ಚ ನ್ಯಾಯಾಲಯದ ಸೇವೆಯಲ್ಲಿರುವ ಅಥವಾ ನಿವೃತ್ತ ನ್ಯಾಯಾಧೀಶರಾಗಿರಬೇಕು. ಅಥವಾ ಜಿಲ್ಲಾ ನ್ಯಾಯಾಲಯದಲ್ಲಿ ಕನಿಷ್ಠ 7 ವರ್ಷಗಳು ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿರಬೇಕು. ಇವರನ್ನು ರಾಜ್ಯಪಾಲರು ನೇಮಕ ಮಾಡುತ್ತಾರೆ.

**ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗ :** 2003ರಲ್ಲಿ ಭಾರತ ಸಂವಿಧಾನದ ವಿಧಿ 338ಕ್ಕೆ 89ನೇ ತಿದ್ದುಪಡಿ ಕಾಯ್ದೆಯನ್ನು ಮಾಡುವ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗವನ್ನು ಪ್ರತ್ಯೇಕಿಸಲಾಯಿತು. ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗ ಮತ್ತು ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಆಯೋಗವಾಗಿ ಮಾಡಲಾಯಿತು.

ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗವು ಒಬ್ಬ ಅಧ್ಯಕ್ಷರು, ಒಬ್ಬ ಉಪಾಧ್ಯಕ್ಷರು ಮತ್ತು ಮೂವರು ಸದಸ್ಯರುಗಳನ್ನು ಒಳಗೊಂಡಿರುತ್ತದೆ. ಇವರುಗಳನ್ನು ರಾಷ್ಟ್ರಾಧ್ಯಕ್ಷರು ನೇಮಕ ಮಾಡುತ್ತಾರೆ.

ಪರಿಶಿಷ್ಟ ಜಾತಿ ವ್ಯಕ್ತಿಗಳ ಮೇಲಿನ ದೌರ್ಜನ್ಯಗಳ ತಡೆಗೆ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳುವುದು ಹಾಗೂ ವ್ಯಕ್ತಿಗಳ ಮೇಲಿನ ಮಾನವ ಹಕ್ಕುಗಳ ಉಲ್ಲಂಘನೆಯ ಪ್ರಕರಣಗಳನ್ನು ಗುರುತಿಸಿ ಅವರಿಗೆ ಅಗತ್ಯ ನೆರವನ್ನು ನೀಡುವುದು. ಈ ಆಯೋಗವು ಪರಿಶಿಷ್ಟ ಜಾತಿಗಳ ಅಭಿವೃದ್ಧಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೂಪಿಸುವ ಯೋಜನೆಗಳಿಗೆ ಅಗತ್ಯವಿರುವ ಮಾಹಿತಿಯನ್ನು ಒದಗಿಸುವುದು.

**ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಆಯೋಗ:** 2003ರಲ್ಲಿ ಭಾರತ ಸಂವಿಧಾನದ 89ನೇ ತಿದ್ದುಪಡಿ ಕಾಯ್ದೆಯನ್ವಯ ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಆಯೋಗವನ್ನು ಸ್ಥಾಪಿಸಲಾಯಿತು. ಇದು ಒಬ್ಬ ಅಧ್ಯಕ್ಷರು, ಒಬ್ಬ ಉಪಾಧ್ಯಕ್ಷರು ಹಾಗೂ ಮೂವರು ಸದಸ್ಯರುಗಳನ್ನು ಒಳಗೊಂಡಿರುತ್ತದೆ. ಇವರುಗಳನ್ನು ರಾಷ್ಟ್ರಾಧ್ಯಕ್ಷರು ನೇಮಕ ಮಾಡುತ್ತಾರೆ. ಈ ಆಯೋಗವು ಪರಿಶಿಷ್ಟ ಜಾತಿ ಆಯೋಗದಂತೆ ಕಾರ್ಯನಿರ್ವಹಿಸುತ್ತದೆ.

**ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗ:** 1993ರಲ್ಲಿ ಈ ಆಯೋಗವನ್ನು ಸ್ಥಾಪಿಸಲಾಗಿದೆ. ಇದು ಒಬ್ಬ ಅಧ್ಯಕ್ಷರು ಮತ್ತು ನಾಲ್ಕು ಸದಸ್ಯರನ್ನು ಒಳಗೊಂಡಿರುತ್ತದೆ. ಈ ಆಯೋಗವು ಹಿಂದುಳಿದ ವರ್ಗಗಳ ಹಕ್ಕುಗಳ ಸಂರಕ್ಷಣೆಯ ಹೊಣೆಯನ್ನು ಹೊಂದಿರುತ್ತದೆ.

**ರಾಷ್ಟ್ರೀಯ ಮಹಿಳಾ ಆಯೋಗ:** ಮಹಿಳೆಯರ ಹಕ್ಕುಗಳನ್ನು ಸಂರಕ್ಷಿಸುವ ಉದ್ದೇಶದಿಂದ 1990ರಲ್ಲಿ ರಾಷ್ಟ್ರೀಯ ಮಹಿಳಾ ಆಯೋಗ ಕಾಯ್ದೆಯನ್ನು ರಚಿಸಲಾಯಿತು. ಇದು ಒಬ್ಬ ಅಧ್ಯಕ್ಷರು ಹಾಗೂ ಐದು ಸದಸ್ಯರುಗಳನ್ನು ಹೊಂದಿರುತ್ತದೆ. ಸಂವಿಧಾನಬದ್ಧವಾಗಿ ಮಹಿಳೆಯರಿಗೆ ನೀಡಿರುವ ಕಾನೂನಿನ ರಕ್ಷಣೋಪಾಯಗಳ ಕುರಿತು ಮಹಿಳೆಯರನ್ನು ಜಾಗೃತಗೊಳಿಸುವುದು. ಮಹಿಳೆಯರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಆರೋಗ್ಯ ಸ್ಥಾನಮಾನಗಳನ್ನು ಪರಿಶೀಲಿಸುವ ಕಾರ್ಯಗಳನ್ನು ನಿರ್ವಹಿಸುತ್ತವೆ.

**ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗ:** ಅಲ್ಪಸಂಖ್ಯಾತರ ಹಕ್ಕುಗಳ ಸಂರಕ್ಷಣೆಯ ಉದ್ದೇಶದಿಂದ 1992ರಲ್ಲಿ ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗ ಕಾಯ್ದೆಯನ್ನು ರಚಿಸಲಾಯಿತು. ಇದು ಒಬ್ಬ ಅಧ್ಯಕ್ಷರು ಮತ್ತು ಒಬ್ಬ

©KTBS Not to be republished

ಉಪಾಧ್ಯಕ್ಷರು ಹಾಗೂ ಐದು ಸದಸ್ಯರುಗಳನ್ನು ಒಳಗೊಂಡಿರುತ್ತದೆ. ಆರು ಧಾರ್ಮಿಕ ಸಮುದಾಯಗಳಾದ ಮುಸ್ಲಿಮರು, ಕ್ರೈಸ್ತರು, ಸಿಖ್ಖರು, ಬೌದ್ಧರು, ಪಾರ್ಸಿಗಳು ಮತ್ತು ಜೈನರನ್ನು ಅಲ್ಪಸಂಖ್ಯಾತರೆಂದು ಪರಿಗಣಿಸಲಾಗಿದೆ. ಈ ಸಮುದಾಯಗಳ ಅಭಿವೃದ್ಧಿಯ ಮೌಲ್ಯಮಾಪನ ಮಾಡುವುದು ಮತ್ತು ರಕ್ಷಣೆಗೆ ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳುವುದು ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತದೆ.

**ನಿಮಗಿದು ತಿಳಿದಿರಲಿ**

***ಶೋಷಣೆಯನ್ನು ತಪ್ಪಿಸಲು ಕೇಂದ್ರ ಸರ್ಕಾರ ಅನೇಕ ಕಾಯಿದೆಗಳನ್ನು ಜಾರಿಗೆ ತಂದಿದೆ.***

| | |
|---|---|
| ಕನಿಷ್ಠ ಕೂಲಿ ಕಾಯಿದೆ–1948 | ಅನೈತಿಕ ವ್ಯವಹಾರ ಕಾಯಿದೆ–1956 |
| ವರದಕ್ಷಿಣೆ ನಿಷೇಧ ಕಾಯಿದೆ–1961 | ಜೀತಪದ್ಧತಿ ನಿರ್ಮೂಲನಾ ಕಾಯಿದೆ–1976 |
| ಸತಿ ನಿಷೇಧ ಕಾಯಿದೆ–1987 | ಮಾನವ ಹಕ್ಕುಗಳ ರಕ್ಷಣಾ ಕಾಯಿದೆ–1993 |
| ಮಾಹಿತಿ ಹಕ್ಕು ಅಧಿನಿಯಮ–2005 | ಕೌಟುಂಬಿಕ ದೌರ್ಜನ್ಯ ಕಾಯಿದೆ–2005 |

**ಮಾಹಿತಿ ಹಕ್ಕು :** ಭಾರತ ದೇಶದಲ್ಲಿ ಮಾಹಿತಿ ಹಕ್ಕು ಕಾಯಿದೆಯನ್ನು 2005 ರಲ್ಲಿ ಜಾರಿಗೊಳಿಸಲಾಗಿದೆ. ಈ ಕಾಯ್ದೆಯ ಮುಖ್ಯ ಉದ್ದೇಶವೇನೆಂದರೆ ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರ ನಿರ್ಮೂಲನೆ, ಆಡಳಿತದಲ್ಲಿ ಪಾರದರ್ಶಕತೆ ತರುವುದು ಹಾಗೂ ಸರ್ಕಾರವನ್ನು ಪ್ರಜೆಗಳಿಗೆ ಜವಾಬ್ದಾರಯುತವಾಗಿರುವಂತೆ ಮಾಡುವುದು. ಜನಸಾಮಾನ್ಯರು ಒಂದು ಅರ್ಜಿಯ ಮೂಲಕ ಸರ್ಕಾರದಿಂದ ತಮಗೆ ಬೇಕಾದ ಮಾಹಿತಿಯನ್ನು ಪಡೆದುಕೊಳ್ಳುವ ಅವಕಾಶವನ್ನು ಈ ಕಾಯಿದೆ ಒದಗಿಸಿಕೊಟ್ಟಿದೆ. ಸಂಬಂಧಪಟ್ಟ ಅಧಿಕಾರಿಯು ಮಾಹಿತಿ ಬಯಸಿದವರಿಗೆ ಮಾಹಿತಿಯನ್ನು ಅರ್ಜಿಸಲ್ಲಿಸಿದ ಮೂವತ್ತು ದಿವಸಗಳೊಳಗೆ ರವಾನಿಸಬೇಕಾಗುತ್ತದೆ. ಜೀವನ ಮತ್ತು ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ನಲವತ್ತೆಂಟು ಘಂಟೆಗಳೊಳಗೆ ನೀಡಬೇಕಾಗುತ್ತದೆ. ಆದಾಗ್ಯೂ ವ್ಯಕ್ತಿ ಬಯಸಿದ ಮಾಹಿತಿಯು ರಾಷ್ಟ್ರದ ರಕ್ಷಣೆ, ಭದ್ರತೆ, ಐಕ್ಯತೆಗಳಿಗೆ ಸಂಬಂಧಪಟ್ಟಿದ್ದರೆ ಸರ್ಕಾರ ಮಾಹಿತಿ ನೀಡುವಿಕೆಯನ್ನು ತಿರಸ್ಕರಿಸಬಹುದಾಗಿದೆ.

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.**

1. ಮಾನವ ಹಕ್ಕುಗಳ ಘೋಷಣೆ ___________ ರಲ್ಲಿ ಮಾಡಲಾಯಿತು.
2. ಮ್ಯಾಗ್ನಕಾರ್ಟಕ್ಕೆ ___________ ರಾಜನು ಸಹಿ ಮಾಡಿದನು.
3. ಪ್ರಸ್ತುತ ___________ ಮೂಲಭೂತ ಹಕ್ಕುಗಳಿವೆ.
4. ಆಸ್ತಿ ಹಕ್ಕು ___________ ಹಕ್ಕಾಗಿದೆ.
5. ಮಾನವ ಹಕ್ಕುಗಳ ಆಯೋಗ ಅಧ್ಯಕ್ಷರನ್ನು ___________ ನೇಮಕ ಮಾಡುತ್ತಾರೆ.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

1. ಮಾನವ ಹಕ್ಕುಗಳ ಬೆಳವಣಿಗೆಯನ್ನು ವಿವರಿಸಿರಿ.
2. ಮಾನವ ಹಕ್ಕುಗಳು ಮಾನವರ ಸರ್ವತೋಮುಖ ಅಭಿವೃದ್ಧಿಗೆ ಅಗತ್ಯವಾಗಿವೆ ಸಮರ್ಥಿಸಿರಿ.

©KTBS Not to be republished

3. ಸರ್ವೋಚ್ಚ ನ್ಯಾಯಾಲಯವು ಮೂಲಭೂತ ಹಕ್ಕುಗಳ ಸಂರಕ್ಷಕವಾಗಿದೆ ವಿಮರ್ಶಿಸಿರಿ.
4. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಮಾನವ ಹಕ್ಕುಗಳ ಸಂರಕ್ಷಕ. ಸಮರ್ಥಿಸಿರಿ.
5. ರಾಜ್ಯ ಮಾನವ ಹಕ್ಕುಗಳ ಆಯೋಗ ಕುರಿತು ವಿವರಿಸಿರಿ.

**III. ಚಟುವಟಿಕೆ :**

1. ಮಾನವ ಹಕ್ಕುಗಳ ಸಂರಕ್ಷಣೆ ಕುರಿತು ಭಾಷಣ ಸ್ಪರ್ಧೆ ಏರ್ಪಡಿಸಿರಿ.
2. ಮಾನವ ಹಕ್ಕು ಮತ್ತು ಮೂಲಭೂತ ಹಕ್ಕುಗಳ ನಡುವಿನ ವ್ಯತ್ಯಾಸವನ್ನು ಪಟ್ಟಿ ಮಾಡಿ.

*****

©KTBS Not to be re published

# ಅಧ್ಯಾಯ – 4

# ಸ್ಥಳೀಯ ಸರ್ಕಾರ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಸ್ಥಳೀಯ ಸರ್ಕಾರ ರಚನೆಯ ಹಿನ್ನೆಲೆ.*
- *ಸ್ಥಳೀಯ ಸರ್ಕಾರ ಉದ್ದೇಶ ಮತ್ತು ಕಾರ್ಯಗಳು.*
- *ವಿವಿಧ ಸ್ಥಳೀಯ ಸಂಸ್ಥೆಗಳ ರಚನೆ, ಆಡಳಿತ, ಜವಾಬ್ದಾರಿ ಮತ್ತು ಕರ್ತವ್ಯಗಳು.*

ಭಾರತದಲ್ಲಿ ಸ್ಥಳೀಯ ಸರ್ಕಾರಗಳ ಪರಿಕಲ್ಪನೆ ಬಹಳ ಪ್ರಾಚೀನವಾಗಿದ್ದು ವೇದಗಳ ಕಾಲದಿಂದಲೂ ಸ್ಥಳೀಯ ಸರ್ಕಾರದ ರಚನೆಗೆ ಮತ್ತು ಬೆಳವಣಿಗೆಗಳಿಗೆ ಪ್ರಾಮುಖ್ಯತೆ ನೀಡಿರುವುದು ಇತಿಹಾಸದಿಂದ ತಿಳಿದು ಬರುತ್ತದೆ. ಸ್ಥಳೀಯ ಸರ್ಕಾರಗಳು ಸಮುದಾಯ ಮತ್ತು ಸರ್ಕಾರಗಳ ನಡುವೆ ಸಂಬಂಧ ಕಲ್ಪಿಸುವುದರ ಜೊತೆಗೆ ಸ್ಥಳೀಯರು ತಮ್ಮ ಸಮಸ್ಯೆಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಅವಕಾಶ ನೀಡುತ್ತವೆ. ಸ್ಥಳೀಯ ಸರ್ಕಾರಗಳು ಸ್ಥಳೀಯ ಸಮಸ್ಯೆಗಳನ್ನು ಅಲ್ಲಿನ ಜನರ ಸಹಕಾರದಿಂದ ಬಗೆಹರಿಸಿಕೊಳ್ಳುವಲ್ಲಿ ಸಹಕಾರಿಯಾಗುತ್ತದೆ. ಆಡಳಿತದಲ್ಲಿ ಸ್ಥಳೀಯ ಜನರ ಭಾಗವಹಿಸುವಿಕೆಯು ಪ್ರಜಾಪ್ರಭುತ್ವದಂತಹ ಸಂಸ್ಥೆಗಳನ್ನು ತಳಮಟ್ಟದಿಂದ ಸುಭದ್ರಗೊಳ್ಳಿಸುತ್ತದೆ. ಪ್ರಜೆಗಳು ಸ್ಥಳೀಯ ಆಡಳಿತ ಮಂಡಳಿಗಳಿಗೆ ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿ ಅಧಿಕಾರ ಕೊಡಿಸುವ ಹಕ್ಕನ್ನು ಹೊಂದಿರುತ್ತಾರೆ. ಹೀಗೆ ಸ್ವಯಂ ಆಡಳಿತ ನೀಡುವ ಮಂಡಳಿಗಳನ್ನು ಸ್ಥಳೀಯ ಸರ್ಕಾರ ಎಂದು ಕರೆಯಲಾಗಿದೆ. ಇದು ಅಧಿಕಾರ ವಿಕೇಂದ್ರೀಕರಣದ ಮೂಲವಾಗಿದೆ. 1882ರಲ್ಲಿ ಲಾರ್ಡ್ ರಿಪ್ಪನ್ ಸ್ಥಳೀಯ ಸರ್ಕಾರದ ಗೊತ್ತುವಳಿಯನ್ನು ರಚಿಸಿದನು. ಈ ಗೊತ್ತುವಳಿಯು ಸ್ಥಳೀಯ ಸರ್ಕಾರದ ವ್ಯವಸ್ಥಿತ ರಚನೆಗೆ ಅವಕಾಶ ನೀಡಿತು. ಹಾಗಾಗಿ ಲಾರ್ಡ್ ರಿಪ್ಪನ್ನರನ್ನು ಭಾರತದ ಸ್ಥಳೀಯ ಸರ್ಕಾರದ ಪಿತಾಮಹ ಎಂದು ಕರೆಯಲಾಗಿದೆ ಹಾಗೂ 1919 ಮತ್ತು 1935 ರಲ್ಲಿ ಬ್ರಿಟಿಷ್ ಸರ್ಕಾರ ಜಾರಿಮಾಡಿದ ಕಾಯಿದೆಗಳು ಸ್ಥಳೀಯ ಸರ್ಕಾರಕ್ಕೆ ಹೆಚ್ಚು ಅಧಿಕಾರವನ್ನು ಒದಗಿಸಿಕೊಟ್ಟಿವೆ. ರಾಷ್ಟ್ರಪಿತ ಗಾಂಧೀಜಿಯವರ ಕನಸಾದ ಗ್ರಾಮ ಸ್ವರಾಜ್ಯವನ್ನು ನನಸಾಗಿಸಲು ನಮ್ಮ ಸಂವಿಧಾನದ ನಾಲ್ಕನೆಯ ಭಾಗದಲ್ಲಿ ರಾಜ್ಯ ನೀತಿ ನಿರ್ದೇಶಕ ತತ್ವಗಳಡಿಯಲ್ಲಿ ವಿಧಿ 40ರಲ್ಲಿ ಪಂಚಾಯತ್ ಸಂಘಟನೆಯ ಕುರಿತು ತಿಳಿಸಲಾಗಿದೆ.

1992ರಲ್ಲಿ ಸಂವಿಧಾನದ 73ನೇ ಮತ್ತು 74ನೇ ತಿದ್ದುಪಡಿ ಕಾಯ್ದೆಗಳನ್ವಯ ಸ್ಥಳೀಯ ಸರ್ಕಾರಕ್ಕೆ ಸಂವಿಧಾನಾತ್ಮಕ ಸ್ಥಾನಮಾನವನ್ನು ನೀಡಲಾಯಿತು. 73ನೇ ತಿದ್ದುಪಡಿ ಕಾಯ್ದೆಯು 1993 ಏಪ್ರಿಲ್ 24ರಂದು ಜಾರಿಗೆ ಬಂದಿತು. ಈ ತಿದ್ದುಪಡಿ ಕಾಯ್ದೆಯನ್ವಯ ಭಾಗ IX ರಲ್ಲಿ 243ರಿಂದ 243 'O' ವರೆಗಿನ ವಿಧಿಗಳಡಿಯಲ್ಲಿ ಪಂಚಾಯತ್ ವ್ಯವಸ್ಥೆಯ ಕುರಿತು ತಿಳಿಸಲಾಗಿದೆ. 74ನೇ ತಿದ್ದುಪಡಿ ಕಾಯ್ದೆಯನ್ವಯ ಪೌರಾಡಳಿತಕ್ಕೆ ಸಂವಿಧಾನಾತ್ಮಕ ಸ್ಥಾನಮಾನ ನೀಡಲಾಗಿದೆ. ಭಾಗ IX 'A' ಯಲ್ಲಿ 243 'P' ಯಿಂದ 243 'ZG' ವರೆಗಿನ ವಿಧಿಗಳಡಿಯಲ್ಲಿ ಪೌರಾಡಳಿತದ ಕುರಿತು ತಿಳಿಸಲಾಗಿದೆ.

ಕರ್ನಾಟಕದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿಯೇ ಅನೇಕ ಸ್ಥಳೀಯ ಸರ್ಕಾರಗಳು ಕಾರ್ಯನಿರ್ವಹಿಸಿದ್ದವು ಎಂದು ತಿಳಿದು ಬಂದಿದೆ. ಸ್ವಾತಂತ್ರ್ಯ ನಂತರ ಸ್ಥಳೀಯ ಸರ್ಕಾರಗಳ ಸ್ಥಾಪನೆ ಹಾಗೂ ಬಲವರ್ಧನೆಗಾಗಿ ನಮ್ಮ ರಾಜ್ಯವು ಹಲವು ಸಮಿತಿಗಳನ್ನು ರಚಿಸಿ ಸಲಹೆ ಪಡೆದು ಅವುಗಳನ್ನು ಅನುಸರಿಸಿದೆ. ನಮ್ಮ ರಾಜ್ಯ ಸರ್ಕಾರವು 1983ರಲ್ಲಿ ಪಂಚಾಯತ್ ರಾಜ್ ಕಾಯಿದೆಯನ್ನು ಪರಿಚಯಿಸಿ 1985ರಿಂದ ಆ ಕಾಯಿದೆಯನ್ನು ಜಾರಿಗೆ ತಂದಿದೆ. ಈ ಕಾಯಿದೆಯ ಪ್ರಕಾರ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳು ಪ್ರತ್ಯಕ್ಷ ಚುನಾವಣೆಗಳ ಮೂಲಕ ರಚಿತವಾಗಬೇಕೆಂದು ಸೂಚಿಸಲಾಗಿದೆ. ಸಂವಿಧಾನದ 73ನೇ ತಿದ್ದುಪಡಿ

© KTBS Not to be re published

ಕಾಯ್ದೆಯನ್ವಯ 1993ರಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ರಚಿಸಲಾಯಿತು. 2015ರಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಮಯ 1993 ಎಂದು ಮರುನಾಮಕರಣ ಮಾಡಲಾಗಿದೆ. ಇದರನ್ವಯ ಪ್ರಸ್ತುತ ಕರ್ನಾಟಕದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಜಾರಿಯಲ್ಲಿದೆ.

**ಸ್ಥಳೀಯ ಸರ್ಕಾರದ ಉದ್ದೇಶಗಳು:**

1. ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸ್ಥಳೀಯರನ್ನೇ ಬಳಸಿಕೊಳ್ಳುವುದು.
2. ಜನ ಸಾಮಾನ್ಯರಿಗೆ ಆಡಳಿತಜ್ಞಾನ ಒದಗಿಸುವುದು.
3. ಅಧಿಕಾರವನ್ನು ವಿಕೇಂದ್ರೀಕರಿಸಿ ಆಡಳಿತವನ್ನು ಹೆಚ್ಚು ಪರಿಣಾಮಕಾರಿಯಾಗುವಂತೆ ಮಾಡುವುದು.
4. ತಳಮಟ್ಟದ ಹಂತದಲ್ಲಿ ಜನರಿಗೆ ನಾಯಕತ್ವದ ಗುಣಲಕ್ಷಣಗಳನ್ನು ಅಭಿವೃದ್ಧಿಗೊಳಿಸುವುದು ಅಥವಾ ತರಬೇತಿ ನೀಡುವುದು.

**ಸ್ಥಳೀಯ ಸರ್ಕಾರದ ಕಾರ್ಯಗಳು:** ಸ್ಥಳೀಯ ಸರ್ಕಾರ ಕೆಳಕಂಡ ಪ್ರಮುಖ ಕಾರ್ಯಗಳನ್ನು ನಿರ್ವಹಿಸುತ್ತದೆ. ಅವುಗಳೆಂದರೆ;

1. ಪಂಚಾಯಿತಿಯ ಆಸ್ತಿಯನ್ನು ರಕ್ಷಿಸಿ ಕಾಪಾಡಿಕೊಳ್ಳುವುದು.
2. ಸ್ಥಳೀಯ ಮಂಡಳಿಯ ವಾರ್ಷಿಕ ಆಯವ್ಯಯದ ಮುಂಗಡ ಪತ್ರ ತಯಾರಿಸುವುದು.
3. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಯೋಜನೆಗಳನ್ನು ಕೈಗೊಳ್ಳುವುದು.
4. ರಸ್ತೆ ನಿರ್ಮಾಣ, ವಿದ್ಯುತ್ತೀಕರಣ, ಗೃಹನಿರ್ಮಾಣ ಮತ್ತು ಕುಡಿಯುವ ನೀರಿನ ಸರಬರಾಜು ಮುಂತಾದ ಅಭಿವೃದ್ಧಿ ಕೆಲಸಗಳಿಗೆ ಕಾರ್ಯಯೋಜನೆ ರೂಪಿಸಿ ಅನುಷ್ಠಾನಗೊಳಿಸುವುದು.
5. ಪ್ರಾಥಮಿಕ, ಪ್ರೌಢ, ವಯಸ್ಕರ ಮತ್ತು ಅನೌಪಚಾರಿಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುವುದು.
6. ತಮ್ಮ ಪ್ರದೇಶಗಳಲ್ಲಿ ಸ್ವಚ್ಛತೆ ಮತ್ತು ನಿರ್ಮಲೀಕರಣವನ್ನು ಕಾಪಾಡುವುದು.
7. ಎಲ್ಲಾ ಪ್ರಕಾರದ ಮಾಲಿನ್ಯಗಳನ್ನು ತಡೆಗಟ್ಟಿ ಉತ್ತಮ ಆರೋಗ್ಯಕರ ಸವಲತ್ತುಗಳನ್ನು ಒದಗಿಸುವುದು.
8. ಅವಶ್ಯಕ ಪಡಿತರಗಳಾದ ಆಹಾರಧಾನ್ಯ, ಸೀಮೆಎಣ್ಣೆ ಇತ್ಯಾದಿಗಳ ವಿತರಣೆಗೆ ಸೂಕ್ತ ವ್ಯವಸ್ಥೆಯನ್ನು ನಿರ್ಮಿಸಿ ಸವಲತ್ತುಗಳನ್ನು ಒದಗಿಸುವುದು.
9. ಜನನ ಮತ್ತು ಮರಣಗಳ ನೋಂದಣಿ ಪ್ರಾಮಾಣಿಕವಾಗಿ ಆಗುತ್ತಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು.
10. ಕೃಷಿ, ಪಶುಸಂಗೋಪನೆ, ಖಾದಿ ಮತ್ತು ಕರಕುಶಲ ಉದ್ಯೋಗಗಳನ್ನು ಪ್ರೋತ್ಸಾಹಿಸುವುದು.
11. ಮಣ್ಣು, ನೀರು ಮತ್ತು ಅರಣ್ಯ ರಕ್ಷಣೆಗೆ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.
12. ರೈತರಿಗೆ ಸಹಾಯ ಮಾಡುವ ಸಲುವಾಗಿ ಕೃಷಿ ವಿಸ್ತರಣಾ ಕಾರ್ಯಕ್ರಮಗಳನ್ನು ನಡೆಸುವುದು.
13. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ದುರ್ಬಲವರ್ಗ, ಮಹಿಳೆ ಮತ್ತು ಮಕ್ಕಳಿಗಾಗಿ ಕಲ್ಯಾಣಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತರುವುದು.
14. ವಾಚನಾಲಯ, ಬೀದಿ ದೀಪಗಳು ಮತ್ತು ಮಾರುಕಟ್ಟೆ ಸವಲತ್ತುಗಳನ್ನು ಒದಗಿಸಿ ಕೊಡುವುದು.
15. ಶುಲ್ಕ, ದಂಡ ಮತ್ತು ತೆರಿಗೆಗಳನ್ನು ಸಂಗ್ರಹಿಸುವುದು.
16. ಸರ್ಕಾರದ ಕಲ್ಯಾಣ ಯೋಜನೆಗಳಿಗೆ ಫಲಾನುಭವಿಗಳನ್ನು ಮುಕ್ತವಾಗಿ ಗುರುತಿಸುವುದು.

©KTBS Not to be re published

**ಆದಾಯದ ಮೂಲಗಳು :** ಸ್ಥಳೀಯ ಸ್ವಯಂ ಸರ್ಕಾರಗಳು ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲು ಆರ್ಥಿಕ ನಿಧಿ ಅಥವಾ ಬಂಡವಾಳದ ಅವಶ್ಯಕತೆಯಿರುತ್ತದೆ. ಈ ಸಂಸ್ಥೆಗಳ ಪ್ರಮುಖ ಆದಾಯದ ಮೂಲಗಳೆಂದರೆ:

1. ನೀರು, ಆರೋಗ್ಯ, ಶಿಕ್ಷಣ, ಗ್ರಂಥಾಲಯ ಮತ್ತು ವಾಚನಾಲಯಗಳ ಮೇಲಿನ ಉಪಕರದಿಂದ ಸಂಗ್ರಹವಾಗುವ ಮೊತ್ತ.
2. ಕಟ್ಟಡ ತೆರಿಗೆ, ಖಾಲಿ ಜಾಗದ ತೆರಿಗೆ, ವ್ಯಾವಹಾರಿಕ ಸಂಸ್ಥೆಗಳ ಮೇಲಿನ ತೆರಿಗೆ, ಮಾರುಕಟ್ಟೆ, ಮನರಂಜನಾಮಂದಿರ ಮತ್ತು ಜಾಹೀರಾತುಗಾರರಿಂದ ವಸೂಲಾಗುವ ಒಟ್ಟು ತೆರಿಗೆ ಮೊತ್ತ.
3. ಪ್ರವಾಸಿ ತಾಣಗಳಿಂದ ಸಂಗ್ರಹಿಸಿದ ತೆರಿಗೆ.
4. ಪಂಚಾಯತ್ ಆಸ್ತಿಗಳಿಂದ ಬರುವ ಬಾಡಿಗೆ ಹಾಗೂ ಗುತ್ತಿಗೆ ಹಣ.
5. ರಾಜ್ಯ ಸರ್ಕಾರದಿಂದ ದೊರೆಯುವ ಧನ ಸಹಾಯ ಅಥವಾ ಅನುದಾನ ಮೊತ್ತ.

**ಸ್ಥಳೀಯ ಆಡಳಿತ ಸಂಸ್ಥೆಗಳ ರಚನೆ : (Composition of Local Governing Bodies)**


**ಗ್ರಾಮ ಸಭೆ**

**ಗ್ರಾಮ ಸಭೆಗಳು:** ಗ್ರಾಮ ಸಭೆಯು ಗ್ರಾಮೀಣ ಸ್ಥಳೀಯ ಆಡಳಿತ ಸಂಸ್ಥೆಯ ಪ್ರಾಥಮಿಕ ಘಟಕವಾಗಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಗ್ರಾಮದ ಮತದಾರರೆಲ್ಲರನ್ನೂ ತನ್ನ ಸದಸ್ಯರನ್ನಾಗಿ ಒಳಗೊಂಡ ನಿಕಾಯವೇ ಗ್ರಾಮಸಭೆ ಆಗಿರುತ್ತದೆ. ಇದು ವರ್ಷದಲ್ಲಿ ಕನಿಷ್ಠ ಎರಡು ಬಾರಿ ಸಭೆಯನ್ನು ನಡೆಸಬೇಕು. ಗ್ರಾಮಸಭೆಯನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷರು ಕರೆಯುತ್ತಾರೆ. ಅಧ್ಯಕ್ಷರು ಗ್ರಾಮಸಭೆಯನ್ನು ಕರೆಯಲು ವಿಫಲವಾದರೆ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ (ಇ.ಓ.) ಸಭೆಯನ್ನು ಕರೆಯಬೇಕು. ಸಭೆಯ ಅಧ್ಯಕ್ಷತೆಯನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಮತದಾರರ ಸದಸ್ಯರಲ್ಲಿಯೇ ಒಬ್ಬರು ವಹಿಸಿಕೊಳ್ಳುತ್ತಾರೆ. ಸಭೆಯಲ್ಲಿ ಗ್ರಾಮಸ್ಥರು ತಮ್ಮ ಗ್ರಾಮದ ಸಮಸ್ಯೆಗಳನ್ನು, ಅವುಗಳನ್ನು ಪರಿಹರಿಸಲು ಕೈಗೊಂಡ ಕ್ರಮಗಳನ್ನು ಹಾಗೂ ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸುತ್ತಾರೆ. ಗ್ರಾಮಸ್ಥರಿಗೆ ಸಲಹೆ ನೀಡಲು ಅವಕಾಶವಿರುತ್ತದೆ. ಸರಕಾರದ ವಿವಿಧ ಯೋಜನೆಗಳಿಗೆ ಫಲಾನುಭವಿಗಳನ್ನು ಗುರುತಿಸುವ ಜವಾಬ್ದಾರಿಯು ಈ ಸಭೆಗೆ ಇರುತ್ತದೆ.

**ಗ್ರಾಮ ಪಂಚಾಯಿತಿ :** ಗ್ರಾಮ ಪಂಚಾಯಿತಿಗಳು ಸಾಮಾನ್ಯವಾಗಿ ಜನಸಂಖ್ಯೆಯ ಆಧಾರದ ಮೇಲೆ ರಚಿತಗೊಳ್ಳುತ್ತವೆ. ಒಟ್ಟು 5000 ದಿಂದ 7000 ಜನಸಂಖ್ಯೆಗಳಿರುವ ಗ್ರಾಮ ಅಥವಾ ಗ್ರಾಮಗಳು ಸಮೂಹಕ್ಕೆ ಗ್ರಾಮ ಪಂಚಾಯಿತಿ ರಚಿಸಲಾಗುತ್ತದೆ. ಮಲೆನಾಡು ಜಿಲ್ಲೆಗಳಲ್ಲಿ 2500ಕ್ಕಿಂತ ಹೆಚ್ಚು ಜನಸಂಖ್ಯೆಗಳಿರುವ ಗ್ರಾಮ ಅಥವಾ ಗ್ರಾಮಗಳ ಸಮೂಹಕ್ಕೆ ಗ್ರಾಮ ಪಂಚಾಯಿತಿಯನ್ನು ರಚಿಸಿಲಾಗುತ್ತದೆ. ಗ್ರಾಮ ಪಂಚಾಯಿತಿಯ ಸದಸ್ಯರುಗಳು ತಮ್ಮ ಪಂಚಾಯಿತಿಯ ಮಿತಿಗೊಳಪಟ್ಟ ಪ್ರದೇಶದಲ್ಲಿನ ವಯಸ್ಕ ಮತದಾರರಿಂದ ಚುನಾವಣೆಯಲ್ಲಿ ಆಯ್ಕೆಗೊಳ್ಳುತ್ತಾರೆ. ಪ್ರತಿ 400 ಜನಸಂಖ್ಯೆಗೆ ಒಬ್ಬ ಪ್ರತಿನಿಧಿಯನ್ನು ಆಯ್ಕೆ ಮಾಡಲಾಗುತ್ತದೆ. ಈ ಗ್ರಾಮ ಪಂಚಾಯಿತಿಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಮಹಿಳೆಯರಿಗೆ ಮೀಸಲು ಸ್ಥಾನಗಳಿವೆ. ಗ್ರಾಮ ಪಂಚಾಯಿತಿಯ ಆಡಳಿತಾವಧಿ ಮೊದಲ ಸಭೆಯ ದಿನದಿಂದ ಆರಂಭಗೊಂಡು ಪೂರ್ಣ ಐದು ವರ್ಷಗಳವರೆಗೆ ಇರುತ್ತದೆ.

©KTBS Not to be republished

## ಕರ್ನಾಟಕದ ಪಂಚಾಯತ್ ರಾಜ್‌ನ ನಕ್ಷೆ

ಜಿಲ್ಲಾ ಪಂಚಾಯಿತಿ (ಜಿಲ್ಲಾಡಳಿತ) (30)

ತಾಲ್ಲೂಕು ಪಂಚಾಯಿತಿ (176)

ಗ್ರಾಮ ಪಂಚಾಯಿತಿ (6022)

ಗ್ರಾಮ ಪಂಚಾಯಿತಿಯ ರಚನೆ (ಕರ್ನಾಟಕ)

ಅಧ್ಯಕ್ಷ → } ಗ್ರಾಮ ಪಂಚಾಯಿತಿಯ ಸದಸ್ಯರಿಂದ ಆಯ್ಕೆಯಾಗುತ್ತಾರೆ.

ಉಪಾಧ್ಯಕ್ಷ →

ಪಿ.ಡಿ.ಓ. → ಸರ್ಕಾರದಿಂದ ನೇಮಕವಾಗುತ್ತದೆ.

| ಗ್ರಾಮ 1 | ಗ್ರಾಮ 2 | ಗ್ರಾಮ 3 | ಗ್ರಾಮ 4 | ಗ್ರಾಮ 5 | ಗ್ರಾಮ 6 | ಗ್ರಾಮ 7 | ಗ್ರಾಮ 8 |
|---|---|---|---|---|---|---|---|
| ಪ್ರತಿನಿಧಿ/ಕ್ಷೇತ್ರ, | ಸದಸ್ಯ | ಸದಸ್ಯ | ಸದಸ್ಯ | ಸದಸ್ಯ | ಸದಸ್ಯ | ಸದಸ್ಯ | ಸದಸ್ಯ |

ವಾರ್ಡ್‌ಗಳಿಂದ ಸದಸ್ಯರಾದವರು

(ಕರ್ನಾಟಕದಲ್ಲಿ 6022 ಗ್ರಾಮ ಪಂಚಾಯಿತಿಗಳಿವೆ)

5000 ದಿಂದ 7000 ಜನ ಸಂಖ್ಯೆಯಿರುವ ಗ್ರಾಮಗಳು.

ಅಕ್ಕಪಕ್ಕದ ಗ್ರಾಮಗಳು ಗ್ರಾಮ ಪಂಚಾಯಿತಿ ರಚನೆಗೆ ಸೇರಿಕೊಳ್ಳುತ್ತದೆ.

ಪ್ರತಿ 400 ಮತದಾರರ ವಾರ್ಡಿಗೆ ಒಬ್ಬ ಸದಸ್ಯನ ಆಯ್ಕೆಯಾಗುತ್ತದೆ.

*2000ರದ ಪಂಚಾಯತ್ ರಾಜ್ ಕಾಯ್ದೆಯ ಎರಡನೇ ತಿದ್ದುಪಡಿಯ ಪ್ರಕಾರ ಪ್ರತಿ ಪಂಚಾಯಿತಿ ಸದಸ್ಯರು ಕಡ್ಡಾಯವಾಗಿ ತಮ್ಮ ಮನೆಗಳಲ್ಲಿ ಶೌಚಾಲಯವನ್ನು ಹೊಂದಿರಬೇಕು. ಒಂದು ವೇಳೆ ಇಲ್ಲದಿದ್ದಲ್ಲಿ ಚುನಾಯಿತರಾದ ಒಂದು ವರ್ಷದೊಳಗೆ ಶೌಚಾಲಯವನ್ನು ನಿರ್ಮಿಸಿಕೊಳ್ಳಲೇಬೇಕು.*

©KTBS Not to be re published

ಪಂಚಾಯಿತಿ ಸಾಮಾನ್ಯ ಸಭೆಗಳು ಕನಿಷ್ಠ ತಿಂಗಳಿಗೊಮ್ಮೆ ನಡೆಯಬೇಕು ಹಾಗೂ ಸಭೆಯನ್ನು ನಡೆಸಲು ಕೋರಂ ಒಟ್ಟು ಸದಸ್ಯರ ಕನಿಷ್ಠ ಅರ್ಧದಷ್ಟು ಇರಬೇಕು. ಗ್ರಾಮ ಪಂಚಾಯಿತಿಯ ಸದಸ್ಯರುಗಳು ಬಹುಮತದ ಮೂಲಕ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಆಯ್ಕೆ ಮಾಡುತ್ತಾರೆ. ಅವರ ಅಧಿಕಾರಾವಧಿ ಐದು ವರ್ಷಗಳು ಅಥವಾ ಗ್ರಾಮ ಪಂಚಾಯಿತಿ ಸದಸ್ಯತ್ವ ನಿಂತು ಹೋಗುವವರೆಗೆ ಇವುಗಳಲ್ಲಿ ಪ್ರಥಮವಾಗುವುದನ್ನು ಪರಿಗಣಿಸಲಾಗುತ್ತದೆ. ಚುನಾಯಿತ ಅಧ್ಯಕ್ಷ ಗ್ರಾಮ ಪಂಚಾಯಿತಿ ಸಭೆಗಳ ಅಧ್ಯಕ್ಷತೆ ವಹಿಸುತ್ತಾರೆ. ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸುತ್ತಾರೆ. ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲಾತಿ ನಿಯಮ ಅನ್ವಯವಾಗುತ್ತದೆ. ಗ್ರಾಮ ಪಂಚಾಯಿತಿಗಳು ಪರಿಣಾಮಕಾರಿ ಆಡಳಿತಕ್ಕಾಗಿ ಸ್ಥಾಯಿ ಸಮಿತಿಗಳನ್ನು ರಚಿಸಿಕೊಳ್ಳುತ್ತವೆ.

ಗ್ರಾಮ ಪಂಚಾಯಿತಿಯ ಕಾರ್ಯಪಾಲನೆಗಾಗಿ ಪೂರ್ಣಾವಧಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿ (PDO)ಯನ್ನು ನೇಮಿಸಲಾಗುತ್ತದೆ. ಇವರನ್ನು ಇತ್ತೀಚೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಖಾಂತರ ರಾಜ್ಯ ಸರ್ಕಾರ ನೇಮಕ ಮಾಡುತ್ತದೆ.

**ತಾಲ್ಲೂಕು ಪಂಚಾಯಿತಿಗಳು :** 1993ರ ಪಂಚಾಯಿತಿ ರಾಜ್ ಕಾಯಿದೆಯು ತಾಲ್ಲೂಕುಗಳಲ್ಲಿ ತಾಲ್ಲೂಕು ಪಂಚಾಯಿತಿಗಳನ್ನು ರಚಿಸಲು ಅವಕಾಶ ಕಲ್ಪಿಸಿದೆ. ತಾಲ್ಲೂಕು ಪಂಚಾಯಿತಿಯು ಚುನಾಯಿತರಾದ ಸದಸ್ಯರುಗಳನ್ನು ಹೊಂದಿರುತ್ತದೆ. ಚುನಾಯಿತ ಸದಸ್ಯರು ಪ್ರತ್ಯಕ್ಷ ಚುನಾವಣೆಗಳ ಮೂಲಕ ಅರ್ಹ ಮತದಾರರಿಂದ ಆಯ್ಕೆಗೊಳ್ಳುತ್ತಾರೆ. ತಾಲ್ಲೂಕು ಪಂಚಾಯಿತಿಯ ಸದಸ್ಯರುಗಳ ಸಂಖ್ಯೆಯು ಆಯಾ ತಾಲ್ಲೂಕಿನ ಒಟ್ಟು ಜನ ಸಂಖ್ಯೆಯನ್ನು ಅವಲಂಬಿಸಿದ್ದು, ಪ್ರತಿ 12,500 ರಿಂದ 15,000 ಜನಸಂಖ್ಯೆಗೊಬ್ಬರಂತೆ ತಾಲ್ಲೂಕು ಪಂಚಾಯಿತಿಯು ಸದಸ್ಯರನ್ನು ಹೊಂದಿರುತ್ತದೆ. ಸದಸ್ಯ ಸ್ಥಾನ ಹಂಚಿಕೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಮಹಿಳಾ ಮೀಸಲಾತಿಯನ್ನು ಕೂಡ ಅನುಪಾಲನೆ ಮಾಡಬೇಕಾಗುತ್ತದೆ. ತಾಲ್ಲೂಕು ಪಂಚಾಯಿತಿಯ ಸದಸ್ಯರುಗಳ ಅಧಿಕಾರವಧಿಯು ಐದು ವರ್ಷಗಳಾಗಿದ್ದು, ಸಂದರ್ಭ ಬಂದಾಗ ಅಧ್ಯಕ್ಷರಿಗೆ ರಾಜೀನಾಮೆ ನೀಡಬಹುದಾಗಿದೆ ಅಥವಾ ಸರ್ಕಾರ ಅವರನ್ನು ವಜಾಗೊಳಿಸುವ ಅಧಿಕಾರವನ್ನು ಹೊಂದಿದೆ. ತಾಲ್ಲೂಕಿನ ಚುನಾಯಿತ ಪ್ರದೇಶವನ್ನು ಪೂರ್ಣ ಅಥವಾ ಭಾಗಶಃ ಪ್ರತಿನಿಧಿಸುವ ವಿಧಾನಸಭೆ ಮತ್ತು ಲೋಕಸಭೆ ಸದಸ್ಯರುಗಳು ಹಾಗೂ ತಾಲ್ಲೂಕಿನ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿತವಾಗಿರುವ ವಿಧಾನ ಪರಿಷತ್ತಿನ ಮತ್ತು ರಾಜ್ಯಸಭೆಯ ಸದಸ್ಯರು ತಾಲ್ಲೂಕು ಪಂಚಾಯಿತಿ ಸದಸ್ಯರಾಗಿರುತ್ತಾರೆ. ಇದರ ಜೊತೆಗೆ ಆಯಾ ತಾಲ್ಲೂಕಿನ ವ್ಯಾಪ್ತಿಗೊಳಪಡುವ ಗ್ರಾಮ ಪಂಚಾಯಿತಿಗಳ ಐದನೇ ಒಂದರಷ್ಟು ಅಧ್ಯಕ್ಷರುಗಳು ತಾಲೂಕು ಪಂಚಾಯಿತಿಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಾರೆ. ಇವರುಗಳನ್ನು ಲಾಟರಿ ಮೂಲಕ ಆಯ್ಕೆ ಮಾಡಲಾಗುತ್ತದೆ ಹಾಗೂ ಇವರ ಅವಧಿಯು ಒಂದು ವರ್ಷಕ್ಕೆ ಸೀಮಿತವಾಗಿರುತ್ತದೆ. ಇವರ ಆಯ್ಕೆಯು ಪರ್ಯಾನುಕ್ರಮದ (Rotation Base) ಅನುಸಾರ ನಡೆಯುತ್ತದೆ. ಇವರು ಅಧ್ಯಕ್ಷ, ಉಪಾಧ್ಯಕ್ಷರನ್ನು ಆಯ್ಕೆ ಮಾಡುವ ಹಾಗೂ ಅವಿಶ್ವಾಸ ನಿರ್ಣಯದ ಮೂಲಕ ತೆಗೆದು ಹಾಕುವ ಸಭೆಗಳನ್ನು ಹೊರತುಪಡಿಸಿ ಇನ್ನುಳಿದ ಎಲ್ಲ ಸಭೆಗಳಲ್ಲಿ ಭಾಗವಹಿಸುವ ಹಾಗೂ ಚರ್ಚಿಸುವ ಮತ್ತು ಮತ ನೀಡುವ ಹಕ್ಕನ್ನು ಹೊಂದಿರುತ್ತಾರೆ.

ತಾಲ್ಲೂಕು ಪಂಚಾಯಿತಿ ಸಾಮಾನ್ಯ ಸಭೆಗಳು ಕನಿಷ್ಠ ಪಕ್ಷ ಎರಡು ತಿಂಗಳಿಗೊಮ್ಮೆ ನಡೆಸಬೇಕು. ವಿಶೇಷ ಸಭೆಯನ್ನು ನಡೆಸಬಹುದಾಗಿದೆ. ತಾಲೂಕು ಪಂಚಾಯಿತಿಯ ಅಧ್ಯಕ್ಷರು ಸಭೆಗಳ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಹಾಗೂ ಅವರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿಕೊಳ್ಳುತ್ತಾರೆ. ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳನ್ನು ಸದಸ್ಯರು ಬಹುಮತದ ಮೂಲಕ ಆಯ್ಕೆ ಮಾಡಿಕೊಳ್ಳುತ್ತಾರೆ. ಇವರ ಅಧಿಕಾರವಧಿ ಐದು ವರ್ಷಗಳು ಅಥವಾ ತಾಲ್ಲೂಕು ಪಂಚಾಯಿತಿಯ ಸದಸ್ಯತ್ವ

©KTBS Not to be republished

ನಿಂತು ಹೋಗುವವರೆಗೆ ಇವುಗಳಲ್ಲಿ ಪ್ರಥಮವಾಗುವುದನ್ನು ಪರಿಗಣಿಸಲಾಗುತ್ತದೆ. ತಾಲ್ಲೂಕು ಪಂಚಾಯಿತಿಗಳ ಆಡಳಿತದ ಪರಿಣಾಮಕಾರಿ ನಿರ್ವಹಣೆಗಾಗಿ ಸ್ಥಾಯಿಸಮಿತಿಗಳನ್ನು ರಚಿಸಿಕೊಳ್ಳುತ್ತವೆ. ಸರ್ಕಾರವು ಸುಗಮ ಆಡಳಿತ ನಿರ್ವಹಣೆಗಾಗಿ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ನೇಮಿಸುತ್ತದೆ. ತಾಲ್ಲೂಕು ಪಂಚಾಯಿತಿಗಳು ಸ್ಥಳೀಯ ಸಂಸ್ಥೆಗಳ ಕಾರ್ಯಗಳೊಂದಿಗೆ ಇನ್ನೂ ಕೆಲವು ಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ, ಅವುಗಳೆಂದರೆ;

- ಗ್ರಾಮ ಪಂಚಾಯಿತಿಗಳ ವಾರ್ಷಿಕ ಯೋಜನಾ ಪ್ರಸ್ತಾವನೆಗಳನ್ನು ಕ್ರೋಢೀಕರಿಸಿ ಜಿಲ್ಲಾ ಪಂಚಾಯತಿಗಳಿಗೆ ಸಲ್ಲಿಸುವುದು.
- ರಾಜ್ಯ ಸರ್ಕಾರ ಅಥವಾ ಜಿಲ್ಲಾ ಪಂಚಾಯಿತಿಗಳು ಸೂಚಿಸುವ ಎಲ್ಲಾ ಕಲ್ಯಾಣದಾಯಕ ಕಾರ್ಯಕ್ರಮ ಅಥವಾ ಯೋಜನೆಗಳನ್ನು ಕಾರ್ಯಗತಗೊಳಿಸುವುದು.

**ಜಿಲ್ಲಾ ಪಂಚಾಯಿತಿಗಳು:** ಜಿಲ್ಲೆಯ ಗ್ರಾಮೀಣ ಆಡಳಿತವನ್ನು ನೋಡಿಕೊಳ್ಳಲು ಪ್ರತಿ ಜಿಲ್ಲೆಯಲ್ಲೂ ಜಿಲ್ಲಾ ಪಂಚಾಯಿತಿಗಳನ್ನು ಸ್ಥಾಪಿಸಲಾಗುತ್ತಿದೆ ಹಾಗೂ ಜಿಲ್ಲಾಡಳಿತವನ್ನು ಈ ಹಿಂದೆ ಜಿಲ್ಲಾ ಮಂಡಳಿಗಳು ಅಥವಾ ಸಮಿತಿಗಳೆಂದು ಕರೆಯಲಾಗುತ್ತಿತ್ತು. ಜಿಲ್ಲಾ ಪಂಚಾಯಿತಿ ಸದಸ್ಯರು ನೇರವಾಗಿ ಅಥವಾ ಪ್ರತ್ಯಕ್ಷವಾಗಿ ಆ ಜಿಲ್ಲೆಯ ಜನರಿಂದ ಚುನಾಯಿತರಾಗುತ್ತಾರೆ. ಜನಸಂಖ್ಯಾ ಆಧಾರದ ಮೇಲೆ ಜಿಲ್ಲೆಗಳ ಪ್ರತಿನಿಧಿಗಳ ಸಂಖ್ಯೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಕೊಡಗು ಜಿಲ್ಲೆಯಲ್ಲಿ 18,000 ಜನಸಂಖ್ಯೆಗೆ ಒಬ್ಬ ಸದಸ್ಯರನ್ನು ಬೆಂಗಳೂರು ನಗರ ಜಿಲ್ಲೆಯಲ್ಲಿ 20,000 ಜನಸಂಖ್ಯೆಗೆ ಒಬ್ಬ ಸದಸ್ಯರನ್ನು ಚಿಕ್ಕಮಗಳೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ 30,000 ಜನಸಂಖ್ಯೆಗೆ ಒಬ್ಬ ಸದಸ್ಯರನ್ನು ಹಾಗೂ ಉಳಿದೆಲ್ಲಾ ಜಿಲ್ಲೆಗಳಲ್ಲಿ 35,000 ದಿಂದ 45,000 ಜನಸಂಖ್ಯೆಗೆ ಒಬ್ಬ ಸದಸ್ಯರನ್ನು ಆಯ್ಕೆ ಮಾಡಲಾಗುತ್ತದೆ. ಜಿಲ್ಲಾ ಪಂಚಾಯಿತಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಮಹಿಳಾ ಮೀಸಲಾತಿ ಅನ್ವಯವಾಗುತ್ತದೆ. ಜಿಲ್ಲಾ ಪಂಚಾಯಿತಿ ಸದಸ್ಯರ ಅವಧಿ ಐದು ವರ್ಷಗಳಾಗಿರುತ್ತದೆ.

ಜಿಲ್ಲಾ ಪಂಚಾಯಿತಿಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷರ ಅಧಿಕಾರವಧಿ ಐದು ವರ್ಷಗಳು ಅಥವಾ ಜಿಲ್ಲಾ ಪಂಚಾಯಿತಿ ಸದಸ್ಯತ್ವ ನಿಂತು ಹೋಗುವವರೆಗೆ ಇವುಗಳಲ್ಲಿ ಪ್ರಥಮವಾಗುವುದನ್ನು ಪರಿಗಣಿಸಲಾಗುತ್ತದೆ ಜಿಲ್ಲಾ ಪಂಚಾಯಿತಿಗಳು ಕನಿಷ್ಠ ಎರಡು ತಿಂಗಳಿಗೊಮ್ಮೆ ಸಭೆ ನಡೆಸಬೇಕು ಮತ್ತು ಈ ಸಭೆಗಳ ಅಧ್ಯಕ್ಷತೆಯನ್ನು ಅಧ್ಯಕ್ಷರು ವಹಿಸುತ್ತಾರೆ. ಅವರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರು ವಹಿಸುತ್ತಾರೆ. ಇವರಿಬ್ಬರ ಅನುಪಸ್ಥಿತಿಯಲ್ಲಿ ಸದಸ್ಯರಲ್ಲಿಯೇ ಒಬ್ಬರು ಅಧ್ಯಕ್ಷತೆಯನ್ನು ವಹಿಸಿತ್ತಾರೆ. ಪ್ರಾಕೃತಿಕ ವಿಕೋಪಗಳು ಸಂಭವಿಸಿದಾಗ ವಾರ್ಷಿಕವಾಗಿ ಅಧ್ಯಕ್ಷರು ಐದುಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುವ ಅಧಿಕಾರ ಹೊಂದಿರುತ್ತಾರೆ. ಜಿಲ್ಲಾ ಪಂಚಾಯಿತಿಯ ಸಮರ್ಥ ಆಡಳಿದ ದೃಷ್ಟಿಯಿಂದ ಐದು ಸ್ಥಾಯಿ ಸಮಿತಿಗಳನ್ನು ರಚಿಸಿಕೊಳ್ಳಲಾಗುತ್ತದೆ. ಜಿಲ್ಲಾಧಿಕಾರಿಗಳಿಗೆ ಸಮಾನವಾದ ಅಧಿಕಾರಿಯನ್ನು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (CEO) ಯನ್ನಾಗಿ ರಾಜ್ಯ ಸರ್ಕಾರ ನೇಮಿಸುತ್ತದೆ. ಈ ಅಧಿಕಾರಿಯು ಜಿಲ್ಲಾ ಪಂಚಾಯಿತಿಯ ಸಭೆಯಲ್ಲಿ, ಚರ್ಚೆಗಳಲ್ಲಿ ಭಾಗವಹಿಸುವ ಅಧಿಕಾರ ಹೊಂದಿದ್ದರೂ. ಮತ ಚಲಾಯಿಸುವ ಹಕ್ಕು ಇರುವುದಿಲ್ಲ. ಜಿಲ್ಲಾ ಪಂಚಾಯಿತಿ ಕಾರ್ಯ ನಿರ್ವಹಣಾ ಅಧಿಕಾರವನ್ನೂ ಇವರು ಹೊಂದಿರುತ್ತಾರೆ.

ಜಿಲ್ಲಾ ಪಂಚಾಯಿತಿಯು ಅಭಿವೃದ್ಧಿ ಕಾರ್ಯಗಳನ್ನು ಮತ್ತು ಜನಪ್ರಿಯ ಕಲ್ಯಾಣ ಯೋಜನೆಗಳನ್ನು ಕಾರ್ಯಗತಗೊಳಿಸುವ ಎಲ್ಲಾ ಅಧಿಕಾರವು ಜಿಲ್ಲಾ ಪಂಚಾಯಿತಿಗಿದೆ. ರಾಜ್ಯ ಸರ್ಕಾರದ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಕಲ್ಯಾಣ ಯೋಜನೆಗಳು ಜಿಲ್ಲಾ ಪಂಚಾಯಿತಿಯ ಮೂಲಕವೇ ಅನುಷ್ಠಾನಗೊಳ್ಳುತ್ತವೆ. ಇವುಗಳ ಜೊತೆಗೆ ಜಿಲ್ಲಾ ಪಂಚಾಯಿತಿಯು ಕೆಳಗಿನ ಕಾರ್ಯಗಳನ್ನು ನಿರ್ವಹಿಸುತ್ತದೆ.

© KTBS Not to be republished

- ಸರ್ಕಾರದ ಯೋಜನೆಗಳು ಹಾಗೂ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನಕ್ಕಾಗಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳ ನಡುವೆ ಪರಸ್ಪರ ನಂಬಿಕೆ, ವಿಶ್ವಾಸ, ಮತ್ತು ಸಹಕಾರ ಭಾವನೆಯ ವಾತಾವರಣವನ್ನು ಸೃಷ್ಟಿಸುವುದಾಗಿದೆ.
- ಯೋಜನೆಗಳು ಮತ್ತು ಅಭಿವೃದ್ಧಿ ಕಾರ್ಯಗಳನ್ನು ಯಶಸ್ವಿಗೊಳಿಸಲು ಜಿಲ್ಲೆಯ ಎಲ್ಲಾ ಇಲಾಖೆಗಳ ಜೊತೆಗೆ ಸಹಕರಿಸಿ ಸಮನ್ವಯತೆ ಹೊಂದುವುದು.
- ಜಿಲ್ಲೆಯಲ್ಲಿ ಸಹಕಾರಿ ಸಂಘಗಳು, ಸಹಕಾರಿ ಬ್ಯಾಂಕ್‌ಗಳು ಹಾಗೂ ಇನ್ನಿತರೆ ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳು ಕಾರ್ಯನಿರ್ವಹಿಸಿಕೊಂಡು ಹೋಗಲು ಪ್ರೋತ್ಸಾಹ ಮತ್ತು ಬೆಂಬಲ ಒದಗಿಸುವುದು.
- ರಾಜ್ಯ-ಸರ್ಕಾರದ ನಿರ್ದೇಶನದಂತೆ ಕೆಲಸಗಳನ್ನು ಕಾರ್ಯರೂಪಕ್ಕೆ ತರುವುದು.

*1993ರ ಪಂಚಾಯತ್ ರಾಜ್ ಕಾಯಿದೆಯ ಪ್ರಕಾರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲು ರಾಜ್ಯಮಟ್ಟದಲ್ಲಿ ಪ್ರತ್ಯೇಕ ಚುನಾವಣಾ ಆಯೋಗವನ್ನು ಸ್ಥಾಪಿಸಲಾಗಿದೆ. ಹೀಗೆ ಸ್ಥಾಪಿತಗೊಂಡ ಚುನಾವಣಾ ಆಯೋಗವು ಕರ್ನಾಟಕದಲ್ಲಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳಿಗೆ ಮತ್ತು ಪೌರ ಸಂಸ್ಥೆಗಳಿಗೆ ಚುನಾವಣೆಗಳನ್ನು ನಡೆಸುತ್ತದೆ.*

**ನಗರ ಸ್ಥಳೀಯ ಸಂಸ್ಥೆಗಳು :** ರಾಜ್ಯದಲ್ಲಿ ಹಲವಾರು ನಗರ ಮತ್ತು ಪಟ್ಟಣಗಳಿದ್ದು ಇವುಗಳನ್ನು ನಗರ ಪ್ರದೇಶಗಳೆಂದು ಗುರುತಿಸಲಾಗಿದೆ. ಈ ನಗರ ಪ್ರದೇಶಗಳ ಜನರು ಶಿಕ್ಷಣ, ಆರೋಗ್ಯ, ಸಾರಿಗೆ, ಕುಡಿಯುವ ನೀರು, ನೈರ್ಮಲೀಕರಣ, ಮನರಂಜನೆ, ಇತ್ಯಾದಿಯಾದ ಉತ್ತಮ ಸವಲತ್ತುಗಳನ್ನು ಹೊಂದಿರುವುದರ ಜೊತೆಗೆ ಅನೇಕ ಸಮಸ್ಯೆಗಳನ್ನು ಹೊಂದಿರುತ್ತಾರೆ. ಈ ನಗರವಾಸಿಗಳ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಸಲುವಾಗಿ ನಗರಸ್ಥಳೀಯ ಸಂಸ್ಥೆಗಳು ಅಥವಾ ನಗರ ಸ್ಥಳೀಯ ಸ್ವಯಂ ಸರ್ಕಾರಗಳನ್ನು ರಚಿಸಿಕೊಳ್ಳಲಾಗಿದೆ.

**ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮೂರು ಬಗೆ ಅವುಗಳೆಂದರೆ:**

1. ನಗರ ಪಾಲಿಕೆ (ಮಹಾನಗರ ಪಾಲಿಕೆ) – ಪ್ರಮುಖನಗರಗಳು.
2. ನಗರ ಸಭೆಗಳು ಅಥವಾ ಪುರಸಭೆಗಳು – ನಗರ ಪಟ್ಟಣಗಳು.
3. ದಂಡು ಪ್ರದೇಶದ ಭಾಗ – ರಕ್ಷಣಾ ಪಡೆಯ ಹಿಡಿತದಲ್ಲಿರುವ ಪ್ರದೇಶ

ಜನಸಂಖ್ಯೆ, ವರಮಾನ, ಸಾಮಾಜಿಕ ಸ್ಥಿತಿಗತಿಗಳ ಆಧಾರದ ಮೇಲೆ ರಾಜ್ಯ ಸರ್ಕಾರವು ಪ್ರದೇಶವೊಂದನ್ನು ನಗರ ಅಥವಾ ಪಟ್ಟಣವೆಂದು ಘೋಷಿಸುವ ಅಧಿಕಾರ ಹೊಂದಿದೆ. ನಗರದ ಸ್ಥಳೀಯ ಸಂಸ್ಥೆಗಳ ಕಾರ್ಯಗಳು ಹಲವಾರಿದ್ದು ಅವುಗಳಲ್ಲಿ ಪ್ರಮುಖವಾದವುಗಳೆಂದರೆ :

- ಆಯ-ವ್ಯಯ ಪಟ್ಟಿ ತಯಾರಿಸಿ ಮಂಡಳಿಯಿಂದ ಅನುಮೋದನೆ ಪಡೆಯುವುದು.
- ನಗರ ಅಥವಾ ಪಟ್ಟಣದ ಸಂಪೂರ್ಣ ಆಡಳಿತ ನೋಡಿಕೊಳ್ಳುವುದು.
- ಉತ್ತಮ ನಗರ ಯೋಜನೆಯನ್ನು ತಯಾರಿಸಿ ಕಾರ್ಯರೂಪಕ್ಕೆ ತರುವುದು.
- ಉತ್ತಮವಾದ ರಸ್ತೆ, ಸಾರಿಗೆ ವ್ಯವಸ್ಥೆ, ನೀರು ಸರಬರಾಜು, ಶಿಕ್ಷಣ, ವಿದ್ಯುಚ್ಛಕ್ತಿ, ಮಾರುಕಟ್ಟೆ, ಆರೋಗ್ಯ ಹಾಗೂ ಇನ್ನಿತರೆ ಸವಲತ್ತುಗಳನ್ನು ಉತ್ತಮ ರೀತಿಯಲ್ಲಿ ಒದಗಿಸುವುದು.
- ನಗರಗಳಲ್ಲಿ ಒಳಚರಂಡಿ ವ್ಯವಸ್ಥೆ ಮತ್ತು ಘನತ್ಯಾಜ್ಯ ವಸ್ತುಗಳ ವಿಲೇವಾರಿಗೆ ಸೌಕರ್ಯ ಕಲ್ಪಿಸಿ ಸ್ವಚ್ಛತೆ ಕಾಪಾಡುವುದು.
- ಕಟ್ಟಡ ನಿರ್ಮಾಣಕ್ಕೆ ಪರವಾನಗಿ ನೀಡುವುದು, ನಗರ ಸಭೆಯ ಕಟ್ಟಡಗಳು ಹಾಗೂ ಆಸ್ತಿಯನ್ನು ರಕ್ಷಿಸುವುದು.

Not to be re published ©KTBS

- ಜನನ ಮರಣಗಳ ನೋಂದಣಿ ಮಾಡಿಕೊಳ್ಳುವುದು.
- ಕ್ರೀಡಾಂಗಣ, ಮನರಂಜನಾ ಮಂದಿರ, ಉದ್ಯಾನವನಗಳನ್ನು ನಿರ್ಮಿಸಿ ಅವುಗಳನ್ನು ನಿರ್ವಹಿಸುವುದು.
- ನಗರದ ಕೊಳೆಗೇರಿವಾಸಿಗಳಿಗೆ ಸೌಕರ್ಯ ಒದಗಿಸುವುದರ ಮೂಲಕ ಅಲ್ಲಿನ ನಿವಾಸಿಗಳ ಜೀವನ ಮಟ್ಟ ಸುಧಾರಿಸುವಂತೆ ನೋಡಿಕೊಳ್ಳುವುದು.
- ಮಕ್ಕಳ ಕಲ್ಯಾಣ ಕೇಂದ್ರಗಳು, ಬಾಲಾಪರಾಧಿ ಗೃಹಗಳು, ಭಿಕ್ಷುಕರ ಕಾಲೋನಿಗಳು, ಅನಾಥಾಶ್ರಮಗಳು, ಹೀಗೆ ಇತ್ಯಾದಿ ಸಹಾಯಕ ಕೇಂದ್ರಗಳನ್ನು ಸ್ಥಾಪಿಸಿ ನಿರ್ವಹಿಸಿಕೊಂಡು ಹೋಗುವುದು.
- ಈಜುಕೊಳ, ಕ್ರೀಡಾಂಗಣ, ಸಂಗ್ರಹಾಲಯ, ವಾಹನ ನಿಲ್ದಾಣ, ವಾಚನಾಲಯ, ಸಾರ್ವಜನಿಕ ಗ್ರಂಥಾಲಯ, ಪಶುವೈದ್ಯಾಲಯ, ಸಿನಿಮಾ ಮಂದಿರ, ಮಾರುಕಟ್ಟೆ ಪ್ರಾಂಗಣ, ಶವಾಗಾರ, ಮುಂತಾದ ಕಟ್ಟಡಗಳ ನಿರ್ಮಾಣ ಹಾಗೂ ನಿರ್ವಹಣಾ ಕಾರ್ಯಗಳನ್ನು ಮಾಡುವುದು.
- ಮಳೆನೀರು ಕೊಯ್ಲುಗೆ ಯೋಜನೆ ನಿರ್ಮಿಸಿ ಕಾರ್ಯಗತಗೊಳಿಸುವುದು.
- ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುವುದು.
- ನಗರದ ಹಿಂದುಳಿದ ವರ್ಗದವರ ಮತ್ತು ದುರ್ಬಲ ವರ್ಗದವರ ಸುಧಾರಣೆ ಮತ್ತು ಪ್ರಗತಿಗಾಗಿ ಕ್ರಮ ಕೈಗೊಳ್ಳುವುದು.
- ನಗರ ಅಥವಾ ಪಟ್ಟಣವು ಸ್ವಚ್ಛ, ಸುಂದರ ಮತ್ತು ಹಸಿರಿನಿಂದ ಕಂಗೊಳಿಸಲು ಸೂಕ್ತ ಯೋಜನೆಗಳನ್ನು ಕೈಗೊಳ್ಳುವುದು.

**ವರಮಾನದ ಮೂಲಗಳು:** ನಗರ ಪ್ರದೇಶಗಳ ಅಭಿವೃದ್ಧಿ ಮತ್ತು ಪ್ರಗತಿಗಾಗಿ ಮತ್ತು ವಿವಿಧ ಯೋಜನೆಗಳನ್ನು ಕಾರ್ಯಗತಗೊಳಿಸಿಕೊಳ್ಳಲು ವರಮಾನದ ಅವಶ್ಯಕತೆಯಿದೆ. ನಗರ ಸಭೆಗಳ ಆದಾಯದ ಪ್ರಮುಖ ಮೂಲಗಳೆಂದರೆ ಕಟ್ಟಡ ತೆರಿಗೆಗಳು, ಖಾಲಿಸ್ಥಳದ ಮೇಲಿನ ತೆರಿಗೆ, ಅಂಗಡಿ ಮತ್ತು ಮಾರಾಟ ಮಾಡುವ ತಳ್ಳು ಗಾಡಿಗಳ ಮೇಲೆ ವಿಧಿಸುವ ತೆರಿಗೆ, ನೀರಿನ ತೆರಿಗೆ, ಜೊತೆಗೆ ನಗರ ಸಭೆಗಳ ಅಧೀನದ ಕಟ್ಟಡಗಳು, ಮಾರುಕಟ್ಟೆಗಳಲ್ಲಿನ ಮಳಿಗೆಗಳಿಂದ ಬರುವ ಬಾಡಿಗೆ ಹಾಗೂ ಮಾರಾಟ ಮತ್ತು ಮನರಂಜನಾ ಉಪಕರಣ ಇತ್ಯಾದಿಗಳಾಗಿವೆ. ರಾಜ್ಯ ಸರ್ಕಾರ ನೀಡುವ ಅನುದಾನದಿಂದ ನಗರ ಸಂಸ್ಥೆಗಳು ಕಲ್ಯಾಣ ಕಾರ್ಯಗಳನ್ನು ಕೈಗೊಳ್ಳುತ್ತವೆ.

**ನಗರ ಸ್ಥಳೀಯ ಸಂಸ್ಥೆಗಳ ಸಂರಚನೆ.**

**ನಗರ ಪಾಲಿಕೆಗಳು :** ನಗರ ಪ್ರದೇಶಗಳು ಜನಸಂಖ್ಯೆಯ ಆಧಾರವಾಗಿ ಪಟ್ಟಣ ಮತ್ತು ನಗರ ಪ್ರದೇಶಗಳೆಂದು ವರ್ಗೀಕರಿಸಲ್ಪಟ್ಟಿದ್ದು, 20ರಿಂದ 50 ಸಾವಿರದೊಳಗಿನ ಜನಸಂಖ್ಯೆಯನ್ನು ಹೊಂದಿದ್ದರೆ, ಅದನ್ನು ಪಟ್ಟಣವೆಂದು ಪರಿಗಣಿಸಲಾಗುತ್ತದೆ. 50 ಸಾವಿರದಿಂದ 3 ಲಕ್ಷದೊಳಗಿನ ಜನಸಂಖ್ಯೆಯನ್ನು ಹೊಂದಿರುವ ಪ್ರದೇಶವನ್ನು ನಗರವೆಂತಲೂ ವರ್ಗೀಕರಿಸಲಾಗಿದೆ. ಪಟ್ಟಣದಲ್ಲಿ ಆಡಳಿತ ನಡೆಸುವ ಸಭೆಗೆ ಪುರಸಭೆ ಅಥವಾ ಪಟ್ಟಣ ಸಭೆ ಎಂದು ಕರೆದರೆ ನಗರದ ಆಡಳಿತದ ಮಂಡಳಿಗೆ ನಗರಸಭೆ ಎಂದು ಕರೆಯುತ್ತಾರೆ. ಪಟ್ಟಣ ಮತ್ತು ನಗರ ಸಭೆಗಳ ಸದಸ್ಯರುಗಳು ಪ್ರತ್ಯಕ್ಷ ಮತದಾನದ ಮೂಲಕ ಚುನಾಯಿತರಾಗಿ ಆಡಳಿತ ಮಂಡಲಿ ಸಭೆಯ ಸದಸ್ಯ ಅಥವಾ ಕೌನ್ಸಿಲರ್ (Councillor) ಎಂದು ಕರೆಸಿಕೊಳ್ಳುತ್ತಾರೆ. ಈ ಸದಸ್ಯರುಗಳ ಸಂಖ್ಯೆಯು ನಗರ ಅಥವಾ ಪಟ್ಟಣದ ಜನಸಂಖ್ಯೆಯನ್ನು ಆಧರಿಸುತ್ತದೆ. ಪುರಸಭೆಗಳಲ್ಲಿ ಸಾಧಾರಣವಾಗಿ 23 ರಿಂದ 27 ಸದಸ್ಯರಿದ್ದರೆ, ನಗರ ಸಭೆಗಳಲ್ಲಿ 31 ರಿಂದ 37 ಸದಸ್ಯರು ಇರುತ್ತಾರೆ. ಇದರ ಜೊತೆಗೆ ರಾಜ್ಯ ಸರ್ಕಾರವು ಐದು ಜನ ಸದಸ್ಯರುಗಳನ್ನು ಪುರಸಭೆ ಮತ್ತು ನಗರ ಸಭೆಗಳಿಗೆ ನಾಮ ನಿರ್ದೇಶನ ಮಾಡುತ್ತದೆ. ಈ

© KTBS Not to be republished

ನಾಮ ನಿರ್ದೇಶಿತ ಸದಸ್ಯರುಗಳಿಗೆ ಸಭೆಯ ಚರ್ಚೆಯಲ್ಲಿ ಭಾಗವಹಿಸುವ ಹಕ್ಕಿದ್ದು ಮತ ಹಾಕುವ ಹಕ್ಕಿಲ್ಲ. ಸ್ಥಳೀಯ ವಿಧಾನಸಭಾ ಶಾಸಕರು, ವಿಧಾನಪರಿಷತ್ತು ಶಾಸಕರು ಮತ್ತು ಲೋಕಸಭಾ ಸದಸ್ಯರುಗಳು ಸಭೆಗಳಲ್ಲಿ ಭಾಗವಹಿಸುವ ಮತ್ತು ಮತ ಹಾಕುವ ಹಕ್ಕನ್ನು ಹೊಂದಿರುತ್ತಾರೆ. ನಗರ ಸ್ಥಳೀಯ ಸಂಸ್ಥೆಗಳಲ್ಲಿಯೂ ಸಹ ನಿಯಮಾನುಸಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಮಹಿಳಾ ಮೀಸಲಾತಿಯಿದೆ. ಸ್ಥಳೀಯ ಸಂಸ್ಥೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಆ ಸಂಸ್ಥೆಗಳ ಮುಖ್ಯಸ್ಥರಾಗಿರುತ್ತಾರೆ. ಇವರುಗಳನ್ನು ಆಯ್ಕೆಗೊಂಡ ಸದಸ್ಯರು ಚುನಾಯಿಸುತ್ತಾರೆ. ಅಧ್ಯಕ್ಷರು ಸಭೆಯ ಅಧ್ಯಕ್ಷತೆವಹಿಸಿ ಕಲಾಪಗಳು ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುತ್ತಾರೆ. ಅಧ್ಯಕ್ಷರ ಗೈರು ಹಾಜರಿಯಲ್ಲಿ ಉಪಾಧ್ಯಕ್ಷರು ಈ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ. ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಾವಧಿಯು ಐದು ವರ್ಷಗಳಾಗಿದ್ದು ಕೆಲವು ವಿಶೇಷ ಸಂದರ್ಭಗಳಲ್ಲಿ ಅಧಿಕಾರಾವಧಿಯನ್ನು ಮುಂದುವರೆಸುವ ಹಕ್ಕನ್ನು ರಾಜ್ಯ ಸರ್ಕಾರ ಹೊಂದಿದೆ. ಸ್ಥಳೀಯ ಸಂಸ್ಥೆಗಳ ಸಮರ್ಥ ಆಡಳಿತದ ನಿರ್ವಹಣೆಗಾಗಿ ನಾಲ್ಕು ಸ್ಥಾಯಿಸಮಿತಿಗಳನ್ನು ರಚಿಸಿಕೊಳ್ಳಲಾಗುತ್ತದೆ. ರಾಜ್ಯ ಸರ್ಕಾರದಿಂದ ನೇಮಕಗೊಂಡ ಅಥವಾ ಮುಖ್ಯಾಧಿಕಾರಿ ಅಥವಾ ಚೀಫ್ ಆಫೀಸರ್ ಮುಖ್ಯ ಆಡಳಿತಾಧಿಕಾರಿಯಾಗಿ ಸ್ಥಳೀಯ ಸಂಸ್ಥೆಯ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸಿಕೊಂಡು ಹೋಗುತ್ತಾನೆ.

**ಮಹಾನಗರ ಪಾಲಿಕೆಗಳು**

1976ರ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯಿದೆ ಅನ್ವಯ ಮಹಾನಗರ ಪಾಲಿಕೆಗಳನ್ನು ರಚಿಸಲಾಗಿದೆ. ಎರಡು ಲಕ್ಷಕ್ಕಿಂತ ಹೆಚ್ಚು ಜನ ಸಂಖ್ಯೆ ಮತ್ತು ಕೋಟಿಗಿಂತಲೂ ಹೆಚ್ಚು ಆದಾಯವಿರುವ ನಗರಪ್ರದೇಶಗಳಲ್ಲಿ ಮಹಾನಗರ ಪಾಲಿಕೆಗಳನ್ನು ರಚಿಸಲಾಗಿದೆ. ನಗರ ಪಾಲಿಕೆಯ ಸದಸ್ಯರುಗಳು ಚುನಾವಣೆಗಳ ಮೂಲಕ ಚುನಾಯಿತರಾಗಿ ಪಾಲಿಕೆ ಸದಸ್ಯ (Corporator) ಎನಿಸಿಕೊಳ್ಳುತ್ತಾರೆ. ಈ ಸದಸ್ಯರುಗಳ ಸಂಖ್ಯೆ ಜನಸಂಖ್ಯೆ ಆಧಾರಿತವಾಗಿದ್ದು ಸಾಧಾರಣವಾಗಿ 30ರಿಂದ 100ರವರೆಗೆ ಇರುತ್ತದೆ. ಪಾಲಿಕೆ ಗಾತ್ರವನ್ನು ಸರ್ಕಾರ ನಿರ್ಧರಿಸುತ್ತದೆ.

*ಕರ್ನಾಟಕದಲ್ಲಿ ಹತ್ತು ನಗರ ಪಾಲಿಕೆಗಳು ಹಾಗೂ ಒಂದು ಬೃಹತ್ ಮಹಾನಗರಪಾಲಿಕೆ ಇವೆ. ಅವುಗಳೆಂದರೆ 1. ಮೈಸೂರು 2. ಹುಬ್ಬಳ್ಳಿ–ಧಾರವಾಡ 3. ಬಳ್ಳಾರಿ 4. ಬೆಳಗಾವಿ 5. ಕಲಬುರಗಿ 6. ದಾವಣಗೆರೆ 7. ಮಂಗಳೂರು 8. ಶಿವಮೊಗ್ಗ 9. ತುಮಕೂರು 10. ವಿಜಯಪುರ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (BBMP) ಯನ್ನು ಒಳಗೊಂಡಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (BBMP) ಯಲ್ಲಿ ಒಟ್ಟು 198 ಜನ ಪಾಲಿಕೆ ಸದಸ್ಯರಿದ್ದಾರೆ.*

ನಗರವು ಚಿಕ್ಕಚಿಕ್ಕ ಚುನಾವಣಾ ವಿಭಾಗಗಳಾಗಿ ವಿಂಗಡಣೆಗೊಂಡು ಬಡಾವಣೆ ಅಥವಾ ವಾರ್ಡ್ ಎಂದು ಕರೆಯಲ್ಪಟ್ಟಿವೆ. ಪ್ರತಿ ವಾರ್ಡಿನಿಂದ ಒಬ್ಬ ಪಾಲಿಕೆ ಸದಸ್ಯ ಚುನಾಯಿತನಾಗುತ್ತಾನೆ. ಈ ಸದಸ್ಯರುಗಳು ಪ್ರತ್ಯಕ್ಷವಾದ ಮತದಾನದ ಮೂಲಕ ಚುನಾಯಿತರಾಗುತ್ತಾರೆ. ಪಾಲಿಕೆಗಳಲ್ಲೂ ಸಹ ನಿಯಮಾನುಸಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಮಹಿಳಾ ಮಿಸಲಾತಿ ಅನುಪಾಲನೆಯಾಗುತ್ತಿದೆ. ಚುನಾಯಿತ ಸದಸ್ಯರ ಜೊತೆಗೆ ರಾಜ್ಯ ಸರ್ಕಾರವು ನಗರ ಯೋಜನೆ, ಶಿಕ್ಷಣ, ಆರೋಗ್ಯ, ಸ್ಥಳೀಯ ಆಡಳಿತದಲ್ಲಿ ಪರಿಣತಿಯುಳ್ಳ ಐದು ಜನರನ್ನು ಸದಸ್ಯರನ್ನಾಗಿ ನೇಮಕ ಮಾಡುತ್ತದೆ. ಸರ್ಕಾರದಿಂದ ನೇಮಕಗೊಂಡ ಸದಸ್ಯರಿಗೆ ಮತ ಚಲಾಯಿಸುವ ಹಕ್ಕಿರುವುದಿಲ್ಲ. ಆದರೆ ಸಭೆಗೆ ಹಾಜರಾಗಿ ಅಲ್ಲಿನ ಕಾರ್ಯಕಲಾಪಗಳಲ್ಲಿ ಭಾಗವಹಿಸಬಹುದು. ಪಾಲಿಕೆ ವ್ಯಾಪ್ತಿಯ ಶಾಸಕರುಗಳು ಮತ್ತು ಲೋಕಸಭಾ ಸದಸ್ಯರುಗಳಿಗೆ ಸಭೆಯಲ್ಲಿ ಭಾಗವಹಿಸುವ ಮತ್ತು ಮತ ಚಲಾಯಿಸುವ ಹಕ್ಕುಗಳಿವೆ. ಪಾಲಿಕೆಯ ಅಧಿಕಾರಾವಧಿಯು ಐದು ವರ್ಷಗಳಾಗಿದ್ದು ವಿಶೇಷ ಸಂದರ್ಭದಲ್ಲಿ ರಾಜ್ಯ ಸರ್ಕಾರ ಗರಿಷ್ಠ ಒಂದು ವರ್ಷಗಳ ಅವಧಿಗೆ ವಿಸ್ತರಿಸಬಹುದು.

Not to be re published ©KTBS

ಮಹಾಪೌರ ಮತ್ತು ಉಪ–ಮಹಾಪೌರರು ಪಾಲಿಕೆಯ ನಾಯಕರುಗಳು ಎನಿಸಿಕೊಳ್ಳುತ್ತಾರೆ ಇವರುಗಳು ಪಾಲಿಕೆಯ ಸದಸ್ಯರುಗಳಿಂದ ಚುನಾಯಿಸಲ್ಪಡುತ್ತಾರೆ. ಇವರುಗಳ ಅಧಿಕಾರಾವಧಿಯು ಒಂದು ವರ್ಷವಾಗಿರುತ್ತದೆ. ಮಹಾಪೌರರು ಪಾಲಿಕೆಯ ಸಭೆಗಳ ಅಧ್ಯಕ್ಷತೆ ವಹಿಸಿ, ಸಭೆಯು ಕೈಗೊಂಡ ತೀರ್ಮಾನಗಳನ್ನು ಕಾರ್ಯಗತಗೊಳಿಸುವ ಕ್ರಮ ತೆಗೆದುಕೊಳ್ಳುತ್ತಾರೆ. ಮಹಾಪೌರರು ಪಾಲಿಕೆಯ ಕಾರ್ಯನಿರ್ವಹಣೆಯನ್ನು ನಿಯಂತ್ರಿಸುತ್ತಾರೆ. ಸಮರ್ಥ ಆಡಳಿತ ನೀಡಲು ಸ್ಥಾಯಿ ಸಮಿತಿಗಳನ್ನು ರಚಿಸಿಕೊಳ್ಳಲಾಗುತ್ತದೆ.

ಪಾಲಿಕೆಯ ಕಾರ್ಯನಿರ್ವಹಣೆಯನ್ನು ಪಾಲಿಕೆಯ ಆಯುಕ್ತರು ನೋಡಿಕೊಳ್ಳುತ್ತಾರೆ. ಸಾಮಾನ್ಯವಾಗಿ ಭಾರತೀಯ ಆಡಳಿತ ಸೇವೆಯ (IAS) ಅಧಿಕಾರಿಯು ಈ ಹುದ್ದೆಯನ್ನು ಅಲಂಕರಿಸುತ್ತಾರೆ. ಇವರ ಅಧಿಕಾರಾವಧಿ ರಾಜ್ಯ ಸರ್ಕಾರ ನಿಗದಿಪಡಿಸಿದಷ್ಟಾಗಿರುತ್ತದೆ. ಇವರನ್ನು ರಾಜ್ಯ ಸರ್ಕಾರ ನೇಮಿಸುತ್ತದೆ. ಪಾಲಿಕೆಯ ಆಯುಕ್ತರು ಎಲ್ಲಾ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಬೇಕಾದ ಮಾಹಿತಿ ಒದಗಿಸುತ್ತಾರೆ. ಆಯುಕ್ತರು ಮಹಾಪೌರರಿಗೆ ಸಹಕರಿಸಿ ಪಾಲಿಕೆಯ ನಿರ್ಧಾರಗಳನ್ನು ಕಾರ್ಯಗತಗೊಳಿಸಲು ಸಂಪೂರ್ಣ ತೊಡಗಿಸಿಕೊಳ್ಳುತ್ತಾರೆ.

## ಅಭ್ಯಾಸಗಳು

**I. ಖಾಲಿಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಗ್ರಾಮಸಭಾ ಅಧ್ಯಕ್ಷತೆಯನ್ನು ____________ ವಹಿಸುತ್ತಾರೆ.
2. ಗ್ರಾಮಪಂಚಾಯಿತಿ ಅಧ್ಯಕ್ಷರ ಅಧಿಕಾರವಧಿ ____________ ವರ್ಷಗಳು.
3. ಗ್ರಾಮ ಪಂಚಾಯಿತಿಯಲ್ಲಿ ____________ ಜನಸಂಖ್ಯೆಗೆ ಒಬ್ಬ ಸದಸ್ಯರನ್ನು ಆಯ್ಕೆ ಮಾಡಲಾಗುತ್ತದೆ.
4. ಬೆಂಗಳೂರು ನಗರ ಜಿಲ್ಲೆಯಲ್ಲಿ ____________ ಜನಸಂಖ್ಯೆಗೆ ಒಬ್ಬ ಸದಸ್ಯರನ್ನು ಆಯ್ಕೆ ಮಾಡುತ್ತಾರೆ.
5. ಕರ್ನಾಟಕದಲ್ಲಿ ಒಟ್ಟು ____________ ಮಹಾನಗರ ಪಾಲಿಕೆಗಳಿವೆ.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1. ಸ್ಥಳೀಯ ಸ್ವಯಂ ಸರ್ಕಾರದ ಕಾರ್ಯಗಳೇನು?
2. ಗ್ರಾಮಪಂಚಾಯಿತಿ ರಚನೆ ಕುರಿತು ಬರೆಯಿರಿ.
3. ಸ್ಥಳೀಯ ಸ್ವಯಂ ಸರ್ಕಾರಗಳ ಆದಾಯದ ಮೂಲಗಳು ಯಾವುವು?
4. ನಗರ ಸ್ಥಳೀಯ ಸಂಸ್ಥೆಗಳ ಕಾರ್ಯಗಳ ಕುರಿತು ಟಿಪ್ಪಣಿ ಬರೆಯಿರಿ.
5. ಮಹಾನಗರ ಪಾಲಿಕೆಯ ಕುರಿತು ಬರೆಯಿರಿ.

**III. ಚಟುವಟಿಕೆಗಳು**

1. ನೀವು ಸ್ಥಳೀಯ ಸಂಸ್ಥೆಯ ಸದಸ್ಯರಾದರೆ ಅಲ್ಲಿನ ಸಮಸ್ಯೆಗಳ ಪರಿಹಾರಕ್ಕಾಗಿ ನೀವು ಕೈಗೊಳ್ಳುವ ಕ್ರಮಗಳನ್ನು ಪಟ್ಟಿ ಮಾಡಿ.
2. ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ಒದಗಿಸಿರುವ ಮಾಹಿತಿ ಸಂಗ್ರಹಿಸಿರಿ.

*****

©KTBS Not to be re published

## ಅಧ್ಯಾಯ – 3

# ಸಾಮಾಜಿಕ ಸಂಸ್ಥೆಗಳು

### ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಸಾಮಾಜಿಕ ಸಂಸ್ಥೆಗಳ ಅರ್ಥ, ಸ್ವರೂಪ ಮತ್ತು ಮಹತ್ವ.*
- *ಮಾನವ ಮತ್ತು ಸಾಮಾಜಿಕ ಸಂಸ್ಥೆಗಳ ಸಂಬಂಧ.*
- *ಸಾಮಾಜಿಕ ಸಂಸ್ಥೆಗಳ ಪಾತ್ರ ಮತ್ತು ಕಾರ್ಯಗಳು (ಕುಟುಂಬ, ವಿವಾಹ, ಧರ್ಮ).*

### ಸಾಮಾಜಿಕ ಸಂಸ್ಥೆಗಳ ಅರ್ಥ

ಸಮಾಜವನ್ನು ಅರ್ಥೈಸಿಕೊಳ್ಳಲು ನಮಗೆ ಸಾಮಾಜಿಕ ಸಂಸ್ಥೆಗಳು ಅವಶ್ಯಕ. ನಮ್ಮ ಜೀವನದ ಮೂಲಭೂತ ಅವಶ್ಯಕತೆಗಳನ್ನು ಈಡೇರಿಸುವಲ್ಲಿ ಸಾಮಾಜಿಕ ಸಂಸ್ಥೆಗಳು ಅವಿಭಾಜ್ಯ ಅಂಗಗಳಾಗಿವೆ. ಸಾಮಾಜಿಕ ಅಗತ್ಯತೆಗಳ ಸುತ್ತ ರೂಪಿತವಾಗಿರುವ ನೈತಿಕ ನಿಯಮಗಳು, ಮೌಲ್ಯಗಳು, ಅಂತಸ್ತುಗಳು ವಹಿಸುವ ಪಾತ್ರದ ಸುಭದ್ರವಾದ ಸಮಷ್ಟಿಯನ್ನು ಸಂಸ್ಥೆ ಎಂದೆನ್ನಬಹುದು. ಇದರಲ್ಲಿ ಸಂಘಟಿತವಾದ ಪದ್ಧತಿಗಳು, ವಿಧಾನಗಳು, ಕ್ರಿಯೆಗಳು, ನಂಬಿಕೆಗಳು ಇರುತ್ತವೆ.

ಸಾಮಾನ್ಯವಾಗಿ ಸಮೂಹದಲ್ಲಿ ಜನರು ತಮ್ಮ ಆಸಕ್ತಿ ಹಾಗೂ ಅಪೇಕ್ಷೆಗಳನ್ನು ಈಡೇರಿಸಿಕೊಳ್ಳಲು ಒಗ್ಗೂಡಿದಾಗ ಅದು ಸಂಸ್ಥೆಯಾಗುತ್ತದೆ. ಇದಕ್ಕೆ ಹಲವಾರು ನಿಯಮ ಹಾಗೂ ಕಾರ್ಯವಿಧಾನಗಳ ಅಗತ್ಯವಿದೆ. ಸಾಮಾಜಿಕ ನಿಯಮಗಳು ಮತ್ತು ಆಚರಣೆಗಳು ನಿಯಮಿತವಾಗಿ ಮತ್ತು ನಿರಂತರವಾಗಿ ಕಾರ್ಯಾಚರಣೆಯಲ್ಲಿರುವ ಪರಿಣಾಮವಾಗಿ ಸಂಸ್ಥೆಗಳು ಹುಟ್ಟಿಕೊಳ್ಳುತ್ತವೆ. ಸಮ್ನರ್ ಮತ್ತು ಕೆಲ್ಲರ್ ಎಂಬುವವರು ಜೀವಿಗಳ ಶರೀರದಲ್ಲಿ ಜೀವಕಣ ಮತ್ತು ಅಂಗಾಂಗಗಳಿರುವಂತೆ ಸಮಾಜಕ್ಕೆ ಲೋಕಾರೂಢಿಗಳು ಮತ್ತು ಸಂಸ್ಥೆಗಳು ಇರುತ್ತವೆ ಎಂದಿದ್ದಾರೆ.

ನಮ್ಮ ಆಸೆ ಆಕಾಂಕ್ಷೆ ಈಡೇರಿಸಲು ಸ್ಥಿರವಾಗಿ ಸ್ಥಾಪನೆಯಾಗಿರುವುದನ್ನು ಸಂಸ್ಥೆ ಎಂದು ಸಮ್ನರ್ ಹೇಳುತ್ತಾರೆ. ಸಮಾಜದಲ್ಲಿ ಇರುವ ರೂಢಿ, ಕಾನೂನು, ಕುಟುಂಬ ವ್ಯವಸ್ಥೆ, ವಿವಾಹ ಪದ್ಧತಿ, ರಾಜ್ಯವ್ಯವಸ್ಥೆ ಇನ್ನೂ ಮುಂತಾದವುಗಳು ಸಾಮಾಜಿಕ ಸಂಸ್ಥೆಗಳು.

ಮ್ಯಾಕೈವರ್ ಮತ್ತು ಪೇಜ್ ಅವರ ಪ್ರಕಾರ ಸಾಮಾಜಿಕ ಸಂಸ್ಥೆಗಳು ಒಂದು ಗುಂಪಿನ ಚಟುವಟಿಕೆಗಳಿಗಾಗಿ ರೂಪಿಸಿಕೊಂಡಿರುವ ಒಂದು ವ್ಯವಸ್ಥೆ. ಸಾಮಾಜಿಕ ಸಂಸ್ಥೆಗಳು ಸಮಾಜದ ಅವಶ್ಯಕತೆಗಳಿಗೆ ಅನುಗುಣವಾಗಿ ಸೃಷ್ಟಿಸಲ್ಪಟ್ಟು ಸಮಾಜದಿಂದಲೇ ಮಾನ್ಯತೆ ಪಡೆದವುಗಳಾಗಿವೆ.

ಮೊದಲಿಗೆ ಸಾಮಾಜಿಕ ಸಂಸ್ಥೆಗಳ ಲಕ್ಷಣಗಳನ್ನು ತಿಳಿಯೋಣ. ನಂತರ ವಿವಿಧ ಸಾಮಾಜಿಕ ಸಂಸ್ಥೆಗಳನ್ನೂ, ಅವುಗಳ ಕಾರ್ಯಗಳನ್ನೂ ಚರ್ಚೆ ಮಾಡೋಣ.

### ಸಾಮಾಜಿಕ ಸಂಸ್ಥೆಯ ಲಕ್ಷಣಗಳು

**1) ಸಾರ್ವತ್ರಿಕತೆ :** ಸಾಮಾಜಿಕ ಸಂಸ್ಥೆಗಳು ಎಲ್ಲಾ ಸಮಾಜಗಳಲ್ಲಿಯೂ ಕಂಡುಬರುತ್ತವೆ. ಸಾಮಾಜಿಕ ಸಂಸ್ಥೆಗಳು ಮಾನವ ವಿಕಾಸದಷ್ಟೇ ಚರಿತ್ರೆಯನ್ನು ಹೊಂದಿವೆ. ಅಂದರೆ ಮಾನವ ಸಮಾಜದ ಆರಂಭದಿಂದಲೂ ಯಾವುದೇ ಒಂದು ಜಾಗ ಅಥವಾ ಕಾಲಕ್ಕೆ ಸೀಮಿತವಾಗದೆ, ಎಲ್ಲಾ ಕಾಲಗಳಲ್ಲಿಯೂ, ಸಾಮಾಜಿಕ ಸಂಸ್ಥೆಗಳು ಇರುವುದು ತಿಳಿಯುತ್ತದೆ. ಉದಾಹರಣೆಗೆ; ಕುಟುಂಬ, ಶಾಲೆ, ವಿವಾಹ ಇತ್ಯಾದಿ. ಸಾಮಾಜಿಕ ಸಂಸ್ಥೆಗಳು ಸ್ಥಿರವಾಗಿರದೆ ತಮ್ಮ ಕಾರ್ಯಗಳಲ್ಲಿ ರೂಪಾಂತರವಾಗುತ್ತಿರುತ್ತವೆ.

©KTBS Not to be re published

**2) ಸಾಮಾಜಿಕ ಸಂಸ್ಥೆಗಳಲ್ಲಿ ನಿಯಮಗಳಿವೆ:** ಸಾಮಾಜಿಕ ಸಂಸ್ಥೆಗಳ ನಿಯಮಗಳು ತಮ್ಮ ಸಂಸ್ಥೆಯ ಸದಸ್ಯರ ನಡವಳಿಕೆಯ ಮೇಲೆ ನಿಯಂತ್ರಣ ತರುವ ಪ್ರಬಲ ವ್ಯವಸ್ಥೆಗಳಾಗಿವೆ. ಯಾವುದೇ ವ್ಯಕ್ತಿ ಸಾಮಾಜಿಕ ಸಂಸ್ಥೆಗಳ ನಿಯಮಗಳಿಗೆ ವಿರುದ್ಧ ವರ್ತನೆ ಮಾಡಿದರೆ ಅದನ್ನು ಸಾಮಾಜಿಕ ಸಂಸ್ಥೆಗಳು ನಿರ್ಬಂಧಿಸುತ್ತವೆ. ಸಾಮಾಜಿಕ ನಿಯಮಗಳನ್ನು ಎಲ್ಲಾ ಸದಸ್ಯರು ಕಟ್ಟುನಿಟ್ಟಾಗಿ ಪಾಲಿಸುವಂತೆ ಸಾಮಾಜಿಕ ಸಂಸ್ಥೆಗಳ ನಿಯಮಗಳು ಸಂಸ್ಥೆಯ ಸದಸ್ಯರನ್ನು ನಿರ್ದೇಶಿಸುತ್ತವೆ. ಉದಾಹರಣೆಗೆ; ಕುಟುಂಬದಲ್ಲಿ ಹಿರಿಯರು ಯಾವ ಕೆಲಸ ಮಾಡಬೇಕು, ಮಕ್ಕಳು ಯಾವ ಕೆಲಸ ಮಾಡಬೇಕು ಎನ್ನುವುದು ಕುಟುಂಬಗಳೇ ರೂಪಿಸಿಕೊಂಡಿರುವ ನಿಯಮಗಳಾಗಿವೆ.

**3) ಮೂಲಭೂತ ಅವಶ್ಯಕತೆಗಳನ್ನು ಪೂರೈಸುತ್ತವೆ:** ಸಾಮಾಜಿಕ ಸಂಸ್ಥೆಗಳು ನಮ್ಮ ಮೂಲಭೂತ ಅವಶ್ಯಕತೆಗಳಾದ ವಸತಿ, ಲೈಂಗಿಕ ಬಯಕೆ, ಸಂತಾನ ಅಭಿವೃದ್ಧಿ, ವ್ಯಕ್ತಿತ್ವ ಬೆಳವಣಿಗೆ ಇತ್ಯಾದಿ ಅಗತ್ಯಗಳ ಪೂರೈಕೆಗಾಗಿ ಕುಟುಂಬವು ಸಮನ್ವಯತೆಯ ಮೂಲಕ ಕೆಲಸ ಮಾಡುತ್ತಿರುತ್ತದೆ. ಹೀಗೆಯೇ ಅನೇಕ ಸಾಮಾಜಿಕ ಸಂಸ್ಥೆಗಳು ಅಸ್ತಿತ್ವದಲ್ಲಿ ಇರುತ್ತವೆ.

**4) ಲಿಖಿತ ಮತ್ತು ಅಲಿಖಿತ ನೀತಿ ನಿಯಮಗಳು:** ಸಾಮಾಜಿಕ ಸಂಸ್ಥೆಗಳು ಲಿಖಿತ ಮತ್ತು ಅಲಿಖಿತ ರೂಪದ ಸಂಪ್ರದಾಯಗಳನ್ನು ಹೊಂದಿರುತ್ತವೆ. ಹಿಂದಿನಿಂದಲೂ ಬಂದ ಪರಂಪರೆಗಳು, ಲೋಕರೂಢಿ, ನೈತಿಕ–ನಿಯಮ, ಕಟ್ಟುಪಾಡುಗಳು ಅಲಿಖಿತ ರೂಪದಲ್ಲಿರುತ್ತವೆ. ನ್ಯಾಯಾಲಯ, ಕಾನೂನು, ಸರ್ಕಾರ, ಸಂವಿಧಾನ, ಶಾಲೆ, ಮುಂತಾದ ಆಧುನಿಕ ಸಾಮಾಜಿಕ ಸಂಸ್ಥೆಗಳ ನಿಯಮಗಳನ್ನು ಲಿಖಿತ ರೂಪದಲ್ಲಿ ಕಾಣಬಹುದು.

**5) ಪರಸ್ಪರ ಆಂತರಿಕ ಸಂಬಂಧ:** ಒಂದು ಸಮಾಜದಲ್ಲಿ ಇರುವ ಎಲ್ಲಾ ಸಾಮಾಜಿಕ ಸಂಸ್ಥೆಗಳು ಪರಸ್ಪರ ಸಹ ಸಂಬಂಧವನ್ನು ಹೊಂದಿರುತ್ತವೆ. ಉದಾಹರಣೆಗೆ; ಕುಟುಂಬ ಮಕ್ಕಳ ಪಾಲನೆ ಪೋಷಣೆಯನ್ನು ಸಾಂಪ್ರದಾಯಿಕವಾಗಿ ಮಾಡಿದರೆ, ಶಾಲೆಗಳು ಹೊಸ ಹೊಸ ಕಲಿಕೆಯನ್ನು ಮಕ್ಕಳಿಗೆ ಹೇಳಿಕೊಡುತ್ತವೆ. ಶಾಲೆಯಲ್ಲಿ ಮಕ್ಕಳು ಬೇರೆ ಬೇರೆ ಕೌಟುಂಬಿಕ, ಸಾಮಾಜಿಕ ಭಾಷಿಕ ಹಿನ್ನೆಲೆಯಿಂದ ಬಂದ ಮಕ್ಕಳ ಜೊತೆ ಬೆರೆಯುತ್ತ ಬೆಳೆಯುತ್ತಾರೆ ತಮ್ಮ ಕುಟುಂಬದ ಪರಿಸರವನ್ನು ಮೀರಿ ಸಾಮಾಜೀಕರಣಗೊಳ್ಳುತ್ತಾರೆ. ಸಾಮಾಜಿಕ ಸಂಸ್ಥೆಗಳು ಬೇರೆ ಬೇರೆಯಾಗಿದ್ದರೂ ಪ್ರತಿಯೊಂದು ಸಂಸ್ಥೆಯು ಪರಸ್ಪರ ಒಂದಕ್ಕೊಂದು ಸಂಬಂಧ ಹೊಂದಿರುತ್ತವೆ. ಕುಟುಂಬ ಮತ್ತು ಶಾಲೆ ಎಂಬ ಸಂಸ್ಥೆಗಳು ಮಕ್ಕಳ ಮೂಲಕ ಸಂಬಂಧ ಸ್ಥಾಪಿಸುತ್ತವೆ.

**ಸಾಮಾಜಿಕ ಸಂಸ್ಥೆಯ ಮಹತ್ವ**

**1) ಸಂಸ್ಕೃತಿಯ ವಾಹಕವಾಗಿದೆ:** ಸಾಮಾಜಿಕ ಸಂಸ್ಥೆಗಳು ಸ್ಥಳೀಯ ಜ್ಞಾನ, ಕಲೆ, ನಡೆ–ನುಡಿ, ರೂಢಿ, ಸಂಪ್ರದಾಯ, ನೈತಿಕ ನಿಯಮಗಳು, ಮೌಲ್ಯಗಳು, ಸೇರಿದಂತೆ ಸಂಸ್ಕೃತಿಯ ಅಂಶಗಳನ್ನು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ವರ್ಗಾಯಿಸುತ್ತವೆ. ಹೀಗಾಗಿ ಸಾಮಾಜಿಕ ಸಂಸ್ಥೆಗಳು ಸಾಮುದಾಯಿಕ ಜೀವನಕ್ಕೆ ಮಹತ್ವದ್ದಾಗಿವೆ.

**2) ಸದಸ್ಯರ ಅಗತ್ಯಗಳನ್ನು ಪೂರೈಸುತ್ತದೆ :** ಮಾನವರ ಮಾನಸಿಕ, ದೈಹಿಕ, ಸಾಮಾಜಿಕ, ಆರ್ಥಿಕ ಮತ್ತು ಭೌತಿಕ ಅವಶ್ಯಕತೆಗಳನ್ನು ಈಡೇರಿಸುವ ಜೊತೆ ಜೊತೆಗೆ ತನ್ನ ಸದಸ್ಯರು ಸಾಮುದಾಯಿಕ ಜೀವನದಲ್ಲಿ ಹೇಗೆ ಕಾರ್ಯೋನ್ಮುಖರಾಗಬೇಕು ಎನ್ನುವುದನ್ನು ತಿಳಿಸುತ್ತಿರುತ್ತವೆ.

**3) ಸದಸ್ಯರ ಸಾಮಾಜಿಕ ವರ್ತನೆಗಳನ್ನು ರೂಪಿಸುತ್ತವೆ ಮತ್ತು ನಿಯಂತ್ರಿಸುತ್ತವೆ :** ಸಮಾಜದಲ್ಲಿ ಇರುವ ಸಾಮಾಜಿಕ ಸಂಸ್ಥೆಗಳು ನಮಗೆ ಉತ್ತಮ ನಡವಳಿಕೆಗಳು ಯಾವುವು? ತಪ್ಪು ನಡವಳಿಕೆಗಳು ಯಾವುವು?

©KTBS Not to be republished

ಎನ್ನುವುದನ್ನು ಹೇಳಿಕೊಡುತ್ತವೆ. ಉದಾಹರಣೆಗೆ; ಪ್ರಮುಖ ಸಾಮಾಜಿಕ ಸಂಸ್ಥೆಯಾದ ನಮ್ಮ ಶಾಲೆಗಳು ನಮ್ಮ ಪ್ರತಿ ನಿತ್ಯ ನಮ್ಮ ನಡವಳಿಕೆಗಳನ್ನು, ಅಂದರೆ ಬಟ್ಟೆ ತೊಡುವುದರಿಂದ ಕಲಿಕೆಯವರೆಗೆ ಎಲ್ಲಾ ವಿಷಯಗಳನ್ನು ಹೇಳಿಕೊಡುವ ಮೂಲಕ ನಮ್ಮ ವರ್ತನೆಗಳನ್ನು ತಿದ್ದುತ್ತಿರುತ್ತವೆ. ಇದೇ ಸಮಯದಲ್ಲಿ ನಮ್ಮ ಸಾಮಾಜಿಕ ವರ್ತನೆಗಳು ಸಮಾಜಕ್ಕೆ ವಿರುದ್ಧವಾಗಿದ್ದರೆ, ಸಮಾಜದಲ್ಲಿ ನಿಯಮಗಳನ್ನು ಮುರಿದರೆ, ಶಿಕ್ಷೆ, ನಿಂದನೆ, ಬಹಿಷ್ಕಾರ, ದಂಡಗಳ ಮುಖಾಂತರ ಒಳ್ಳೆಯ ಅಥವಾ ಸನ್ಮಾರ್ಗದಲ್ಲಿ ನಡೆಯಲು ನಿರ್ದೇಶಿಸುತ್ತವೆ. ಇನ್ನೂ ನಮ್ಮ ತಪ್ಪುಗಳು ಮುಂದುವರಿದರೆ ಕಾನೂನಿನ ಮೂಲಕ ತಿದ್ದುವ, ದಂಡಿಸುವ ಮೂಲಕ ನಮ್ಮ ಸಾಮಾಜಿಕ ವರ್ತನೆಗಳನ್ನು ನಿಯಂತ್ರಣ ಮಾಡುತ್ತಿರುತ್ತವೆ. ಹೀಗೆ ಸಾಮಾಜಿಕ ಸಂಸ್ಥೆಗಳು ತನ್ನ ಸದಸ್ಯರ ಸಾಮಾಜಿಕ ವರ್ತನೆಗಳನ್ನು ರೂಪಿಸುವಲ್ಲಿ ಮತ್ತು ನಿಯಂತ್ರಣ ಮಾಡುವಲ್ಲಿ ಅತ್ಯಂತ ಮಹತ್ವದ ಸ್ಥಾನ ಹೊಂದಿವೆ.

**4) ಸಾಮಾಜಿಕ ಸಂಸ್ಥೆಗಳು ವ್ಯಕ್ತಿಗಳಿಗೆ ಪಾತ್ರ ನೀಡುತ್ತವೆ:** ಸಾಮಾಜಿಕ ಸಂಸ್ಥೆಗಳು ತನ್ನ ಭಾಗವಾದ ಸದಸ್ಯರನ್ನು ಅವರ ವಯಸ್ಸಿಗೆ ಅನುಗುಣವಾಗಿ ತಮ್ಮದೆ ಆದ ಅಂತಸ್ತು ಮತ್ತು ಪಾತ್ರಗಳನ್ನು ನೀಡುತ್ತಿರುತ್ತವೆ. ಉದಾಹರಣೆಗೆ; ಕುಟುಂಬವು ತಮ್ಮ ಸದಸ್ಯರಿಗೆ ಹಿರಿತನಕ್ಕೆ ಅನುಗುಣವಾಗಿ ಬಂಧುತ್ವ ಪಾತ್ರಗಳನ್ನು ನೀಡುತ್ತದೆ. ಹಾಗೆಯೇ ಸಾಮಾಜಿಕ ಸಂಸ್ಥೆಗಳು ಸಾಮಾಜಿಕ ವ್ಯವಸ್ಥೆಯಲ್ಲಿ ಸಂಬಂಧಗಳನ್ನು ನಿರ್ದೇಶಿಸುವ ಮೂಲಕ ಎಲ್ಲರಿಗೂ ಪಾತ್ರಗಳನ್ನು ನೀಡುತ್ತಿರುತ್ತವೆ.

### ಸಾಮಾಜಿಕ ಸಂಸ್ಥೆಗಳ ಪಾತ್ರ ಮತ್ತು ಕಾರ್ಯಗಳು

ಪ್ರತಿಯೊಂದು ಸಾಮಾಜಿಕ ಸಂಸ್ಥೆಯೂ ತನ್ನದೇ ಕಾರ್ಯಗಳನ್ನು ನಿರ್ವಹಿಸುತ್ತಿರುತ್ತದೆ. ಮೊದಲಿಗೆ ಕುಟುಂಬದ ಕಾರ್ಯಗಳನ್ನು ತಿಳಿಯೋಣ. ಕುಟುಂಬ ಸಮಾಜದ ಮೂಲ ಘಟಕ. ಇದು ಜಗತ್ತಿನ ಎಲ್ಲಾ ಸಮಾಜಗಳಲ್ಲಿಯೂ ಅಸ್ತಿತ್ವದಲ್ಲಿದೆ. ವ್ಯಕ್ತಿ ಸಾಮಾಜಿಕ ಪ್ರಕ್ರಿಯೆಗಳಲ್ಲಿ ಭಾಗವಹಿಸಲು ಅಗತ್ಯವಾಗಿ ಬೇಕಾಗುವ ಎಲ್ಲಾ ಕಾರ್ಯಗಳನ್ನು ನಿರ್ವಹಿಸುತ್ತಿರುತ್ತದೆ. ಕುಟುಂಬದ ಪ್ರಮುಖ ಕಾರ್ಯಗಳು ಈ ಕೆಳಗಿನಂತಿವೆ;

### ಕುಟುಂಬದ ಕಾರ್ಯಗಳು

**1. ಸದಸ್ಯರ ಪೋಷಣೆ :** ಕುಟುಂಬವು ತನ್ನ ಸದಸ್ಯರಿಗೆ ಬೇರೆ ಬೇರೆ ಬಂಧುತ್ವ ಸ್ಥಾನಗಳನ್ನು ನೀಡುತ್ತದೆ. ಇದಕ್ಕೆ ಅನುಗುಣವಾಗಿ ಅವರು ಕುಟುಂಬದಲ್ಲಿ ಬೇರೆ ಬೇರೆ ಪಾತ್ರಗಳನ್ನು ನಿರ್ವಹಿಸುತ್ತಾರೆ. ಕುಟುಂಬವು ತನ್ನ ಎಲ್ಲ ಸದಸ್ಯರ ಪೋಷಣೆಯ ಪ್ರಮುಖ ತಾಣ. ಕುಟುಂಬವು ನಾವು ಜನಿಸಿದ ದಿನದಿಂದ ನಮ್ಮ ಪಾಲನೆ, ಪೋಷಣೆ ಮಾಡುತ್ತಿರುತ್ತದೆ. ಕುಟುಂಬದಲ್ಲಿ ಇರುವ ಅಜ್ಜಿ–ತಾತ, ಅಪ್ಪ–ಅಮ್ಮ, ನಮ್ಮನ್ನು ಪ್ರತಿಕ್ಷಣದಲ್ಲಿಯೂ ಎಚ್ಚರಿಕೆಯಿಂದ ನೋಡಿಕೊಂಡು ನಾವು ಚಿಕ್ಕ ಮಕ್ಕಳಿಂದ ದೊಡ್ಡವರಾಗುವವರೆಗೆ ನಮ್ಮ ಎಲ್ಲಾ ಅಗತ್ಯಗಳನ್ನು ನೀಡಿ ಪೋಷಿಸುತ್ತಾರೆ. ಕೇವಲ ಚಿಕ್ಕವರನ್ನು ಮಾತ್ರ ಕುಟುಂಬ ಪೋಷಣೆ ಮಾಡುವುದಿಲ್ಲ. ತನ್ನ ಎಲ್ಲಾ ಸದಸ್ಯರನ್ನು ಅವರಿಗೆ ಅಗತ್ಯವಾದಾಗ ಪೋಷಣೆ ಮಾಡುತ್ತದೆ. ಉದಾಹರಣೆಗೆ; ಕುಟುಂಬದ ಸದ್ಯಸ್ಯರಲ್ಲಿ ಯಾರಾದರೂ ಅನಾರೋಗ್ಯಕ್ಕೆ ತುತ್ತಾದಾಗ, ಹಿರಿಯರು ಮುಪ್ಪಿನ ವಯಸ್ಸಿನಲ್ಲಿ ಅಶಕ್ತರಾದಾಗ ಕುಟುಂಬ ಅವರ ಪೋಷಣೆ ಪಾಲನೆ ಮಾಡುತ್ತದೆ.

**2. ಭದ್ರತೆ ಮತ್ತು ಸಾಮಾಜೀಕರಣ:** ಕುಟುಂಬದಲ್ಲಿ ಸದಸ್ಯರು ಮಕ್ಕಳಿಗೆ ಸಮಾಜದಲ್ಲಿ ಹೇಗೆ ವ್ಯವಹರಿಸಬೇಕು, ಹೇಗೆ ನಡೆದುಕೊಳ್ಳಬೇಕು, ಇತ್ಯಾದಿಗಳನ್ನು ಸಾಮಾಜೀಕರಣದ ಮೂಲಕ ಕುಟುಂಬವು ಕಲಿಸುತ್ತದೆ. ಇದರ ಜೊತೆಗೆ ತಮ್ಮ ಎಲ್ಲಾ ಸದಸ್ಯರಿಗೆ ಎಲ್ಲಾ ರೀತಿಯ ಸಾಮಾಜಿಕ ಭದ್ರತೆಗಳನ್ನು ನೀಡುತ್ತದೆ. ಅಂದರೆ ಮಕ್ಕಳಿಗೆ ಶಿಕ್ಷಣ, ಅನಾರೋಗ್ಯ ಸಮಯದಲ್ಲಿ ಆರೈಕೆ, ಉದ್ಯೋಗ ಪಡೆಯಲು ಮತ್ತು ಮಾಡಲು ಬೇಕಾದ ಬೆಂಬಲ ಮತ್ತು ಕುಶಲತೆಯನ್ನು ಮತ್ತು ನಮಗೆ ಬೇಕಾದ ಎಲ್ಲಾ ಭದ್ರತೆಗಳನ್ನು ನೀಡುತ್ತದೆ.

**ವಿವಾಹದ ಕಾರ್ಯಗಳು**

**1. ಸಾಮಾಜಿಕ ಅನುಮತಿ :** ವಿವಾಹವು ಒಂದು ಪ್ರಮುಖ ಸಾಮಾಜಿಕ ಸಂಸ್ಥೆಯಾಗಿದೆ. ವಿವಾಹವು ಪುರುಷ ಮತ್ತು ಮಹಿಳೆ, ಜೊತೆಯಾಗಿ ಜೀವನ ನಡೆಸಲು ಸಾಮಾಜಿಕ ಅನುಮತಿ ಪಡೆದುಕೊಳ್ಳುವ ಪ್ರಕ್ರಿಯೆ. ವಿವಾಹವು ಹೆಣ್ಣು ಗಂಡು ಜೋಡಿಯಾಗಲು ಸಾಮಾಜಿಕ ಅನುಮೋದನೆ ನೀಡುತ್ತದೆ. ವಿವಾಹವು ಪುರುಷರು ಮತ್ತು ಮಹಿಳೆಯರಿಗೆ ಕೌಟುಂಬಿಕ ಜೀವನಕ್ಕೆ ಪ್ರವೇಶವನ್ನು ನೀಡುತ್ತದೆ. ವಿವಾಹವು ವೈವಾಹಿಕ ಸಂಬಂಧದ ಮೂಲಕ ಹೆಣ್ಣು ಮತ್ತು ಗಂಡು ಒಂದು ನಿರ್ದಿಷ್ಟ ಸೂರಿನಲ್ಲಿ ಬಹಳ ಗಟ್ಟಿಯಾಗಿ ನೆಲೆ ನಿಂತು ಧಾರ್ಮಿಕ, ಆರ್ಥಿಕ, ಸಾಮಾಜಿಕ. ಸಾಂಸ್ಕೃತಿಕ ಜೀವನವನ್ನು ನಡೆಸಲು ಅನುವು ಮಾಡಿಕೊಡುತ್ತದೆ. ಮಾನವ ನಾಗರಿಕತೆಯಷ್ಟು ಹಳೆಯದಾಗಿರುವ ವಿವಾಹ ಸಂಸ್ಥೆಯು ಅಲ್ಲಿಂದ ನಿರಂತರವಾಗಿ ಬೆಳೆದು ಬಂದಿದೆ. ಹಾಗೆಯೇ ಈ ಸಂಸ್ಥೆಯು ಅನೇಕ ಬದಲಾವಣೆಗಳಿಗೆ ಒಳಪಟ್ಟಿದೆ/ಪಡುತ್ತಿದೆ.

**2. ಕುಟುಂಬ ಸ್ಥಾಪನೆಗೆ ತಳಹದಿ:** ವಿವಾಹವು ಕುಟುಂಬ ವ್ಯವಸ್ಥೆಯ ಸ್ಥಾಪನೆಗೆ ಪ್ರೋತ್ಸಾಹ ನೀಡುತ್ತದೆ. ಸಂತಾನೋತ್ಪತ್ತಿ ಮತ್ತು ಮಕ್ಕಳ ಬೆಳೆಸುವಿಕೆ ಮತ್ತು ಸಾಮಾಜೀಕರಣದ ಪ್ರಕ್ರಿಯೆಗಳು ಕುಟುಂಬದ ನೆರವಿನೊಂದಿಗೆ ನಡೆಯುತ್ತವೆ. ಮಕ್ಕಳು ಹುಟ್ಟಿದ ಬಳಿಕವೂ ವಿವಾಹ ಸಂಬಂಧವು ಮುಂದುವರೆಯುತ್ತದೆ. ಕುಟುಂಬದಲ್ಲಿ ಕಂಡುಬರುವ ಎಲ್ಲಾ ರೀತಿಯ ಸಂಬಂಧಗಳನ್ನು ನಿರ್ದೇಶಿಸುವ ಅಧಿಕಾರ ವಿವಾಹಕ್ಕಿದೆ. ವಿವಾಹ ಸಂಬಂಧಗಳ ಪರಿಣಾಮವಾಗಿ ಅನೇಕ ಸಂದರ್ಭಗಳಲ್ಲಿ ಐಕಮತ್ಯಕ್ಕೆ ಸಹಾಯಕವಾಗಿದೆ. ವಿವಾಹವು ವಿಭಿನ್ನ ಸಮೂಹಗಳ ಜನರನ್ನು ಒಂದುಗೂಡಿಸುವ ಮೂಲಕ ಅವರಲ್ಲಿ ನಾವೆಲ್ಲಾ ಆತ್ಮೀಯ ಬಂಧುಗಳು ಎನ್ನುವ ಭಾವನೆ ಮೂಡಿಸಿ ಏಕತೆಗೆ ಸಹಕಾರಿಯಾಗಿದೆ.

**3. ಸಂಬಂಧದಲ್ಲಿ ಕಾನೂನು ಬದ್ಧತೆ:** ವಿವಾಹ ಕೇವಲ ಪತಿ, ಪತ್ನಿಯರ ನಡುವಿನ ಸಂಬಂಧವಾಗಿರದೆ ಅವರ ಜೊತೆಗೆ ಮನೆಯ ಇತರೆ ಸದಸ್ಯರುಗಳ ಸಂಬಂಧಗಳು ಏರ್ಪಡುತ್ತದೆ. ಇಲ್ಲಿ ಹುಟ್ಟಿದ ಮಗು ತನ್ನ ತಂದೆ-ತಾಯಿಯರ ಕುಟುಂಬದ ಆಸ್ತಿಗೆ ಉತ್ತರದಾಯಿತ್ವವನ್ನು ಹೊಂದಿರುತ್ತದೆ. ಸಮಾಜದ ನಿರಂತರತೆಗೆ ಕುಟುಂಬದ ಮುಖಾಂತರ ವಿವಾಹದ ಚೌಕಟ್ಟಿನಲ್ಲಿ ಉತ್ತರಾಧಿಕಾರತ್ವ ಇತ್ಯಾದಿ ವಿಷಯಗಳಿಗೆ ಕಾನೂನಿನ ಮಾನ್ಯತೆ ಕೂಡ ಇದೆ.

**ಧರ್ಮದ ಕಾರ್ಯಗಳು**

ಎಲ್ಲಾ ಸಮಾಜಗಳಲ್ಲಿ ಕಂಡುಬರುವ ಮತ್ತೊಂದು ಪ್ರಮುಖ ಸಾಮಾಜಿಕ ಸಂಸ್ಥೆಯೆಂದರೆ ಧರ್ಮ. ಮಾನವನ ನಾಗರಿಕತೆಯೊಂದಿಗೆ ಧರ್ಮ ಉಗಮಗೊಂಡಿದೆ. ಇದು ಸಮಾಜದ ಅವಿಭಾಜ್ಯ ಅಂಗ. ಧರ್ಮದ ಕೆಲವು ಕಾರ್ಯಗಳು ಈ ಕೆಳಗಿನಂತಿವೆ.

**1. ಸಾಮಾಜೀಕರಣದ ಕಾರ್ಯ:** ಧರ್ಮವು ಸಾಮಾಜೀಕರಣದ ಬಹಳ ಮುಖ್ಯ ವಾಹಕವಾಗಿದೆ. ಸಂಪ್ರದಾಯಗಳು, ಧಾರ್ಮಿಕ ವಿಧಿಗಳು ಮತ್ತು ಆಚರಣೆಗಳನ್ನು ನಡೆಸುವುದರ ಮೂಲಕ ಸತ್ಯಸಂಧತೆ, ಸಹಕಾರ, ನಿರಪೇಕ್ಷತೆ, ಸಹನೆ, ತ್ಯಾಗ, ಶಾಂತಿ ಇತ್ಯಾದಿ ಮೌಲ್ಯಗಳ ಪ್ರಸಾರದಲ್ಲಿ ಧರ್ಮ ನೆರವಾಗುತ್ತದೆ.

**2. ಸಾಮಾಜಿಕ ಐಕ್ಯತೆ:** ಧರ್ಮವು ಸಾಮಾಜಿಕ ಹೊಂದಾಣಿಕೆಗೆ ಆಕರವಾಗಿದೆ. ಸತ್ಯ, ಅಹಿಂಸೆ, ಪ್ರಾಮಾಣಿಕತೆ ಇತ್ಯಾದಿ ಧಾರ್ಮಿಕ ಮೌಲ್ಯಗಳಾಗಿದ್ದು. ಈ ಮೌಲ್ಯಗಳು ಸಾಮಾಜಿಕ ಐಕ್ಯತೆಯನ್ನು ಕಾಪಾಡಿಕೊಳ್ಳಲು ಸಹಾಯಕವಾಗಿವೆ. ಸಂಪ್ರದಾಯಗಳಲ್ಲಿ ಇರುವ ವಿವಿಧತೆ, ಏಕರೂಪತೆ ಮತ್ತು ಸಂಕೇತಗಳ ಬಳಕೆ ಇತ್ಯಾದಿಗಳು ಜನರಲ್ಲಿ ಐಕ್ಯತೆಯನ್ನು ಮೂಡಿಸುತ್ತವೆ. ಇದು ಧರ್ಮಗಳ ಆಶಯವಾಗಿದೆ. ಇವುಗಳಂತೆ ನಡೆದರೆ ಧಾರ್ಮಿಕ ಸೌಹಾರ್ದ ಇರುತ್ತದೆ.

**3. ಮೌಲ್ಯಗಳ ಸಂರಕ್ಷಣೆ:** ಪ್ರಾಮಾಣಿಕತೆ, ನ್ಯಾಯ, ಸಮಾನತೆ, ಅಹಿಂಸೆ, ಮೊದಲಾದ ಸಾಮಾಜಿಕ ಮೌಲ್ಯಗಳನ್ನು ಉಳಿಸಿಕೊಂಡು ಬರಲು ಧರ್ಮವು ಪರಿಣಾಮಕಾರಿ ಸಾಧನವಾಗಿದೆ. ಇವು ಎಲ್ಲ ಧರ್ಮಗಳು ಎತ್ತಿ ಹಿಡಿದಿರುವ ಸಾಮಾನ್ಯ ಮೌಲ್ಯಗಳೇ ಆಗಿವೆ. ಧರ್ಮಗಳು ಮನುಷ್ಯನ ಬದುಕಿನಲ್ಲಿ ಮೌಲ್ಯಗಳನ್ನು ಉಪದೇಶಿಸುತ್ತವೆ.

©KTBS Not to be republished

**4. ಸಾಮಾಜಿಕ ನಿಯಂತ್ರಣ:** ಧರ್ಮವು ಸಾಮಾಜಿಕ ನಿಯಂತ್ರಣದ ಅತಿ ಮುಖ್ಯ ಸಾಧನವಾಗಿದೆ. ಅದು ದೇವರು ಮತ್ತು ಅಧ್ಯಾತ್ಮದ ಆಯಾಮವನ್ನು ಸೃಷ್ಟಿಸುವ ಮೂಲಕ ಮನುಷ್ಯರ ಚಟುವಟಿಕೆಗಳನ್ನು ನಿಯಮಿತಗೊಳಿಸುತ್ತದೆ. ನಾವು ನೈತಿಕವಾಗಿರಲು, ಶಿಸ್ತಿನಿಂದ ಇರಲು ಮತ್ತು ಸಮಾಜದ ಸಾಮಾಜೀಕೃತ ಪ್ರಜೆಗಳಾಗಿರಲು ಧರ್ಮ ನಮಗೆ ನೆರವಾಗುತ್ತವೆ. ಧರ್ಮಗಳ ಈ ಆದರ್ಶಗಳನ್ನು ಅರ್ಥಮಾಡಿಕೊಂಡು ಪರಸ್ಪರ ದ್ವೇಷಿಸುವುದನ್ನು ಬಿಡುವ ಅಗತ್ಯವಿದೆ.

## ಅಭ್ಯಾಸಗಳು

**I. ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಸಾಮಾಜಿಕ ಸಂಸ್ಥೆಗಳು ____________________ ಬಯಕೆಗಳನ್ನು ಪೂರೈಸುತ್ತವೆ.
2. ಕುಟುಂಬ ಒಂದು ______________ ಸಂಸ್ಥೆ.
3. ಸಾಮಾಜಿಕ ಸಂಸ್ಥೆಗಳು ಸಂಸ್ಕೃತಿಯನ್ನು ವರ್ಗಾಯಿಸುವ ____________ ಆಗಿವೆ.
4. ಧರ್ಮವು ಮೌಲ್ಯಗಳ ______ ಗೆ ಸಹಾಯ ಮಾಡುತ್ತದೆ.

**II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**

1. ಸಾಮಾಜಿಕ ಸಂಸ್ಥೆ ಎಂದರೇನು?
2. ಕುಟುಂಬದ ಕಾರ್ಯಗಳನ್ನು ತಿಳಿಸಿ.
3. ಸಾಮಾಜಿಕ ಸಂಸ್ಥೆಯ ಲಕ್ಷಣಗಳು ಯಾವುವು?
4. ಸಾಮಾಜಿಕ ಸಂಸ್ಥೆಯ ಪ್ರಕಾರಗಳು ಯಾವುವು?

**III. ಕೆಳಗಿನ ಪ್ರಶ್ನೆಗಳಿಗೆ ನಾಲ್ಕೈದು ವಾಕ್ಯದಲ್ಲಿ ಉತ್ತರಿಸಿ.**

1. ಸಾಮಾಜಿಕ ಸಂಸ್ಥೆಗಳಿಗೂ ಸಮಾಜಕ್ಕೂ ಇರುವ ಸಂಬಂಧವನ್ನು ವಿವರಿಸಿ.
2. ಸಾಮಾಜಿಕ ಸಂಸ್ಥೆಯಾದ ಧರ್ಮದ ಆದರ್ಶಗಳನ್ನು ತಿಳಿಸಿ.
3. ಸಾಮಾಜಿಕ ಸಂಸ್ಥೆಯಾದ ಕುಟುಂಬದ ಸದಸ್ಯನಾಗಿ ನಿಮ್ಮ ಪಾತ್ರಗಳನ್ನು ಪಟ್ಟಿ ಮಾಡಿರಿ.
4. ಸಾಮಾಜಿಕ ಸಂಸ್ಥೆಯಾದ ವಿವಾಹ ಕುರಿತು ಟಿಪ್ಪಣಿ ಬರೆಯಿರಿ.

**IV. ಚಟುವಟಿಕೆಗಳು.**

1. ಸಾಮಾಜಿಕ ಸಂಸ್ಥೆಗಳನ್ನು ಚಿತ್ರಸಹಿತ ಮಕ್ಕಳಿಂದ ಪಟ್ಟಿ ಮಾಡಿಸುವುದು.
2. ಸಾಮಾಜಿಕ ಸಂಸ್ಥೆಗಳ ಕಾರ್ಯಗಳನ್ನು ಕುರಿತು ಮಕ್ಕಳ ಗುಂಪಿನಲ್ಲಿ ಚರ್ಚಿಸುವುದು.

**IV. ಯೋಜನೆ**

1. ಬಾಲ್ಯ ವಿವಾಹದಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲು ಕಾರ್ಯಕ್ರಮಗಳನ್ನು ಆಯೋಜಿಸುವುದು.

*****

©KTBS Not to be re published

## ಅಧ್ಯಾಯ – 4

# ಸಮಾಜದ ಪ್ರಕಾರಗಳು

### ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- ಸಮಾಜದ ಅರ್ಥ.
- ಸಮಾಜದ ವಿವಿಧ ಪ್ರಕಾರಗಳು.
- ಬೇಟೆ ಮತ್ತು ಆಹಾರ ಸಂಗ್ರಹಣಾ ಸಮಾಜ.
- ಪಶುಪಾಲನಾ ಸಮಾಜ.
- ಕೃಷಿ ಸಮಾಜ.
- ಗ್ರಾಮೀಣ ಸಮಾಜ.
- ನಗರ ಸಮಾಜ.
- ಕೈಗಾರಿಕಾ ಸಮಾಜ.
- ಮಾಹಿತಿ ಸಮಾಜ.

### ಸಮಾಜ ಅರ್ಥ

ಸಮಾಜಶಾಸ್ತ್ರದ ಅಧ್ಯಯನದಲ್ಲಿ ಸಮಾಜವು ಪ್ರಧಾನ ಅಧ್ಯಯನ ವಸ್ತು. ಮಾನವ ಸಮಾಜವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಲು ರೂಪಿಸಲ್ಪಟ್ಟ ಶಾಸ್ತ್ರವೇ ಸಮಾಜಶಾಸ್ತ್ರ. ವ್ಯಕ್ತಿ ಮತ್ತು ಸಮಾಜ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಮಾನವ ಒಂಟಿಯಾಗಿ–ಏಕಾಂಗಿಯಾಗಿ ಜೀವಿಸಲಾರ. ಮಾನವರು ಯಾವಾಗಲೂ ಸಾಂಘಿಕವಾಗಿ ಸಮಾಜದಲ್ಲಿ ಜೀವಿಸುತ್ತಾರೆ. ಸಮಾಜವು ಮಾನವ ಬೆಳೆದು ಸರ್ವತೋಮುಖ ವ್ಯಕ್ತಿತ್ವ ರೂಪುಗೊಳ್ಳುವುದಕ್ಕೆ ಸಹಕಾರಿಯಾಗುವುದು.

ಸಮಾಜದಲ್ಲಿ ಜನಜೀವನ, ಸಂಸ್ಕೃತಿ, ಆಚಾರ, ವಿಚಾರ, ಉದ್ಯೋಗ ಮುಂತಾದ ಅಂಶಗಳು ಪ್ರದೇಶದಿಂದ ಪ್ರದೇಶಕ್ಕೆ ಬೇರೆ–ಬೇರೆಯಾಗಿರುತ್ತವೆ. ಹಾಗೆಯೇ ಗ್ರಾಮಾಂತರ ಪ್ರದೇಶಗಳಿಗೆ ಹೋದಾಗ ನೂರಾರು ಸಂಖ್ಯೆಯ ಕುರಿಗಳು, ದನಗಳು, ಮತ್ತಿತರ ಪ್ರಾಣಿಗಳು, ಕಣ್ಣಿಗೆ ಕಾಣುತ್ತವೆ. ಅಂತೆಯೇ ಹೊಲ–ಗದ್ದೆಗಳು, ಗುಂಪು–ಗುಂಪಾಗಿರುವ ಮನೆಗಳು ಮತ್ತು ಹೊಲ ಗದ್ದೆಗಳಲ್ಲಿ ವ್ಯವಸಾಯ ಮಾಡುತ್ತಿರುವ ರೈತರನ್ನು ಕಾಣಬಹುದು. ಬೆಂಗಳೂರು, ಮುಂಬೈ, ದೆಹಲಿಯಂತಹ ನಗರಗಳಲ್ಲಿ ರಸ್ತೆಯ ತುಂಬಾ ವಾಹನಗಳು, ದಟ್ಟ ಜನಸಂದಣಿ, ವಿಶಾಲವಾದ ಬಡಾವಣೆಗಳು ಹಾಗೂ ಕೊಳಚೆ ಪ್ರದೇಶಗಳು, ಕಾರ್ಖಾನೆಗಳು, ಎತ್ತರವಾದ ಕಟ್ಟಡಗಳು, ದೊಡ್ಡ–ದೊಡ್ಡ ಸಂಸ್ಥೆಗಳು, ಸರ್ಕಾರಿ ಕಛೇರಿಗಳು, ಆಸ್ಪತ್ರೆಗಳು ಇನ್ನೂ ಮುಂತಾದ ಆಧುನಿಕ ಸಂಸ್ಥೆಗಳನ್ನು ನಾವು ಕಾಣಬಹುದು.

**ಸಮಾಜದ ಅರ್ಥ:** 'ಸಮಾಜ' ಎಂಬ ಕನ್ನಡ ಪದವು ಇಂಗ್ಲಿಷ್ ಭಾಷೆಯ **'ಸೊಸೈಟಿ'** ಎಂಬ ಪದದ ಅನುವಾದವಾಗಿದೆ. ಸೊಸೈಟಿ ಎಂಬ ಪದವು ಲ್ಯಾಟಿನ್ ಭಾಷೆಯ **'ಸೋಷಿಯಸ್'**ನಿಂದ ಬಂದಿದೆ. ಹೀಗೆ–ಂದರೆ ಒಡನಾಡಿತನ, ಗೆಳೆತನ, ಎಂದರ್ಥ. ಅಂದರೆ ಒಡನಾಡಿಗಳ ಒಡನಾಟದಿಂದ ಒಟ್ಟುಗೂಡಿರುವ ವ್ಯವಸ್ಥೆಯೇ **'ಸಮಾಜ'** ಎನ್ನಬಹುದು.

### ಸಮಾಜದ ವ್ಯಾಖ್ಯೆಗಳು

**ಮೆಕೈವರ್ ಮತ್ತು ಪೇಜ್‌ರವರ ಪ್ರಕಾರ :** 'ಸಾಮಾಜಿಕ ಸಂಬಂಧಗಳ ಬಲೆಯೇ ಸಮಾಜ. ಒಂದು ಸಮುದಾಯದೊಳಗಿನ ಸಂಸ್ಥೆಗಳ, ಸಂಘಗಳ, ಸಂಕೀರ್ಣವಾದ ವ್ಯವಸ್ಥೆಯೇ ಸಮಾಜ.'

©KTBS Not to be republished

**ಸ್ವರೂಪ :**

**1) ಸಮಾಜವು ಸಮೂಹಗಳ ಸಮೂಹವಾಗಿದೆ:** ಹಲವು ಜನರು ಒಟ್ಟುಗೂಡಿ ಸಮೂಹವಾಗುತ್ತದೆ. ಅಂತಹ ಹಲವಾರು ಸಮೂಹಗಳು ಒಟ್ಟುಗೂಡಿ ಸಮಾಜವಾಗುತ್ತದೆ. ಪ್ರತಿಯೊಂದು ಸಮಾಜವು ಕುಟುಂಬ, ನೆರೆಹೊರೆ, ಗ್ರಾಮ, ನಗರ, ಕಾರ್ಮಿಕ ಸಂಘ, ಧಾರ್ಮಿಕ ಸಮೂಹ, ರಾಜಕೀಯ ಪಕ್ಷಗಳು, ಮುಂತಾದ ಸಮೂಹಗಳನ್ನು ಹೊಂದಿರುವುದು. ಅದಕ್ಕಾಗಿ ಎಚ್.ಎಂ. ಜಾನ್ಸನ್ ಅವರು 'ಸಮೂಹಗಳ ಸಮೂಹವೇ ಸಮಾಜ' ಎಂದಿದ್ದಾರೆ.

**2) ಸಮಾಜವು ಸಾಮಾಜಿಕ ಸಂಬಂಧಗಳ ಬಲೆಯಾಗಿದೆ:** ಸಮಾಜವೆಂದರೆ ಅದು ಕೇವಲ ಜನರ ಸಂಗ್ರಹವಲ್ಲ; ಅದು ಜನರ ನಿರಂತರ ಅಂತರ್ ಕ್ರಿಯೆಯಲ್ಲಿ ತೊಡಗಿರುವ ಜನರ ಸಮೂಹ. ಇದರ ಸಾಮಾಜಿಕ ಸಂಬಂಧಗಳ ವ್ಯಾಪ್ತಿ ವಿಶಾಲವಾಗಿದೆ. ಉದಾಹರಣೆಗೆ; ಗುರು–ಶಿಷ್ಯರು, ಪಾಲಕರು–ಮಕ್ಕಳು, ರೋಗಿಗಳು–ವೈದ್ಯರು, ಗಂಡ–ಹೆಂಡತಿ, ಮುಂತಾದವುಗಳಲ್ಲಿ ಇಂತಹ ಸಂಬಂಧಗಳನ್ನು ಕಾಣುತ್ತೇವೆ. ಹೀಗಾಗಿಯೇ ಮೆಕ್ಕೈವರ್ ಮತ್ತು ಪೇಜ್ ಅವರು 'ಸಾಮಾಜಿಕ ಸಂಬಂಧಗಳ ಬಲೆಯೇ ಸಮಾಜ' ಎಂದಿದ್ದಾರೆ.

**3) ಹೋಲಿಕೆ ಮತ್ತು ಸಾಮ್ಯತೆ:** ಸಮಾಜದ ರಚನೆಯಲ್ಲಿ ಹೋಲಿಕೆ ಪ್ರಮುಖ ಪಾತ್ರ ವಹಿಸುತ್ತದೆ. ವ್ಯಕ್ತಿಗಳಲ್ಲಿರುವ ದೈಹಿಕ, ಮಾನಸಿಕ ಹೋಲಿಕೆಯ ಅಂಶಗಳೇ ಸಮಾಜಕ್ಕೆ ಆಧಾರವಾಗಿರುತ್ತವೆ. ಜನರ ಆಕಾಂಕ್ಷೆಗಳು, ಕೆಲಸಗಳು, ಗುರಿಗಳು, ಆದರ್ಶಗಳು, ಮೌಲ್ಯಗಳಲ್ಲಿ ಹೋಲಿಕೆಗಳನ್ನು ಹೊಂದಿರುವರು. ಇದರಿಂದ ಜನರಲ್ಲಿ ಪರಸ್ಪರ ಒಡನಾಡಿತನ, ಸಹಕಾರ, ಪ್ರೀತಿ, ವಿಶ್ವಾಸ, ಅನುಕಂಪ, ತ್ಯಾಗ, ನಾವೆಲ್ಲರೂ ಒಂದು ಎಂಬ ಭಾವನೆ ವ್ಯಾಪಕವಾಗಿ ಬೆಳೆದು ಕೂಡಿ ಬಾಳುವಂತೆ ಪ್ರೇರೇಪಿಸುತ್ತದೆ.

**4) ಸಹಕಾರ ಮತ್ತು ಶ್ರಮ ವಿಭಜನೆ:** ಸಹಕಾರವೆಂದರೆ ಜನರು ಸಮಾನ ಉದ್ದೇಶಗಳ ಈಡೇರಿಕೆಗೆ ಕೂಡಿ ದುಡಿಯುವುದಾಗಿದೆ. ಸಹಕಾರ ಮನೋಭಾವ ಇರುವುದರಿಂದಲೇ ಸಮಾಜದಲ್ಲಿ ಒಬ್ಬರಿಗೊಬ್ಬರು ಸುಖ–ದುಃಖಗಳಲ್ಲಿ ಭಾಗಿಯಾಗಿರುವರು. ಇದರ ಆಧಾರದಲ್ಲಿಯೇ ಶ್ರಮ ವಿಭಜನೆಯು–'ಸಾಮಾನ್ಯ ಕಾರ್ಯವೊಂದನ್ನು ತಮ್ಮೊಳಗೆ ಹಂಚಿಕೊಂಡು ದುಡಿಯುವುದಾಗಿದೆ', ಶ್ರಮವಿಭಜನೆಯು ಜನರ ಆಸಕ್ತಿ, ಅಭಿರುಚಿ, ಸಾಮರ್ಥ್ಯ, ಲಿಂಗ ಮತ್ತು ವಯಸ್ಸು ಮುಂತಾದವುಳ ಆಧಾರದಲ್ಲಿ ಹಂಚಿಕೆಯಾಗುವುದು. ಆದುದರಿಂದ ಸಹಕಾರ ಮತ್ತು ಶ್ರಮ ವಿಭಜನೆ ಎರಡು ಪರಸ್ಪರ ಪೂರಕವಾಗಿವೆ.

**5) ಸಾಮಾಜಿಕ ನಿಯಂತ್ರಣ:** ಸಮಾಜವು ತನ್ನದೇ ಆದ ರೀತಿ–ನೀತಿಗಳನ್ನು ಬೆಳೆಸಿಕೊಂಡಿರುತ್ತೆ. ಆಧುನಿಕ ಸಂಕೀರ್ಣ ಸಮಾಜವು ಕಾನೂನು, ಶಾಸನ, ಸಂವಿಧಾನಗಳನ್ನು ಹೊಂದಿ ಜನರ ವರ್ತನೆಗಳನ್ನು ಔಪಚಾರಿಕ ಮಾಧ್ಯಮಗಳ ಮೂಲಕ ಅಥವಾ ಅನೌಪಚಾರಿಕ ಮಾಧ್ಯಮಗಳಾದ ಪದ್ಧತಿ, ನೈತಿಕ ನಿಯಮ, ಲೋಕಾಚಾರಗಳ ಮೂಲಕ ನಿಯಂತ್ರಿಸುವುದು.

**6) ಸಮಾಜವು ಗತಿಶೀಲವಾದುದು:** ಸಮಾಜವು ಯಾವಾಗಲೂ ಪರಿವರ್ತನಶೀಲವಾದುದು. ಪರಿವರ್ತನೆಯಿಲ್ಲದೆ ಯಾವುದೇ ಸಮಾಜವು ದೀರ್ಘಕಾಲ ಉಳಿಯಲಾರದು. ಉದಾಹರಣೆಗೆ; ಗ್ರಾಮೀಣ ಸಮಾಜ ನಿಧಾನವಾಗಿ ಬದಲಾದರೆ, ನಗರ ಸಮಾಜವು ತ್ವರಿತಗತಿಯಲ್ಲಿ ಬದಲಾವಣೆ ಹೊಂದುತ್ತದೆ.

**ಸಮಾಜದ ಮಹತ್ವ / ಪ್ರಾಮುಖ್ಯತೆ**

**1) ಸರ್ವವ್ಯಾಪಕವಾದುದು:** ಮಾನವರ ಜೀವನ ಹಾಗೂ ಸಮಾಜ ಇವು ಯಾವಾಗಲೂ ಒಟ್ಟಿಗೆ ಸಾಗುತ್ತವೆ. ನಮ್ಮ ಜೀವನವನ್ನು ಸುಗಮವಾಗಿ ಸಾಗುವಂತೆ ಮಾಡುವುದೇ ಸಮಾಜ. ಯಾವುದೇ ಒಬ್ಬ ವ್ಯಕ್ತಿಯ ದೃಷ್ಟಿಯಲ್ಲಿ ಹೇಳುವುದಾದರೆ, ಸಮಾಜವು ಹುಟ್ಟುವಿಕೆಗಿಂತ ಮೊದಲಿನಿಂದಲೂ ಸಾವಿನ ಅನಂತರವು ಬದುಕಿರುವುದು. ಆದ್ದರಿಂದ ಸಮಾಜವು ನಿರಂತರ ಮತ್ತು ಸರ್ವವ್ಯಾಪಕ.

© KTBS Not to be republished

**2) ರಕ್ಷಣೆ ಹಾಗೂ ಸಂಪೋಷಣೆಗೆ ಅಗತ್ಯವಾದುದು:** ಜನ ಸಮೂಹದ ಹೋಲಿಕೆ–ವ್ಯತ್ಯಾಸ, ಪರಸ್ಪರ ಸಹಾಯ, ಸಹಕಾರ, ಶ್ರಮವಿಭಜನೆ, ಪರಸ್ಪರಾವಲಂಬನೆ, ಸಾಮಾಜಿಕ ನಿಯಂತ್ರಣ, ಸಾಮಾಜಿಕ ಪರಿವರ್ತನೆ, ಅಧಿಕಾರ–ಸ್ವಾತಂತ್ರ್ಯ, ಸಂಸ್ಕೃತಿ–ಸಾಮರಸ್ಯ, ಇವೆಲ್ಲವುಗಳ ಸಮ್ಮಿಶ್ರಣಗೊಂಡ ಸಂಕೀರ್ಣ ವ್ಯವಸ್ಥೆಯೇ 'ಸಮಾಜ'.

**3) ವ್ಯಕ್ತಿತ್ವ ನಿರ್ಮಾಣದಲ್ಲಿ ಸಮಾಜದ ಪಾತ್ರ ಹಿರಿದಾದುದು:** ಸಮಾಜವು ನಮ್ಮ ಜೀವನದ ದಿಕ್ಕು–ದೆಸೆಗಳನ್ನು, ಗೊತ್ತು–ಗುರಿಗಳನ್ನು ನಿರ್ಧಾರಪಡಿಸುವುದು. ಮಾನವ ಸಹಜ ಗುಣಗಳನ್ನು ಬೆಳೆಸಿಕೊಳ್ಳುವುದೂ ಸಮಾಜದಲ್ಲಿಯೇ. ಸಮಾಜವು ನಮ್ಮ ಪ್ರತಿಭೆಯ ಪ್ರಕಟಣೆಗೆ ಸೂಕ್ತ ಅವಕಾಶಗಳನ್ನು ಕಲ್ಪಿಸುವುದು. ಜೊತೆಗೆ ನಮ್ಮ ಮಾನವ ಸಹಜ ದೌರ್ಬಲ್ಯಗಳನ್ನು, ದೋಷಗಳನ್ನು ಅದಮ್ಯ ಬಯಕೆ ಆಕಾಂಕ್ಷೆಗಳನ್ನು ನಿಯಂತ್ರಣದಲ್ಲಿಡುವ ಸಾಧನವಾಗಿಯೂ ಕೆಲಸ ಮಾಡುತ್ತದೆ. ನಮ್ಮ ಭೌತಿಕ ಬೆಳವಣಿಗೆ, ಅವಶ್ಯಕತೆಗಳ ಈಡೇರಿಕೆ, ಭೌತಿಕ ಆಗತ್ಯಗಳ ಪೂರೈಕೆ, ಇವೆಲ್ಲವುಗಳನ್ನು ಸಮಾಜದ ಹೊರತಾಗಿ ಕಲ್ಪಿಸಿಕೊಳ್ಳುವುದು ಕಷ್ಟಸಾಧ್ಯ.

**4) ಬದುಕನ್ನು ಗಟ್ಟಿಗೊಳಿಸುತ್ತದೆ:** ಸಮಾಜವೆಂಬ ವಿಶಾಲವಾದ ವ್ಯವಸ್ಥೆಯು ನಮ್ಮ ಜೀವನವನ್ನು ಸಂಪೂರ್ಣವಾಗಿ ಆವರಿಸಿದೆ. ಅದು ನಮ್ಮನ್ನು ಕೇವಲ ಹೊರಗಿನಿಂದ ಆವರಿಸುವುದು ಮಾತ್ರವಲ್ಲ, ಅದು ನಮ್ಮ ಮನಸ್ಸಿನ ಆಳವನ್ನು ಭೇದಿಸುವುದು. ವ್ಯಕ್ತಿ ಮತ್ತು ಸಮಾಜದ ನಡುವಿನ ಸಂಬಂಧವು ಸರಳವಾದುದಲ್ಲ, ವ್ಯಕ್ತಿಯ ಅನನ್ಯತೆಯನ್ನು, ಚಿಂತನೆ ಮತ್ತು ಭಾವನೆಗಳನ್ನು ರೂಪಿಸುವುದು. ಆ ಮೂಲಕ ನಮ್ಮ ಸಾಮಾಜಿಕ ಬದುಕನ್ನು ಗಟ್ಟಿಗೊಳಿಸುವುದೇ ಸಮಾಜ.

## ಸಮಾಜದ ವಿವಿಧ ಪ್ರಕಾರಗಳು

ಸಮಾಜವು ಒಂದೇ ತೆರನಾಗಿಲ್ಲ. ವಿಭಿನ್ನ ಬಗೆಯಲ್ಲಿ ಸಮಾಜಗಳಿವೆ. ಆದುದರಿಂದ ನಾವು ಸಮಾಜವನ್ನು ಉದ್ಯೋಗ ಮತ್ತು ದುಡಿಮೆಯ ಚಟುವಟಿಕೆಗಳ ಆಧಾರದಲ್ಲಿ ವಿವಿಧ ಬಗೆಯಲ್ಲಿ ವರ್ಗೀಕರಿಸುತ್ತೇವೆ. ಅವು ಯಾವುವೆಂದರೆ: 1) ಬೇಟೆ ಮತ್ತು ಆಹಾರ ಸಂಗ್ರಹಣಾ ಸಮಾಜ 2) ಪಶುಪಾಲನ ಸಮಾಜ. 3) ಕೃಷಿ ಸಮಾಜ 4) ಗ್ರಾಮೀಣ ಸಮಾಜ 5) ನಗರ ಸಮಾಜ 6) ಕೈಗಾರಿಕಾ ಸಮಾಜ 7) ಮಾಹಿತಿ ಸಮಾಜ.

**1. ಬೇಟೆ ಮತ್ತು ಆಹಾರ ಸಂಗ್ರಹಣಾ ಸಮಾಜ :** ಮಾನವ ಸಮಾಜದ ವಿಕಾಸದಲ್ಲಿ ಮೊದಲನೇ ಹಂತ ಬೇಟೆ ಮತ್ತು ಆಹಾರ ಸಂಗ್ರಹಣೆ. ಸಮಾಜದ ಅತ್ಯಂತ ಪ್ರಾಚೀನ ಮತ್ತು ಸರಳವಾದ ಹಂತವಾಗಿದೆ. ಈ ಸಮಾಜವು ಚಿಕ್ಕ ಸಮುದಾಯವಾಗಿದ್ದು, ಬೇಟೆಯಾಡುವುದು, ಮೀನುಗಾರಿಕೆ ಮಾಡುವುದು, ಜೇನು ಮತ್ತು ಗೆಡ್ಡೆ–ಗೆಣಸುಗಳನ್ನು ಸಂಗ್ರಹಿಸುವುದು ಪ್ರಮುಖ ಕಾರ್ಯವಾಗಿತ್ತು. ಇಲ್ಲಿ ವಯಸ್ಸು ಮತ್ತು ಲಿಂಗದ ಆಧಾರದ ಮೇಲೆ ಸ್ಥಾನಮಾನ ನಿಗದಿಯಾಗಿರುತ್ತದೆ. ಸಂಪತ್ತನ್ನು ಸಂಪಾದಿಸುವ ಆಸೆ ಇಲ್ಲಿ ಇರಲಿಲ್ಲ. ಹಂಚಿಕೊಂಡು ಬದುಕುವುದು ಈ ಸಮಾಜದ ಲಕ್ಷಣವಾಗಿತ್ತು. ಬೇಟೆ ಸಮಾಜದಲ್ಲಿ ಜನರು ತಮ್ಮ ಆಹಾರಕ್ಕೆ ಪ್ರಾಣಿಗಳನ್ನು ಕಲ್ಲಿನ ಆಯುಧಗಳಿಂದ ಬೇಟೆಯಾಡುತ್ತಿದ್ದರು.

**2. ಪಶುಪಾಲನ ಸಮಾಜ:** ಮಾನವ ಸಮಾಜದ ವಿಕಾಸದಲ್ಲಿ ಪಶುಪಾಲನೆ ಎರಡನೆಯ ಹಂತ ಎಂದು ಹೇಳಲಾಗುತ್ತದೆ. ಜನರು ತಮ್ಮ ಜೀವನಾಧಾರಕ್ಕೆ ಪಶುಗಳನ್ನು (ದನ, ಎಮ್ಮೆ, ಹಸು, ಕುರಿ, ಆಡು, ಇತ್ಯಾದಿ) ಹಿಂಡು–ಹಿಂಡಾಗಿ ಸಾಕುವ ಸಮಾಜವನ್ನು ಪಶುಪಾಲನ ಸಮಾಜ ಎಂದು ಕರೆಯಲಾಗುತ್ತದೆ. ಈ ಸಮಾಜದಲ್ಲಿ ಸುಮಾರು ನೂರರಿಂದ–ಸಾವಿರದಷ್ಟು ಜನರಿರುತ್ತಾರೆ. ಪಶುಪಾಲನೆಯು ಈ ಸಮಾಜದ ಪ್ರಮುಖ ಕೆಲಸವಾಗಿತ್ತು. ಈ ಸಮಾಜವು ಒಬ್ಬ ನಾಯಕನ ನಿಯಂತ್ರಣಕ್ಕೆ ಒಳಪಟ್ಟಿರುತ್ತಿತ್ತು. ಈ ಜನರು ಜೀವನೋಪಾಯದ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಪಶುಪಾಲನೆ, ಬೇಟೆಯಾಡುವಿಕೆ, ಆಹಾರ ಸಂಗ್ರಹಿಸುವಿಕೆ ಕೆಲಸಗಳಲ್ಲಿ ತೊಡಗಿರುತ್ತಾರೆ.

©KTBS Not to be republished

**ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟು ಸಮಾಜ:** ಮಾನವಶಾಸ್ತ್ರಜ್ಞರು ಆರಂಭದಲ್ಲಿ ಪಶುಪಾಲನೆಯ ಹಿನ್ನೆಲೆಯವರನ್ನು ಮಾತ್ರ ಅಲೆಮಾರಿ ಸಮುದಾಯದವರೆಂದು ಗುರುತಿಸಿದ್ದಾರೆ. ಎನ್ಸೈಕ್ಲೋಪಿಡಿಯ ಬ್ರಿಟಾನಿಕಾದ ಪ್ರಕಾರ ಅಲೆಮಾರಿತನವು ಒಂದು ಜೀವನ ವಿಧಾನ. ಬೇಟೆ ಮತ್ತು ಆಹಾರ ಸಂಗ್ರಹಣೆ, ಪಶುಪಾಲನೆ ಅಥವಾ ವ್ಯಾಪಾರಕ್ಕಾಗಿ ಮಾನವ ಒಂದೆಡೆ ನೆಲೆಯೂರದೇ, ದಿಕ್ಕುದೆಸೆಯಿಲ್ಲದೆ ಕಾಲಾನುಕ್ರಮವಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಅಲೆಯುವಿಕೆಯನ್ನು ಅಲೆಮಾರಿತನ ಎನ್ನಲಾಗುತ್ತದೆ. ಇದು ವಲಸೆ ಪ್ರಕ್ರಿಯೆಗೂ ಭಿನ್ನ. ಪಶುಪಾಲನೆ ಅಥವಾ ಇತರೆ ಕಸುಬುಗಳ ಹಿನ್ನೆಲೆಯ ಸಮುದಾಯಗಳು ಅಲ್ಲಲ್ಲಿ ಸ್ಥಾಯಿಯಾಗಿ ನೆಲೆನಿಂತರೂ ಪಶುಸಂಗೋಪನೆಗಾಗಿ ಅಥವಾ ಇತರೆ ಕಸುಬುಗಳ ನಿರ್ವಹಣೆಗಾಗಿ ಅಲೆಮಾರಿತನ ಅನಿವಾರ್ಯವಾಗಿ ಮುಂದುವರಿಸುವರು. ಇಂತಹ ಸಮುದಾಯಗಳನ್ನು ಅರೆ ಅಲೆಮಾರಿ ಸಮುದಾಯ (Semi-nomadic Tribes)ಗಳೆಂದು ಕರೆಯಲಾಗುವುದು. ಸಮುದಾಯಗಳಿಗೆ ಇರುವ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಾಗೂ ರಾಜಕೀಯ ಭದ್ರತೆಯ ಆಧಾರದಲ್ಲಿ ಅಲೆಮಾರಿ ಮತ್ತು ಅರೆ ಅಲೆಮಾರಿ ಸ್ಥಿತಿಯನ್ನು ನಿರ್ಧರಿಸಲಾಗುತ್ತದೆ.

**3. ಕೃಷಿ ಸಮಾಜ :** ಸಮಾಜ ವಿಕಾಸದ ಈ ಹಂತದಲ್ಲಿ ಮಾನವ ಅಲೆಮಾರಿ ಬದುಕನ್ನು ಬಿಟ್ಟು ಒಂದೇ ಸ್ಥಳದಲ್ಲಿ ನೆಲೆನಿಂತು ವಾಸಿಸುವುದು. ಈ ಸಮಾಜವು ಕೃಷಿಯನ್ನು ಅವಲಂಬಿಸಿದ ಗ್ರಾಮ ವಾಸಿಗಳ ಸಮೂಹವಾಗಿದೆ. ಹೆಚ್ಚಿನ ಜನರು ವ್ಯವಸಾಯವನ್ನು ಅವಲಂಬಿಸಿ ಬದುಕುವ ಸಮಾಜವನ್ನೇ ಕೃಷಿ ಸಮಾಜ ಎಂದು ಕರೆಯುತ್ತಾರೆ. ವ್ಯವಸಾಯದ ಮೂಲಕ ಆಹಾರ ಉತ್ಪಾದನೆ ಕೃಷಿ ಸಮಾಜದ ಮತ್ತೊಂದು ಲಕ್ಷಣವಾಗಿದೆ. ಕೃಷಿಗೆ 'ಬೇಸಾಯ' ಎಂದೂ ಕೃಷಿಕಾರರನ್ನು ಬೇಸಾಯಗಾರರು, ರೈತರು ಎಂದೂ ಕರೆ–ಯುತ್ತಾರೆ. ಕೃಷಿಗೆ ಹೆಚ್ಚಾಗಿ ಪ್ರಾಣಿ ಮತ್ತು ನೇಗಿಲನ್ನು ಬಳಸುತ್ತಾರೆ.

ಭಾರತ ಎಂದರೆ 'ಗ್ರಾಮಗಳ ನಾಡು ಕೃಷಿಕರ ಬೀಡು' ಎಂದು ಹೇಳಲಾಗುತ್ತದೆ. ಭಾರತದ ಪ್ರಾಚೀನ ಸಾಹಿತ್ಯದಲ್ಲಿ ಗ್ರಾಮಗಳ ಸಂಘಟನೆ ಹಾಗೂ ಅವುಗಳ ಆಡಳಿತದ ವಿಷಯವಾಗಿ ಹಲವು ವಿವರಣೆಗಳಿರುವುದನ್ನು ಕಾಣಬಹುದು. ಋಗ್ವೇದದಲ್ಲಿ ಗ್ರಾಮದ ಮುಖ್ಯಸ್ಥನಿಗೆ 'ಗ್ರಾಮಸ್ಥ'ನೆಂದು ವರ್ಣಿಸಲಾಗಿದೆ. ಹಲವು ಗ್ರಾಮಗಳ ಒಕ್ಕೂಟಕ್ಕೆ ವಿಶ, ಜನ, ದೇಶ ಎಂಬ ಆಡಳಿತ ವಿಂಗಡನೆ ಇತ್ತು. ಮಹಾಭಾರತದಲ್ಲಿ ಗ್ರಾಮದ ಮುಖ್ಯಸ್ಥನಿಗೆ 'ಗ್ರಾಮಿಣಿ' ಎಂದು ಕರೆಯಲಾಗಿದೆ. ದಶಮುಖಿ, ಶತಮುಖಿ ಹಾಗೂ ಅಧಿಪತಿ ಎಂದು ಗ್ರಾಮ ಒಕ್ಕೂಟಗಳ ಮುಖ್ಯಸ್ಥರನ್ನು ಕರೆಯಲಾಗುತ್ತಿತ್ತು.

ಮಾನವ ಸಮಾಜವು ಗ್ರಾಮ ಎಂಬ ತೊಟ್ಟಿಲಲ್ಲಿಯೇ ವಿಕಾಸವಾಗಿದೆ ಎಂದು ಬೋಗಾರ್ಡಸ್ ಎಂಬುವರು ಅಭಿಪ್ರಾಯಪಟ್ಟಿದ್ದಾರೆ. ಗ್ರಾಮ ಎಂಬುದು ಅತ್ಯಂತ ಪ್ರಾಚೀನ ನೆಲೆಯಾಗಿದ್ದರೂ ಕೂಡಾ ಇದನ್ನು ಅರ್ಥಪೂರ್ಣವಾಗಿ ವ್ಯಾಖ್ಯಾನಿಸುವುದು ಸಾಧ್ಯವಾಗಿಲ್ಲ. ಬೋಗಾರ್ಡಸ್ ಎಂಬ ಶಾಸ್ತ್ರಜ್ಞರ ಪ್ರಕಾರ 'ಕಡಿಮೆ ಜನಸಾಂದ್ರತೆಯುಳ್ಳ, ಸರಳ ಹಾಗೂ ಮಿತವ್ಯಯವಾದ ಜೀವನ ಸಾಗಿಸುವ, ಪ್ರಾಥಮಿಕ ಸಂಬಂಧಗಳನ್ನೊಳಗೊಂಡ ಕುಟುಂಬಗಳ ಒಕ್ಕೂಟವೇ ಗ್ರಾಮ ಸಮುದಾಯವಾಗಿದೆ, ಎಸ್.ಸಿ. ದುಬೆಯವರ ಪ್ರಕಾರ 'ಒಂದೇ ಸ್ಥಳದಲ್ಲಿ ವಾಸವಾಗಿರುವ ಕುಟುಂಬಗಳ ಸಮೂಹವೇ ಗ್ರಾಮ'. ಈ ಸಾಮಾಜಿಕ ವ್ಯವಸ್ಥೆಯಲ್ಲಿ ಸಾಮಾಜೀಕರಣ ಹಾಗೂ ಸಾಮಾಜಿಕ ನಿಯಂತ್ರಣಗಳು ಸಮರ್ಥವಾಗಿ ಕಾರ್ಯನಿರ್ವಹಿಸುತ್ತವೆ.

ಸಾ.ಶ.ಪೂ. 3000 ರ ಸುಮಾರಿಗೆ ನೇಗಿಲ ಸಂಶೋಧನೆಯೊಂದಿಗೆ 'ಕೃಷಿಕ್ರಾಂತಿ' ಆರಂಭಗೊಂಡಿತು ಎಂದು ಹೇಳಬಹುದು. ಗ್ರಾಮಗಳು ಈ ದೇಶದ ಜೀವನಾಡಿಗಳಿದ್ದಂತೆ. ಭಾರತದಲ್ಲಿ ಸುಮಾರು ಆರು ಲಕ್ಷದಷ್ಟು ಇರುವ ಕೃಷಿ ಗ್ರಾಮಗಳು ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿವೆ. ದೇಶದ ಬಹುಸಂಖ್ಯಾತ ಜನಗಳು ಇಂದಿಗೂ ಗ್ರಾಮಗಳಲ್ಲಿಯೇ ವಾಸಿಸುತ್ತಿದ್ದಾರೆ. ಕೃಷಿ ಕ್ಷೇತ್ರದಲ್ಲಿ ತಮ್ಮ ಜೀವನೋಪಾಯವನ್ನು ಕಂಡುಕೊಂಡಿರುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಶೇಕಡ 59ರಷ್ಟು ಪುರುಷರು ಮತ್ತು ಶೇಕಡ 75ರಷ್ಟು ಮಹಿಳೆಯರು ಜೀವನೋಪಾಯಕ್ಕೆ ಕೃಷಿಯನ್ನು ನೇರವಾಗಿ ಅವಲಂಬಿಸಿದ್ದಾರೆ.

©KTBS Not to be republished

## 4. ಗ್ರಾಮೀಣ ಸಮಾಜ

**1. ಗ್ರಾಮವು ಗಾತ್ರದಲ್ಲಿ ಚಿಕ್ಕದು:** ಮ್ಯಾಕ್ಸ್ ವೇಬರ್ ಹೇಳಿದಂತೆ ಬಹುಸಂಖ್ಯೆಯ ಭಾರತೀಯರು ಗ್ರಾಮವಾಸಿಗಳೇ ಆಗಿದ್ದಾರೆ. ಇದರ ಪ್ರಭಾವವನ್ನು ಜನತೆಯ ಸಾಮಾಜಿಕ ಜೀವನದ ಮೇಲೆ ಕಾಣಬಹುದು. ಗ್ರಾಮ ಸಾಮಾನ್ಯವಾಗಿ ಚಿಕ್ಕ ಗಾತ್ರವನ್ನು ಹೊಂದಿರುತ್ತದೆ. ಜನಸಾಂದ್ರತೆ ದಟ್ಟವಾಗಿ ಇರುವುದಿಲ್ಲ.

**2. ಪ್ರಾಥಮಿಕ ಹಾಗೂ ಕೌಟುಂಬಿಕ ಸಂಬಂಧಗಳ ಪ್ರಭಾವ:** ಗ್ರಾಮೀಣ ಸಮಾಜದಲ್ಲಿ ನೇರವಾದ ಪ್ರಾಥಮಿಕ ಸಂಬಂಧಗಳು ಇರುತ್ತವೆ. ಅಂದರೆ ಇಲ್ಲಿ ವ್ಯಕ್ತಿ ವ್ಯಕ್ತಿಯ ನಡುವೆ, ಸ್ನೇಹ, ಪ್ರೀತಿ, ಬಂಧುತ್ವ ಮುಂತಾದವುಗಳನ್ನು ಕಾಣಬಹುದಾಗಿದೆ. ಕುಟುಂಬವೂ ಸಹಿತ ಅನೇಕ ವಿಧದಲ್ಲಿ ಸಾಮಾಜಿಕ ಜೀವನದ ಮೇಲೆ ಪ್ರಭಾವ ಬೀರುತ್ತದೆ. ಅವಿಭಕ್ತ ವಿಶಾಲ ಕುಟುಂಬವು ಭಾರತದ ಗ್ರಾಮಗಳ ಒಂದು ಮುಖ್ಯ ಲಕ್ಷಣ.

**3. ಸರಳ ಆರ್ಥಿಕ ಜೀವನ:** ವಿಶೇಷವಾಗಿ ಭಾರತೀಯರ ವ್ಯವಸಾಯ ಪ್ರಕೃತಿಯನ್ನೇ ಅವಲಂಬಿಸಿದೆ. ಗ್ರಾಮೀಣ ಜೀವನ ಹೆಚ್ಚು ಸರಳವಾದುದು, ಮಿತವ್ಯಯವಾದುದು. ನಿಶ್ಚಿತ ಆದಾಯ ಇಲ್ಲದಿರುವುದರಿಂದ ಹಾಗೂ ಕಡಿಮೆ ಆದಾಯ ಇರುವುದರಿಂದ ಗ್ರಾಮೀಣ ಜನತೆಯು ಮಿತವ್ಯಯದ ನಿರಾಡಂಬರ ಜೀವನವನ್ನೇ ಸಾಗಿಸಬೇಕಾಗುತ್ತದೆ. ನಾಗರಿಕತೆ ಎಷ್ಟೇ ಮುಂದುವರೆದಿದ್ದರೂ ಅವರು ತಮ್ಮ ಪ್ರಾಚೀನ ಸಂಪ್ರದಾಯಗಳನ್ನು ಬಿಟ್ಟುಕೊಟ್ಟಿಲ್ಲ. ಅವರ ಬೇಡಿಕೆಗಳು ಸೀಮಿತವಾಗಿವೆ. ಇದಕ್ಕೆ ಸಂಪ್ರದಾಯ ಹಾಗೂ ವ್ಯವಸಾಯ ವೃತ್ತಿಯೇ ಕಾರಣ.

**4. ನೆರೆಹೊರೆ :** ನೆರೆಹೊರೆಯು ಗ್ರಾಮೀಣ ಸಮಾಜದ ಒಂದು ವಿಶಿಷ್ಟ ಲಕ್ಷಣವಾಗಿದೆ. ಸಾರ್ವಜನಿಕ ಕಾರ್ಯಗಳಲ್ಲಿ, ಹುಟ್ಟು ಸಾವುಗಳಲ್ಲಿ, ಹಬ್ಬ–ಉತ್ಸವಗಳಲ್ಲಿ, ನೆರೆಹೊರೆಯು ವಿಶಿಷ್ಟ ರೀತಿಯ ಕಾರ್ಯ ನಿರ್ವಹಿಸುತ್ತದೆ. ಕರ್ನಾಟಕದಲ್ಲಿ ಇವುಗಳಿಗೆ 'ಕೇರಿ' (ಓಣಿ) ಎನ್ನುತ್ತಾರೆ. ಮಹಾರಾಷ್ಟ್ರದಲ್ಲಿ 'ವಾಡ್' ಎಂದು ಕರೆಯುತ್ತಾರೆ.

**ಕೃಷಿ ಸಮಾಜದ ಸಾಮಾಜಿಕ ರಚನೆ:** ಕೃಷಿ ಸಮಾಜದಲ್ಲಿ ನಡೆಯುವ ಪ್ರಮುಖ ಆರ್ಥಿಕ ಚಟುವಟಿಕೆಯಲ್ಲಿ ಅದರಲ್ಲಿಯೂ ಭೂಹಿಡುವಳಿ, ಭೂಮಿ ಜೊತೆಗಿನ ಸಂಬಂಧ ಮತ್ತು ಕೃಷಿ ಚಟುವಟಿಕೆ ಆಧಾರದಲ್ಲಿ ಕೃಷಿ ಸಮಾಜದ ರಚನೆಯನ್ನು ಗುರುತಿಸಬಹುದು.

**ಜಾಜ್‌ಮಾನಿ ಪದ್ಧತಿ:** ವಾಸ್ತವವಾಗಿ ಜಾತಿ ಪದ್ಧತಿ ಹಾಗೂ ಜಾಜ್‌ಮಾನಿ ಪದ್ಧತಿ ಎರಡೂ ಒಟ್ಟಾಗಿಯೇ ಕಾರ್ಯ ನಿರ್ವಹಿಸುತ್ತಿದ್ದವು. ಆ ಕಾಲದಲ್ಲಿ ಜಾಜ್‌ಮಾನಿ ವ್ಯವಸ್ಥೆಯು ಸಮಾಜೋ ಆರ್ಥಿಕ ವ್ಯವಸ್ಥೆಯ ಒಂದು ಅವಿಭಾಜ್ಯ ಅಂಗವಾಗಿತ್ತು. ಜಾತಿ ಪದ್ಧತಿಯಲ್ಲಿ ಒಂದು ಜಾತಿಯು ಮತ್ತೊಂದು ಜಾತಿ ಸಮೂಹದ ಮೇಲೆ ಅವಲಂಬಿಸಬೇಕಾಗಿತ್ತು. ಇದು ಒಂದು ಜಾತಿಯ ಜನರನ್ನು ಮತ್ತೊಂದು ಜಾತಿಯ ಮೇಲೆ ಅವಲಂಬಿಸುವಂತೆ ಮತ್ತು ಸಹಕಾರದಿಂದ ಬದುಕುವಂತೆ ಪ್ರೇರಣೆ ಮಾಡುತ್ತಿತ್ತು. ಜಾಜ್‌ಮಾನಿ ವ್ಯವಸ್ಥೆಯಲ್ಲಿ ಎರಡು ಪ್ರಮುಖ ವರ್ಗಗಳಿದ್ದವು. ಒಂದು ವರ್ಗವು ಮತ್ತೊಂದು ವರ್ಗಕ್ಕೆ ಸೇವೆ ಮತ್ತು ಕೃಷಿ ಚಟುವಟಿಕೆಗಳಿಗೆ ಪೂರಕವಾದ ಹಲವು ವಸ್ತುಗಳನ್ನು ಪೂರೈಸುತ್ತಿದ್ದವು. ಇದಕ್ಕೆ ಪ್ರತಿಯಾಗಿ ತಮ್ಮ ವಸ್ತು ಮತ್ತು ಸೇವೆಯನ್ನು ಪಡೆದ ವರ್ಗದವರಿಂದ ಪ್ರತಿಫಲವಾಗಿ ದವಸ–ಧಾನ್ಯಗಳನ್ನು ಪಡೆದುಕೊಳ್ಳುತ್ತಿದ್ದವು.

**ಜಮೀನ್ದಾರಿ ಪದ್ಧತಿ :** ಜಮೀನ್ದಾರ್ ಎಂಬ ಪದವು ಪರ್ಷಿಯನ್ ಪದವಾಗಿದ್ದು, ಜಮೀನನ್ನು ಹೊಂದಿರುವನು ಎಂಬ ಅರ್ಥ ಕೊಡುತ್ತದೆ. ಜಮೀನ್ದಾರಿ ಪದ್ಧತಿಯ ಉಗಮವನ್ನು ದೆಹಲಿ ಸುಲ್ತಾನರ ಕಾಲದಲ್ಲಿ ಕಾಣಬಹುದು. ಹದಿನಾಲ್ಕನೆಯ ಶತಮಾನದಲ್ಲಿ ಜಮೀನ್ದಾರ್ ಎಂಬ ಪದವು ಒಂದು ಪ್ರದೇಶದ ಮುಖ್ಯಸ್ಥ ಎಂಬ ಅರ್ಥದಲ್ಲಿ ಬಳಸಲ್ಪಟ್ಟಿತ್ತು. ರಜಪೂತರು ಹೊಂದಿದ ರಾಯ್ ಮತ್ತು ರಾಣ ಎಂಬ ಬಿರುದುಗಳು ಜಮೀನ್ದಾರ ವರ್ಗದವರ ಲಕ್ಷಣಗಳಾಗಿದ್ದವು ಎಂಬುದನ್ನು ತಿಳಿಯಬಹುದು. ಮೊಘಲರ

©KTBS Not to be republished

ಆಳ್ವಿಕೆಯ ಪ್ರಾರಂಭದ ವೇಳೆಗೆ ಸಮಾಜದಲ್ಲಿ ಜಮೀನ್ದಾರರು ಒಂದು ಪ್ರಬಲ ವರ್ಗವಾಗಿ ಉದಯಿಸಿದ್ದರು. ಜಮೀನ್ದಾರಿ ಎಂಬ ಪದದ ಬಳಕೆ ಸರ್ವೇಸಾಮಾನ್ಯವಾಗಿ ಮೊಘಲರ ಕಾಲದಲ್ಲಿ ರೂಢಿಗೆ ಬಂದಿತ್ತು. ಆದರೆ ಅಕ್ಬರ್‌ನ ಕಾಲದಲ್ಲಿ ರೈತನ ಫಸಲಿನಲ್ಲಿ ನೇರ ಪಾಲುದಾರನಾಗಿರುವ ಯಾವುದೇ ರೀತಿಯಾದ ಅನುವಂಶಿಕ ಹಕ್ಕನ್ನು ಪಡೆದ ವ್ಯಕ್ತಿಗೆ ಈ ಪದವನ್ನು ಅಧಿಕೃತವಾಗಿ ಬಳಸತೊಡಗಿದರು. ಈ ಅರ್ಥದಿಂದಲೇ ಹದಿನೇಳನೆಯ ಶತಮಾನದಲ್ಲಿ ಜಮೀನ್ದಾರಿ ಪದ ಬಲವಾಗಿ ಪ್ರಚಾರಕ್ಕೆ ಬಂತು.

**ರೈತವಾರಿ ಪದ್ದತಿ :** ಬ್ರಿಟಿಷ್ ಸರ್ಕಾರವು ಭಾರತದ ಬಹುಸಂಖ್ಯಾತ ರೈತಾಪಿ ವರ್ಗದ ಮೇಲೆ ಕಂದಾಯ ವಿಧಿಸಿ, ವಸೂಲಿ ಮಾಡಲು ಹೊಸ ಹೊಸ ಪ್ರಯೋಗಗಳನ್ನು ಕೈಗೊಂಡಿತು. ಆದ್ದರಿಂದ ಬ್ರಿಟಿಷ್ ಸರ್ಕಾರವು ಭಾರತದ ರೈತಾಪಿ ವರ್ಗದ ಮೇಲೆ ಕಂದಾಯ ವಸೂಲಿ ಮಾಡಲು ಜಾರಿಗೆ ತಂದಿದ್ದ ಜಮೀನ್ದಾರಿ ಪದ್ಧತಿಯು ರೈತರನ್ನು ಶೋಷಣೆ ಮಾಡಲಾರಂಭಿಸಿತು. ಇದರಿಂದ ಭಾರತದ ಬಹುಸಂಖ್ಯಾತ ರೈತರನ್ನು ಈ ಜಮೀನ್ದಾರಿ ಪದ್ದತಿಯು ಶೋಷಣೆಯಿಂದ ಮುಕ್ತಗೊಳಿಸಿ ರೈತರಿಗೆ ಆಸ್ತಿಯ ಹಕ್ಕಿನ ರಕ್ಷಣೆ ನೀಡುವ ಸಲುವಾಗಿ ಕೋರ್ಟ್ ಆಫ್ ಡೈರೆಕ್ಟರ್ 1817 ರಲ್ಲಿ ರೈತವಾರಿ ಪದ್ಧತಿಯನ್ನು ಜಾರಿಗೊಳಿಸಲು ಆದೇಶಿಸಿತು.

**ಮಹಲ್ವಾರಿ ಪದ್ಧತಿ :** ಜಮೀನ್ದಾರಿ ಪದ್ಧತಿ ಮತ್ತು ರೈತವಾರಿ ಪದ್ಧತಿಗಳು ಆಡಳಿತ ವರ್ಗಕ್ಕೆ ನಿರೀಕ್ಷಿಸಿದ ಮಟ್ಟ ತಲುಪದೇ ಇದ್ದುದರಿಂದ ಮೂರನೇ ಹೊಸ ಪದ್ಧತಿಯಾದ ಮಹಲ್ವಾರಿ ಪದ್ಧತಿಯನ್ನು ಜಾರಿಗೆ ತಂದರು. ಈ ಪದ್ಧತಿಯಲ್ಲಿ ಮಹಲ್ ಅಥವಾ ಎಸ್ಟೇಟ್‌ಗಳ ಉತ್ಪಾದನೆಯ ಆಧಾರದ ಮೇಲೆ ಸರ್ಕಾರವು ಕಂದಾಯವನ್ನು ಅನೇಕ ಮಹಲ್‌ಗಳ ಒಡೆಯರ ಗುಂಪಿಗೆ ವಿಧಿಸುತ್ತಿತ್ತು. ಮಹಲ್‌ಗಳ ಒಡೆಯರಲ್ಲೇ ಕೆಲವರನ್ನು ಆಯ್ಕೆ ಮಾಡಿ ಮಹಲ್‌ಗಳ ಉಸ್ತುವಾರಿ ಮತ್ತು ಕಂದಾಯ ವಸೂಲಿಯ ಕೆಲಸಕ್ಕೆ ನೇಮಿಸುತ್ತಿದ್ದರು.

**ಗೇಣಿ ಪದ್ಧತಿ :** ಭೂ ಮಾಲೀಕರಿಂದ ಸಾಗುವಳಿಗಾಗಿ ಭೂಮಿಯನ್ನು ಪಡೆಯುವವರಿಗೆ ಗೇಣಿದಾರರು ಎಂದು ಹೆಸರು. ಗೇಣಿದಾರರಲ್ಲಿ ಶಾಶ್ವತ ಹಕ್ಕಿನ ಗೇಣಿದಾರರು ಮತ್ತು ತಾತ್ಕಾಲಿಕ ಹಕ್ಕಿನ ಗೇಣಿದಾರರು ಎಂಬ ಎರಡು ಪ್ರಕಾರಗಳಿವೆ. ಶಾಶ್ವತ ಹಕ್ಕಿನ ಗೇಣಿದಾರರು ತಾವು ಉಳುವ ಭೂಮಿಯ ಮೇಲೆ ಸ್ವಲ್ಪ ಹಕ್ಕನ್ನು ಪಡೆದಿರುತ್ತಾರೆ. ಆದರೆ ತಾತ್ಕಾಲಿಕ ಹಕ್ಕಿನ ಗೇಣಿದಾರರು ತಾವು ಉಳುವ ಭೂಮಿಯ ಮೇಲೆ ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ. ಆದ್ದರಿಂದ ಭೂ ಮಾಲೀಕರು ಭೂಮಿಯನ್ನು ಕಿತ್ತುಕೊಂಡು ಬೇರೆಯವರಿಗೆ ಕೊಡಬಹುದಿತ್ತು. ಇದರ ಅನಾನುಕೂಲಗಳನ್ನು ಸರಿಪಡಿಸಲು ಸರ್ಕಾರಗಳು ಗೇಣಿ ನಿಯಂತ್ರಣ ಕಾನೂನುಗಳನ್ನು ಜಾರಿಗೆ ತಂದವು. ಗೇಣಿದಾರರಿಗೆ ಹಿಡುವಳಿಯ ಭದ್ರತೆಯನ್ನು ಹಾಗೂ ಭೂಒಡೆತನದ ಹಕ್ಕನ್ನು ಶಾಸನರೂಪದಲ್ಲಿ ಜಾರಿಗೊಳಿಸಿದವು. ಅದನ್ನು ಭೂ ಸುಧಾರಣೆ ಎಂದು ಕರೆಯಲಾಗಿದೆ. ಭೂ ಹಿಡುವಳಿಗಳ ಮೇಲೆ ಗರಿಷ್ಠ ಮಿತಿ ಹೇರಿಕೆಯನ್ನು ಹೇರಿದೆ.

**5. ನಗರ ಸಮಾಜ :** ನಗರ ಸಮಾಜ ಮಾದರಿ ಎನಿಸಿದೆ. ಜೊತೆಗೆ ಅಷ್ಟೇ ಸಂಕೀರ್ಣವೆನಿಸಿದೆ. ನಗರ ಜೀವನ ಅತೀವ ಜನಸಂಖ್ಯೆಯಿಂದ ವಿವಿಧ ಸಾಂಸ್ಕೃತಿಕ, ಔದ್ಯೋಗಿಕ, ರಚನಾತ್ಮಕ, ಭಿನ್ನತೆ ಮತ್ತು ಲಕ್ಷಣಗಳನ್ನು ತನ್ನೊಳಗೆ ರೂಢಿಸಿಕೊಳ್ಳುವುದು ಸಹಜವೆನಿಸಿದರೂ, ನಗರ ಸಮಾಜದ ಗಾತ್ರ ಹೆಚ್ಚಾದಂತೆ ಅಲ್ಲಿನ ವೈಪರೀತ್ಯ ಬೆಳವಣಿಗೆಗಳು ಜೀವನವನ್ನು ಒಂದು ರೀತಿಯ ಸಮಸ್ಯೆಯ ಅಂಚಿಗೆ ತಳ್ಳುತ್ತವೆ. ಇವುಗಳ ನಡುವೆಯು ನಗರ ಜೀವನ ಯಾವತ್ತೂ ಸ್ವಾಗತಾರ್ಹವಾಗಿರುವುದು ಇತಿಹಾಸದ ಪುಟಗಳಿಂದ ಹಾಗೂ ಪ್ರಸ್ತುತ ಪ್ರಕ್ರಿಯೆಗಳಿಂದ ಕಂಡುಬರುತ್ತದೆ. ಇತ್ತೀಚೆಗಂತೂ ನಗರ ಸಮುದಾಯಗಳ ಬೆಳವಣಿಗೆ, ನಗರ ಸಮಾಜದ ಅಭಿವೃದ್ಧಿಯ ಚಟುವಟಿಕೆಗಳು ಆಶಾದಾಯಕವಾಗಿವೆ. ಆಧುನಿಕ ಸಮಾಜವು ನಗರ ಸಮಾಜವಾಗಿ ನವೀಕರಣಗೊಂಡ ಸಂಕೀರ್ಣ ಸಮಾಜವಾಗಿರುತ್ತದೆ.

ಭಾರತದಲ್ಲಿ ನಗರ ಜೀವನ ಇಂದು ನಿನ್ನೆಯದಲ್ಲ. ವಿಶ್ವದಲ್ಲೇ ಅತೀ ಪುರಾತನ ನಾಗರಿಕತೆ ಹೊಂದಿದ್ದ ಮತ್ತು ನಗರ ಜೀವನ ರೂಢಿಸಿಕೊಂಡ ಸಮಾಜ ಇದು. ಮೆಸಪಟೊಮಿಯಾ ಮತ್ತು ಈಜಿಪ್ಟ್ ನಾಗರಿಕತೆ

©KTBS Not to be republished

ನಂತರದಲ್ಲಿ ಸಿಂಧೂ ನದಿ ಕೊಳ್ಳದಲ್ಲಿ ಹೊರಹೊಮ್ಮಿದ ಅತ್ಯುನ್ನತ ನಾಗರಿಕತೆ ಮತ್ತು ನಗರ ಜೀವನವನ್ನು ಅಭಿವೃದ್ಧಿಪಡಿಸಿದ ಕೀರ್ತಿ ಭಾರತದ್ದು. ಹರಪ್ಪ, ಮೊಹೆಂಜೋದಾರೊ, ಲೋಥಾಲ್, ಕಾಲಿಬಂಗನ್ ಹೀಗೆ ಅನೇಕ ದೊಡ್ಡ ಹಾಗೂ ಚಿಕ್ಕ ಗಾತ್ರದ ನಗರ ಸಮುದಾಯಗಳನ್ನು ಹುಟ್ಟು ಹಾಕಿದ ಕೀರ್ತಿ ನಮ್ಮದು. ನಾಗರಿಕತೆ ಮತ್ತು ನಗರ ಜೀವನ ಒಂದಕ್ಕೊಂದು ಪರಸ್ಪರ ಪೂರಕವೆನಿಸಿದೆ. ಅಂದರೆ ನಾಗರಿಕತೆಯ ಬೆಳವಣಿಗೆಯಲ್ಲಿ ನಗರ ಜೀವನ ಹೊರಹೊಮ್ಮುತ್ತದೆ, ಅಸ್ತಿತ್ವಕ್ಕೆ ಬರುತ್ತದೆ.

**6. ಕೈಗಾರಿಕ ಸಮಾಜ :** ಕೈಗಾರಿಕೀಕರಣದ ಜೊತೆಯಲ್ಲಿ ಇಂತಹ ಸಮಾಜ ಹುಟ್ಟಿಕೊಂಡಿತು. ವೈಜ್ಞಾನಿಕ ವಿಧಾನಗಳನ್ನು ಉತ್ಪಾದನೆಯಲ್ಲಿ ಬಳಸುವುದು ಹಾಗೂ ಶಕ್ತಿ ಮೂಲಗಳನ್ನು ಹುಡುಕುವುದು ಈ ಸಮಾಜದ ಲಕ್ಷಣಗಳಾಗಿವೆ. ಹಾಂಗ್‌ಕಾಂಗ್, ದಕ್ಷಿಣಕೊರಿಯಾ, ಸಿಂಗಾಪೂರ್, ಬ್ರೆಜಿಲ್ ಮತ್ತು ಮೆಕ್ಸಿಕೋ ಈ ಪಟ್ಟಿಗೆ ಸೇರಿವೆ. ಸೀಮಿತ ಸಂಖ್ಯೆಯ ಜನರು ಕೃಷಿಯನ್ನು ಅವಲಂಬಿಸಿದರೆ, ಬಹುತೇಕ ಜನರು ನಗರ / ಪಟ್ಟಣಗಳಲ್ಲಿ ಕೈಗಾರಿಕೆಯನ್ನು ಅವಲಂಬಿಸಿದ್ದಾರೆ.

ಕೈಗಾರಿಕಾ ಸಮಾಜದಲ್ಲಿ ಉತ್ಪಾದನೆಯು ಮಾನವ ಶ್ರಮದಿಂದ ನಡೆಯದೇ ಯಂತ್ರಚಾಲಿತ ತಾಂತ್ರಿಕತೆಯಿಂದ ನಡೆಯುತ್ತಿರುತ್ತದೆ. ಇಲ್ಲಿ ಉತ್ಪಾದನೆಯು ಅಗಾಧ ಪ್ರಮಾಣದಲ್ಲಿ ಇರುತ್ತದೆ. ಇದು ಶ್ರಮ ವಿಭಜನೆಯನ್ನು ಹೆಚ್ಚಾಗಿ ಅವಲಂಬಿಸಿರುತ್ತದೆ. ಕೈಗಾರಿಕಾ ಕ್ರಾಂತಿಯ ಫಲವಾಗಿ (ಸಾ.ಶ. 1760) ಸಮಾಜದಲ್ಲಿ ಉತ್ಪಾದನಾ ಪ್ರಕ್ರಿಯೆಗಳು ಸ್ಥಿತ್ಯಂತರಕ್ಕೊಳಪಡುತ್ತವೆ. ಇದರ ಫಲವಾಗಿ ಮಾನವ ಶ್ರಮ ಆಧಾರಿತ ಕೈಗಳಿಂದ ಉತ್ಪಾದನಾ ಕ್ರಮವು ಯಾಂತ್ರಿಕತೆಗೆ ಒಳಪಡುತ್ತದೆ. ಪ್ರಾರಂಭಿಕ ಹಂತದಲ್ಲಿ ಹಬೆ ಆಧಾರಿತ ಯಂತ್ರಗಳ ಮೂಲಕ ಉತ್ಪಾದನೆ ಪ್ರಾರಂಭಗೊಂಡು ನಂತರದ ಹಂತದಲ್ಲಿ ವಿದ್ಯುತ್ ಚಾಲಿತ ಯಂತ್ರಗಳು, ಕೈಗಾರಿಕಾ ವ್ಯವಸ್ಥೆಯನ್ನು ಬೃಹತ್ ಪ್ರಮಾಣದಲ್ಲಿ ರೂಪಿಸಿವೆ. ಟೆಕ್ಸ್‌ಟೈಲ್‌ಗಳ ಯಾಂತ್ರಿಕತೆ, ಹತ್ತಿ ನೂಲು ತಯಾರಿಕೆ ಮತ್ತು ಬಟ್ಟೆ ತಯಾರಿಕೆಯನ್ನು ವಿಸ್ತರಿಸುವ ಮೂಲಕ ಪ್ರಾರಂಭಗೊಂಡು ಇಂದು ಕಲ್ಲಿದ್ದಿಲಿನ ಮೂಲಕ, ಬೃಹತ್ ಪ್ರಮಾಣದ ಬಾಯ್ಲರ್‌ಗಳ ಮೂಲಕ ಕಬ್ಬಿಣವನ್ನು ಕರಗಿಸುವ (ಯಾವುದನ್ನು ಬೇಕಾದರೂ ಕರಗಿಸುವ) ಹಂತಕ್ಕೆ ಕೈಗಾರಿಕೆ ಬಂದು ನಿಂತಿದೆ. ಕೈಗಾರಿಕಾ ಸಮಾಜದ ಲಕ್ಷಣಗಳನ್ನು ಈ ಕೆಳಗಿನಂತೆ ವಿವರಿಸಬಹುದು.

### ಕೈಗಾರಿಕಾ ಸಮಾಜದ ಲಕ್ಷಣಗಳು

**1. ಕೈಗಾರಿಕಾ ಆಧಾರಿತ ಆರ್ಥಿಕತೆ:** ಈ ಆರ್ಥಿಕತೆಯಲ್ಲಿ ಸಮಾಜವು ಹಲವು ವರ್ಗಗಳಾಗಿ ವಿಭಾಗವಾಗುತ್ತದೆ. ಬಂಡವಾಳಶಾಹಿ ವರ್ಗ, ಕಾರ್ಮಿಕರು ಮತ್ತು ಸಣ್ಣ ವ್ಯಾಪಾರಿಗಳಾಗಿ ವಿಭಾಗಗಳಾಗುತ್ತವೆ. ಇಲ್ಲಿ ನಡೆಯುವ ಬಹುತೇಕ ಆರ್ಥಿಕ ಚಟುವಟಿಕೆಗಳು ಕೈಗಾರಿಕೆಗೆ ಸಂಬಂಧಿಸಿದ್ದೇ ಆಗಿರುತ್ತದೆ.

**2. ದುಡಿಮೆಯಲ್ಲಿ ವೃತ್ತಿಪರತೆ:** ಈ ಸಮಾಜದಲ್ಲಿ ದುಡಿಮೆಯ ವೃತ್ತಿಪರತೆಯು ತಾಂತ್ರಿಕ ಕೆಲಸಗಳು ಮತ್ತು ಅದಕ್ಕೆ ಬೇಕಾದ ಕೌಶಲ್ಯ, ಜ್ಞಾನ ಮತ್ತು ತರಬೇತಿ ಇವು ಅಗತ್ಯವಾಗಿರುತ್ತವೆ.

**3. ಸಾರಿಗೆ ಮತ್ತು ಸಂಪರ್ಕ:** ಕೈಗಾರಿಕಾ ಸಮಾಜದಲ್ಲಿ ಬಹುವಿಸ್ತೃತವಾದ ಸಾರಿಗೆ ಮತ್ತು ಸಂಪರ್ಕ ಮಾಧ್ಯಮಗಳ ವಿಸ್ತರಣೆಯಾಗುತ್ತದೆ. ಉತ್ಪಾದನೆಗೆ ಬೇಕಾದ ಕಚ್ಚಾ ಸಾಮಗ್ರಿಗಳನ್ನು ಕಾರ್ಖಾನೆಗೆ ತರಲು ಮತ್ತು ಉತ್ಪಾದಿತ ಸರಕುಗಳನ್ನು ಮಾರುಕಟ್ಟೆಗೆ ಸಾಗಿಸಲು ವಿಸ್ತೃತವಾದ ಸಾರಿಗೆ ಸಂಪರ್ಕ ಈ ಸಮಾಜದಲ್ಲಿ ಇರುತ್ತದೆ.

**4. ವಲಸೆಯ ಹೆಚ್ಚಳ:** ಕೈಗಾರಿಕಾ ಕ್ರಾಂತಿಯ ನಂತರ ವಲಸೆಯು ನಮ್ಮ ಗ್ರಾಮೀಣ ಪ್ರದೇಶದ ಕೃಷಿ ಆರ್ಥಿಕತೆಯನ್ನೇ ಅಲುಗಾಡಿಸಿತು. ಇದು ಗ್ರಾಮೀಣ ಸಮಾಜದ ಸಾಂಸ್ಥಿಕ ವ್ಯವಸ್ಥೆಯ ಒಳಗಡೆ ಅನೇಕ ಭಿನ್ನಾಭಿಪ್ರಾಯಗಳನ್ನು ರೂಪಿಸುತ್ತದೆ. ಇದರ ಪರಿಣಾಮವಾಗಿ ಅವಿಭಕ್ತ ಕುಟುಂಬಗಳು ಅಸ್ತಿತ್ವವನ್ನು ಕಳೆದುಕೊಂಡು ಚಿಕ್ಕ ಕುಟುಂಬಗಳಾಗಿ ರೂಪುಗೊಳ್ಳಲು ಪ್ರೇರೇಪಿಸುತ್ತವೆ. ಅಷ್ಟಕ್ಕೆ ನಿಲ್ಲದ ಕೈಗಾರಿಕಾ ಸಮಾಜವು ವೃತ್ತಿಪರತೆಯ ಮೂಲಕ ವ್ಯಕ್ತಿಕೇಂದ್ರಿತವಾದ ವೈಯಕ್ತೀಕರಣವನ್ನು ಹುಟ್ಟುಹಾಕುತ್ತದೆ.

©KTBS Not to be republished

**7) ಮಾಹಿತಿ ಸಮಾಜ:** ಮಾಹಿತಿ ಸಮಾಜ ಎನ್ನುವುದು ಎಲ್ಲ ವರ್ಗದವರಿಗೂ ಅವಶ್ಯಕವಾಗಿರುವುದರಿಂದ ಹೆಚ್ಚು ಪ್ರಾಮುಖ್ಯತೆ ಪಡೆದಿದೆ. ಈ ಸಮಾಜದಲ್ಲಿ ಜನರು ಏನೇ ಸೌಲಭ್ಯಗಳನ್ನು ಮತ್ತು ಕುಂದು ಕೊರತೆಗಳನ್ನು ನೆರವೇರಿಸಿಕೊಳ್ಳಲು ಮಾಹಿತಿ ಸಮಾಜದ ಕಡೆ ಮೊರೆ ಹೋಗುವುದು ಸಹಜವಾಗಿದೆ. ಮುಂದಿನ ಜೀವನಕ್ಕೆ ಅವಶ್ಯಕತೆ ಇರುವ ಶಿಕ್ಷಣ, ವಾಣಿಜ್ಯ, ಕೈಗಾರಿಕೆ, ಇನ್ನೂ ಮುಂತಾದ ಅಂಶಗಳಿಗೆ ಸಂಬಂಧಿಸಿದಂತೆ ಮಾಹಿತಿ ಸಮಾಜ ಸಹಾಯಕವಾಗುತ್ತದೆ. ಮಾಹಿತಿ ಸಮಾಜ ಕುರಿತ ಅಧ್ಯಯನಗಳು ಮತ್ತು ಸಿದ್ಧಾಂತಗಳು ಆರ್ಥಿಕತೆಯ ಮೇಲೆ ಜ್ಞಾನದ ಹಿಡಿತವನ್ನು ಕುರಿತು ಪ್ರಮುಖವಾಗಿ ಎರಡು ರೀತಿಯ ಚರ್ಚೆಗಳನ್ನು ನಡೆಸುತ್ತವೆ. ಒಂದು, ಸಮಾಜೋ–ಆರ್ಥಿಕ ಜೀವನದಲ್ಲಿ ಮಾಹಿತಿ ತಂತ್ರಜ್ಞಾನದ ಪ್ರಾಮುಖ್ಯತೆಯ ಹೆಚ್ಚಳ ಮತ್ತು ಅದರ ಪ್ರಭಾವಗಳನ್ನು ಕುರಿತದ್ದಾದರೆ, ಮತ್ತೊಂದು ಮಾಹಿತಿ ಸ್ವರೂಪವೇ ಮಾರುಕಟ್ಟೆಯ ಸರಕಾಗಿರುವ ಬಗೆಯನ್ನು ವಿಶ್ಲೇಷಣೆ ಮಾಡುತ್ತದೆ. ಹೀಗಾಗಿ 'ಜ್ಞಾನ' ಎಂಬುದು ಸಮಕಾಲೀನ ಜಾಗತಿಕ ಮುಕ್ತ ಸಮಾಜದಲ್ಲಿ ಕೇವಲ ಒಬ್ಬ ವ್ಯಕ್ತಿಯ ಅಥವಾ ಸಂಸ್ಥೆಯ ಸ್ವತ್ತು ಅಥವಾ ಆಸ್ತಿಯಾಗದೆ, ಹೊಸ ಹೊಸ ಉತ್ಪಾದನಾ ತಾಂತ್ರಿಕತೆಯ ಮುಖ್ಯ ಕೀಲಿ ಕೈ ಆಗಿದೆ. ಅಂದರೆ ಹೊಸ ತಂತ್ರಜ್ಞಾನದ ಪರಿಕರಗಳಲ್ಲಿ (ಕಂಪ್ಯೂಟರ್ ಇತ್ಯಾದಿ) 'ಜ್ಞಾನ'ವು ವಿನಿಮಯಗೊಳ್ಳುತ್ತಿದೆ. ಕಂಪ್ಯೂಟರ್‌ಗಳು ಮಾಹಿತಿ ಕಣಜವಾಗುತ್ತಿವೆ.

## ಅಭ್ಯಾಸಗಳು

**I. ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಬೇಟೆಯಾಡುವ ಸಮಾಜದ ಸದಸ್ಯರು, ಬೇಟೆಯಾಡಲು ________________ ಆಯುಧಗಳನ್ನು ಉಪಯೋಗಿಸುತ್ತಾರೆ.
2. ಕೃಷಿ ಸಮಾಜದಲ್ಲಿ ಉಳುಮೆಗೆ ________________ ಬಳಸುತ್ತಾರೆ.
3. ಕೌಶಲ್ಯದ ಕೆಲಸ ಹಂಚುವುದಕ್ಕೆ ________________ ಎಂದು ಹೆಸರು.
4. ಕೈಗಾರಿಕ ಸಮಾಜದಲ್ಲಿ ಸಾರಿಗೆ ಮತ್ತು ____________ ಹೆಚ್ಚಳವಾಗುತ್ತದೆ.
5. ಯಾಂತ್ರಿಕ ಉತ್ಪಾದನೆ ___________ ಸಮಾಜದಲ್ಲಿ ಆಗುತ್ತದೆ.

**II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**

1. ಸಮಾಜದ ಪ್ರಕಾರಗಳು ಯಾವುವು?
2. ಪಶುಪಾಲನ ಸಮಾಜ ಎಂದರೇನು?
3. ಕೃಷಿಯು ಸಮಾಜದಲ್ಲಿ ಹೇಗೆ ಮಹತ್ವವನ್ನು ಪಡೆದಿದೆ.
4. ಕೈಗಾರಿಕಾ ಸಮಾಜ ಎಂದರೇನು?
5. ಮಾಹಿತಿ ಸಮಾಜವು ಇಂದು ಅತ್ಯಂತ ವೇಗವಾಗಿ ಬೆಳೆಯುತ್ತಿರುವುದನ್ನು ಸಮರ್ಥಿಸಿ.

©KTBS Not to be re published

**III. ಕೆಳಗಿನ ಪ್ರಶ್ನೆಗಳಿಗೆ ನಾಲ್ಕೈದು ವಾಕ್ಯದಲ್ಲಿ ಉತ್ತರಿಸಿ.**

1. ಬೇಟೆಯಾಡುವ ಹಾಗೂ ಆಹಾರ ಸಂಗ್ರಹಿಸುವ ಸಮಾಜದ ಜೀವನ ಶೈಲಿಯನ್ನು ವಿವರಿಸಿ.
2. ಪಶುಪಾಲನ ಸಮಾಜದ ಲಕ್ಷಣಗಳನ್ನು ತಿಳಿಸಿ.
3. ಭೂಮಿ ಮತ್ತು ಕೃಷಿಗೆ ಇರುವ ಸಂಬಂಧವನ್ನು ವಿವರಿಸಿ.
4. ಕೈಗಾರಿಕಾ ಸಮಾಜದ ಲಕ್ಷಣಗಳನ್ನು ಪಟ್ಟಿ ಮಾಡಿ.
5. ಮಾಹಿತಿ ಸಮಾಜ ಕುರಿತು ಟಿಪ್ಪಣಿ ಬರೆಯಿರಿ.

**IV. ಚಟುವಟಿಕೆಗಳು.**

1. ವಿದ್ಯಾರ್ಥಿಗಳು ನಗರ ಜೀವನ ಮತ್ತು ಗ್ರಾಮೀಣ ಜೀವನ ಕುರಿತಂತೆ ಶಿಕ್ಷಕರೊಂದಿಗೆ ಚರ್ಚಿಸಿ, ಹೋಲಿಸಿ.
2. ವಿದ್ಯಾರ್ಥಿಗಳು ಆದರ್ಶ ಸಮಾಜದ ಪರಿಕಲ್ಪನೆಯ ಬಗ್ಗೆ ಗುಂಪಿನಲ್ಲಿ ಚರ್ಚಿಸುವುದು.

**V. ಯೋಜನೆ**

1. ನಿಮ್ಮ ಗ್ರಾಮದಲ್ಲಿರುವ ಸಮಾಜಗಳ ಪಟ್ಟಿ ಮಾಡಿ. ಒಬ್ಬರು ಕೃಷಿಕರೊಂದಿಗೆ ಸಂದರ್ಶನ ನಡೆಸಿ ಕೃಷಿ ಸಮಾಜದ ಸಮಸ್ಯೆಗಳನ್ನು ಪಟ್ಟಿ ಮಾಡಿರಿ.

*****

©KTBS Not to be re published

# ಅಧ್ಯಾಯ – 3

# ವಾಯುಗೋಳ


**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ವಾಯುಗೋಳದ ಅರ್ಥ, ಪ್ರಾಮುಖ್ಯತೆ, ಸಂಯೋಜನೆ, ರಚನೆ ಬಗ್ಗೆ ಅರಿವು.
- ಹವಾಮಾನದ ಘಟಕಾಂಶಗಳಾದ ಉಷ್ಣಾಂಶ, ಒತ್ತಡ, ಮಾರುತಗಳು, ತೇವಾಂಶ, ಮೋಡ, ಮಳೆ, ಇವುಗಳ ವಿಧ, ಕಾರ್ಯ ಮತ್ತು ಪರಿಣಾಮಗಳು.
- ಹವಾಮಾನ ಮತ್ತು ವಾಯುಗುಣದ ವ್ಯತ್ಯಾಸವನ್ನು ವಿಶ್ಲೇಷಿಸುವುದು.

ನಮ್ಮನ್ನು ಭೂಮಿಯ ಸುತ್ತಲಿನ ವಾಯುವಿನ ಪದರವು ಹೇಗೆ ರಕ್ಷಿಸುತ್ತಿದೆ ಎಂಬುದು ತಿಳಿದಿದೆಯೇ?

## ವಾಯುಗೋಳದ ಅರ್ಥ ಮತ್ತು ಪ್ರಾಮುಖ್ಯತೆ :

ಭೂಮಿಯನ್ನು ಸುತ್ತುವರಿದಿರುವ ಅನಿಲಗಳ, ಧೂಳಿನ ಕಣ ಮತ್ತು ನೀರಾವಿಯ ತೆಳುವಾದ ಪದರವನ್ನು ವಾಯುಗೋಳವೆಂದು ಕರೆಯುತ್ತೇವೆ. ಈ ಅನಿಲದ ಪದರವು ಭೂಮೇಲ್ಮೈ ಮತ್ತು ಬಾಹ್ಯಾಕಾಶಗಳ ನಡುವಿನ ರಕ್ಷಣಾ ವಲಯ. ವಾಯುಗೋಳದ ದಪ್ಪ ಸುಮಾರು 1000 ಕಿ.ಮೀ. ಗಳಿದ್ದು, ಇದು ಭೂಮಿಯ ಎಲ್ಲಾ ಬಗೆಯ ಜೀವಿಗಳಿಗೆ ಅತ್ಯವಶ್ಯವಾಗಿದೆ. ವಾಯುಗೋಳದ ಕೆಲವು ಅನಿಲಗಳು ಮಾನವ ಮತ್ತು ಇತರ ಜೀವಿಗಳ ಉಸಿರಾಟಕ್ಕೆ ಅತ್ಯವಶ್ಯವಾಗಿದೆ. ಸಸ್ಯಗಳು ಈ ಅನಿಲಗಳ ನೆರವಿನಿಂದ ಆಹಾರವನ್ನು ಉತ್ಪಾದಿಸುತ್ತವೆ ವಾಯುಗೋಳವು ಸೂರ್ಯನ ಶಾಖವನ್ನು ಹಿಡಿದಿರಿಸಿಕೊಂಡು ಭೂಮಿಯು ಒಂದು ಜೀವಗ್ರಹವಾಗಿರುವಂತೆ ಮಾಡಿದೆ.




**ವಾಯುಮಂಡಲ ಸ್ತರಗಳು**

©KTBS Not to be re published

## ವಾಯುಗೋಳದ ಸಂಯೋಜನೆ

ವಾಯುಗೋಳವು ವಿವಿಧ ಬಗೆಯ ಅನಿಲಗಳು, ಧೂಳಿನ ಕಣಗಳು ಮತ್ತು ನೀರಾವಿಯ ಮಿಶ್ರಣವಾಗಿದೆ. ವಾಯುಗೋಳದ ಮುಖ್ಯ ಅನಿಲಗಳೆಂದರೆ ಸಾರಜನಕ ಶೇ.78.08, ಆಮ್ಲಜನಕ ಶೇ.20.94, ಆರ್ಗಾನ್ ಶೇ.0.93, ಇಂಗಾಲದ ಡೈಆಕ್ಸೈಡ್ ಶೇ.03, ಮತ್ತು ಓಜೋನ್ ಶೇ. 0.000005. ವಾಯುಗೋಳವು ಧೂಳಿನ ಕಣಗಳನ್ನು ಸಹ ಒಳಗೊಂಡಿದ್ದು, ನೀರಿನ ಕಣಗಳ ನಿರ್ಮಾಣಕ್ಕೆ ಸಹಾಯಕವಾಗಿದೆ. ವಾಯುಗೋಳದಲ್ಲಿರುವ ನೀರಾವಿಯು ಮೋಡದ ನಿರ್ಮಾಣ ಹಾಗೂ ವೃಷ್ಟಿಗೆ ಕಾರಣವಾಗುವುದಲ್ಲದೆ, ವಾಯುಗೋಳದ ಶಾಖ ಮತ್ತು ಶಕ್ತಿಯನ್ನು ಹಿಡಿದಿರಿಸಿಕೊಂಡು ಅದು ಒಂದು ಸ್ಥಳದ ಹವಾಮಾನದ ಪರಿಸ್ಥಿತಿಯ ಮೇಲೆ ಪ್ರಭಾವವನ್ನು ಬೀರುತ್ತವೆ.

## ವಾಯುಗೋಳದ ಪದರುಗಳು

ವಾಯುಗೋಳವನ್ನು ಅದರ ಹಲವಾರು ಲಕ್ಷಣಗಳನ್ನು ಆಧರಿಸಿ ಐದು ಪದರುಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಪರಿವರ್ತನಾಮಂಡಲ, ಸಮೋಷ್ಣಮಂಡಲ, ಮಧ್ಯಂತರಮಂಡಲ, ಉಷ್ಣತಾಮಂಡಲ ಮತ್ತು ಬಾಹ್ಯಮಂಡಲ.

**ಪರಿವರ್ತನಾಮಂಡಲ (Troposphere) :** ಇದು ವಾಯುಗೋಳದ ಅತ್ಯಂತ ಕೆಳಪದರ. ಇದು ಸಮಭಾಜಕವೃತ್ತದ ಬಳಿ 18 ಕಿ.ಮೀ. ಎತ್ತರದವರೆಗೆ ಹಾಗೂ ಧ್ರುವಪ್ರದೇಶದ ಬಳಿ 8ಕಿ.ಮೀ. ಎತ್ತರದ ವರೆಗೆ ಕಂಡುಬರುವುದು. ಈ ವಲಯದಲ್ಲಿಯೇ ಹವಾಮಾನದ ಮೂಲಾಂಶಗಳಾದ ಉಷ್ಣಾಂಶ, ಒತ್ತಡ, ಮಾರುತಗಳು, ಮೋಡ, ಮಳೆ ಮೊದಲಾದ ಎಲ್ಲಾ ಅಂಶಗಳು ಕಂಡುಬರುತ್ತವೆ. ಹವಾಮಾನದ ಎಲ್ಲಾ ಬದಲಾವಣೆ ಕಂಡುಬರುವುದು ಈ ವಲಯದಲ್ಲಿ ಮಾತ್ರ. ಈ ವಲಯದಲ್ಲಿ ಎತ್ತರಕ್ಕೆ ಹೋದಂತೆ ಉಷ್ಣಾಂಶ ಮತ್ತು ಒತ್ತಡದ ಪ್ರಮಾಣ ಕಡಿಮೆಯಾಗುತ್ತವೆ.

**ಸಮೋಷ್ಣಮಂಡಲ (Stratosphere) :** ಇದು ವಾಯುಮಂಡಲದ ಎರಡನೆಯ ಪದರವಾಗಿದ್ದು 50 ಕಿ.ಮೀ.ವರೆಗೆ ಹಬ್ಬಿದೆ. ಪರಿವರ್ತನಾ ಮಂಡಲ ಮತ್ತು ಮಧ್ಯಂತರ ಮಂಡಲಗಳ ನಡುವೆ ವಿಸ್ತರಿಸಿದೆ. ಈ ಪದರದಲ್ಲಿ ಓಜೋನ್ ಅನಿಲವು ಅತ್ಯಂತ ಮುಖ್ಯವಾದುದು. ಇದು ಸೂರ್ಯನಿಂದ ಬರುವ ಅತಿನೇರಳೆ (ಅಲ್ಟ್ರಾವೈಲೆಟ್) ಕಿರಣಗಳನ್ನು ಹೀರಿಕೊಂಡು ಭೂಮಿಯ ಮೇಲಿನ ಎಲ್ಲಾ ಜೀವರಾಶಿಗಳನ್ನು ರಕ್ಷಿಸಿದೆ. ಈ ಪದರವು ಮೋಡ ಹಾಗೂ ಇತರೆ ಎಲ್ಲಾ ಬಗೆಯ ಹವಾಮಾನದ ಅಂಶಗಳಿಂದ ಮುಕ್ತವಾಗಿರುವುದು. ಇದರಿಂದ ಈ ಪದರದಲ್ಲಿ ಜೆಟ್ ವಿಮಾನಗಳು ಹಾರಾಡಲು ಸೂಕ್ತವಾಗಿದೆ.

**ಮಧ್ಯಂತರ ಮಂಡಲ (Mesosphere) :** ಇದು ಸಮೋಷ್ಣಮಂಡಲದ ಮೇಲಿದ್ದು ಸುಮಾರು 80 ಕಿ.ಮೀ. ಎತ್ತರದವರೆಗೆ ವಿಸ್ತರಿಸಿದೆ. ಈ ವಲಯದಲ್ಲಿಯೂ ಎತ್ತರಕ್ಕೆ ಹೋದಂತೆ ಉಷ್ಣಾಂಶವು ಕಡಿಮೆಯಾಗುವುದು. ಈ ಪದರು ವಾಯುಮಂಡಲದ ಅತಿ ಶೀತವಾದ ವಲಯವಾಗಿದೆ.

**ಉಷ್ಣತಾಮಂಡಲ (Thermosphere) :** ಮಧ್ಯಂತರ ಮಂಡಲದ ನಂತರ ಉಷ್ಣತಾಮಂಡಲ ಕಂಡುಬರುತ್ತದೆ. ಈ ಪದರದಲ್ಲಿ ಉಷ್ಣಾಂಶವು ತೀವ್ರವಾಗಿ ಹೆಚ್ಚಾಗುತ್ತದೆ. ಈ ಪದರದಲ್ಲಿನ ಅತ್ಯಧಿಕ ಉಷ್ಣಾಂಶದ ಪರಿಣಾಮವಾಗಿ ಅನಿಲದ ಅಣುಗಳು ಆಯಾನುಗಳಾಗಿ ಪರಿವರ್ತನೆ ಹೊಂದಿರುತ್ತವೆ. ಆದುದರಿಂದ ಇದನ್ನು 'ಆಯಾನುಮಂಡಲ'ವೆಂತಲೂ ಕರೆಯುವರು. ಇಲ್ಲಿನ ಆಯಾನುಗಳು ಭೂಮಿಯಿಂದ ಪ್ರಸಾರಗೊಂಡ ರೇಡಿಯೋ ತರಂಗಗಳನ್ನು ಪುನಃ ಭೂಮಿಯ ಕಡೆಗೆ ಪ್ರತಿಫಲಿಸುತ್ತವೆ.

**ಬಾಹ್ಯಮಂಡಲ (Exosphere) :** ಬಾಹ್ಯಮಂಡಲವು ವಾಯುಗೋಳದ ಅತ್ಯಂತ ಎತ್ತರದಲ್ಲಿದ್ದು ಪದರವಾಗಿದೆ. ಈ ಪದರಲ್ಲಿ ವಾಯುಗೋಳದ ಘಟಕಾಂಶಗಳು ವಿರಳವಾಗಿರುತ್ತದೆ ಮತ್ತು ಒತ್ತಡ ಅತ್ಯಂತ ಕಡಿಮೆ ಇರುತ್ತದೆ.

©KTBS Not to be republished

### ಹವಾಗುಣದ ಘಟಕಾಂಶಗಳು (Elements of Weather)

ಒಂದು ಪ್ರದೇಶದ ಹವಾಮಾನದ ಪರಿಸ್ಥಿತಿಯು ಹಲವು ಅಂಶಗಳಿಂದ ಪ್ರಭಾವಿತವಾಗಿರುತ್ತದೆ. ಅವುಗಳೆಂದರೆ ಉಷ್ಣಾಂಶ, ಒತ್ತಡ, ಮಾರುತಗಳು, ತೇವಾಂಶ, ಮೋಡ, ಮಳೆ ಇತ್ಯಾದಿ.


> ಒಂದು ಸ್ಥಳದಲ್ಲಿ ನಿಗದಿತ ಸಮಯದಲ್ಲಿ ಕಂಡುಬರುವ ವಾಯುಮಂಡಲದ ಪರಿಸ್ಥಿತಿಯೇ ಹವಾಮಾನ. ಇದಕ್ಕೆ ಪ್ರತಿಯಾಗಿ ಒಂದು ಪ್ರದೇಶದ ದೀರ್ಘಾವಧಿಯ ಹವಾಮಾನದ ಸರಾಸರಿಯನ್ನು ವಾಯುಗುಣವೆಂದು ಕರೆಯುವರು.

### ವಾಯುಗೋಳದ ಉಷ್ಣಾಂಶ

ಭೂಮಿಯು ಪಡೆಯುವ ಎಲ್ಲಾ ಶಕ್ತಿಗೂ ಸೂರ್ಯನೇ ಮೂಲ. ಭೂಮಿಯು ಸೂರ್ಯನಿಂದ ಪಡೆಯುವ ಶಾಖವನ್ನು 'ಸೂರ್ಯಜನ್ಯ ಶಾಖ'(Insolation)ವೆಂದು ಕರೆಯುವರು. ಅಂದರೆ ಸೂರ್ಯನಿಂದ ಭೂಮಿಗೆ ತಲುಪುವ ಸೌರವಿಕಿರಣ ಶಾಖ ಎಂದಾಗಿದೆ. ವಾಯುಗೋಳದ ಉಷ್ಣಾಂಶವನ್ನು ಉಷ್ಣತಾಮಾಪಕ (Thermometer)ದಿಂದ ಅಳೆಯಲಾಗುವುದು. ಸೆಂಟಿಗ್ರೇಡ್ ಅಥವಾ ಫ್ಯಾರನ್ ಹೀಟ್ ಉಷ್ಣತಾಮಾಪಕಗಳನ್ನು ಉಷ್ಣಾಂಶವನ್ನು ಅಳೆಯಲು ಬಳಸುವ ಮುಖ್ಯ ಉಪಕರಣಗಳಾಗಿವೆ. ಉಷ್ಣಾಂಶದ ಮೇಲೆ ಪ್ರಭಾವವನ್ನು ಬೀರುವ ಅಂಶಗಳೆಂದರೆ ಅಕ್ಷಾಂಶ, ಒಂದು ಸ್ಥಳದ ಎತ್ತರ, ಸಮುದ್ರದಿಂದ ಇರುವ ದೂರ, ಮಾರುತಗಳು, ಸಾಗರ ಪ್ರವಾಹಗಳು, ಮೋಡಗಳು, ಮಳೆ ಇತ್ಯಾದಿ.

**ಉಷ್ಣಾಂಶದ ಸಾಮಾನ್ಯ ಇಳಿಕೆಯ ಪ್ರಮಾಣ :** ಎತ್ತರಕ್ಕೆ ಹೋದಂತೆ ಅನಿಲಗಳ ಪ್ರಮಾಣ ಕಡಿಮೆಯಾಗುವುದರಿಂದ ಒತ್ತಡ ಕಡಿಮೆಯಾಗಿ ಉಷ್ಣಾಂಶವು ಕಡಿಮೆಯಾಗುತ್ತದೆ. ಇದನ್ನು ಉಷ್ಣಾಂಶದ ಸಾಮಾನ್ಯ ಇಳಿಕೆ ಪ್ರಮಾಣ ಎನ್ನುವರು. ಪ್ರತಿಸಾವಿರ ಮೀಟರ್‌ಗಳ ಎತ್ತರಕ್ಕೆ (1.ಕಿ.ಮೀ) $6.4^0$ ಸೆಂ. ಅಥವಾ 165 ಮೀಟರ್‌ಗೆ $1^0$. ಸೆಂ. ಉಷ್ಣಾಂಶವು ಕಡಿಮೆಯಾಗುತ್ತದೆ.

**ಉಷ್ಣಾಂಶದ ವಿಪರ್ಯಯ:** ಕೆಲವು ವಿಶೇಷ ಸನ್ನಿವೇಶಗಳಲ್ಲಿ ವಾಯುಮಂಡಲದಲ್ಲಿ ಎತ್ತರಕ್ಕೆ ಹೋದಂತೆ ಉಷ್ಣಾಂಶವು ಕಡಿಮೆಯಾಗುವುದಕ್ಕೆ ಬದಲು ಹೆಚ್ಚಾಗುತ್ತಾ ಹೋಗುವುದು. ಇದನ್ನು 'ಉಷ್ಣಾಂಶ ವಿಪರ್ಯಯ' ಎನ್ನುವರು. ಇದು ಪರ್ವತಗಳ ಕಣಿವೆ ಪ್ರದೇಶಗಳಲ್ಲಿ ಕಂಡುಬರುವುದು. ಇದಕ್ಕೆ ಕಾರಣಗಳೆಂದರೆ ದೀರ್ಘಾವಧಿಯ ರಾತ್ರಿ ಮೋಡರಹಿತ ಶುಭ್ರ ಆಕಾಶ, ಒಣಗಾಳಿ, ಮಾರುತರಹಿತ ಸ್ಥಿತಿ ಮತ್ತು ಹಿಮಾವೃತ ಪರ್ವತದ ಮೇಲ್ಭಾಗ ಇತ್ಯಾದಿ.




**ಉಷ್ಣಾಂಶ ವಲಯಗಳು**

**ಉಷ್ಣಾಂಶದ ವಲಯಗಳು:** ಭೂ ಮೇಲ್ಮೈಯಲ್ಲಿ ಉಷ್ಣಾಂಶದ ಹಂಚಿಕೆಯು ಏಕ ರೀತಿಯಾಗಿಲ್ಲ. ಸೂರ್ಯಜನ್ಯ ಶಾಖದ ಆಧಾರದಿಂದ ಭೂಮಿಯನ್ನು ಮೂರು ಉಷ್ಣಾಂಶ ವಲಯಗಳಾಗಿ ವಿಂಗಡಿಸಬಹುದು. ಅವು ಕೆಳಕಂಡಂತಿವೆ:

**i) ಉಷ್ಣವಲಯ (Torrid Zone) :** ಇದರಲ್ಲಿ ಸೌರಶಾಖವು ಅತ್ಯಧಿಕ. ಇದು ಸಮಭಾಜಕವೃತ್ತ ಶಾಖ ಹೆಚ್ಚು. ಇದು $0^0$ ಅಕ್ಷಾಂಶ ಸಮಭಾಜಕವೃತ್ತದಿಂದ ಕರ್ಕಾಟಕ ಸಂಕ್ರಾಂತಿ ವೃತ್ತ ($23½^0$ ಉತ್ತರ) ಹಾಗೂ

©KTBS Not to be republished

ಮಕರ ಸಂಕ್ರಾಂತಿ ವೃತ್ತದವರೆಗೆ (23½$^o$ ದಕ್ಷಿಣ) ವಿಸ್ತರಿಸಿದೆ. ಈ ವಲಯವು ಸೂರ್ಯನ ನೇರವಾದ ಕಿರಣಗಳನ್ನು ಪಡೆಯುವುದು.

**ii) ಸಮಶೀತೋಷ್ಣವಲಯಗಳು (Temperate Zone) :** ಈ ವಲಯದಲ್ಲಿ ಉಷ್ಣಾಂಶವು ಅತಿ ಹೆಚ್ಚು ಅಥವಾ ಅತಿಕಡಿಮೆಯಿರದೆ ಸಮತೋಲನವಾಗಿರುವುದು. ಇದು ಉತ್ತರಾರ್ಧಗೋಳದಲ್ಲಿ 23½$^o$ಉತ್ತರದಿಂದ, 66½$^o$ ಉತ್ತರ (ಕರ್ಕಾಟಕ ಸಂಕ್ರಾಂತಿ ವೃತ್ತದಿಂದ ಆರ್ಕ್ಟಿಕ್ ವೃತ್ತ)ದವರೆಗೆ ಮತ್ತು ದಕ್ಷಿಣಾರ್ಧಗೋಳದಲ್ಲಿ 23½$^o$ದಕ್ಷಿಣದಿಂದ 66½$^o$ ದಕ್ಷಿಣದವರೆಗೆ (ಮಕರ ಸಂಕ್ರಾಂತಿ ವೃತ್ತದಿಂದ ಅಂಟಾರ್ಕ್ಟಿಕ್ ವೃತ್ತ) ವರೆಗೆ ವಿಸ್ತರಿಸಿವೆ.

**iii) ಶೀತವಲಯಗಳು (Frigid Zone) :** ಇವು ಅತ್ಯಂತ ಶೀತಪ್ರದೇಶಗಳು. ಇವು 66½$^o$(ಆರ್ಕ್ಟಿಕ್ ವೃತ್ತ) ಉತ್ತರದಿಂದ 90$^0$ ಉತ್ತರ ಧ್ರುವದವರೆಗೆ ಹಾಗೂ ದಕ್ಷಿಣಾರ್ಧಗೋಳದಲ್ಲಿ 66½$^o$ ದಕ್ಷಿಣದಿಂದ (ಅಂಟಾರ್ಕ್ಟಿಕ್ ವೃತ್ತ) 90$^0$ ದಕ್ಷಿಣ ಧ್ರುವದವರೆಗೆ ಹರಡಿವೆ. ಈ ವಲಯದಲ್ಲಿ ಸೂರ್ಯನ ಕಿರಣಗಳು ಅತ್ಯಂತ ಓರೆಯಾಗಿ ಬೀಳುವುದರಿಂದ, ಉಷ್ಣಾಂಶ ಅತಿ ಕಡಿಮೆ. ಇಲ್ಲಿ ಬೇಸಿಗೆಯಲ್ಲಿ ಉಷ್ಣಾಂಶ ಸ್ವಲ್ಪ ಹೆಚ್ಚಾಗುತ್ತದೆ ಮತ್ತು ಚಳಿಗಾಲದಲ್ಲಿ ಉಷ್ಣಾಂಶ ಅತಿ ಕಡಿಮೆ ಇರುತ್ತದೆ.

**ಸಮೋಷ್ಣರೇಖೆ (Isotherm)** : ಒಂದೇ ಪ್ರಮಾಣದ ಉಷ್ಣಾಂಶವನ್ನು ಹೊಂದಿರುವ ಸ್ಥಳಗಳನ್ನು ಸೇರಿಸುವಂತೆ ಎಳೆಯಬಹುದಾದ ಕಾಲ್ಪನಿಕ ರೇಖೆಗಳೇ ಸಮೋಷ್ಣರೇಖೆಗಳು. ಇವುಗಳನ್ನು ಗೋಳ ಅಥವಾ ಭೂಪಟದ ಮೇಲೆ ಯಾವುದಾದರೊಂದು ಭಾಗದ ಉಷ್ಣಾಂಶದ ಹಂಚಿಕೆಯನ್ನು ತೋರಿಸಲು ಎಳೆಯಲಾಗುವುದು.

***ನಿಮಗಿದು ಗೊತ್ತೆ?***

***ಅತಿಹೆಚ್ಚು ಹಾಗೂ ಅತಿಕಡಿಮೆ ಉಷ್ಣಾಂಶದ ಸ್ಥಳಗಳು***

1. *ಆಫ್ರಿಕಾ ಖಂಡದ ಲಿಬಿಯಾ ದೇಶದಲ್ಲಿನ ಆಲ್‌ಅಜೀಜಿಯಾದಲ್ಲಿ ಪ್ರಪಂಚದಲ್ಲೇ ಅತಿಹೆಚ್ಚು ಉಷ್ಣಾಂಶವು ದಾಖಲಾಗುತ್ತದೆ (ಸರಾಸರಿ+58$^0$ಸೆಂ). ಆದರೆ ರಷ್ಯಾದ ಸೈಬೀರಿಯಾ ಭಾಗದಲ್ಲಿರುವ ವರ್ಕೋಯನ್ಸ್ಕ್, ಭೂಭಾಗದಲ್ಲೇ (ಜನವಸತಿಯಿರುವ) ಅತಿಕಡಿಮೆ ಉಷ್ಣಾಂಶವನ್ನು ದಾಖಲಿಸಿದೆ.(ಸರಾಸರಿ –24$^0$ ಸೆಂ).*
2. *ಭಾರತದಲ್ಲಿ ರಾಜಸ್ತಾನದ ಗಂಗಾನಗರದಲ್ಲಿ ಬೇಸಿಗೆಯಲ್ಲಿ ಅತ್ಯಂತ ಗರಿಷ್ಠ ಉಷ್ಣಾಂಶವು ದಾಖಲಾಗುತ್ತದೆ. ( ಸರಾಸರಿ +54$^0$ ಸೆಂ) ಮತ್ತು ಜಮ್ಮು ಕಾಶ್ಮೀರದ ಲ್ಹೇ ಪ್ರದೇಶದಲ್ಲಿ ಚಳಿಗಾಲದಲ್ಲಿ ಅತಿ ಕಡಿಮೆ ಉಷ್ಣಾಂಶವು ದಾಖಲಾಗುತ್ತದೆ. (ಸರಾಸರಿ –10$^0$ ಸೆಂ).*
3. *ಅಂಟಾರ್ಕ್ಟಿಕ್‌ದಲ್ಲಿರುವ ಓಸ್ಟಕ್ ಪ್ರದೇಶವನ್ನು ಪ್ರಪಂಚದ ಅತ್ಯಂತ ಶೀತ (ಸರಾಸರಿ–89$^0$–ಸೆಂ) ಪ್ರದೇಶವೆಂದು ಪರಿಗಣಿಸಿದೆ.*

## ವಾಯುಗೋಳದ ಒತ್ತಡ

ವಾಯು ತೂಕವನ್ನು ಹೊಂದಿದ್ದು, ಭೂಮಿಯ ಮೇಲೆ ಅದು ಒತ್ತಡವನ್ನುಂಟು ಮಾಡುವುದು. ಇದನ್ನೇ ವಾಯುಗೋಳದ ಒತ್ತಡ ಎನ್ನುವರು. ವಾಯುವಿನ ಒತ್ತಡವನ್ನು ಅಳೆಯಲು ಬಳಸುವ ಉಪಕರಣ ವಾಯುಭಾರಮಾಪಕ (Barometer). ಒತ್ತಡವನ್ನು ಮಿಲಿಬಾರ್(mb)ಗಳಲ್ಲಿ ಅಳೆಯಲಾಗುತ್ತದೆ. ಸಮುದ್ರ ಮಟ್ಟದಲ್ಲಿ ವಾಯುಮಂಡಲದ ಸರಾಸರಿ ಒತ್ತಡ 1013.25 ಮಿಲಿಬಾರ್‌ಗಳಷ್ಟಿರುತ್ತದೆ. ವಾಯುಮಂಡಲದ ಒತ್ತಡವು ಉಷ್ಣಾಂಶ, ಭೂಮಿಯ ದೈನಂದಿನ ಚಲನೆ, ಸಮುದ್ರಮಟ್ಟದಿಂದ ಎತ್ತರ, ನೀರಾವಿ



©KTBS Not to be republished

ಮೊದಲಾದವುಗಳಿಂದ ಪ್ರಭಾವಿತವಾಗುವುದು. ಇವುಗಳಲ್ಲಿ ಉಷ್ಣಾಂಶವು ಅತಿಮುಖ್ಯವಾದುದು. ಉಷ್ಣಾಂಶವು ಹೆಚ್ಚಾಗಿರುವ ಪ್ರದೇಶಗಳಲ್ಲಿ ಒತ್ತಡವು ಕಡಿಮೆ. ಇದಕ್ಕೆ ಕಾರಣ ಹೆಚ್ಚು ಉಷ್ಣಾಂಶದಿಂದ ವಾಯು ವಿಕಾಸ ಹೊಂದಿ ಒತ್ತಡವು ಕಡಿಮೆಯಾಗುವುದು. ಇದಕ್ಕೆ ಪ್ರತಿಯಾಗಿ ಕಡಿಮೆ ಉಷ್ಣಾಂಶ ಇರುವ ಪ್ರದೇಶಗಳಲ್ಲಿ ವಾಯುವು ಸಂಕುಚಿತಗೊಂಡು ಒತ್ತಡವು ಅಧಿಕವಾಗುವುದು. ಹೀಗೆ ಉಷ್ಣಾಂಶ ಮತ್ತು ಒತ್ತಡಗಳು ಪರಸ್ಪರ ತದ್ವಿರುದ್ಧ ಸಂಬಂಧವನ್ನು ಹೊಂದಿವೆ. ವಾಯುಮಂಡಲದ ಒತ್ತಡವು ಭೂಮೇಲ್ಮೈನಿಂದ ಎತ್ತರಕ್ಕೆ ಹೋದಂತೆ ಕಡಿಮೆಯಾಗುವುದು. ಈ ಇಳಿಕೆಯ ಪ್ರಮಾಣವು ಪ್ರತಿ 300 ಮಿ.ಗಳಿಗೆ 34 ಮಿಲಿಬಾರ್‌ಗಳಷ್ಟಿರುವುದು.

## ಪ್ರಪಂಚದ ಮುಖ್ಯ ಒತ್ತಡ ಪ್ರದೇಶಗಳು

ಪ್ರಪಂಚದಲ್ಲಿ ಒಟ್ಟು ಏಳು ಒತ್ತಡದ ವಲಯಗಳಿವೆ. ಅವುಗಳೆಂದರೆ:

1. ಸಮಭಾಜಕವೃತ್ತದ ಕಡಿಮೆ ಒತ್ತಡ ಪ್ರದೇಶ.
2. ಉತ್ತರ ಉಪಉಷ್ಣವಲಯದ ಅಧಿಕ ಒತ್ತಡ ಪ್ರದೇಶ.
3. ದಕ್ಷಿಣ ಉಪ ಉಷ್ಣವಲಯದ ಅಧಿಕ ಒತ್ತಡ ಪ್ರದೇಶ.
4. ಉತ್ತರ ಉಪಧ್ರುವೀಯ ಕಡಿಮೆ ಒತ್ತಡ ಪ್ರದೇಶ.
5. ದಕ್ಷಿಣ ಉಪಧ್ರುವೀಯ ಕಡಿಮೆ ಒತ್ತಡ ಪ್ರದೇಶ.
6. ಉತ್ತರ ಧ್ರುವೀಯ ಅಧಿಕ ಒತ್ತಡ ಪ್ರದೇಶ.
7. ದಕ್ಷಿಣ ಧ್ರುವೀಯ ಅಧಿಕ ಒತ್ತಡ ಪ್ರದೇಶ.

**ಸಮಭಾಜಕವೃತ್ತದ ಕಡಿಮೆ ಒತ್ತಡ ಪ್ರದೇಶ:** ಇದು ಹೆಚ್ಚು ಉಷ್ಣಾಂಶದ ವಲಯವಾಗಿದ್ದು ಕಡಿಮೆ ಒತ್ತಡವನ್ನು ಹೊಂದಿದೆ. ಇದು ಸಮಭಾಜಕವೃತ್ತದಿಂದ $5^0$ ಉತ್ತರ ಮತ್ತು $5^0$ ದಕ್ಷಿಣ ಅಕ್ಷಾಂಶದವರೆಗೆ ಕಂಡುಬರುವುದು. ಈ ಭಾಗವು ವರ್ಷವೆಲ್ಲಾ ಸೂರ್ಯನ ಲಂಬವಾದ ಕಿರಣಗಳನ್ನು ಪಡೆಯುವುದು. ಇದ-ರಿಂದ ವಾಯು ಹೆಚ್ಚು ಉಷ್ಣಾಂಶದಿಂದ ಕೂಡಿರುತ್ತದೆ ಹಾಗೂ ಇಲ್ಲಿ ವಾಯು ಚಲನೆ ಕಡಿಮೆ. ಈ ವಲಯವು ಪ್ರಶಾಂತವಾಗಿದ್ದು (calm) ಲಘು ಮಾರುತಗಳಿರುವುದರಿಂದ ಇದನ್ನು 'ಶಾಂತವಲಯ' (Doldrum) ಎಂದೂ ಕರೆಯುವರು. ಈ ಪ್ರದೇಶವನ್ನು ಅಂತರ ಉಷ್ಣ ಸಂಧಿವಲಯ (Inter Tropical Convergence Zone –ITCZ) ಎಂಬ ಹೆಸರಿನಲ್ಲೂ ಕರೆಯುವರು. ವಾಣಿಜ್ಯ ಮಾರುತಗಳು ಈ ವಲಯದಲ್ಲಿ ಸಂಧಿಸುತ್ತವೆ.


**ಉಪ ಉಷ್ಣವಲಯದ ಅಧಿಕ ಒತ್ತಡ ಪ್ರದೇಶಗಳು :** ಈ ಪಟ್ಟಿಗಳು ಉತ್ತರ ಹಾಗೂ ದಕ್ಷಿಣ ಗೋಳಾರ್ಧಗಳೆರಡರಲ್ಲಿಯೂ $30^0$ ಯಿಂದ $35^0$ ಅಕ್ಷಾಂಶಗಳ ನಡುವೆ ಕಂಡು ಬರುತ್ತವೆ. ಇಲ್ಲಿ ಎರಡು ಉಪ-ಉಷ್ಣವಲಯದ ಅಧಿಕ ಒತ್ತಡ ಪ್ರದೇಶಗಳಿವೆ. **ಅ) ಉತ್ತರ ಉಪ-ಉಷ್ಣವಲಯದ ಅಧಿಕ ಒತ್ತಡ ಪ್ರದೇಶ:** ಈ ಪಟ್ಟಿಗಳು $30^0$ ಉ. ದಿಂದ $35^0$ ಉ. ಅಕ್ಷಾಂಶಗಳವರೆಗೆ ಕಂಡುಬರುತ್ತವೆ. ಈ ವಲಯವನ್ನು ಅಶ್ವ ಅಕ್ಷಾಂಶಗಳ ವಲಯ ಎಂತಲೂ ಕರೆಯುವರು. **ಬ) ದಕ್ಷಿಣ ಉಪ-ಉಷ್ಣವಲಯದ ಅಧಿಕ ಒತ್ತಡ ಪ್ರದೇಶ :** ಇದು $30^0$ ದಕ್ಷಿಣ ದಿಂದ ದಕ್ಷಿಣ $35^0$ ಅಕ್ಷಾಂಶಗಳವರೆಗೆ ಕಂಡುಬರುತ್ತವೆ.

**ಉಪ ಧ್ರುವೀಯ ಕಡಿಮೆ ಒತ್ತಡ ಸಂದೇಶಗಳು:** ಇವು $60^0$ ಯಿಂದ $65^0$ ಉತ್ತರ ಮತ್ತು ದಕ್ಷಿಣ ಅಕ್ಷಾಂಶಗಳ ನಡುವೆ ಕಂಡುಬರುತ್ತವೆ. ಭೂ ಗೋಳದ ಮೇಲೆ ಎರಡು ಉಪಧ್ರುವೀಯ ಕಡಿಮೆ ಒತ್ತಡ ಪ್ರದೇಶಗಳಿವೆ. ಅವುಗಳೆಂದರೆ : **ಅ) ಉತ್ತರ ಉಪಧ್ರುವೀಯ ಕಡಿಮೆ ಒತ್ತಡ ಪ್ರದೇಶ** ($60^0$ಉತ್ತರದಿಂದ $65^0$ ಉತ್ತರದವರೆಗೆ), **ಬ) ದಕ್ಷಿಣ ಉಪಧ್ರವೀಯ ಕಡಿಮೆ ಒತ್ತಡ ಪ್ರದೇಶ** ($60^0$ ದಕ್ಷಿಣದಿಂದ $65^0$ ದಕ್ಷಿಣದವರೆಗೆ). ಇಲ್ಲಿ ಚಂಡ ಮಾರುತಗಳು ವಿಶೇಷವಾಗಿ ಚಳಿಗಾಲದಲ್ಲಿ ಕಂಡುಬರುತ್ತವೆ.

© KTBS Not to be republished

**ಧ್ರುವೀಯ ಅಧಿಕ ಒತ್ತಡ ಪ್ರದೇಶಗಳು:** ಈ ವಲಯಗಳು ಎರಡೂ ಗೋಳಾರ್ಧಗಳಲ್ಲಿ $80^0$ ಯಿಂದ $90^0$ ಅಕ್ಷಾಂಶಗಳ ನಡುವೆ ಕಂಡುಬರುವುದು. ಇವು ಅತ್ಯಂತ ಶೀತವಾಗಿದ್ದು ಇದರಿಂದ ವರ್ಷವೆಲ್ಲಾ ಹೆಚ್ಚು ಒತ್ತಡದಿಂದ ಕೂಡಿರುತ್ತವೆ.

**ಸಮಭಾರರೇಖೆಗಳು (Isobars) :** ಇವುಗಳನ್ನು ನಕ್ಷೆಯ ಮೇಲೆ ಒತ್ತಡದ ಸಮತಲ ಹಂಚಿಕೆಯನ್ನು ತೋರಿಸಲು ಬಳಸುವರು. ಒಂದೇ ಪ್ರಮಾಣದ ಒತ್ತಡ ಹೊಂದಿರುವ ಸ್ಥಳಗಳನ್ನು ಸೇರಿಸುವಂತೆ ಎಳೆಯಬಹುದಾದ ರೇಖೆಗಳೇ ಸಮಭಾರರೇಖೆಗಳು.




**ಪ್ರಪಂಚದ ಒತ್ತಡ ಪ್ರದೇಶಗಳು**


## ಮಾರುತಗಳು

ಭೂಮಿಯ ಮೇಲ್ಮೈಗೆ ಸಮಾನಾಂತರವಾಗಿ ಅಧಿಕ ಒತ್ತಡದಿಂದ ಕಡಿಮೆ ಒತ್ತಡದ ಕಡೆಗೆ ಚಲಿಸುವ ವಾಯುವನ್ನು 'ಮಾರುತ'ಗಳೆನ್ನುವರು. ಮಾರುತಗಳು ಭೂಮಿಯ ದೈನಂದಿನ ಚಲನೆ ಮತ್ತು ಒತ್ತಡದ ಹಂಚಿಕೆಯಲ್ಲಿನ ವ್ಯತ್ಯಾಸಗಳಿಂದ ಉಂಟಾಗುತ್ತವೆ.

ಮಾರುತವು ಯಾವ ದಿಕ್ಕಿನಿಂದ ಬೀಸುತ್ತದೆ ಎಂಬುದನ್ನು ತಿಳಿಯಲು 'ಪವನ ದಿಕ್ಸೂಚಿ' ಉಪಕರಣವನ್ನು ಬಳಸುವರು. ಇದೇ ರೀತಿಯಲ್ಲಿ ವಾಯುವಿನ ವೇಗವನ್ನು ಅಳೆಯಲು 'ಪವನ ವೇಗಮಾಪಕ' (Anemometer) ಉಪಕರಣವನ್ನು ಉಪಯೋಗಿಸಲಾಗುತ್ತದೆ.



**ಪವನ ದಿಕ್ಸೂಚಿ**


**ಪವನ ವೇಗಮಾಪಕ**

**ಮಾರುತಗಳ ವಿಧಗಳು:** ಮಾರುತಗಳನ್ನು ನಾಲ್ಕು ಪ್ರಮುಖ ವಿಧಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ನಿರಂತರ ಮಾರುತಗಳು, ನಿಯತಕಾಲಿಕ ಮಾರುತಗಳು, ಸ್ಥಳೀಯ ಮಾರುತಗಳು, ಆವರ್ತ ಮತ್ತು ಪ್ರತ್ಯಾವರ್ತ ಅನಿಶ್ಚಿತ ಮಾರುತಗಳು.


**1. ನಿರಂತರ ಮಾರುತಗಳು (Planetary Winds) :** ಇವುಗಳನ್ನು 'ನಿತ್ಯ ಮಾರುತ' ಅಥವಾ ಭೂಮಂಡಲಿಯ ಮಾರುತಗಳೆಂದೂ ಸಹ ಕರೆಯುವರು. ಇವು ವರ್ಷದ ಎಲ್ಲಾ ಕಾಲದಲ್ಲಿಯೂ ಬಹುತೇಕ ಒಂದೇ ದಿಕ್ಕಿನಿಂದ ಬೀಸುತ್ತವೆ. ಈ ಮಾರುತಗಳು ವಾಯುಗುಣ ಬದಲಾವಣೆ, ಮರು ಭೂಮಿಗಳ ನಿರ್ಮಾಣ,

©KTBS Not to be republished

ನೌಕಾಯಾನದ ಮಾರ್ಗ ಮೊದಲಾದವುಗಳ ಮೇಲೆ ಹೆಚ್ಚು ಪ್ರಭಾವವನ್ನು ಬೀರುತ್ತವೆ. ನಿತ್ಯಮಾರುತಗಳಲ್ಲಿ ಮೂರು ವಿಧಗಳಿವೆ. ಅವುಗಳೆಂದರೆ : ವಾಣಿಜ್ಯ ಮಾರುತಗಳು, ಪ್ರತಿ ವಾಣಿಜ್ಯ ಮಾರುತಗಳು ಹಾಗೂ ಧ್ರುವೀಯ ಮಾರುತಗಳು.

• **ವಾಣಿಜ್ಯ ಮಾರುತಗಳು (Trade Winds) :** ಇವುಗಳು ಉಪ ಉಷ್ಣವಲಯದ ಅಧಿಕ ಒತ್ತಡ ಪ್ರದೇಶದಿಂದ ಸಮಭಾಜಕ ವೃತ್ತದ ಕಡಿಮೆ ಒತ್ತಡ ಪ್ರದೇಶದ ಕಡೆಗೆ ಬೀಸುತ್ತವೆ. ಉತ್ತರಗೋಳಾರ್ಧದಲ್ಲಿ ಇವು ಈಶಾನ್ಯದಿಂದ ನೈರುತ್ಯ ದಿಕ್ಕಿನ ಕಡೆಗೆ ಹಾಗೂ ದಕ್ಷಿಣಗೋಳಾರ್ಧದಲ್ಲಿ ಆಗ್ನೇಯದಿಂದ ವಾಯವ್ಯ ದಿಕ್ಕಿನ ಕಡೆಗೆ ಬೀಸುತ್ತವೆ. ಇವುಗಳನ್ನು ಕ್ರಮವಾಗಿ ಈಶಾನ್ಯ ವಾಣಿಜ್ಯ ಮಾರುತಗಳು ಹಾಗೂ ಆಗ್ನೇಯ ವಾಣಿಜ್ಯ ಮಾರುತಗಳೆಂದು ಕರೆಯುವರು.

• **ಪ್ರತಿ ವಾಣಿಜ್ಯ ಮಾರುತಗಳು (Antitrade Winds):** ಇವುಗಳನ್ನು ಪಶ್ಚಿಮದ ಮಾರುತಗಳೆಂತಲೂ ಕರೆಯುವರು. ಇವು ಉಪ ಉಷ್ಣವಲಯದ ಅಧಿಕ ಒತ್ತಡ ಪ್ರದೇಶದಿಂದ ಉಪಧ್ರುವೀಯ ಕಡಿಮೆ ಒತ್ತಡ ಪ್ರದೇಶದ ಕಡೆಗೆ ಬೀಸುತ್ತವೆ. ಇವುಗಳ ದಿಕ್ಕು ಉತ್ತರಗೋಳಾರ್ಧದಲ್ಲಿ ನೈರುತ್ಯದಿಂದ ಈಶಾನ್ಯದ ಕಡೆಗಿದ್ದು, ದಕ್ಷಿಣಗೋಳಾರ್ಧದಲ್ಲಿ ವಾಯವ್ಯದಿಂದ ಆಗ್ನೇಯದ ಕಡೆಗಿರುವುದು. ಈ ಮಾರುತಗಳು ದಕ್ಷಿಣಗೋಳಾರ್ಧ ಸಾಗರಗಳ ಮೇಲೆ ಅತ್ಯಂತ ಪ್ರಬಲವಾಗಿ ಬೀಸುತ್ತವೆ. ಅವುಗಳನ್ನು $40^0$ ದಕ್ಷಿಣ ಅಕ್ಷಾಂಶಗಳಲ್ಲಿ **'ನಲ್ವತ್ತರ ಅಬ್ಬರಗಾಳಿ',** $50^0$ ದಕ್ಷಿಣ ಅಕ್ಷಾಂಶಗಳಲ್ಲಿ **'ಐವತ್ತರ ಉಗ್ರಗಾಳಿ'** ಹಾಗೂ $60^0$ ದಕ್ಷಿಣ ಅಕ್ಷಾಂಶಗಳಲ್ಲಿ **'ಅರವತ್ತರ ಅರಚುವ ಗಾಳಿ'**ಗಳೆಂದು ಕರೆಯುವರು.



ನಿರಂತರ ಮಾರುತಗಳು

• **ಧ್ರುವೀಯ ಮಾರುತಗಳು (Polar Winds) :** ಇವುಗಳನ್ನು ಪೂರ್ವದ ಮಾರುತಗಳು ಎಂದು ಕರೆಯುವರು. ಈ ಮಾರುತಗಳು ಧ್ರುವೀಯ ಅಧಿಕ ಒತ್ತಡ ವಲಯದಿಂದ ಉಪಧ್ರುವೀಯ ಕಡಿಮೆ ಒತ್ತಡ ವಲಯದ ಕಡೆಗೆ ಬೀಸುತ್ತವೆ. ಇವುಗಳು ಉತ್ತರಗೋಳಾರ್ಧದಲ್ಲಿ ಈಶಾನ್ಯದಿಂದ ನೈರುತ್ಯದ ಕಡೆಗೆ ಹಾಗೂ ದಕ್ಷಿಣಗೋಳಾರ್ಧದಲ್ಲಿ ಆಗ್ನೇಯದಿಂದ ವಾಯವ್ಯದ ಕಡೆಗೆ ಬೀಸುವುವು. ಇವುಗಳು ಶೀತವಾದ ಶುಷ್ಕ ಮಾರುತಗಳಾಗಿದ್ದು, ಧ್ರುವೀಯ ವಲಯದ ಹಿಮಾಚ್ಛಾದಿತ ಭಾಗಗಳಿಂದ ಬೀಸುತ್ತವೆ.

**2. ನಿಯತಕಾಲಿಕ ಮಾರುತಗಳು (Seasonal Winds) :** ಇವುಗಳನ್ನು ಋತು ಮಾರುತಗಳು, ಕ್ಲುಪ್ತ ಮಾರುತಗಳು ಎಂದೂ ಕರೆಯುವರು. ಇವುಗಳು ವರ್ಷದ ಬೇರೆ ಬೇರೆ ಋತುಗಳಲ್ಲಿ ತದ್ವಿರುದ್ಧ ದಿಕ್ಕಿನಿಂದ ಬೀಸುತ್ತವೆ. ಭಾರತದಲ್ಲಿ ಬೀಸುವ ಮಾನ್ಸೂನ್ ಮಾರುತಗಳು ನಿಯತಕಾಲಿಕ ಮಾರುತಗಳಿಗೆ ಉತ್ತಮ ಉದಾಹರಣೆಯಾಗಿವೆ. ಭಾರತದಲ್ಲಿ ಬೇಸಿಗೆಯಲ್ಲಿ ನೈರುತ್ಯ ಮಾನ್ಸೂನ್ ಮಾರುತಗಳು ನೈರುತ್ಯ ದಿಕ್ಕಿನಿಂದ ಈಶಾನ್ಯದ ಕಡೆಗೆ ಬೀಸುತ್ತವೆ. ಇವುಗಳು ಜೂನ್ ತಿಂಗಳಿನಿಂದ ಸೆಪ್ಟೆಂಬರ್‌ವರೆಗೆ ಬೀಸುತ್ತವೆ. ಅನಂತರ ಈಶಾನ್ಯದ ಮಾನ್ಸೂನ್ ಮಾರುತಗಳು ಸೆಪ್ಟಂಬರ್ ಅಂತ್ಯದಿಂದ ಡಿಸೆಂಬರ್ ಮಧ್ಯದವರೆಗೆ ಈಶಾನ್ಯದಿಂದ ನೈರುತ್ಯದ ಕಡೆಗೆ ಬೀಸುವುವು.

**3. ಸ್ಥಳೀಯ ಮಾರುತಗಳು (Local Winds) :** ನಿರಂತರ ಮತ್ತು ನಿಯತಕಾಲಿಕ ಮಾರುತಗಳು ಸ್ಥಳೀಯ ಉಷ್ಣಾಂಶ ಮತ್ತು ಒತ್ತಡ, ತೇವಾಂಶಗಳ ವ್ಯತ್ಯಾಸದ ಪರಿಣಾಮವಾಗಿ ಸ್ಥಳೀಯ ಮಾರುತಗಳುಂಟಾಗುತ್ತವೆ. ಇವುಗಳು ಪರ್ವತಶ್ರೇಣಿಗಳು, ಕಣಿವೆಗಳು ಮತ್ತು ಇತರೆ ಎತ್ತರದ ಸ್ಥಳಗಳನ್ನು ಹಾದುಹೋಗುವುದರಿಂದ

© KTBS Not to be republished

ಬದಲಾವಣೆಗೊಂಡು ವಾಯುಪ್ರವಾಹಗಳುಂಟಾಗುತ್ತವೆ. ಪ್ರಮುಖ ಸ್ಥಳೀಯ ಮಾರುತಗಳಾವುವೆಂದರೆ, ಭೂಗಾಳಿ, ಸಮುದ್ರಗಾಳಿ, ಪರ್ವತಗಾಳಿ, ಕಣಿವೆಗಾಳಿ ಮತ್ತು ಇತರೆ ಕೆಲವು ಮಾರುತಗಳನ್ನು ಭಾರತದಲ್ಲಿ 'ಲೂ' ಎಂದು, ಯು.ಎಸ್.ಎ.ಯಲ್ಲಿ 'ಚಿನೂಕ್' ಅಥವಾ 'ಹಿಮಭಕ್ಷಕ' ಎಂದು, ಆಲ್ಪ್ಸ್‌ಪರ್ವತಗಳಲ್ಲಿ 'ಫೋಹ್ನ್' ಎಂದು, ಫ್ರಾನ್ಸ್‌ನಲ್ಲಿ 'ಮಿಸ್ಟ್ರಲ್' ಎಂದು, ಸಹರಾ ಮರುಭೂಮಿಯಲ್ಲಿ ಸಿರಾಕ್ಕೊ ಎಂದು, ಆಸ್ಟ್ರೇಲಿಯದಲ್ಲಿ ಬ್ರಿಕ್ ಫೀಲ್ಡರ್ ಎಂದೂ ಹಾಗೂ ಅಂಟಾರ್ಕ್ಟಿಕಾದಲ್ಲಿ ಬ್ಲಿಜರ್ಡ್ ಎಂದೂ ಕರೆಯುತ್ತಾರೆ.


**4. ಆವರ್ತ ಮತ್ತು ಪ್ರತ್ಯಾವರ್ತ ಮಾರುತಗಳು (Cyclones and Anti Cyclones):** ಇವುಗಳು ಅನಿಶ್ಚಿತವಾಗಿ ಬೀಸುತ್ತವೆ. ಸಾಮಾನ್ಯವಾಗಿ ಒತ್ತಡದ ಹಂಚಿಕೆಯಲ್ಲಿನ ಅತಿಹೆಚ್ಚು ವ್ಯತ್ಯಾಸದ ಕಾರಣದಿಂದ ಇವು ಬೀಸಲಾರಂಭಿಸುತ್ತವೆ. ಇವುಗಳು ಬೀಸುವ ಅವಧಿ ಅಲ್ಪಕಾಲಿಕವಾದರೂ ಕೆಲವೊಮ್ಮೆ ಇವು ಅತ್ಯಂತ ಅಪಾಯಕಾರಿ ಮತ್ತು ವಿನಾಶಕಾರಿಯಾದವು.

**ಎ) ಆವರ್ತ ಮಾರುತಗಳು :** ಕೆಲವು ಸನ್ನಿವೇಶಗಳಲ್ಲಿ ಅತ್ಯಂತ ಕಡಿಮೆ ಒತ್ತಡ ಕೇಂದ್ರದ ಸುತ್ತಲೂ ಹೆಚ್ಚು ಒತ್ತಡ ಪರಿಸ್ಥಿತಿಯಿರುವುದು. ಇದರಿಂದ ಮಾರುತಗಳು ಸುತ್ತಲಿನ ಹೆಚ್ಚು ಒತ್ತಡ ವಲಯದಿಂದ ಕಡಿಮೆ ಒತ್ತಡ ಕೇಂದ್ರದ ಕಡೆಗೆ ವೃತ್ತಾಕಾರವಾಗಿ ಬೀಸುತ್ತವೆ. ಇವುಗಳೇ ಆವರ್ತ ಮಾರುತಗಳು. ಉತ್ತರಗೋಳಾರ್ಧದಲ್ಲಿ ಆವರ್ತಮಾರುತಗಳು ಕಡಿಮೆ ಒತ್ತಡ ಕೇಂದ್ರದ ಸುತ್ತಲೂ ಗಡಿಯಾರದ ಮುಳ್ಳಿನ ಚಲನೆಯ ದಿಕ್ಕಿಗೆ ವಿರುದ್ಧವಾಗಿ ಅಂದರೆ ಅಪ್ರದಕ್ಷಿಣೆ ದಿಕ್ಕಿಗೆ ಬೀಸುತ್ತವೆ. ಇದಕ್ಕೆ ತದ್ವಿರುದ್ಧವಾಗಿ ದಕ್ಷಿಣಗೋಳಾರ್ಧದಲ್ಲಿ ಇವು ಗಡಿಯಾರದ ಮುಳ್ಳಿನ ಚಲನೆಗೆ ಅನುಗುಣವಾಗಿ ಅಂದರೆ ಪ್ರದಕ್ಷಿಣೆ ದಿಕ್ಕಿಗೆ ಬೀಸುತ್ತವೆ. ಆವರ್ತ ಮಾರುತಗಳಲ್ಲಿ ಎರಡು ವಿಧಗಳಿವೆ. ಅವುಗಳೆಂದರೆ:

- **ಉಷ್ಣವಲಯದ ಆವರ್ತ ಮಾರುತಗಳು:** ಇವುಗಳು ಉಷ್ಣವಲಯದಲ್ಲಿ ಮಾತ್ರ ಕಂಡುಬರುತ್ತವೆ. ಇವುಗಳು ಅತ್ಯಂತ ಪ್ರಬಲವಾಗಿದ್ದು ವಿಧ್ವಂಸಕಾರಿಯಾದವು.

- **ಸಮಶೀತೋಷ್ಣವಲಯದ ಆವರ್ತ ಮಾರುತಗಳು:** ಇವುಗಳು ಸಮಶೀತೋಷ್ಣವಲಯದಲ್ಲಿ ಕಂಡುಬರುತ್ತವೆ. ಉಷ್ಣವಲಯದ ಆವರ್ತ ಮಾರುತಗಳಿಗೆ ಹೋಲಿಸಿದರೆ ಇವುಗಳು ಹೆಚ್ಚು ಪ್ರಬಲವಾದವುಗಳಲ್ಲ. ಇವುಗಳಿಂದಾಗುವ ಹಾನಿಯೂ ಸಹ ಕಡಿಮೆ.

*ಆವರ್ತ ಮಾರುತಗಳನ್ನು ವಿವಿಧ ಪ್ರದೇಶಗಳಲ್ಲಿ ವಿವಿಧ ಹೆಸರುಗಳಿಂದ ಕರೆಯುವರು. ಉದಾ: ಚೀನಾ ಮತ್ತು ಜಪಾನಿನಲ್ಲಿ– ಟೈಫೂನ್, ಅಮೆರಿಕ ಮತ್ತು ಮೆಕ್ಸಿಕೊ –ಹರಿಕೇನ್, ಆಸ್ಟ್ರೇಲಿಯಾ–ವಿಲ್ಲಿ ವಿಲ್ಲೀಸ್, ಭಾರತ–ಸೈಕ್ಲೋನ್, ರಷ್ಯಾ –ವಿರ್ಲ್‌ಪೂಲ್. ಇತ್ತೀಚಿನ ಕೆಲವು ವರ್ಷಗಳಲ್ಲಿ ಭಾರತವು ಕೆಲವು ಪ್ರಬಲವಾದ ಆವರ್ತ ಮಾರುತಗಳನ್ನು ದಾಖಲಿಸಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಬೋಲಾ, ನರ್ಗೀಸ್, ನಿಶಾ, ಐಲಾ, ಲೈಲಾ, ಬಿಜಿಲಿ, ಜಲ್ ಥೇಸ್ ಇತ್ಯಾದಿ.*




ಆವರ್ತ ಮಾರುತಗಳು                ಪ್ರತ್ಯಾವರ್ತ ಮಾರುತಗಳು

©KTBS Not to be republished

**ಬಿ) ಪ್ರತ್ಯಾವರ್ತ ಮಾರುತಗಳು:** ಇವುಗಳ ಪರಿಸ್ಥಿತಿ ಆವರ್ತ ಮಾರುತಗಳಿಗೆ ತದ್ವಿರುದ್ಧ. ಪ್ರತ್ಯಾವರ್ತ ಮಾರುತಗಳು ಅಧಿಕ ಒತ್ತಡ ಕೇಂದ್ರದಿಂದ ಕಡಿಮೆ ಒತ್ತಡದ ಸುತ್ತಲಿನ ಪ್ರದೇಶದ ಕಡೆಗೆ ವೃತ್ತಾಕಾರವಾಗಿ ಬೀಸುತ್ತವೆ. ಇದರಿಂದ ಸುತ್ತಮುತ್ತಲಿನ ಕಡೆಗೆ ಮಾರುತಗಳು ನಿಧಾನವಾಗಿ ಬೀಸುತ್ತವೆ. ಉತ್ತರಗೋಳಾರ್ಧದಲ್ಲಿ ಪ್ರತ್ಯಾವರ್ತ ಮಾರುತಗಳ ದಿಕ್ಕು ಗಡಿಯಾರದ ಮುಳ್ಳಿನ ದಿಕ್ಕಿಗೆ ಅನುಗುಣವಾಗಿರುವುದು. ಇದಕ್ಕೆ ಪ್ರತಿಯಾಗಿ ದಕ್ಷಿಣಗೋಳಾರ್ಧದಲ್ಲಿ ಇವುಗಳು ಗಡಿಯಾರದ ಮುಳ್ಳಿನ ದಿಕ್ಕಿಗೆ ವಿರುದ್ಧವಾಗಿ ಅಪ್ರದಕ್ಷಿಣೆ ದಿಕ್ಕಿಗೆ ಬೀಸುತ್ತವೆ.

### ವಾಯುಗೋಳದ ಆರ್ದ್ರತೆ

ವಾಯುವಿನಲ್ಲಿರುವ 'ನೀರಾವಿ' ಅಥವಾ ತೇವಾಂಶದ ಪ್ರಮಾಣವನ್ನು 'ಆರ್ದ್ರತೆ' ಎನ್ನುವರು. ಆರ್ದ್ರತೆಯನ್ನು ಅಳೆಯಲು ಆರ್ದ್ರತಾಮಾಪಕವನ್ನು ಉಪಯೋಗಿಸುವರು. (Hygrometer or Psychrometer)

**ವಿಧಗಳು :** ವಾಯುಮಂಡಲದಲ್ಲಿರುವ ಆರ್ದ್ರತೆಯ ಪ್ರಮಾಣವನ್ನು ವಿವಿಧ ರೀತಿಯಲ್ಲಿ ತಿಳಿಸಲಾಗುವುದು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಸಮಗ್ರ ಆರ್ದ್ರತೆ, ಸಾಪೇಕ್ಷ ಆರ್ದ್ರತೆ ಮತ್ತು ನಿರ್ದಿಷ್ಟ ಆರ್ದ್ರತೆ.

- **ಸಮಗ್ರ ಆರ್ದ್ರತೆ (Absolute humidity):** ಒಂದು ನಿರ್ದಿಷ್ಟ ಪ್ರಮಾಣದ ವಾಯುವಿನಲ್ಲಿರುವ ಒಟ್ಟು ತೇವಾಂಶವನ್ನು ಸಮಗ್ರ ಆರ್ದ್ರತೆಯೆಂದು ಕರೆಯುವರು. ಈ ರೀತಿಯ ತೇವಾಂಶದ ಅಳತೆ ಹೆಚ್ಚು ಉಪಯುಕ್ತವಲ್ಲ. ಏಕೆಂದರೆ ಇದರಲ್ಲಿ ಉಷ್ಣಾಂಶವನ್ನು ಪರಿಗಣಿಸುವುದಿಲ್ಲ.

- **ಸಾಪೇಕ್ಷ ಆರ್ದ್ರತೆ (Relative Humidity):** ಇದು ವಾಯು ಹೊಂದಿರುವ ತೇವಾಂಶ ಮತ್ತು ಆ ನಿರ್ದಿಷ್ಟ ಉಷ್ಣಾಂಶದ ಮಟ್ಟದಲ್ಲಿ ವಾಯುವು ಹಿಡಿದಿರಿಸಿಕೊಳ್ಳಬಹುದಾದ ಗರಿಷ್ಠ ಪ್ರಮಾಣದ ತೇವಾಂಶಗಳ ಅನುಪಾತವೇ ಸಾಪೇಕ್ಷ ಆರ್ದ್ರತೆಯಾಗಿದೆ. ಇದನ್ನು ಶೇಕಡವಾರು ಪ್ರಮಾಣದಲ್ಲಿ ತಿಳಿಸಲಾಗುವುದು.

ವಾಯುವಿನಲ್ಲಿರುವ ವಾಸ್ತವ ತೇವಾಂಶ

ಸಾಪೇಕ್ಷ ಆರ್ದ್ರತೆ=<u>ವಾಯುವಿನಲ್ಲಿರುವ ವಾಸ್ತವ ತೇವಾಂಶ</u> × 100

ನಿರ್ದಿಷ್ಟ ಉಷ್ಣಾಂಶದಲ್ಲಿ ವಾಯು ಹೊಂದಬಹುದಾದ ಗರಿಷ್ಠ ತೇವಾಂಶ

- **ನಿರ್ದಿಷ್ಟ ಆರ್ದ್ರತೆ (Specific Humidity):** ನಿರ್ದಿಷ್ಟ ಪ್ರಮಾಣದ ವಾಯುವಿನಲ್ಲಿ ಕಂಡುಬರುವ ವಾಸ್ತವವಾದ ನೀರಾವಿಯ ಮೊತ್ತವಾಗಿದೆ.

## ಮೋಡಗಳು (Clouds)


ವಾಯುಗೋಳದಲ್ಲಿ ಉಷ್ಣಾಂಶವು ಕಡಿಮೆಯಾದಾಗ, ಅದರಲ್ಲಿನ ಜಲಾಂಶವು ಘನೀಕರಣಗೊಂಡು ನಿರ್ಮಾಣವಾಗುವ ಸಣ್ಣ ಸಣ್ಣ ನೀರಿನಹನಿಗಳು ಅಥವಾ ಹಿಮಕಣಗಳ ರಾಶಿಯನ್ನು 'ಮೋಡ' ಗಳೆನ್ನುವರು. ಇವು ಭೂಮಿಯ ಮೇಲ್ಮೈನಿಂದ ಎತ್ತರದಲ್ಲಿರುತ್ತವೆ.

**ಮೋಡಗಳ ವಿಧಗಳು :** ಮೋಡಗಳನ್ನು ಅವುಗಳ ಆಕಾರ, ಎತ್ತರ ಮತ್ತು ಇತರ ಲಕ್ಷಣಗಳನ್ನಾಧರಿಸಿ ನಾಲ್ಕು ಮುಖ್ಯ ವಿಧಗಳಾಗಿ ವಿಂಗಡಿಸಬಹುದು. ಇವುಗಳೆಂದರೆ :

- **ಪದರು ಮೋಡಗಳು (Stratus Clouds) :** ಇವುಗಳು ವಾಯುಗೋಳದ ಅತ್ಯಂತ ಕೆಳಮಟ್ಟದಲ್ಲಿರುತ್ತವೆ. ಭೂಮಿಯ ಮೇಲ್ಮೈನಿಂದ 2.ಕಿ.ಮೀ.ಗಳಷ್ಟು ಎತ್ತರದವರೆಗೆ ಇವುಗಳು ಕಂಡುಬರುತ್ತವೆ. ಇವು ತೆಳುವಾದ ಬೂದುಹಾಳೆ ಅಥವಾ ವಿಸ್ತಾರವಾದ ಪದರುಗಳಂತೆ ಕಾಣುತ್ತವೆ. ಪದರು ಮೋಡಗಳು ಉತ್ತಮ ಹವಾಮಾನಕ್ಕೆ ಸಹಕಾರಿಯಾಗಿದ್ದು ತುಂತುರು ಮಳೆಯನ್ನು ಸುರಿಸುತ್ತವೆ.

©KTBS
Not to be re published

• **ರಾಶಿ ಮೋಡಗಳು (Cumulus Clouds):** ಇವು ಊರ್ಧ್ವಮುಖವಾಗಿ ಬೆಳೆದಿದ್ದು ಅವುಗಳ ಮೇಲ್ಭಾಗ ಗೋಪುರಾಕೃತಿಯಲ್ಲಿದ್ದು ಬಾಗಿರುವುದರಿಂದ ಹೂಕೋಸಿನ ರಚನೆಯನ್ನು ಹೋಲುತ್ತದೆ. ಇವುಗಳು ಮಳೆತರುವ ಮೋಡಗಳಾಗಿವೆ. ಈ ಮೋಡಗಳು ಉಣ್ಣೆಯ ಗುಡ್ಡೆಯಂತೆ ಕಂಡು ಬರುವುದರಿಂದ ಇವುಗಳನ್ನು 'ಉಣ್ಣೆಯ ಗುಡ್ಡೆಮೋಡ' ಎಂತಲೂ ಕರೆಯುವರು. ಇವು ಮಳೆಯನ್ನು ಸುರಿಸುವ ಮೋಡಗಳು.



ಮೋಡಗಳ ವಿಧಗಳು

• **ಹಿಮಕಣ ಮೋಡಗಳು (Cirrus Clouds):** ಇವುಗಳು ವಾಯುಮಂಡಲದಲ್ಲಿ ಅತಿ ಹೆಚ್ಚು ಎತ್ತರದಲ್ಲಿ ಅಂದರೆ 6 ಕಿ.ಮೀ.ಗಳಿಗಿಂತಲೂ ಎತ್ತರದಲ್ಲಿರುತ್ತವೆ. ಈ ಮೋಡಗಳು 'ಗುಂಗುರುಕೂದಲ'ನ್ನು ಹೋಲುತ್ತಿದ್ದು ಗರಿಗಳ ಅಥವಾ ನಾರಿನಾಕಾರ ಹೊಂದಿರುವಂತೆ ಕಾಣುತ್ತವೆ. ಇದು ಹಿತಕರವಾದ ಹವಾಮಾನ ಸ್ಥಿತಿಯನ್ನು ಸೂಚಿಸುತ್ತದೆ ಹಾಗೂ ಈ ಮೋಡಗಳಲ್ಲಿ ಪ್ರಕಾಶಮಾನವಾಗಿ ಸೂರ್ಯ ಬೆಳಗುತ್ತಾನೆ. ವಾಯುವಿನಲ್ಲಿ ಈ ಮೋಡಗಳು ಹಿಂಜಿದ ಅರಳೆಯಂತೆ ತೇಲುತ್ತವೆ. ಇವುಗಳ ಜನಪ್ರಿಯ ಹೆಸರು 'ಕುದುರೆಬಾಲ'ದ ಮೋಡಗಳು.

• **ರಾಶಿವೃಷ್ಟಿ ಮೋಡಗಳು (Nimbus Clouds):** ಈ ಮೋಡಗಳು ನಿರಂತರ ಮಳೆತರುವ ಮೋಡಗಳಾಗಿದ್ದು ಕೆಳಮಟ್ಟ ದಲ್ಲಿರುತ್ತವೆ. ಈ ಮೋಡಗಳು ಪದರು ಅಥವಾ ರಾಶಿಮೋಡಗಳ ಆಕಾರದಲ್ಲಿರುತ್ತವೆ. ಇವು ಹೆಚ್ಚು ಮಳೆ ಮತ್ತು ಹಿಮಮಳೆಯನ್ನು ಸುರಿಸುತ್ತವೆ. ವೃಷ್ಟಿಪದರು ಮೋಡಗಳು ದಪ್ಪವಾಗಿದ್ದು ಅಧಿಕ ಮಳೆತರುವ ಮೋಡಗಳಾಗಿವೆ.


## ಮಳೆ (Rain)

ವಾಯುಗೋಳದಲ್ಲಿ ಜಲಾಂಶವು ಘನೀಕರಣ ಹೊಂದಿ ಭೂಮಿಯ ಮೇಲೆ ಬೀಳುವ ನೀರಿನ ಹನಿಗಳನ್ನು 'ಮಳೆ' ಎಂದು ಕರೆಯುವರು. ಮಳೆಯ ಪ್ರಮಾಣವನ್ನು ಮಳೆಯ ಮಾಪಕದಿಂದ (Rainguage) ಅಳೆಯುವರು. ಮಳೆಯ ಪ್ರಮಾಣವನ್ನು ಮೀ.ಮೀ. ಅಥವಾ ಅಂಗುಲಗಳಲ್ಲಿ ತಿಳಿಸುವರು.

**ಮಳೆಯ ವಿಧಗಳು:** ಮಳೆಯು ಮೂರು ರೀತಿಯಲ್ಲಿ ಉಂಟಾಗುವುದು. ಅವುಗಳೆಂದರೆ : ಪರಿಸರಣ ಮಳೆ, ಪರ್ವತ ಮಳೆ ಮತ್ತು ಆವರ್ತ ಮಳೆ.

©KTBS Not to be republished


**ಪರಿಸರಣ ಮಳೆ: (Con Vectional Rainfall)** ವಾಯು ಮೇಲ್ಮುಖವಾಗಿ ಪ್ರಚಲನ ಪ್ರವಾಹಗಳ ರೂಪದಲ್ಲಿ ಮೇಲೇರುವುದರಿಂದ ಉಂಟಾಗುವ ಮಳೆಯನ್ನು 'ಪರಿಸರಣಮಳೆ' ಎಂದು ಕರೆಯುವರು. ಉಷ್ಣಾಂಶವು ಹೆಚ್ಚಾಗಿರುವ ಸನ್ನೀವೇಶಗಳಲ್ಲಿ ವಾಯು ಬಿಸಿಯಾಗಿ ಮೇಲ್ಮುಖವಾಗಿ ಚಲಿಸುತ್ತಾ ವಿಕಾಸ ಹೊಂದುವುದು. ಅನಂತರ ಸಾಕಷ್ಟು ಎತ್ತರವನ್ನು ತಲುಪಿ ತಂಪಾಗಿ ಅದರಲ್ಲಿರುವ ಜಲಾಂಶವು ಹನಿಗಳಾಗಿ ವಿಸರ್ಜನೆಗೊಳ್ಳುವ ಮೂಲಕ ಮಳೆ ಬೀಳುವುದು. ಇದೇ ಪರಿಸರಣ ಮಳೆ. ಈ ರೀತಿ ಮಳೆಯು ಸಮಭಾಜಕ ವೃತ್ತ ವಲಯದಲ್ಲಿ ಹಾಗೂ ಉಷ್ಣ ವಲಯದ ಭೂ ಭಾಗಗಳಲ್ಲಿ ಬೇಸಿಗೆ ಯಲ್ಲಿ ಸಾಮಾನ್ಯ. ಸಮಭಾಜಕ ವೃತ್ತ ಪ್ರದೇಶಗಳಲ್ಲಿ ಬೀಳುವುದು




ಪರಿಸರಣ ಮಳೆ

ಇದನ್ನು 'ಅಪರಾಹ್ನ ಮಳೆ', ಎನ್ನುವರು. ಇದು ಹೆಚ್ಚಾಗಿ ಗುಡುಗು ಮಿಂಚುಗಳಿಂದ ಕೂಡಿದ್ದು ಮಧ್ಯಾಹ್ನದ ನಂತರ ಉಂಟಾಗುತ್ತದೆ. ಇದರೊಂದಿಗೆ ಕೆಲವೊಮ್ಮೆ ಆಲಿಕಲ್ಲುಗಳು ಬೀಳುತ್ತವೆ.

**ಪರ್ವತ ಮಳೆ (Orographic Rainfall) :** ಇದನ್ನು ಆರೋಹ ಮಳೆ ಹಾಗೂ ಭೂಸ್ವರೂಪ ಮಳೆಯೆಂದೂ ಸಹ ಕರೆಯುವರು. ತೇವಾಂಶವನ್ನು ಹೊಂದಿರುವ ವಾಯುವು ಚಲನ ದಿಕ್ಕಿಗೆ ಅಡ್ಡಲಾಗಿರುವ ಪರ್ವತಗಳ ಅಡಚಣೆಯಿಂದ ತಡೆಯಲ್ಪಟ್ಟಾಗ ಅದು ಮೇಲೆರುವುದು. ಎತ್ತರಕ್ಕೆ ಏರಿದಂತೆ ವಾಯು ತಂಪಾಗಿ ಅದರಲ್ಲಿರುವ ಜಲಾಂಶವು ಘನಿಕರೀಸಿ ಮಳೆ ಬೀಳುವುದು. ಹೀಗೆ ಪರ್ವತಗಳಿಂದ ಉಂಟಾಗುವ ಮಳೆಯೇ ಪರ್ವತ ಮಳೆ ಅಥವಾ ಆರೋಹ ಮಳೆ. ಮಳೆ ಮಾರುತಗಳಿಗೆ ಎದುರಾಗಿರುವ ಪರ್ವತ ಭಾಗವು ಹೆಚ್ಚು ಮಳೆಪಡೆಯುವುದು, ಅನಂತರ ಮಾರುತಗಳಿಗೆ ಮರೆಯಾಗಿರುವ ಪರ್ವತದ ಮತ್ತೊಂದು ಭಾಗದಲ್ಲಿ ವಾಯು ಕೆಳಗಿಳಿಯುವುದು. ಇದರಿಂದ ಪರ್ವತದ ವಿರುದ್ಧ ಭಾಗದಲ್ಲಿ ಮಳೆ ಕಡಿಮೆ. ಇದನ್ನೇ 'ಮಳೆ ನೆರಳಿನ ಪ್ರದೇಶ' (Rainshadow Region) ಎಂದು ಕರೆಯುವರು. ಉದಾ: ಮಂಗಳೂರು– ಮಾರುತಗಳಿಗೆ ಎದುರಾಗಿರುವ ಭಾಗ, ಹಾಸನ–ಮಾರುತಗಳಿಗೆ ಮರೆಯಾಗಿರುವ ಮಳೆನೆರಳಿನ ಪ್ರದೇಶ.




ಪರ್ವತ ಮಳೆ

**ಆವರ್ತಮಳೆ (Cyclonic Rainfall) :** ಉಷ್ಣವಲಯದ ಆವರ್ತ ಮಾರುತಗಳಲ್ಲಿ ಗಾಳಿಯು ವೃತ್ತಕಾರವಾಗಿ ಮೇಲೇರುವುದು. ಇದರಿಂದ ಗಾಳಿಯಲ್ಲಿರುವ ತೇವಾಂಶವು ಘನೀಭವಿಸಿ ಧಾರಾಕಾರವಾಗಿ ಮಳೆ ಸುರಿಯುವುದು. ಇದಕ್ಕೆ ಬದಲಾಗಿ ಸಮಶೀತೋಷ್ಣ ವಲಯದ ಆವರ್ತ ಮಾರುತಗಳಲ್ಲಿ ಹಗುರವಾದ ಉಷ್ಣ ವಾಯುರಾಶಿಯು ಭಾರವಾದ ಶೀತವಾಯು ರಾಶಿಯ ಮೇಲೇರುವುದು. ಉಷ್ಣವಾಯುರಾಶಿ ಸಾಕಷ್ಟು ಮೇಲೇರಿ ಜಲಾಂಶವು ಘನೀಭವಿಸಿ ಮಳೆ ಸುರಿಯುವುದು. ಉಷ್ಣ ಮತ್ತು ಶೀತವಾಯು ರಾಶಿಗಳ ನಡುವಿನ ವಲಯವನ್ನು 'ವಾಯುಮುಖ' (Front) ಎನ್ನುವರು. ಇದರಿಂದ ಸಮಶೀತೋಷ್ಣ ವಲಯದ ಆವರ್ತ ಮಾರುತಗಳ ಮಳೆಯನ್ನು 'ವಾಯುಮುಖ ಮಳೆ'ಯೆಂದು ಸಹ ಕರೆಯುವರು.

©KTBS Not to be re published

**ಮಳೆಯ ಹಂಚಿಕೆ :** ಭೂಮಿಯ ಮೇಲಿನ ಮಳೆಯ ಹಂಚಿಕೆಯು ಒಂದು ಪ್ರದೇಶದ ಸ್ಥಾನ ಮತ್ತು ವಾಯುಗುಣ ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ. ಪ್ರಪಂಚದಲ್ಲಿ ಅಧಿಕಮಳೆ ಪಡೆಯುವ ಬಹುಮುಖ್ಯವಾದ ಪ್ರದೇಶಗಳೆಂದರೆ ಸಮಭಾಜಕವೃತ್ತ ಪ್ರದೇಶ, ಉಪ ಉಷ್ಣವಲಯದ ಪೂರ್ವದ ಅಂಚಿನಭಾಗ, ಪಶ್ಚಿಮದ ಅಂಚಿನ $40^0$ ಮತ್ತು $60^0$ ಉತ್ತರ ಮತ್ತು ದಕ್ಷಿಣ ಅಕ್ಷಾಂಶಗಳ ಮಧ್ಯದ ಪ್ರದೇಶಗಳು ಹಾಗೂ ವಿರಳವಾಗಿ ಮಳೆ ಪಡೆಯುವ ಪ್ರದೇಶಗಳೆಂದರೆ, ಧ್ರುವ ಪ್ರದೇಶಗಳು, ಉಪ ಉಷ್ಣವಲಯದ ಪಶ್ಚಿಮಭಾಗ ಹಾಗೂ ಉಷ್ಣವಲಯ ಮತ್ತು ಸಮಶೀತೋಷ್ಣವಲಯದ ಮರುಭೂಮಿಗಳು.

***ನಿಮಗಿದು ಗೊತ್ತಿದೆಯೇ?***

*1. ಭಾರತದ ಮೇಘಾಲಯ ರಾಜ್ಯದ ಮಾಸಿಮ್ ರಾಂ ಒಂದು ವರ್ಷದಲ್ಲಿ 1140 ಸೆಂ.ಮೀ. ಗಳಷ್ಟು ಮಳೆಯನ್ನು ದಾಖಲಿಸಿದೆ. ಇದು ಪ್ರಪಂಚದ ಅತ್ಯಂತ ತೇವಯುತ ಸ್ಥಳ.*

*2. ಕರ್ನಾಟಕದ ಆಗುಂಬೆಯನ್ನು 'ದಕ್ಷಿಣ ಭಾರತದ ಮಾಸಿನ್‌ರಾಂ' ಎನ್ನುವರು.*

*3. ಭಾರತದ ರಾಜಸ್ತಾನದ 'ರೂಯ್ಲಿ' ಅತಿ ಕಡಿಮೆ ಮಳೆ ಪಡೆಯುವ ಸ್ಥಳ. ಇದು ವರ್ಷದಲ್ಲಿ ಕೇವಲ 8 ಸೆಂ.ಮೀ ಮಾತ್ರ ಮಳೆ ಪಡೆಯುವುದು.*

*4. ಚಿತ್ರದುರ್ಗ ಜಿಲ್ಲೆಯ 'ನಾಯಕನಹಟ್ಟಿ' ಯು ಕರ್ನಾಟಕದ ಅತ್ಯಂತ ಒಣಪ್ರದೇಶವಾಗಿದೆ.*

*5. ಭೂಮಿಯ ಮೇಲೆ ಕಳೆದ 200 ವರ್ಷಗಳಿಂದ ಮಳೆ ಬಾರದಿರುವ ಪ್ರದೇಶವೆಂದರೆ ಚಿಲಿ ದೇಶದ ಅಟಕಾಮ ಮರುಭೂಮಿ.*

## ಹವಾಗುಣ ಮತ್ತು ವಾಯುಗುಣ (Weather and Climate)

ಒಂದು ಸ್ಥಳದ ಅಲ್ಪಾವಧಿಯ ವಾಯುಗೋಳದ ಪರಿಸ್ಥಿತಿಯನ್ನು ಹವಾಗುಣ ಎನ್ನುವರು. ಉದಾ: ಮೋಡಯುಕ್ತ ಪ್ರಖರ ಬಿಸಿಲು, ಹಿತಕರ ಹವಾಗುಣ. ಹವಾಗುಣ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ಮಾಡುವುದಕ್ಕೆ 'ಹವಾಗುಣ ಶಾಸ್ತ್ರ' (**Meteorology**) ಎನ್ನುವರು.

ಒಂದು ಪ್ರದೇಶದ ದೀರ್ಘಾವಧಿಯ ಹವಾಗುಣದ ಸರಾಸರಿಯನ್ನು ವಾಯುಗುಣವೆನ್ನುವರು. ಉದಾ: ಸಮಭಾಜಕ ವೃತ್ತದ ವಾಯುಗುಣ, ತಂಡ್ರಾ ವಾಯುಗುಣ, ಮರುಭೂಮಿ ವಾಯುಗುಣ, ಮೆಡಿಟರೇನಿಯನ್, ಮಾನ್ಸೂನ್ ವಾಯುಗುಣ ಮೊದಲಾದವು. ವಾಯುಗುಣದ ಬಗ್ಗೆ ವೈಜ್ಞಾನಿಕವಾದ ಅಧ್ಯಯನಕ್ಕೆ ಮಾಡುವ ಶಾಸ್ತ್ರವನ್ನು 'ವಾಯುಗುಣಶಾಸ್ತ್ರ' (**Climatology**) ಎನ್ನುವರು.

**ಒಂದು ಪ್ರದೇಶದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳೆಂದರೆ** ಅಕ್ಷಾಂಶ, ಸಮುದ್ರ ಮಟ್ಟದಿಂದ ಇರುವ ಎತ್ತರ, ಮಾರುತಗಳು, ಸಮುದ್ರದಿಂದ ಇರುವ ದೂರ, ಭೂಮಿ ಮತ್ತು ಜಲರಾಶಿಗಳ ಹಂಚಿಕೆ, ಸಾಗರ ಪ್ರವಾಹಗಳು ಇತ್ಯಾದಿ.

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳವನ್ನು ಸೂಕ್ತ ಪದದಿಂದ ಭರ್ತಿಮಾಡಿರಿ.**

1. ವಾಯುಗೋಳದ ಎರಡು ಪ್ರಮುಖ ಅನಿಲಗಳೆಂದರೆ ________ ಮತ್ತು ________ .
2. ವಾಯುಗೋಳದ ಅತ್ಯಂತ ಕೆಳಸ್ತರ __________ ಆಗಿದೆ.
3. ಸಮುದ್ರಮಟ್ಟದಲ್ಲಿ ವಾಯುಗೋಳದದ ಸರಾಸರಿ ಒತ್ತಡವು ________ ಆಗಿದೆ.

©KTBS Not to be republished

4. ಪ್ರತಿವಾಣಿಜ್ಯ ಮಾರುತಗಳನ್ನು ________ ಎಂದೂ ಕರೆಯುತ್ತಾರೆ.

5. ಹವಾಗುಣದ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ಮಾಡುವ ಶಾಸ್ತ್ರ ________ ಆಗಿದೆ.

**II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ವಾಯುಗೋಳ ಎಂದರೇನು ?
2. ವಾಯುಗೋಳದ ಪ್ರಮುಖ ಪದರುಗಳನ್ನು ಹೆಸರಿಸಿ.
3. ಓಜೋನ್ ಪದರದ ಮಹತ್ವ ಏನು?
4. ಶಾಂತವಲಯ ಎಂದರೇನು? ಅದು ಎಲ್ಲಿ ಕಂಡುಬರುತ್ತದೆ?
5. ನಿರಂತರ ಮಾರುತಗಳ ವಿಧಗಳನ್ನು ಹೆಸರಿಸಿ.
6. ಸ್ಥಳೀಯ ಮಾರುತಗಳೆಂದರೇನು? ಯಾವುದಾದರೂ ಎರಡು ಉದಾಹರಣೆ ಕೊಡಿ.
7. ಮೋಡಗಳ ವಿಧಗಳನ್ನು ತಿಳಿಸಿ
8. ಹವಾಗುಣ ಮತ್ತು ವಾಯುಗುಣಕ್ಕಿರುವ ವ್ಯತ್ಯಾಸಗಳೇನು?

**III. ಈ ಕೆಳಗಿನವುಗಳನ್ನು ಅರ್ಥೈಸಿ.**

| | | | |
|---|---|---|---|
| 1. | ಅಯಾನುವಲಯ | 4. | ಅಶ್ವಅಕ್ಷಾಂಶ |
| 2. | ಸಾಮಾನ್ಯ ಇಳಿಕೆಯದರ | 5. | ಆರೋಹಮಳೆ (ಪರ್ವತಮಳೆ) |
| 3. | ಉಷ್ಣವಲಯ | 6. | ವಾಯುಗುಣ ಶಾಸ್ತ್ರ |

**IV. ನೆನಪಿನಲ್ಲಿಡಬೇಕಾದ ಅಂಶಗಳು.**

| | | | |
|---|---|---|---|
| 1. | ಸೂರ್ಯಜನ್ಯಶಾಖ | 4. | ನಲ್ವತ್ತರ ಅಬ್ಬರಗಾಳಿ |
| 2. | ಉಷ್ಣಾಂಶದ ವಿಪರ್ಯಯ | 5. | ವೃಷ್ಟಿಮೋಡಗಳು |
| 3. | ಪವನವೇಗ ಮಾಪಕ | 6. | ಆವರ್ತಶಾಸ್ತ್ರ |

**V. ಚಟುವಟಿಕೆಗಳು.**

1. ಪ್ರಪಂಚದ ನಿರಂತರ ಮಾರುತಗಳ ಚಿತ್ರ ಬರೆದು ಗುರುತಿಸಿರಿ.

*****

*ಸ್ವತಂತ್ರ ಭಾರತದ ಗಣತಂತ್ರದ ಉದ್ದೇಶ ಎಲ್ಲರಿಗೂ ಸಮಾನತೆ, ಸ್ವಾತಂತ್ರ್ಯ, ನ್ಯಾಯ ಮತ್ತು ಸೋದರತ್ವವನ್ನು ಒದಗಿಸುವುದಾಗಿದೆ.*

*– ಡಾ. ಬಿ.ಆರ್. ಅಂಬೇಡ್ಕರ್*

Not to be re published ©KTBS

## ಅಧ್ಯಾಯ-4

# ಜಲಗೋಳ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ವಿವಿಧ ಜಲರಾಶಿಗಳ ಪರಿಚಯ ಮಾಡಿಕೊಳ್ಳುವುದು.*
- *ಭಾರತದ ನಕ್ಷೆಯಲ್ಲಿ ಸಮುದ್ರ, ಸಾಗರ, ಖಾರಿ, ಕೊಲ್ಲಿ ಜಲಸಂಧಿಗಳನ್ನು ಗುರುತಿಸುವುದು.*
- *ಸಾಗರ ತಳದ ಭೂಸ್ವರೂಪಗಳನ್ನು ತಿಳಿದುಕೊಳ್ಳುವುದು.*
- *ಸಾಗರ ಪ್ರವಾಹಗಳು ಮತ್ತು ಅವುಗಳ ವಿಧಗಳು ಹಾಗೂ ಸಾಗರಗಳ ಸಂರಕ್ಷಣೆ ಬಗ್ಗೆ ತಿಳಿಯುವುದು.*

**ನೀರು :** *ಸಮುದ್ರ ಜಲಚರಗಳ ಮತ್ತು ಸಾಗರೀಯ ವಾಯುಗುಣದ ಮೂಲ*

**ಜಲರಾಶಿಗಳ ಹಂಚಿಕೆ**


ಭೂಮಿಯನ್ನು ಸಾಮಾನ್ಯವಾಗಿ 'ನೀಲಿಗ್ರಹ' ಅಥವಾ 'ಜಲಾವೃತ ಗ್ರಹ' ವೆಂದೂ ಕರೆಯುವರು. ಇದಕ್ಕೆ ಕಾರಣ ಭೂಮೇಲ್ಮೈನ 70.78% ಭಾಗ ಅಂದರೆ 361 ದಶಲಕ್ಷ ಚ.ಕಿ.ಮೀ. ಪ್ರದೇಶವು ನೀರಿನಿಂದ ಆವರಿಸಿದೆ. ಪ್ರಪಂಚದ ಅತಿ ದೊಡ್ಡ ಜಲರಾಶಿಗಳೆಂದರೆ ಪೆಸಿಫಿಕ್ ಸಾಗರ, ಅಟ್ಲಾಂಟಿಕ್ ಸಾಗರ, ಹಿಂದೂ ಮಹಾಸಾಗರ ಮತ್ತು ಆರ್ಕಟಿಕ್ ಸಾಗರ.

**ಸಾಗರ (Ocean) :** ಇವು ಆಳವಾದ ಮತ್ತು ವಿಸ್ತಾರವಾದ ಲವಣೀಯ ಜಲರಾಶಿಗಳಾಗಿದ್ದು. ಭೂಖಂಡಗಳನ್ನು ಸುತ್ತುವರೆದಿವೆ. ಉದಾ: ಏಷ್ಯಾ, ಆಫ್ರಿಕಾ ಮತ್ತು ಆಸ್ಟ್ರೇಲಿಯಾಗಳ ನಡುವೆ ಇರುವ ಹಿಂದೂ ಮಹಾಸಾಗರ, ಉತ್ತರ ಅಮೆರಿಕ ಮತ್ತು ಯುರೋಪಿನ ನಡುವೆ ಇರುವ ಅಟ್ಲಾಂಟಿಕ ಸಾಗರ.

**ಸಮುದ್ರ (Sea) :** ಇವು ಸಾಗರದ ಭಾಗಗಳಾಗಿದ್ದು, ಭೂಖಂಡಗಳಲ್ಲಿ ಒಳ ಚಾಚಿಕೊಂಡಿರುತ್ತವೆ. ಸಮುದ್ರವು ಸಾಗರಗಳ ವಿಸ್ತಾರಕ್ಕೆ ಹೋಲಿಸಿದರೆ ಚಿಕ್ಕದು. ಉದಾ: ಅರಬ್ಬಿ ಸಮುದ್ರ, ಕ್ಯಾಸ್ಪಿಯನ್ ಸಮುದ್ರ, ಕೆಂಪು ಸಮುದ್ರ ಇತ್ಯಾದಿ.

**ಖಾರಿ (Gulf)** ಇದು ಸಾಗರ ಅಥವಾ ಸಮುದ್ರದ ಕಿರಿದಾದ ನೀಳಭಾಗವಾಗಿದ್ದು ಭೂಭಾಗದೊಳಗೆ ಚಾಚಿರುವುದು. ಇವುಗಳು ಸಮುದ್ರಕ್ಕಿಂತ ಚಿಕ್ಕದಾಗಿದ್ದು ಗಾತ್ರ ಆಕಾರ ಮತ್ತು ಆಳದಲ್ಲಿ ಒಂದರಿಂದ ಮತ್ತೊಂದು ವ್ಯತ್ಯಾಸದಿಂದ ಕೂಡಿರುತ್ತವೆ. ಉದಾ : ಮನ್ನಾರ್‌ಖಾರಿ, ಪರ್ಷಿಯನ್‌ಖಾರಿ, ಮೆಕ್ಸಿಕೋಖಾರಿ ಇತ್ಯಾದಿ.

**ಕೊಲ್ಲಿ (Bay):** ಪ್ರಾಯಶಃ ಭೂಭಾಗದಿಂದ ಸುತ್ತುವರಿಯಲ್ಪಟ್ಟ ಅರ್ಧವೃತ್ತಾಕಾರದ ಸಮುದ್ರ ಭಾಗವಾಗಿದೆ. ಒಂದು ಕೊಲ್ಲಿಗೂ ಮತ್ತೊಂದು ಕೊಲ್ಲಿಗೂ ಆಳ, ವಿಸ್ತಾರ ಮತ್ತು ಗಾತ್ರದಲ್ಲಿ ವ್ಯತ್ಯಾಸಗಳಿರುತ್ತವೆ. ಉದಾ: ಬಂಗಾಳ ಕೊಲ್ಲಿ, ಬಿಸ್ಕೆಕೊಲ್ಲಿ, ಫಂಡಿಕೊಲ್ಲಿ, ಹಡ್ಸನ್‌ಕೊಲ್ಲಿ ಮೊದಲಾದವು.





©KTBS Not to be republished

**ಜಲಸಂಧಿ (Strait):** ಎರಡು ವಿಶಾಲವಾದ ಸಮುದ್ರಗಳನ್ನು ಸಂಪರ್ಕಿಸುವ ಎರಡು ಭೂಭಾಗಗಳ ಮಧ್ಯದ ಕಿರಿದಾದ ಜಲಭಾಗವೇ ಜಲಸಂಧಿ. ಉದಾ: ಪಾಕ್ ಜಲಸಂಧಿ, ಜಿಬ್ರಾಲ್ಟರ್ ಜಲಸಂಧಿ, ಬೇರಿಂಗ್ ಜಲಸಂಧಿ ಮೊದಲಾದವು.

**ಭೂಕಂಠ (Isthmus):** ಇದು ಜಲಸಂಧಿಯ ವಿವರಣೆಗೆ ವಿರುದ್ಧವಾದುದು. ಭೂಕಂಠವೆಂದರೆ ಒಂದು ಕಿರಿದಾದ ಭೂಭಾಗವಾಗಿದ್ದು ಎರಡು ದೊಡ್ಡ ಭೂರಾಶಿಗಳನ್ನು ಸಂಪರ್ಕಿಸುವುದು. ಇವು ಸಾಗರ ಮಾರ್ಗದ ಕಾಲುವೆಗಳನ್ನು ನಿರ್ಮಾಣಮಾಡಲು ಬಹುಮುಖ್ಯವಾದವು. ಉದಾ: ಏಷ್ಯ ಮತ್ತು ಆಫ್ರಿಕಾ ಖಂಡಗಳ ನಡುವಿನ ಸೂಯೆಜ್ ಕಾಲುವೆ, ದಕ್ಷಿಣ ಮತ್ತು ಉತ್ತರ ಅಮೆರಿಕಾ ಖಂಡಗಳ ನಡುವಿನ ಪನಾಮ ಕಾಲುವೆ.

## ಸಾಗರ ತಳದ ಭೂ ಸ್ವರೂಪಗಳು (Relief of the Ocean Floor)

ಭೂಮೇಲ್ಭಾಗದಲ್ಲಿ ವಿವಿಧ ಬಗೆಯ ಭೂಸ್ವರೂಪಗಳಂತೆ ಸಾಗರ ತಳದಲ್ಲಿಯೂ ಹಲವಾರು ಬಗೆಯ ಭೂ ಸ್ವರೂಪಗಳಿವೆ. ಸಾಗರಗಳ ಮಹತ್ವವನ್ನು ತಿಳಿಯಬೇಕಾದರೆ ಸಾಗರ ತಳದ ಭೂ ಸ್ವರೂಪಗಳ ಅಧ್ಯಯನ ಮಾಡಬೇಕು. ಭೂಆಳವನ್ನು ಆಧರಿಸಿ ಸಾಗರ ತಳವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು. ಅವುಗಳೆಂದರೆ : ಖಂಡಾವರಣ ಪ್ರದೇಶ, ಖಂಡಾವರಣ ಇಳಿಜಾರು, ಆಳಸಾಗರ ಮೈದಾನ ಮತ್ತು ಸಾಗರ ತಗ್ಗುಗಳು.




ಸಾಗರ ತಳದ ಮೇಲ್ಮೈ ಲಕ್ಷಣಗಳು

**1. ಖಂಡಾವರಣ ಪ್ರದೇಶ: (Continental Shelf) :** ಸಾಗರ ಅಥವಾ ಸಮುದ್ರದ ಅಂಚಿನಲ್ಲಿರುವ ಆಳವಿಲ್ಲದ ಭಾಗವನ್ನೇ ಖಂಡಾವರಣ ಪ್ರದೇಶವೆನ್ನುವರು. ಇದರ ಒಂದು ಕಡೆಗೆ ಸಮುದ್ರತೀರವಿದ್ದರೆ ಮತ್ತೊಂದು ಕಡೆ ಖಂಡಾವರಣ ಇಳಿಜಾರು ಇರುವುದು. ಈ ವಲಯದ ಸರಾಸರಿ ಆಳ 100 ಫ್ಯಾಥಮ್‌ಗಳು (1 ಫ್ಯಾಥಮ್ =6 ಅಡಿ). ತೀರದಿಂದ ಸಮುದ್ರ ಕಡೆಗೆ ಬಂದಂತೆ ಆಳವು ಹೆಚ್ಚಾಗುವುದು. ಖಂಡಾವರಣ ಪ್ರದೇಶವು ಮೀನುಗಾರಿಕೆ, ಜಲಚರ ಕೃಷಿ, ನೌಕಾಯಾನ ಹಾಗೂ ಉತ್ಪಾದನೆಗೆ ಪ್ರಾಮುಖ್ಯತೆ ಪಡೆದಿದೆ.

**2. ಖಂಡಾವರಣ ಇಳಿಜಾರು (Continental Slope) :** ಇದು ಸಾಗರತಳದ ಎರಡನೇ ಭಾಗವಾಗಿದ್ದು, ಕಡಿದಾದ ಇಳಿಜಾರಿನಿಂದ ಕೂಡಿದೆ. ಇದು ಖಂಡಾವರಣ ಪ್ರದೇಶ ಹಾಗೂ ಆಳಸಾಗರ ಮೈದಾನಗಳ ನಡುವೆ ವಿಸ್ತರಿಸಿದೆ. ಈ ವಲಯದಲ್ಲಿಯೇ ಸಾಗರದ ಕಂದರಗಳು (Submarine Canyons) ಕಂಡು ಬರುತ್ತವೆ.

©KTBS Not to be republished

**3. ಆಳಸಾಗರದ ಮೈದಾನ (Deep Sea Plain) :** ಸಾಗರಗಳ ತಳದಲ್ಲಿರುವ ವಿಸ್ತಾರವಾದ ಮೈದಾನ ಭಾಗವಾಗಿರುವುದು. ಇದನ್ನು ಆಳಸಾಗರ ಮೈದಾನ ಅಥವಾ 'ಅಬಿಸಲ್ ಮೈದಾನ'ವೆನ್ನುವರು. ಸಾಗರಗಳ ಭೂಸ್ವರೂಪ ವಿಭಾಗಗಳಲ್ಲೇ ಇದು ಅತಿ ವಿಸ್ತಾರವಾದುದು. ಈ ವಲಯದಲ್ಲಿಯೇ ಗುಡ್ಡಗಳಂತಿರುವ ಸಮುದ್ರ ಪರ್ವತಗಳು (Sea mounts) ಹಾಗೂ ಚಪ್ಪಟೆಯಾಗಿರುವ ಗುಡ್ಡಾಕಾರದ 'ಗುಯೋಟ್ಸ್' ಗಳು(guyots) ಕಂಡು ಬರುತ್ತವೆ.

**4. ಸಾಗರ ತಗ್ಗುಗಳು (Ocean Deeps) :** ಸಾಗರ ತಗ್ಗುಗಳನ್ನು ಸಾಗರ ಪ್ರಪಾತಗಳೆಂದೂ ಕರೆಯುವರು. ಇವು ಸಾಗರಗಳಲ್ಲಿ ಅತ್ಯಂತ ನೀಳವಾದ ಮತ್ತು ದೀರ್ಘವಾದ ತಗ್ಗು ಭಾಗಗಳು. ಫಿಲಿಫೈನ್ಸ್ ದ್ವೀಪಗಳ ಬಳಿಯಿರುವ 'ಚಾಲೆಂಜರ್ ತಗ್ಗು' (ಪೆಸಿಫಿಕ್ ಸಾಗರ) 11033 ಮೀ. ಆಳವಾಗಿದ್ದು ಇದು ಪ್ರಪಂಚದಲ್ಲಿ ಅತಿ ಆಳವಾಗಿರುವ ಸ್ಥಳವಾಗಿದೆ. ಪೆಸಿಫಿಕ್ ಮಹಾಸಾಗರದ ಟೊಂಗ ಪ್ರಪಾತ, ಕೂರೈಲ್ ಪ್ರಪಾತ ಹಲವಾರು ಪ್ರಪಾತಗಳಾಗಿವೆ.

## ಸಾಗರದ ನೀರಿನ ಉಷ್ಣಾಂಶ ಮತ್ತು ಲವಣತೆ (Temperature and Salinity of Ocean Water)

**ಉಷ್ಣಾಂಶ :** ಸಮುದ್ರ ಅಥವಾ ಸಾಗರಗಳ ನೀರಿನ ಉಷ್ಣಾಂಶವು ವಿವಿಧ ಅಕ್ಷಾಂಶ ಹಾಗೂ ವಿವಿಧ ಆಳಗಳಲ್ಲಿ ಭಿನ್ನವಾಗಿರುವುದು. ಸಮಭಾಜಕವೃತ್ತದ ಸಮೀಪ ಉಷ್ಣವಲಯದ ಸಾಗರದ ನೀರು ಆರ್ಕ್ಟಿಕ್ ಮತ್ತು ಅಂಟಾರ್ಟಿಕ ವೃತ್ತಗಳಲ್ಲಿನ ನೀರಿಗಿಂತ ಹೆಚ್ಚು ಉಷ್ಣಾಂಶವನ್ನು ಹೊಂದಿದೆ. ಇದೇ ರೀತಿಯಲ್ಲಿ ಸಾಗರದ ನೀರಿನಲ್ಲಿ ಆಳಕ್ಕೆ ಹೋದಂತೆ ಉಷ್ಣಾಂಶವು ಕಡಿಮೆಯಾಗುವುದು. ಇದಕ್ಕೆ ಕಾರಣ ಸೂರ್ಯನ ಕಿರಣಗಳು ನೀರಿನಲ್ಲಿ 200 ಮೀ.ಗಳವರೆಗೆ ಮಾತ್ರ ಪ್ರವೇಶಿಸುತ್ತವೆ. ಈ ವಲಯದಲ್ಲಿಯೇ ಅನೇಕ ಬಗೆಯ ಜೀವಿಗಳು ಕಂಡುಬರುತ್ತವೆ.

**ಲವಣತೆ:** ಸಾಗರ ಅಥವಾ ಸಮುದ್ರದ ನೀರಿನಲ್ಲಿ ಕರಗಿರುವ ಉಪ್ಪಿನಂಶಗಳ ಪ್ರಮಾಣಗಳನ್ನು 'ಲವಣತೆ' ಎನ್ನುವರು. ನೀರಿನಲ್ಲಿ ಉಪ್ಪು ಮತ್ತು ಖನಿಜಾಂಶಗಳು ಕರಗಿರುವುದರಿಂದ ಸಮುದ್ರ ಹಾಗೂ ಸಾಗರದ ನೀರು ಉಪ್ಪಾಗಿರುವುದು. ಸಾಗರದ ನೀರಿನ ಸರಾಸರಿ ಲವಣತೆ $35/^{000}$ (ಅಂದರೆ 1000 ಭಾಗದಲ್ಲಿ 35 ಭಾಗ ಎಂದರ್ಥ) ಸಾಗರದ ನೀರು ಆವಿಯಾಗಿ ಅದರಲ್ಲಿರುವ ಲವಣಗಳು ಅಲ್ಲಿಯೇ ಉಳಿದಿರುವುದರಿಂದ ನೀರು ನಿರಂತರವಾಗಿ ಉಪ್ಪಾಗಿ ಪರಿಣಮಿಸುವುದು. ಲವಣತೆಯು ಸಂಕ್ರಾಂತಿ ವೃತ್ತಗಳ ವಲಯದಲ್ಲಿ ಹೆಚ್ಚಾಗಿದ್ದು, ಧ್ರುವ ಮತ್ತು ಸಮಭಾಜಕವೃತ್ತ ಪ್ರದೇಶಗಳಲ್ಲಿ ಕಡಿಮೆಯಿರುವುದು. ಸಮಭಾಜಕವೃತ್ತ ಪ್ರದೇಶದಲ್ಲಿ ಅಧಿಕ ಭಾಷ್ಪೀಭವನ ಮತ್ತು ಅಧಿಕಮಳೆಯಿಂದ ಲವಣತೆ ಕಡಿಮೆ ಪ್ರಮಾಣದಲ್ಲಿರುತ್ತದೆ.

**ನಿಮಗಿದು ತಿಳಿದಿರಲಿ**

***ಸಮುದ್ರದ ನೀರು ಏಕೆ ಉಪ್ಪಾಗಿರುವುದು?***

*ಭೂಭಾಗಗಳಿಂದ ಹರಿದು ಸಮುದ್ರ ಅಥವಾ ಸಾಗರವನ್ನು ಸೇರುವ ನದಿಗಳ ನೀರು ಹಲವಾರು ಬಗೆಯ ಲವಣಗಳನ್ನು ಕರಗಿಸಿ ದ್ರಾವಣದ ರೂಪದಲ್ಲಿ ತನ್ನೊಡನೆ ತರುವುದು. ಸಾಗರ–ಸಮುದ್ರದ ನೀರು ಉಷ್ಣಾಂಶದಿಂದ ಆವಿಯಾಗಿ ವಾಯುಮಂಡಲವನ್ನು ಸೇರುವುದು. ಆದರೆ ನೀರಿನಲ್ಲಿದ್ದ ಲವಣವು ಸಮುದ್ರದಲ್ಲಿಯೇ ಉಳಿಯುತ್ತಾ ಹೋಗುವುದು. ಈ ಪ್ರಕ್ರಿಯೆ ದೀರ್ಘಕಾಲದಿಂದಲೂ ಮುಂದುವರೆದಿರುವುದರಿಂದ ಸಾಗರ, ಸಮುದ್ರಗಳಲ್ಲಿ ಲವಣಗಳು ಸಂಗ್ರಹವಾಗಿದ್ದು ಸಮುದ್ರದ ನೀರು ಉಪ್ಪಾಗಿದೆ.*

Not ©KTBS to be republished

**ಪ್ರಪಂಚದಲ್ಲಿ ಅತಿ ಹೆಚ್ಚು ಲವಣತೆ ಹೊಂದಿರುವ ಕೆಲವು ಜಲಭಾಗಗಳು .**

1. ಟರ್ಕಿಯ ವ್ಯಾನ್‌ಸರೋವರ – $330/^{000}$
2. ಮೃತ ಸಮುದ್ರ – (ಜೋರ್ಡಾನ್) – $300/^{000}$
3. ಸಾಂಬಾರ್ ಸರೋವರ – (ಭಾರತ) – $265/^{000}$
4. ಕೆಂಪು ಸಮುದ್ರ – (ಏಷ್ಯಾ ಮತ್ತು ಆಫ್ರಿಕಾ) – $240/^{000}$

## ಸಾಗರ ಪ್ರವಾಹಗಳು (Ocean Currents)

ಸಾಗರದ ನೀರು ಮೂರು ಪ್ರಮುಖ ಚಲನೆಗಳನ್ನು ಒಳಗೊಂಡಿದೆ. ಅವುಗಳೆಂದರೆ ಸಮತಲ ಚಲನೆಗೆ ಅಲೆಗಳು, ಪ್ರವಾಹಗಳು ಮತ್ತು ಲಂಬ ಚಲನೆಗೆ ಉಬ್ಬರ ವಿಳಿತಗಳು. ನಿಶ್ಚಿತ ದಿಕ್ಕಿನಲ್ಲಿ ನಿರಂತರವಾಗಿ ಚಲಿಸುವ ಸಾಗರದ ಮೇಲ್ಮೈ ನೀರನ್ನು 'ಸಾಗರ ಪ್ರವಾಹ' ಗಳೆಂದು ಕರೆಯುವರು. ಸಾಗರ ಪ್ರವಾಹಗಳಲ್ಲಿ ಎರಡು ವಿಧಗಳಿವೆ.

**ಉಷ್ಣ ಸಾಗರ ಪ್ರವಾಹಗಳು:** ಇವು ಸಮಭಾಜಕವೃತ್ತದಿಂದ ಪ್ರದೇಶಗಳಲ್ಲಿ ಪ್ರಾರಂಭವಾಗಿ ಉಪ ಧ್ರುವೀಯ ಪ್ರದೇಶಗಳ ಕಡೆಗೆ ಹರಿಯುತ್ತವೆ.

**ಶೀತಸಾಗರ ಪ್ರವಾಹಗಳು:** ಇವು ಧ್ರುವಪ್ರದೇಶಗಳಲ್ಲಿ ಪ್ರಾರಂಭವಾಗಿ ಸಮಭಾಜಕವೃತ್ತದ ಕಡೆಗೆ ಹರಿಯುತ್ತವೆ.

ಸಾಗರ ಪ್ರವಾಹಗಳ ಮೇಲೆ ಪ್ರಭಾವವನ್ನು ಬೀರುವ ಅಂಶಗಳೆಂದರೆ ಭೂಮಿಯ ದೈನಂದಿನ ಚಲನೆ, ಉಷ್ಣಾಂಶ, ಮಾರುತಗಳು, ಲವಣತೆ, ಭೂಭಾಗಗಳ ಆಕಾರ ಇತ್ಯಾದಿ.

### ಪೆಸಿಫಿಕ್ ಸಾಗರದ ಪ್ರವಾಹಗಳು

**ಉತ್ತರ ಪೆಸಿಫಿಕ್ ಸಾಗರದ ಪ್ರವಾಹಗಳು**

| **ಉಷ್ಣಸಾಗರ ಪ್ರವಾಹಗಳು** | **ಶೀತಸಾಗರ ಪ್ರವಾಹಗಳು** |
|---|---|
| ಉತ್ತರ ಸಮಭಾಜಕ ವೃತ್ತ ಪ್ರವಾಹ | ಕುರೊಶಿವೊ ಪ್ರವಾಹ |
| ಕ್ಯಾಲಿಫೋರ್ನಿಯಾ ಪ್ರವಾಹ | ಓಯಾಶಿವೋ ಪ್ರವಾಹ |

**ದಕ್ಷಿಣ ಪೆಸಿಫಿಕ್ ಸಾಗರ ಪ್ರವಾಹಗಳು**

| **ಉಷ್ಣಸಾಗರ ಪ್ರವಾಹಗಳು** | **ಶೀತಸಾಗರ ಪ್ರವಾಹಗಳು** |
|---|---|
| ದಕ್ಷಿಣ ಸಮಭಾಜಕವೃತ್ತ ಪ್ರವಾಹ | ಪೆರು ಅಥವಾ ಹಂಬೋಲ್ಟ್ ಪ್ರವಾಹ |
| ಪೂರ್ವ ಆಸ್ಟ್ರೇಲಿಯನ್ ಪ್ರವಾಹ | ಪಶ್ಚಿಮ ಮಾರುತಗಳ ಪ್ರವಾಹ |

### ಅಟ್ಲಾಂಟಿಕ್ ಸಾಗರ ಪ್ರವಾಹಗಳು

©KTBS Not to be re published


### ಉತ್ತರ ಅಟ್ಲಾಂಟಿಕ್ ಸಾಗರ ಪ್ರವಾಹಗಳು

| **ಉಷ್ಣಸಾಗರ ಪ್ರವಾಹಗಳು** | **ಶೀತಸಾಗರ ಪ್ರವಾಹಗಳು** |
| --- | --- |
| ಉತ್ತರ ಸಮಭಾಜಕ ವೃತ್ತ ಪ್ರವಾಹ | ನಾರ್ವೇಜಿಯನ್ ಪ್ರವಾಹ |
| ಗಲ್ಫ್ ಸ್ಟ್ರೀಂ ಪ್ರವಾಹ | ಲಾಬ್ರಡಾರ್ ಪ್ರವಾಹ |
| ಉತ್ತರ ಅಟ್ಲಾಂಟಿಕ್ ಪ್ರವಾಹ | ಕ್ಯಾನರಿ ಪ್ರವಾಹ |

### ದಕ್ಷಿಣ ಅಟ್ಲಾಂಟಿಕ್ ಸಾಗರ ಪ್ರವಾಹಗಳು

| **ಉಷ್ಣಸಾಗರ ಪ್ರವಾಹ** | **ಶೀತಸಾಗರ ಪ್ರವಾಹ** |
| --- | --- |
| ದಕ್ಷಿಣ ಸಮಭಾಜಕ ವೃತ್ತ ಪ್ರವಾಹ | ಫಾಕ್‌ಲ್ಯಾಂಡ್ ಪ್ರವಾಹ |
| ಬ್ರೆಜಿಲ್ ಪ್ರವಾಹ | ಬೆಂಗ್ವುಲಾ ಪ್ರವಾಹ |

**ಹಿಂದೂ ಮಹಾಸಾಗರದ ಪ್ರವಾಹಗಳು :** ಉತ್ತರ ಹಿಂದೂ ಮಹಾಸಾಗರದಲ್ಲಿ ಪ್ರವಾಹಗಳು ಋತುಮಾನಕ್ಕನುಗುಣವಾಗಿ ದಿಕ್ಕನ್ನು ಬದಲಾಯಿಸುತ್ತವೆ. ಈ ಬದಲಾವಣೆ ಮಾನ್ಸೂನ್ ಮಾರುತಗಳ ದಿಕ್ಕಿಗೆ ಅನುಗುಣವಾಗಿರುವುದು. ಬೇಸಿಗೆಯಲ್ಲಿ ಇವು ನೈಋತ್ಯದಿಂದ ಈಶಾನ್ಯದ ಕಡೆಗೆ ಹಾಗೂ ಶರತ್ ಕಾಲದಲ್ಲಿ ಈಶಾನ್ಯದಿಕ್ಕಿನಿಂದ ನೈಋತ್ಯದ ಕಡೆಗೆ ಪ್ರವಹಿಸುತ್ತವೆ.




**ಪ್ರಪಂಚದ ಪ್ರಮುಖ ಸಾಗರ ಪ್ರವಾಹಗಳು**

©KTBS Not to be re-published

**ದಕ್ಷಿಣ ಹಿಂದೂ ಮಹಾ ಸಾಗರದ ಮುಖ್ಯ ಪ್ರವಾಹಗಳೆಂದರೆ:** ಮೊಝಾಂಬಿಕ್, ಮಲಗಾಸಿ, ಅಗುಲ್ಹಾಸ್ ಇವು ಉಷ್ಣಪ್ರವಾಹಗಳು ಮತ್ತು ಪಶ್ಚಿಮ ಆಸ್ಟ್ರೇಲಿಯಾ ಪ್ರವಾಹ ಶೀತಪ್ರವಾಹವಾಗಿದೆ.

**ನಿಮಗಿದು ತಿಳಿದಿರಲಿ:**

**ಪ್ರಮುಖ ಮೀನುಗಾರಿಕಾ ಪ್ರದೇಶಗಳು**

1. *ಹೊನ್ಸು, ಹೊಕೈಡೋ ಮೀನುಗಾರಿಕೆ ಪ್ರದೇಶಗಳು – ಕುರೋಶಿವೊ ಉಷ್ಣಪ್ರವಾಹ ಮತ್ತು ಒಯಾಶಿವೊ ಶೀತ ಪ್ರವಾಹಗಳು ಸಂಧಿಸುವ ಪ್ರದೇಶ. (ಜಪಾನ್)*
2. *ಗ್ರಾಂಡ್ ಬ್ಯಾಂಕ್ – ಗಲ್ಫ್ ಸ್ಟ್ರೀಂ ಉಷ್ಣಪ್ರವಾಹ ಮತ್ತು ಲ್ಯಾಬ್ರಡಾರ್ ಶೀತ ಪ್ರವಾಹಗಳು ಸಂಧಿಸುವ ಪ್ರದೇಶ. (ನ್ಯೂಫೌಂಡ್ ಲ್ಯಾಂಡ್ ಉತ್ತರ ಅಮೇರಿಕ)*
3. *ಡಾಗ್ಗರ್‌ಬ್ಯಾಂಕ್– ಉತ್ತರಸಮುದ್ರವಲಯ (ಯುರೋಪ್)*

## ಉಬ್ಬರ ವಿಳಿತಗಳು

ಸಮುದ್ರ ಅಥವಾ ಸಾಗರದ ನೀರಿನ ಮಟ್ಟವು ನಿರಂತರ ಮತ್ತು ನಿಯಮಿತವಾಗಿ ಏರುವುದು ಹಾಗೂ ಇಳಿಯುವುದನ್ನೇ 'ಉಬ್ಬರ ವಿಳಿತ' ವೆಂದು ಕರೆಯುವರು. ಉಬ್ಬರವಿಳಿತಗಳಿಗೆ ಮುಖ್ಯಕಾರಣಗಳೆಂದರೆ: ಚಂದ್ರ ಹಾಗೂ ಸೂರ್ಯರ ಗುರುತ್ವಾಕರ್ಷಣಾ ಶಕ್ತಿ, ಭೂಮಿಯ ದೈನಂದಿನ ಚಲನೆ ಮತ್ತು ಭೂಮಿಯ ಕೇಂದ್ರಾಪಗಮನ ಶಕ್ತಿ.


**ವಿಧಗಳು :** ಉಬ್ಬರ ವಿಳಿತಗಳಲ್ಲಿ ಮುಖ್ಯವಾಗಿ ಎರಡು ವಿಧಗಳಿವೆ: ಅವುಗಳೆಂದರೆ ಅ) **ಏರುಬ್ಬರ (High Tide) :** ಸಮುದ್ರ ಅಥವಾ ಸಾಗರದ ನೀರು ಒಮ್ಮೆ ಏರುವುದರಿಂದ ಉಂಟಾಗುತ್ತದೆ. ಇದನ್ನು ಏರುಬ್ಬರ ಅಥವಾ ಪ್ರವಾಹದ ಉಬ್ಬರವೆನ್ನುವರು. ಆ) **ಇಳಿಉಬ್ಬರ (Low Tide) :** ಒಮ್ಮೆ ಏರುಬ್ಬರದ ಪ್ರಮಾಣದಷ್ಟೇ ನೀರಿನ ಮಟ್ಟ ಕೆಳಗೆ ಇಳಿಯುವುದು, ಇದನ್ನೇ ಇಳಿಉಬ್ಬರ (Ebtide) ಎಂದು ಕರೆಯುವರು. ಸಾಗರ ಅಥವಾ ಸಮುದ್ರಗಳಲ್ಲಿ ಏರುಬ್ಬರ ಮತ್ತು ಇಳಿಉಬ್ಬರಗಳುಂಟಾಗುತ್ತವೆ. ಒಂದು ಏರುಬ್ಬರ ಮತ್ತು ಒಂದು ಇಳಿಯುಬ್ಬರಗಳ ನಡುವೆ 6 ಗಂಟೆ 13 ನಿಮಿಷಗಳಷ್ಟು ಸಮಯ ಅಂತರವಿರುತ್ತದೆ. ಒಂದು ಅಧಿಕ ಉಬ್ಬರದಿಂದ ಮತ್ತೊಂದು ಅಧಿಕ ಉಬ್ಬರಗಳ ನಡುವೆ 12 ಗಂಟೆ 26 ನಿಮಿಷ ವೇಳೆಯ ಅಂತರವಿರುತ್ತದೆ. 24 ಗಂಟೆ, 52 ನಿಮಿಷಗಳ ಅವಧಿಯಲ್ಲಿ 2 ಏರುಬ್ಬರ ಮತ್ತು 2 ಇಳಿಯುಬ್ಬರಗಳುಂಟಾಗುತ್ತವೆ.

ಸೂರ್ಯ ಮತ್ತು ಚಂದ್ರರ ಸ್ಥಾನದ ಆಧಾರದ ಮೇಲೆ ಉಬ್ಬರವಿಳಿತಗಳನ್ನು ಎರಡು ವಿಧಗಳಿವೆ. ಅವುಗಳೆಂದರೆ :–

**ಗರಿಷ್ಠ ಅಥವಾ ಅಧಿಕ ಭರತ (Spring Tide) :** ಇದು ಭೂಮಿ, ಚಂದ್ರ ಮತ್ತು ಸೂರ್ಯ ಇವುಗಳು ಒಂದೇ ಸರಳ ರೇಖೆಯಲ್ಲಿರುವ ಅಮಾವಾಸ್ಯೆ ಅಥವಾ ಹುಣ್ಣಿಮೆ ದಿನಗಳಲ್ಲಿ ಉಂಟಾಗುತ್ತದೆ. ಸೂರ್ಯ ಮತ್ತು ಚಂದ್ರ ಇವರೆಡರ ಒಟ್ಟು ಗುರುತ್ವಶಕ್ತಿಯಿಂದ ಗರಿಷ್ಠ ಉಬ್ಬರಗಳು ಹೆಚ್ಚು ಎತ್ತರವಾಗಿರುವಂತೆ ಇಳಿ ಉಬ್ಬರಗಳ ಪ್ರಮಾಣವೂ ಸಹ ಅತಿ ಕಡಿಮೆ ಇರುತ್ತವೆ.

**ಕನಿಷ್ಠ ಉಬ್ಬರ (Neep Tide) :** ಕನಿಷ್ಠ ಉಬ್ಬರಗಳು ವೃದ್ಧಿಚಂದ್ರ ಮತ್ತು ಅರ್ಧಾಧಿಕ್ಯ ಚಂದ್ರನ ದಿನಗಳಲ್ಲಿ ಕಂಡುಬರುತ್ತವೆ. ಕನಿಷ್ಠ ಉಬ್ಬರಗಳ ಸಮಯದಲ್ಲಿ ಭೂಮಿ ಮತ್ತು ಸೂರ್ಯ ಒಂದೇ ಸರಳರೇಖೆಯಲ್ಲಿದ್ದು ಮತ್ತು ಚಂದ್ರನು ಭೂಮಿಗೆ ಸಮಕೋನದಲ್ಲಿರುತ್ತಾನೆ. ಈ ರೀತಿಯ ಉಬ್ಬರಗಳಲ್ಲಿ ಏರುಬ್ಬರ ಅಷ್ಟೊಂದು ಎತ್ತರವಾಗಿರುವುದಿಲ್ಲ ಮತ್ತು ಇಳಿಯುಬ್ಬರವೂ ಕಡಿಮೆಯಾಗುವುದಿಲ್ಲ.

©KTBS Not to be republished




**ಗರಿಷ್ಠ ಮತ್ತು ಕನಿಷ್ಠ ಉಬ್ಬರವಿಳಿತಗಳು**

**ಉಪಯೋಗಗಳು:** ಉಬ್ಬರವಿಳಿತಗಳು ಮನುಷ್ಯನಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಉಪಯುಕ್ತವಾಗಿವೆ. ಅವುಗಳೆಂದರೆ : 1. ದೊಡ್ಡ ನೌಕಾಯಾನಕ್ಕೆ ಉಪಯುಕ್ತವಾಗಿವೆ, 2. ಬಂದರು ಮತ್ತು ಹಡಗು ನಿಲ್ದಾಣಗಳನ್ನು ನಿರ್ಮಿಸಲು ಸಹಕಾರಿಯಾಗುತ್ತವೆ, 3. ಉಬ್ಬರವಿಳಿತಗಳ ನೀರು ಬಂದರುಗಳ ತೀರವನ್ನು ನಿಯಮಿತವಾಗಿ ಸ್ವಚ್ಛಗೊಳಿಸುತ್ತವೆ, 4. ಉಪ್ಪನ್ನು ಉತ್ಪಾದಿಸಲು ಸಹಕಾರಿಯಾಗಿದೆ, 5. ಮೀನುಗಾರಿಕೆಗೆ ನೆರವಾಗುತ್ತವೆ ಮತ್ತು ಉಬ್ಬರವಿಳಿತ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಉಪಯುಕ್ತ.

**ಸಾಗರಗಳ ಸಂರಕ್ಷಣೆ** : ಸಾಗರಗಳ ಸಂರಕ್ಷಣೆ ಇತ್ತೀಚಿನ ವರ್ಷಗಳಲ್ಲಿ ಅತಿ ಮುಖ್ಯವಾಗಿದೆ. ಸಾಗರಗಳು ಮನುಷ್ಯನಿಗೆ ವಿವಿಧ ರೀತಿಯಲ್ಲಿ ಸಹಕಾರಿಯಾಗಿರುವುದಲ್ಲದೆ ಅವುಗಳಲ್ಲಿ ಅಸಂಖ್ಯಾತ ಬಗೆಯ ಜಲ ಜೀವಿಗಳು ಜೀವಿಸುತ್ತವೆ. ಸಾಗರಗಳು ಸಹ ಇಂದು ಮಾಲಿನ್ಯದಿಂದ ಹೊರತಾಗಿಲ್ಲ. ಇದರಿಂದಾಗಿ ಮುಂದೆಯೂ ಸಹ ಸಾಗರಗಳು ಇದೇ ರೀತಿಯಲ್ಲಿ ಉಳಿಯುವುದು ಸಾಧ್ಯವಿಲ್ಲ. ಆದ್ದರಿಂದ ಸಾಗರಗಳನ್ನು ಸಂರಕ್ಷಿಸುವುದು ಅಗತ್ಯ. ಸಾಗರಗಳ ಸಂರಕ್ಷಣೆಗಾಗಿ ಕೆಳಕಂಡ ಕ್ರಮಗಳನ್ನು ಕೈಗೊಳ್ಳಬೇಕಿದೆ.

1. ಕಚ್ಚಾ ತೈಲವನ್ನು ಕೊಳವೆ ಮಾರ್ಗಗಳ ಮೂಲಕ ಸಾಗಿಸುವುದು.
2. ಅಣು ಇಂಧನ ತಾಜ್ಯವಸ್ತುಗಳನ್ನು ಸಮುದ್ರ ಸಾಗರಗಳಿಗೆ ಹಾಕುವುದನ್ನು ನಿಯಂತ್ರಿಸುವುದು.
3. ತೀರವಲಯದಲ್ಲಿರುವ ಪೆಟ್ರೋ-ರಾಸಾಯನಿಕ ಹೊರ ಹಾಕುವ ದುರ್ಗಂಧ ವಸ್ತುಗಳ ನಿಯಂತ್ರಣ.
4. ಯಾವುದೇ ರೀತಿಯ ತ್ಯಾಜ್ಯ ವಸ್ತುಗಳನ್ನು ಬಂದರು ಹಾಗೂ ರೇವುಪಟ್ಟಣಗಳ ಸಮೀಪದಲ್ಲಿ ಎಸೆಯುವುದನ್ನು ನಿಯಂತ್ರಿಸುವುದು
5. ತೀರಗಳಲ್ಲಿ ಅದಿರುಗಳ ಸಂಗ್ರಹಣೆ ಹಾಗೂ ಗಣಿಗಾರಿಕೆ ಕಾರ್ಯ ನಿಯಂತ್ರಿಸುವುದು.
6. ಕರಾವಳಿಯ ಮರಳು ತೆಗೆಯುವುದು ಮತ್ತು ವಿನಾಶಗಳ ನಿಯಂತ್ರಣ.

©KTBS Not to be re published

# ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿರಿ.**

1. ಖಂಡಾವರಣ ಪ್ರದೇಶದ ಸರಾಸರಿ ಆಳವು ________ ಆಗಿದೆ.
2. ಒಂದು ಫ್ಯಾದಮ್ ________ ಅಡಿಗಳಿಗೆ ಸಮವಾಗಿರುತ್ತದೆ.
3. ಪೆಸಿಫಿಕ್ ಸಾಗರದ ಅತ್ಯಂತ ಆಳವಾದ ಸ್ಥಳ ________ ಆಗಿದೆ.
4. ಸಾಗರಗಳ ಸರಾಸರಿ ಲವಣತೆಯ ಪ್ರಮಾಣ ________ ರಷ್ಟಿದೆ.
5. ಹುಣ್ಣಿಮೆಯ ದಿನಗಳಲ್ಲಿ ಕಂಡುಬರುವ ಉಬ್ಬರಗಳು ________ .

**II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಜಲಗೋಳ ಎಂದರೇನು?
2. ಸಾಗರತಳದ ಭೂ ಸ್ವರೂಪದ ನಾಲ್ಕು ಪ್ರಮುಖ ಭಾಗಗಳನ್ನು ತಿಳಿಸಿ.
3. ಸಾಗರ ಪ್ರವಾಹಗಳಿಗೂ ಮತ್ತು ಉಬ್ಬರವಿಳಿತಗಳಿಗೂ ಇರುವ ವ್ಯತ್ಯಾಸಗಳನ್ನು ತಿಳಿಸಿರಿ.
4. ಗರಿಷ್ಠ ಉಬ್ಬರ ಮತ್ತು ಕನಿಷ್ಠ ಉಬ್ಬರಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.
5. ಸಾಗರಗಳನ್ನು ನಾವು ಹೇಗೆ ಸಂರಕ್ಷಿಸಬೇಕು?

**III. ಹೊಂದಿಸಿ ಬರೆಯಿರಿ.**

| ಅ | ಬ |
|---|---|
| 1. ಫ್ಯಾದಮ್ | ಅ) ಆಳಸಾಗರ ಮೈದಾನ |
| 2. ಓಯೋಶಿವೊ | ಆ) ಅ.ಸಂ. ಸಂಸ್ಥಾನದ ಪೂರ್ವಕರಾವಳಿ |
| 3. ಗಲ್ಫ್ ಸ್ಟ್ರೀಂ | ಇ) ಶೀತ ಸಾಗರ ಪ್ರವಾಹ |
| 4. ಸಮುದ್ರ ಪರ್ವತಗಳು | ಈ) ಹಿಂದೂ ಮಹಾಸಾಗರ ಪ್ರವಾಹ |
| 5. ಅಗುಲ್ಹಾಸ್ ಪ್ರವಾಹ | ಉ) ಸಾಗರದ ಆಳದ ಅಳತೆ ಮಾನ |

**IV. ಕೆಳಗಿನವುಗಳನ್ನು ಅರ್ಥೈಸಿ.**

1. ಖಂಡಾವರಣ ಇಳಿಜಾರು
2. ಲವಣತೆ
3. ಉಷ್ಣ ಮತ್ತು ಶೀತ ಸಾಗರ ಪ್ರವಾಹಗಳು
4. ಅಧಿಕ ಭರತ ಮತ್ತು ಕನಿಷ್ಠಭರತ
5. ಬೆಂಗ್ವುಲಾಪ್ರವಾಹ
6. ಉಬ್ಬರವಿಳಿತಗಳು

**V. ನೆನಪಿನಲ್ಲಿಡಬೇಕಾದ ಅಂಶಗಳು.**

1. ಗಲ್ಫ್‌ಸ್ಟ್ರೀಂ 2. ಲವಣತೆ 3. ಉಷ್ಣಪ್ರವಾಹಗಳು 4. ಕ್ಯುರೋಶಿವೊ ಪ್ರವಾಹ 5. ಪ್ರವಾಹದ ಉಬ್ಬರಗಳು
6. ಉಬ್ಬರವಿಳಿತ ಶಕ್ತಿ.

**VI. ಚಟುವಟಿಕೆ.**

1. ಅಟ್ಲಾಂಟಿಕ್ ಮಹಾಸಾಗರದಲ್ಲಿನ ಉಷ್ಣ ಮತ್ತು ಶೀತ ಸಾಗರ ಪ್ರವಾಹಗಳನ್ನು ಪಟ್ಟಿ ಮಾಡಿರಿ.

*****

Not to be republished ©KTBS

## ಅಧ್ಯಾಯ – 5

# ಜೀವಗೋಳ (BIOSPHERE)

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಜೀವಗೋಳದ ಅರ್ಥ ಮತ್ತು ಪ್ರಾಮುಖ್ಯತೆ ತಿಳಿಯುವುದು.*
- *ಪರಿಸರದ ಅರ್ಥ, ಪರಿಸರ ಮಾಲಿನ್ಯದ ವಿಧಗಳು ಹಾಗೂ ಪರಿಸರ ಮಾಲಿನ್ಯವನ್ನು ತಡೆಗಟ್ಟುವ ಕ್ರಮಗಳ ಬಗ್ಗೆ ವಿವರಿಸುವುದು.*

**ಅರ್ಥ :** ನಮಗೆ ತಿಳಿದಿರುವಂತೆ ವಿವಿಧ ಬಗೆಯ ಜೀವಿಗಳನ್ನು ಒಳಗೊಂಡಿರುವ ಏಕೈಕ ಗ್ರಹ 'ನಮ್ಮ ಭೂಮಿ'. ಜೀವಗೋಳವು ಭೂಮಿಯ ನಾಲ್ಕನೇ ಆಯಾಮವಾಗಿದ್ದು ಎಲ್ಲಾ ರೀತಿಯ ಜೀವಿಗಳನ್ನು ಒಳಗೊಂಡಿದೆ.

> *ಭೂಮಿಯು ನಮಗೆ ಏನನ್ನು ಕೊಟ್ಟಿದೆ? ಅದಕ್ಕೆ ಪ್ರತಿಯಾಗಿ ನಾವು ಏನನ್ನು ನೀಡಿದ್ದೇವೆ ? ಎಂಬುದು ನಿಮಗೆ ಗೊತ್ತಿದೆಯೋ. ?*

**ಜೀವಪರಿಸರ ಶಾಸ್ತ್ರ (Ecology) :** ಜೀವಪರಿಸರ ಶಾಸ್ತ್ರವು ಜೀವಿಗಳು ಮತ್ತು ಅವುಗಳ ಭೌತಿಕ, ರಾಸಾಯನಿಕ ಮತ್ತು ಜೈವಿಕ ಪರಿಸರಗಳ ನಡುವಿನ ಸಂಬಂಧವನ್ನು ವಿವರಿಸುವ ವಿಜ್ಞಾನವಾಗಿದೆ. ಜೀವಿಗಳು ಮತ್ತು ಪ್ರಾಕೃತಿಕ ಪರಿಸರ ಹಾಗೂ ವಿವಿಧ ಪ್ರಕಾರದ ಪ್ರಾಣಿಗಳ ನಡುವೆ ಸೌಹಾರ್ದಯುತವಾದ ಹಾಗೂ ಸಮತೋಲನವಾದ ಸಂಬಂಧ ನೈಸರ್ಗಿಕವಾಗಿ ಕಂಡುಬರುವುದು. ಇದನ್ನೇ ಜೈವಿಕ ಪರಿಸರ ಸಮತೋಲನ ಎನ್ನುವರು.

ಪ್ರಾಣಿವರ್ಗ ಮತ್ತು ಸಸ್ಯವರ್ಗಗಳು ತಮ್ಮ ಸುತ್ತಲಿನ ಸಜೀವ ಹಾಗೂ ನಿರ್ಜೀವ ಭಾಗಗಳ ನಡುವಿನ ಪರಸ್ಪರ ಸಂಬಂಧವನ್ನು 'ಜೀವಿಪರಿಸರವ್ಯವಸ್ಥೆ' ಎನ್ನುವರು. ಅಂದರೆ ಜೀವ ಪರಿಸ್ಥಿತಿಯ ಸಮಸ್ತ ಘಟಕಗಳೂ ಸೇರಿ ಹೊಂದಾಣಿಕೆಯಿಂದಿರುವುದನ್ನು ವಿವರಿಸುತ್ತದೆ.

ಜೀವಗೋಳದಲ್ಲಿ ಜೀವಿಪರಿಸರ ವ್ಯವಸ್ಥೆ ಅಥವಾ ಜೀವಿಪರಿಸರ ಸಮತೋಲನವಿಲ್ಲದಿದ್ದರೆ ಸಸ್ಯಗಳು, ಪ್ರಾಣಿಗಳು ಮತ್ತು ಅತಿ ಸೂಕ್ಷ್ಮಜೀವಿಗಳ ಸಮೂಹಗಳ ಅಸ್ತಿತ್ವವನ್ನು ಕಲ್ಪಿಸಲು ಅಸಾಧ್ಯ. ಪ್ರತಿಯೊಂದು ಜೀವಿಯೂ ಪ್ರಕೃತಿಯಲ್ಲಿ ಹೊಂದಾಣಿಕೆ ಮಾಡಿಕೊಂಡು ಜೀವಿಸುತ್ತವೆ.

**ಪರಿಸರ (Environment) :** ಎಲ್ಲಾ ಜೀವಿಗಳು, ಜೈವಿಕ ವಸ್ತುಗಳು ವಾಸಿಸುವ ಸುತ್ತಲಿನ ಸನ್ನಿವೇಶವನ್ನು ಪರಿಸರ ಎನ್ನುವರು. ಜೀವವಾಸಿಗಳ ಅಸ್ತಿತ್ವ ಹಾಗೂ ಬೆಳವಣಿಗೆಗೆ ಅನುಕೂಲಕರವಾದ ಪರಿಸ್ಥಿತಿಯನ್ನು ಪರಿಸರ ನಿರ್ಮಾಣಮಾಡುತ್ತದೆ. ಪರಿಸರದಲ್ಲಿ ಎರಡು ವಿಧಗಳಿವೆ. ಅವುಗಳೆಂದರೆ ಪ್ರಾಕೃತಿಕ ಅಥವಾ ಭೌಗೋಳಿಕ ಪರಿಸರ ಮತ್ತು ಸಾಂಸ್ಕೃತಿಕ ಅಥವಾ ಮಾನವ ನಿರ್ಮಿತ ಪರಿಸರ.

**ಪರಿಸರ ಮಾಲಿನ್ಯ:** ನಮ್ಮ ಸುತ್ತಮುತ್ತಲಿನಲ್ಲಾಗುವ ಅನಪೇಕ್ಷಣಿಯ ಬದಲಾವಣೆಯೇ 'ಪರಿಸರಮಾಲಿನ್ಯ'. ಇದು ಮಾನವನೂ ಸೇರಿದಂತೆ ಜೀವಿಗಳ ಮೇಲೆ ಹಾನಿಕಾರಕ ಪರಿಣಾಮಗಳನ್ನುಂಟು ಮಾಡುವುದು ಹಾಗೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಜೀವಮಂಡಲದ ಘಟಕಗಳನ್ನು ಬದಲಾಯಿಸುತ್ತದೆ.

ಇಂದು ಪರಿಸರ ಮಾಲಿನ್ಯವು ಜೀವಪರಿಸರವು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳಲ್ಲೊಂದಾಗಿದೆ. ಇದಕ್ಕೆ ಕಾರಣವಾದ ಅಂಶಗಳೆಂದರೆ ಅಧಿಕ ಜನಸಂಖ್ಯೆ, ಕೈಗಾರಿಕೀಕರಣ, ನಗರೀಕರಣ, ಸಂಪನ್ಮೂಲಗಳ ದುರ್ಬಳಕೆ, ಅತಿಯಾಗಿ ವಾಹನಗಳನ್ನು ಬಳಸುವುದು ಇತ್ಯಾದಿ. ಇವುಗಳು ಸಸ್ಯವರ್ಗ, ಪ್ರಾಣಿವರ್ಗ ಮತ್ತು ಮಾನವ ಜೀವಿಗಳ ಜೀವನಕ್ರಮದಲ್ಲಾಗುವ ಬದಲಾವಣೆಯ ಮೇಲೆ ಪ್ರಭಾವ ಬೀರುತ್ತವೆ.

©KTBS Not to be re published

ಮಾಲಿನ್ಯವನ್ನುಂಟು ಮಾಡುವ ವಸ್ತುಗಳಿಗೆ ಮಾಲಿನ್ಯಕಾರಕಗಳೆನ್ನುವರು. ಅವುಗಳಲ್ಲಿ ಸ್ವಾಭಾವಿಕ ಮತ್ತು ಮಾನವ ನಿರ್ಮಿತ ಮಾಲಿನ್ಯಕಾರಕಗಳೆಂದು ಎರಡು ವಿಧಗಳಿವೆ. ಸ್ವಾಭಾವಿಕ ಮಾಲಿನ್ಯಕಾರಕಗಳಿಗಿಂತ ಮಾನವ ನಿರ್ಮಿತ ಮಾಲಿನ್ಯಕಾರಕಗಳು ಹೆಚ್ಚು ಅಪಾಯಕಾರಿ ಹಾಗೂ ಹಾನಿಕಾರಕಗಳಾಗಿವೆ. ಹೊಗೆ, ವಿಷಾನಿಲ, ದೂಳು, ಚರಂಡಿನೀರು, ಕಸಕಡ್ಡಿಗಳು ಇತ್ಯಾದಿಗಳು ಗೋಚರ ಮಾಲಿನ್ಯಕಾರಕಗಳಾಗಿವೆ. ಅಗೋಚರ ಮಾಲಿನ್ಯಕಾರಕಗಳಾವುವೆಂದರೆ ಆಹಾರ, ಮಣ್ಣು ಮತ್ತು ನೀರಿನಲ್ಲಿ ಮಿಶ್ರಣವಾದ ವಿಷಯುಕ್ತ ರಾಸಾಯನಿಕ ವಸ್ತುಗಳು ಮತ್ತು ಬ್ಯಾಕ್ಟೀರಿಯಾಗಳು.

**ಮಾಲಿನ್ಯದ ವಿಧಗಳು :** ಪರಿಸರ ಮಾಲಿನ್ಯದಲ್ಲಿ ಹಲವಾರು ವಿಧಗಳಿದ್ದು ಅವುಗಳನ್ನು ಮಾಲಿನ್ಯಕಾರಕಗಳು ಮತ್ತು ಮಾಲಿನ್ಯದ ಸ್ವರೂಪದ ಆಧಾರದ ಮೇಲೆ ವಿಂಗಡಿಸಲಾಗಿದೆ. ಅವುಗಳೆಂದರೆ– ವಾಯುಮಾಲಿನ್ಯ, ಜಲಮಾಲಿನ್ಯ, ಮಣ್ಣಿನ ಮಾಲಿನ್ಯ ಮತ್ತು ಶಬ್ದಮಾಲಿನ್ಯ.

**1. ವಾಯುಮಾಲಿನ್ಯ :** ವಾಯುಮಾಲಿನ್ಯವನ್ನು ವಿಶ್ವ ಆರೋಗ್ಯ ಸಂಸ್ಥೆಯು (W.H.O) ಹೀಗೆ ಅರ್ಥೈಸಿದೆ "ಮಾನವನ ವಿವಿಧ ಚಟುವಟಿಕೆಗಳಿಂದ ಸಾಂದ್ರೀಕರಣಗೊಂಡ ಪದಾರ್ಥಗಳು ವಾಯುವಿನಲ್ಲಿ ಸೇರಿ ಮಾನವನ ಆರೋಗ್ಯ, ವನಸ್ಪತಿ ಮತ್ತು ಆಸ್ತಿ ಪಾಸ್ತಿಗಳ ಮೇಲೆ ಪರಿಣಾಮ ಬೀರಿ ಹಾನಿಯುಂಟುಮಾಡುವುದೇ ವಾಯುಮಾಲಿನ್ಯವಾಗಿದೆ". ವಾಯುಮಾಲಿನ್ಯಕಾರಕದ ಪ್ರಮುಖ ಮೂಲಗಳೆಂದರೆ **ಎ) ಪ್ರಾಕೃತಿಕ ಮೂಲಗಳು:** ಜ್ವಾಲಾಮುಖಿಗಳು, ಕಾಡ್ಗಿಚ್ಚು, ಬಾಹ್ಯಾಕಾಶ ದೂಳು ಇತ್ಯಾದಿ. **ಬಿ) ಮಾನವನಿರ್ಮಿತ ಮೂಲಗಳು :** ಕೈಗಾರಿಕೆಗಳಿಂದ, ಗೃಹಬಳಕೆಯಿಂದ, ವಾಹನಗಳಿಂದ, ಗಣಿಗಾರಿಕೆ, ಅಣುಶಕ್ತಿ ಘಟಕಗಳಿಂದ, ಅಣುಸ್ಫೋಟನೆ ಇತ್ಯಾದಿಗಳಿಂದ ಬರುವ ಅನಿಲಗಳು.

**ಬಹುಮುಖ್ಯವಾದ ವಾಯುಮಾಲಿನ್ಯಕಾರಕಗಳೆಂದರೆ:** ಇಂಗಾಲದ ಡೈಆಕ್ಸೈಡ್, ಇಂಗಾಲದ ಮಾನಾಕ್ಸೈಡ್, ಗಂಧಕದ ಡೈಆಕ್ಸೈಡ್, ಸಾರಜನಕದ ಆಕ್ಸೈಡ್‌ಗಳು, ಕ್ಲೋರೊಫ್ಲೋರೋ ಕಾರ್ಬನ್‌ಗಳು (CFC), ಹೈಡ್ರೋಕಾರ್ಬನ್‌ಗಳು ಇದರಿಂದಾಗುವ ಪ್ರಮುಖ ಪರಿಣಾಮಗಳಾವುವೆಂದರೆ, ಹವಾಮಾನ ಮತ್ತು ವಾಯುಗುಣ ಪರಿಸ್ಥಿತಿ ವ್ಯತ್ಯಾಸ, ಓಝೋನ್, ಕ್ಷೀಣತೆ, ಹಸಿರುಮನೆ ಪರಿಣಾಮ, ಜಾಗತಿಕ ತಾಪಮಾನ ಮಾನವನ ಆರೋಗ್ಯದ ಮೇಲೆ ಪರಿಣಾಮ, ಉಸಿರಾಟ ವ್ಯವಸ್ಥೆಯಲ್ಲಿ ತೊಂದರೆ, ಸಸ್ಯಗಳು ಹಾಗೂ ಪ್ರಾಣಿವರ್ಗಗಳ ಜೀವನದ ಮೇಲೆ ದುಷ್ಪರಿಣಾಮ ಮೊದಲಾದವುಗಳು.

ವಾಯುಮಾಲಿನ್ಯವನ್ನು ನಿಯಂತ್ರಿಸುವ ಕ್ರಮಗಳೆಂದರೆ– ಮಾಲಿನ್ಯಕಾರಕ ಅನಿಲಗಳನ್ನು ನಿಯಂತ್ರಿಸುವುದು, ವಾಹನಗಳಿಂದ ಬರುವ ಹೊಗೆಯನ್ನು ನಿಯಂತ್ರಿಸುವುದು, ಹೆಚ್ಚು ಮರಗಳನ್ನು ಬೆಳೆಸುವುದು. ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳನ್ನು ಬಳಸುವುದು, ಜನರಲ್ಲಿ ಅರಿವುಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವುದು, ಕಾನೂನಿನಿಂದ ನಿಯಂತ್ರಿಸುವುದು, ಸಾಕ್ಷರತೆ ಮತ್ತು ಶಿಕ್ಷಣ.

**2. ಜಲಮಾಲಿನ್ಯ :** ಜಲಮಾಲಿನ್ಯವೆಂದರೆ ಮಾನವ ಮತ್ತು ಜಲಚರಗಳ ಜೀವನೋಪಾಯದ ಮೇಲೆ ಅನರ್ಥ ಪರಿಣಾಮವನ್ನುಂಟು ಮಾಡುವಷ್ಟು ನೀರಿನ ಭೌತಿಕ, ರಾಸಾಯನಿಕ ಮತ್ತು ಜೈವಿಕ ಗುಣಲಕ್ಷಣಗಳ ಬದಲಾವಣೆ.

**ಜಲಮಾಲಿನ್ಯದ ಪ್ರಮುಖ ಮೂಲಗಳಾವುವೆಂದರೆ, ನೈಸರ್ಗಿಕ** ಮೂಲಗಳಲ್ಲಿ ಮಣ್ಣಿನ ಸವೆತ, ಭೂಕುಸಿತಗಳು ಜ್ವಾಲಾಮುಖಿ ಸ್ಫೋಟನೆ, ಸಸ್ಯಗಳು ಮತ್ತು ಪ್ರಾಣಿಗಳು ಕ್ಷಯಿಸುವ ಮತ್ತು ಕೊಳೆಸುವ ಪ್ರಕ್ರಿಯೆಗಳು ಸೇರುತ್ತವೆ. **ಮಾನವ ನಿರ್ಮಿತ** ಮೂಲಗಳಲ್ಲಿ ಕೈಗಾರಿಕೆಗಳ ತ್ಯಾಜ್ಯವಸ್ತು, ನಗರಗಳ ತ್ಯಾಜ್ಯವಸ್ತು, ಗೃಹತಾಜ್ಯವಸ್ತು, ಕೃಷಿತ್ಯಾಜ್ಯವಸ್ತುಗಳು, ತೈಲಸೋರುವಿಕೆ, ಅಣುತ್ಯಾಜ್ಯ, ತೈಲಬಾವಿಗಳನ್ನು ಸಾಗರವಲಯದಲ್ಲಿ ಕೊರೆಯುವುದು, ಶಾಖ ವಿದ್ಯುತ್ ಕೇಂದ್ರಗಳ ತ್ಯಾಜ್ಯವಸ್ತುಗಳು ಇತ್ಯಾದಿ ಜಲಮಾಲಿನ್ಯವನ್ನುಂಟು ಮಾಡುತ್ತವೆ.

©KTBS Not to be re-published

ಜಲಮಾಲಿನ್ಯದಲ್ಲಿ ಅನೇಕ ವಿಧಗಳಿವೆ. ಅವುಗಳೆಂದರೆ – ಸಮುದ್ರ ಮತ್ತು ಸಾಗರ ಮಾಲಿನ್ಯ ಅಂತರ್ಜಲ ಮಾಲಿನ್ಯ, ನದಿ ನೀರಿನ ಮಾಲಿನ್ಯ, ಸರೋವರ ನೀರಿನ ಮಾಲಿನ್ಯ. ಎಂದು ಗುರುತಿಸಬಹುದಾಗಿದೆ.

ಜಲಮಾಲಿನ್ಯದಿಂದಾಗುವ ಪರಿಣಾಮಗಳೆಂದರೆ – ಮಲಿನ ನೀರಿನಿಂದ ಹರಡುವ ಕಾಯಿಲೆಗಳು ಮತ್ತು ಸಾಂಕ್ರಾಮಿಕ ರೋಗಗಳಾದ ಕಾಲರಾ, ಟೈಫಾಯಿಡ್, ಕ್ಷಯ, ಕಾಮಾಲೆ, ಆಮಶಂಕೆ, ಅತಿಸಾರ ಇತ್ಯಾದಿ; ಜಲಚರಗಳ ಸಾವಿಗೆ ಕಾರಣವಾಗುತ್ತದೆ. ಮಲಿನಗೊಂಡ ನೀರನ್ನು ನೀರಾವರಿಗೆ ಬಳಸಿದರೆ ಬೆಳೆಗಳಿಗೆ ಹಾನಿಯಾಗುತ್ತದೆ.

ಜಲಮಾಲಿನ್ಯ ನಿಯಂತ್ರಣ ಕ್ರಮಗಳೆಂದರೆ– ಕೈಗಾರಿಕಾ ತ್ಯಾಜ್ಯವಸ್ತುಗಳನ್ನು ಸಂಸ್ಕರಿಸುವುದು, ಕುಡಿಯುವ ನೀರಿನ ಮೂಲಗಳನ್ನು ಸ್ವಚ್ಛಗೊಳಿಸುವುದು, ಚರಂಡಿ ನೀರನ್ನು ಸಂಸ್ಕರಿಸುವುದು, ಕಸದ ರಾಶಿಗಳನ್ನು ಜಲರಾಶಿಗಳಲ್ಲಿ ಹಾಕುವುದನ್ನು ಜನರು ನಿಲ್ಲಿಸಬೇಕು.

**3. ಮಣ್ಣಿನ ಮಾಲಿನ್ಯ :** ಸ್ವಾಭಾವಿಕ ಅಥವಾ ಮಾನವ ನಿರ್ಮಿತ ಮೂಲಗಳಿಂದ ಮಣ್ಣಿನ ಫಲವತ್ತತೆ, ಗುಣಮಟ್ಟ ಹಾಳಾಗುವುದನ್ನು ಮಣ್ಣಿನ ಮಾಲಿನ್ಯವೆನ್ನುವರು. ಮಣ್ಣಿನ ಸವೆತದ ತೀವ್ರತೆ ಸಸ್ಯಪೋಷಕ ಆಹಾರದ ಕುಸಿತ, ಮಣ್ಣಿನಲ್ಲಿರುವ ಅತಿಸೂಕ್ಷ್ಮ ಜೀವಾಣುಗಳು ಕಡಿಮೆಯಾಗುವುದು ಇತ್ಯಾದಿ. ಮಣ್ಣಿನ ಮಾಲಿನ್ಯದ ಮೂಲಗಳಾವುವೆಂದರೆ – ಕೈಗಾರಿಕೆ ಮತ್ತು ಗಣಿಗಾರಿಕೆ ತ್ಯಾಜ್ಯವಸ್ತುಗಳು, ಗೃಹಬಳಕೆ ಮತ್ತು ನಗರ ತ್ಯಾಜ್ಯವಸ್ತುಗಳು, ಕೃಷಿ ತ್ಯಾಜ್ಯವಸ್ತುಗಳು, ಅಣುತ್ಯಾಜ್ಯವಸ್ತುಗಳು.

**ಮಣ್ಣಿನ ಮಾಲಿನ್ಯದ ಪರಿಣಾಮಗಳು :** ಮಣ್ಣಿನ ಫಲವತ್ತತೆ ಕ್ಷೀಣಿಸುವುದು, ಫಲವತ್ತಾದ ಭೂಮಿ ಪಾಳುಭೂಮಿಯಾಗುತ್ತದೆ, ಮಣ್ಣಿನಲ್ಲಿರುವ ಸೂಕ್ಷ್ಮ ಜೀವಿಗಳು ನಾಶವಾಗುತ್ತವೆ.

**ಮಣ್ಣಿನ ಮಾಲಿನ್ಯದ ನಿಯಂತ್ರಣ ಕ್ರಮಗಳು :** ರಸಗೊಬ್ಬರಗಳು, ಕೀಟನಾಶಕಗಳು, ಕಳೆನಾಶಕಗಳು ಮುಂತಾದವುಗಳನ್ನು ವಿವೇಕತೆಯಿಂದ ಬಳಸುವುದು ಮತ್ತು ನಿಯಂತ್ರಿಸುವುದು, ಕೈಗಾರಿಕೆ ಮತ್ತು ನಗರ ತ್ಯಾಜ್ಯವಸ್ತುಗಳನ್ನು ಸಂಸ್ಕರಿಸಿ ಅನಂತರ ವ್ಯವಸಾಯಕ್ಕೆ ಬಳಸುವುದು, ಸಮರ್ಪಕವಾಗಿ ಭೂಬಳಕೆ ಹಾಗೂ ಬೆಳೆಗಳ ಕ್ರಮವನ್ನು ಅನುಸರಿಸುವುದು, ಮಣ್ಣಿನ ಸವೆತ ನಿಯಂತ್ರಿಸುವುದು, ಗಿಡಮರಗಳನ್ನು ಬೆಳೆಸುವುದು, ಮಣ್ಣಿನ ಸರಿಯಾದ ಬಳಕೆ ಮತ್ತು ಮಣ್ಣಿನ ನಿರ್ವಹಣೆಯ ಬಗ್ಗೆ ಅರಿವುಂಟುಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

**4. ಶಬ್ದಮಾಲಿನ್ಯ :** ಪ್ರತಿಕೂಲಕರ ಪರಿಣಾಮ ಬೀರುವ ಅನಗತ್ಯವಾದ ಶಬ್ದವು ವಾಯುಮಂಡಲದಲ್ಲಿ ಹರಡಿ ಆರೋಗ್ಯಕ್ಕೆ ಹಾನಿಯುಂಟುಮಾಡುವುದನ್ನು ಶಬ್ದಮಾಲಿನ್ಯ ಎನ್ನುವರು.

**ಶಬ್ದಮಾಲಿನ್ಯದ ಮೂಲಗಳಾವುವೆಂದರೆ :** ನೈಸರ್ಗಿಕ ಮೂಲಗಳು– ಗುಡುಗು, ಸಿಡಿಲು, ಮಿಂಚು, ಅತ್ಯಧಿಕಮಳೆ, ಆಲಿಕಲ್ಲು ಮಳೆ, ಜಲಪಾತಗಳು, ಸಮುದ್ರದ ಅಲೆಗಳು. ಮಾನವ ನಿರ್ಮಿತ ಮೂಲಗಳು – ಕೈಗಾರಿಕೆಗಳ ಶಬ್ದ, ವಾಹನಗಳ ಶಬ್ದ, ವಿಮಾನಗಳ ಶಬ್ದ, ಗಣಿಗಾರಿಕೆ, ನಗರಪ್ರದೇಶಗಳ ಶಬ್ದ. ಇತ್ಯಾದಿ.

**ಶಬ್ದಮಾಲಿನ್ಯದ ಪರಿಣಾಮಗಳೆಂದರೆ :** ತಾತ್ಕಾಲಿಕ ಅಥವಾ ಶಾಶ್ವತವಾಗಿ ಕಿವಿ ಕೇಳಿಸದಿರುವುದು. ತಲೆನೋವು, ಆಯಾಸ, ಹೃದಯ ಸಂಬಂಧಿ ಕಾಯಿಲೆಗಳು. ಮಾನಸಿಕ ಅಸ್ವಸ್ಥತೆ, ದೈಹಿಕ ಬದಲಾವಣೆ. ನಿದ್ರಾಭಂಗ.

**ಶಬ್ದಮಾಲಿನ್ಯವನ್ನು ತಡೆಗಟ್ಟುವ ಕ್ರಮಗಳು :** ವಾಸಸ್ಥಳದಿಂದ ದೂರದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದು, ಕಾರ್ಖಾನೆಗಳಲ್ಲಿ ಶಬ್ದ ನಿರೋಧಕ ಗೋಡೆಗಳನ್ನು ನಿರ್ಮಿಸುವುದು, ಅನಗತ್ಯವಾಗಿ ಸೈರನ್, ಹಾರನ್ ಮತ್ತು ಶಬ್ದಮಾಡುವ ಉಪಕರಣಗಳನ್ನು ಬಳಸುವುದನ್ನು ನಿಲ್ಲಿಸುವುದು, ವಿಮಾನ ನಿಲ್ದಾಣಗಳನ್ನು

©KTBS Not to be republished

ನಗರವಲಯದಿಂದ ದೂರ ನಿರ್ಮಿಸುವುದು, ಕೈಗಾರಿಕಾ ಕಾರ್ಮಿಕರುಗಳಿಗೆ ಶಬ್ದ ನಿಯಂತ್ರಕಗಳನ್ನು ಒದಗಿಸುವುದು, ಶಬ್ದವುಂಟುಮಾಡುವ ವಾಹನಗಳನ್ನು ಪರಿಶೀಲಿಸಿ ಕ್ರಮಕೈಗೊಳ್ಳುವುದು.

**ಜಾಗತಿಕ ತಾಪಮಾನ (Global Warming) :** ಭೂಮಿಯ ಉಷ್ಣಾಂಶವು ದಿನಗಳು ಕಳೆದಂತೆ ನಿಧಾನವಾಗಿ ಹೆಚ್ಚುತ್ತಿದೆ. ಇತ್ತೀಚಿನ ಕೆಲವು ವರ್ಷಗಳಿಂದ ವಾಯುಮಂಡಲದ ಉಷ್ಣಾಂಶವು ಹೆಚ್ಚಾಗುತ್ತಿದೆ. ಇದನ್ನೇ 'ಜಾಗತಿಕ ತಾಪಮಾನ' ವೆಂದು ಕರೆಯುವರು. ಇದಕ್ಕೆ ಹಸಿರು ಮನೆಯ ಪರಿಣಾಮ ಕಾರಣವಾಗಿದ್ದು ಇದರಿಂದ ವಾಯುಗುಣದ ವಲಯಗಳು ಬದಲಾವಣೆ ಹೊಂದುತ್ತಿವೆ, ಹಿಮನದಿಗಳು ಕರುಗುತ್ತಿವೆ ಮತ್ತು ಸಮುದ್ರದ ನೀರಿನ ಮಟ್ಟವು ಹೆಚ್ಚುತ್ತಿದೆ. ಉದಾಹರಣೆಗೆ ಹಿಮಾಲಯ ಆರ್ಕ್ಟಿಕ್ ಹಾಗೂ ಅಂಟಾರ್ಕ್ಟಿಕಗಳಲ್ಲಿ ಈಗಾಗಲೇ ಹಿಮರಾಶಿಯು ಕರುಗುವುದು ಹೆಚ್ಚಾಗಿದೆ.

**ಹಸಿರು ಮನೆಯ ಪರಿಣಾಮ (Green House Effect):** ಭೂಮಿಯು ಸೂರ್ಯನಿಂದ ಶಕ್ತಿಯನ್ನು ವಿಕಿರಣದ ರೂಪದಲ್ಲಿ ಪಡೆಯುವುದು. ಇದೇ ರೀತಿಯಲ್ಲಿ ಭೂಮಿಯಿಂದಲೂ ಉಷ್ಣಾಂಶವು ಮರುವಿಕಿರಣ ರೂಪದಲ್ಲಿ ಹೊರಬೀಳುವುದು. ಈ ಕ್ರಿಯೆಗಳಿಂದಾಗಿಯೇ ಭೂಮಿಯು ಪಡೆಯುವ ಹಾಗೂ ಬಿಡುಗಡೆಮಾಡುವ ಶಕ್ತಿಯ ನಡುವೆ ಸಮತೋಲನವಿರುವುದು. ಇತ್ತೀಚೆಗೆ ಜೀವಾವಶೇಷ ಇಂಧನಗಳ ಬಳಕೆಯಿಂದ ಹಸಿರುಮನೆ ಅನಿಲಗಳ ಬಿಡುಗಡೆಯೂ ಸಹ ನಿರಂತರವಾಗಿ ಹೆಚ್ಚುತ್ತಿದೆ. ಇಂಗಾಲದ ಡೈ ಆಕ್ಸೈಡ್ ಮತ್ತು ಇತರೆ ಹಸಿರು ಮನೆ ಅನಿಲಗಳು ಭೂಮಿಯಿಂದ ಬಿಡುಗಡೆಯಾಗುವ ಉಷ್ಣಾಂಶವನ್ನು ಹೀರಿ ಸಂಗ್ರಹಿಸುವುದರಿಂದ ವಾಯುಮಂಡಲ ಉಷ್ಣಾಂಶವು ಹೆಚ್ಚುವುದು. ಇದನ್ನೇ 'ಹಸಿರು ಮನೆಯ ಪರಿಣಾಮ' ವೆಂದು ಕರೆಯುವರು.

**ಓಜೋನ್ ಪದರ ಕ್ಷೀಣತೆ: (Ozone Depletion):** ವಾಯುಮಂಡಲದ ಸಮೋಷ್ಣ ವಲಯದಲ್ಲಿ ತೆಳುವಾದ ಓಜೋನ್ ಅನಿಲದ ಪದರವಿರುವುದು. ಇದು ಸೂರ್ಯನಿಂದ ಪ್ರಸರಿಸುವ ಅತ್ಯಂತ ಅಪಾಯಕಾರಿಯಾದ ಅಲ್ಟ್ರಾವೈಲೆಟ್ (UV) ಕಿರಣಗಳನ್ನು ಹೀರಿಕೊಂಡು ಭೂಮಿಯ ಮೇಲಿನ ಎಲ್ಲಾ ಬಗೆಯ ಜೀವರಾಶಿಗಳನ್ನು ರಕ್ಷಿಸಿದೆ. ಇತ್ತೀಚಿನ ವರ್ಷಗಳಲ್ಲಿ ಏರ್‌ಕಂಡಿಷನರ್, ರೆಫ್ರಿಜಿರೇಟರ್, ಸ್ಪ್ರೇಯರ್, ಸುಗಂಧದ್ರವ್ಯಗಳು ಮೊದಲಾದುವುಗಳ ಮಿತಿಮೀರಿದ ಬಳಕೆಯಿಂದ ಕ್ಲೋರೋ ಫ್ಲೋರೋ ಕಾರ್ಬನ್ (C.F.C) ಗಳು ಹೆಚ್ಚಾಗಿ ಬಿಡುಗಡೆಗೊಂಡು ವಾಯುಮಂಡಲದ ಓಜೋನ್ ಪದರವನ್ನು ನಾಶಪಡಿಸುತ್ತಿವೆ. ಈಗಾಗಲೇ ಅಂಟಾರ್ಕ್ಟಿಕಾದ ವಾಯುಮಂಡಲದಲ್ಲಿ ಓಜೋನ್ ಪದರವು ನಾಶವಾಗಿರುವುದನ್ನು ಕಂಡುಹಿಡಿಯಲಾಗಿದೆ. ಈ ರೀತಿ ಓಜೋನ್ ತೆಳುವಾಗುವಿಕೆಯು ಓಜೋನ್ ರಂಧ್ರ ಉಂಟುಮಾಡುತ್ತಿದೆ. ಇದನ್ನು ತಡೆಗಟ್ಟುವುದು ಇಂದಿನ ಮತ್ತು ಮುಂದಿನ ಜನಾಂಗಗಳು ಬದುಕಲು ಅತ್ಯಾವಶ್ಯಕವಾಗಿದೆ.

**ಆಮ್ಲ ಮಳೆ: (Acid Rain):** ಮಳೆಯ ಹನಿಗಳು ಮಾಲಿನ್ಯಗೊಂಡ ವಾಯುಮಂಡಲ ಮೂಲಕ ಬೀಳುವಾಗ ಅದರಲ್ಲಿ ಸಲ್ಫ್ಯೂರಿಕ್ ಆಮ್ಲ ಮತ್ತು ಇಂಗಾಲದ ಮಾನಾಕ್ಸೈಡ್ ಮುಂತಾದವು ವಿಲೀನಗೊಂಡು ಬೀಳುವ ಮಳೆಯನ್ನು ಆಮ್ಲ ಮಳೆ ಎನ್ನುವರು. ಈ ರೀತಿಯ ಮಳೆ ಅತ್ಯಂತ ವಿಷಕಾರಿಯಾಗಿದ್ದು, ಜಲಚರಗಳ ನಾಶಕ್ಕೆ ಕಾರಣವಾಗುವುದು. ಅಲ್ಲದೆ ಆಮ್ಲ ಮಳೆಯಿಂದ ಅರಣ್ಯ, ಬೆಳೆ, ಕಟ್ಟಡ, ಸ್ಮಾರಕ ಮೊದಲಾದವು ಹಾಳಾಗುತ್ತವೆ.

ಆಮ್ಲ ಮಳೆಯನ್ನು 'ಲೇಕ್‌ಕಿಲ್ಲರ್' ಎಂದು ಕರೆಯುತ್ತಾರೆ. ಪೋಲೆಂಡ್, ಜೆಕ್‌ಗಣರಾಜ್ಯ ಮತ್ತು ಆಗ್ನೇಯ ಜರ್ಮನಿಯ ಭಾಗಗಳು ಪ್ರಪಂಚದಲ್ಲೇ ಅತಿ ಹೆಚ್ಚು ಆಮ್ಲ ಮಳೆಯ ಪರಿಣಾಮಕ್ಕೆ ಒಳಪಟ್ಟಿರುವ ಪ್ರದೇಶಗಳಾಗಿರುವುದರಿಂದ ಇವುಗಳನ್ನು "ಕಪ್ಪು ತ್ರಿಕೋನ" ಎನ್ನುವರು.

**ಜೀವ ವೈವಿಧ್ಯತೆ:** ಒಂದು ಭೂ ಭಾಗದಲ್ಲಿ ಕಂಡುಬರುವ ಎಲ್ಲಾ ಬಗೆಯ ಸಸ್ಯಗಳು ಹಾಗೂ ಪ್ರಾಣಿ ಪ್ರಭೇದಗಳನ್ನು ಅಲ್ಲಿಯ 'ಜೀವ ವೈವಿಧ್ಯತೆ' ಯೆಂದು ಕರೆಯುವರು. ಜೀವಿ ಪ್ರಭೇದಗಳ ಸಂಖ್ಯೆಯು

©KTBS Not to be republished

ಜೀವ ವೈವಿಧ್ಯತೆಯನ್ನು ಪ್ರತಿಬಿಂಬಿಸುವುದು. ಜೀವವೈವಿಧ್ಯತೆ ಅತ್ಯಂತ ಪ್ರಮುಖವಾದುದು. ಏಕೆಂದರೆ ಇದು ಪರಿಸರದ ಗುಣಮಟ್ಟವನ್ನು ಕಾಯ್ದುಕೊಳ್ಳಲು ಮಾತ್ರವಲ್ಲದೆ ಮಾನವನ ಉಳಿವಿಗೂ ಸಹ ಅಗತ್ಯವಾಗಿದೆ.

ಅತ್ಯಂತ ಅಪರೂಪವಾಗಿರುವ ಸಸ್ಯ ಹಾಗೂ ಪ್ರಾಣಿ ಪ್ರಭೇದಗಳನ್ನು ಕಾಪಾಡಲು ಜೀವ ವೈವಿಧ್ಯತೆಯ ಸಂರಕ್ಷಣೆ ಅಗತ್ಯ. ಈ ಜೀವಿಗೆ ಅಗತ್ಯವಾದ ಒಳ್ಳೆಯ ಪರಿಸರದ ಹಿನ್ನೆಲೆಯನ್ನು ದೊರಕಿಸಿಕೊಡುವುದು ಅವುಗಳ ಸಂರಕ್ಷಣೆಯ ಮುಖ್ಯ ವಿಧಾನವಾಗಿದೆ.

ಭೂಮಿಯು ಸೌರವ್ಯೂಹದಲ್ಲಿನ ಜೀವಿಗಳನ್ನೊಳಗೊಂಡಿರುವ ಏಕೈಕ ಗ್ರಹ. ಮಾನವನ ವಿವಿಧ ಚಟುವಟಿಕೆಗಳಿಂದ ಭೂಮಿಯ ಮೇಲೆ ಅನೇಕ ರೀತಿಯ ಬದಲಾವಣೆಗಳು, ತೊಂದರೆಗಳು, ಹಾನಿಕಾರಕ ಅಂಶಗಳು ಕಂಡುಬರುತ್ತಿದ್ದು ಮುಂಬರುವ ವರ್ಷಗಳಲ್ಲಿ ನಮ್ಮ ಭೂಮಿಯ ಮೇಲಿನ ಜೀವಿಗಳ ಗುಣಮಟ್ಟ ಹಾಳಾಗುತ್ತದೆ.

ನಮ್ಮ ಭೂಮಿಯನ್ನು ‘ರಕ್ಷಿಸಿ’ ಹಾಗೂ ‘ಮಾತೃಗ್ರಹ’ವನ್ನು ಉಳಿಸಿಕೊಳ್ಳಲು ಜನರಿಗೆ ಶಿಕ್ಷಣನೀಡುವುದು, ಪರಿಸರದ ಬಗ್ಗೆ ಅರಿವುನ್ನುಂಟುಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಸಂಪನ್ಮೂಲಗಳನ್ನು ಸರಿಯಾಗಿ ಬಳಸುವುದು, ಮಾಲಿನ್ಯ ನಿಯಂತ್ರಿಸುವುದರ ಬಗ್ಗೆ ಅರಿವು ನೀಡುವ ಶಿಕ್ಷಣ, ಉಪನ್ಯಾಸ, ಆಶುಭಾಷಣ ಸ್ಪರ್ಧೆ, ಚಲನಚಿತ್ರಗಳ ಸಮ್ಮೇಳನಗಳನ್ನು ಆಗಾಗ್ಗೆ ನಡೆಸುವುದರ ಮೂಲಕ ಜಾಗೃತಿ ಮೂಡಿಸಿ ನಮ್ಮ ಮಾತೃಭೂಮಿಯನ್ನು ಸಂರಕ್ಷಿಸುವುದು ಅಗತ್ಯವಾಗಿದೆ.



**‘ಭೂಮಿಯನ್ನು ರಕ್ಷಿಸಿ’ ‘ಮಾತೃಗ್ರಹವನ್ನು ಉಳಿಸಿ’**

©KTBS Not to be republished

## ಅಭ್ಯಾಸಗಳು

**I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಜೀವಗೋಳವೆಂದರೇನು?
2. 'ಜೀವಿ ಪರಿಸರ ಶಾಸ್ತ್ರ' ವನ್ನು ವ್ಯಾಖ್ಯಾನಿಸಿ.
3. ಪರಿಸರ ಮಾಲಿನ್ಯದ ವಿಧಗಳನ್ನು ಹೆಸರಿಸಿ.
4. ಜಲಮಾಲಿನ್ಯವನ್ನು ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳಾವುವು?
5. ಜೀವಿ ವೈವಿಧ್ಯತೆ ಎಂದರೇನು?

**II. ಈ ಕೆಳಗಿನವುಗಳನ್ನು ಅರ್ಥೈಸಿ.**

1. ಜೀವಗೋಳ.
2. ಪರಿಸರ ಅಸಮತೋಲನ.
3. ಜಾಗತಿಕ ತಾಪಮಾನ.
4. ಹಸಿರುಮನೆ ಪರಿಣಾಮ.
5. ಓಜೋನ್ ತೆಳುವಾಗುವಿಕೆ.
6. ಆಮ್ಲಮಳೆ.

**III. ನೆನಪಿನಲ್ಲಿಡಬೇಕಾದ ಅಂಶಗಳು.**

1. ಮಾಲಿನ್ಯ
2. ಪರಿಸರ ದಿನಾಚರಣೆ
3. ವಾಯುಗುಣ ಬದಲಾವಣೆ
4. ಕ್ಲೋರೋಫ್ಲೋರೋ ಕಾರ್ಬನ್ (CFC)
5. ಭೂ ಸಮಯ ಮತ್ತು ಭೂ ದಿನಾಚರಣೆ
6. ಭೂಮಿಯನ್ನು ರಕ್ಷಿಸಿ.

**IV. ಚಟುವಟಿಕೆ.**

1. ಜಾಗತಿಕ ತಾಪಮಾನದ ಹೆಚ್ಚಳದಿಂದಾಗುವ ಪರಿಣಾಮದ ಬಗ್ಗೆ ಮಾಹಿತಿ ಸಂಗ್ರಹಿಸಿ ಮತ್ತು ನಿಯಂತ್ರಿಸಲು ಕೈಗೊಳ್ಳಬೇಕಾದ ಕ್ರಮಗಳನ್ನು ಪಟ್ಟಿ ಮಾಡಿರಿ.

*****

©KTBS Not to be republished

## ಅಧ್ಯಾಯ – 3

# ರಾಷ್ಟ್ರೀಯ ಆದಾಯ ಮತ್ತು ಭಾರತದ ಅರ್ಥವ್ಯವಸ್ಥೆಯ ವಿವಿಧ ವಲಯಗಳು

### ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ರಾಷ್ಟ್ರೀಯ ಆದಾಯ ಮತ್ತು ತಲಾ ಆದಾಯದ ಪರಿಕಲ್ಪನೆಗಳು.*
- *ವಿವಿಧ ವಲಯಗಳಿಂದ ಭಾರತದ ಅರ್ಥವ್ಯವಸ್ಥೆಯ ಪ್ರಗತಿಯ ವಿವರಣೆ.*
- *ಭಾರತದಲ್ಲಿ ಸಣ್ಣ ಕೈಗಾರಿಕೆಗಳ ಮಹತ್ವ.*
- *ಕೃಷಿ ಬಿಕ್ಕಟ್ಟಿಗೆ ಕಾರಣಗಳು ಮತ್ತು ಅದಕ್ಕೆ ಪರಿಹಾರಾತ್ಮಕ ಕ್ರಮಗಳು.*

### ರಾಷ್ಟ್ರೀಯ ಮತ್ತು ತಲಾ ಆದಾಯ

ನಾವೆಲ್ಲರೂ ಕೆಲಸ ಮಾಡುವುದು ಆದಾಯವನ್ನು ಗಳಿಸಲು. ನಾವು ಗಳಿಸುವ ಆದಾಯವು ನಾವು ಶ್ರೀಮಂತರೋ ಅಥವಾ ಬಡವರೋ ಎಂಬುದನ್ನು ಸೂಚಿಸುತ್ತದೆ. ಇದು ಇಡೀ ದೇಶಕ್ಕೂ ಅನ್ವಯಿಸುತ್ತದೆ. ರಾಷ್ಟ್ರದ ಆದಾಯ ಅಧಿಕವಿದ್ದರೆ, ರಾಷ್ಟ್ರವು ಸಮೃದ್ಧಿಯಿಂದ ಇದ್ದು, ರಾಷ್ಟ್ರದ ಆದಾಯ ಕಡಿಮೆ ಇದ್ದರೆ ಅದು ಬಡತನದಿಂದ ಕೂಡಿರುತ್ತದೆ. ಕೆಲವು ರಾಷ್ಟ್ರಗಳು ಏಕೆ ಬಡತನದಿಂದ ನರಳುತ್ತಿವೆ (ಉದಾ: ಕೀನ್ಯಾ) ಮತ್ತು ಕೆಲವು ರಾಷ್ಟ್ರಗಳು ಶ್ರೀಮಂತ ಹೇಗೆ? (ಉದಾ : ಅಮೆರಿಕಾ) ಎಂದು ನೀವು ಚಿಂತನೆ ಮಾಡಿರಲೂಬಹುದು. ಹಾಗೆಯೇ ಕೆಲ ರಾಷ್ಟ್ರಗಳು ತೀವ್ರವಾಗಿ ಬೆಳೆಯುತ್ತಿವೆ (ಉದಾ: ಚೀನಾ) ಮತ್ತೆ ಇನ್ನು ಕೆಲವು ನಿಧಾನಗತಿಯಲ್ಲಿ ಬೆಳೆಯುತ್ತಿವೆ (ಉದಾ: ಆಫ್ರಿಕದ ರಾಷ್ಟ್ರಗಳು). ಆಫ್ರಿಕದ ರಾಷ್ಟ್ರಗಳು ವಿಪುಲ ನೈಸರ್ಗಿಕ ಸಂಪನ್ಮೂಲ ಹೊಂದಿದ್ದರೂ ಅವು ಕಡಿಮೆ ಅಭಿವೃದ್ಧಿಯನ್ನು ಹೊಂದಿವೆ. ಆದುದರಿಂದ ಅಭಿವೃದ್ಧಿ ಮಟ್ಟವು ಕೇವಲ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಅವಲಂಬಿತವಾಗಿರದೇ, ಅವುಗಳಿಂದ ಉಪಯುಕ್ತ ಸರಕುಗಳು ಮತ್ತು ಸೇವೆಗಳನ್ನು ಉತ್ಪಾದಿಸಿ, ಆದಾಯ ಮತ್ತು ಸಂಪತ್ತು ಹೇಗೆ ಸೃಷ್ಟಿಯಾಗುತ್ತದೆ ಎಂಬುದು ಪ್ರಮುಖ ನಿರ್ಧಾರಕವಾಗುತ್ತದೆ.

ರಾಷ್ಟ್ರೀಯ ಆದಾಯವು ಒಂದು ರಾಷ್ಟ್ರದಲ್ಲಿ ಉತ್ಪಾದಿಸಿದ ಸರಕುಗಳ ಮತ್ತು ಸೇವೆಗಳ ಒಟ್ಟು ಮೌಲ್ಯವನ್ನು ಸೂಚಿಸುತ್ತದೆ. ಸೈಮನ ಕುಜನೆಟ್ಸ ವ್ಯಾಖ್ಯಾನಿಸುವಂತೆ, ರಾಷ್ಟ್ರೀಯ ಆದಾಯವು, "ಒಂದು ವರ್ಷದ ಅವಧಿಯಲ್ಲಿ ರಾಷ್ಟ್ರದ ಉತ್ಪಾದನಾ ವ್ಯವಸ್ಥೆಯಿಂದ ಅನುಭೋಗಿಗಳ ಕೈಗಳಿಗೆ ಪ್ರವಹಿಸುವ ಅಂತಿಮ ಸರಕುಗಳ ಮತ್ತು ಸೇವೆಗಳ ನಿವ್ವಳ ಉತ್ಪನ್ನವಾಗಿದೆ". ಅಂತಿಮವಾಗಿ ಅನುಭೋಗಿಗಳು ಆದಾಯವನ್ನು ಪಡೆಯುವವರಾಗಿರುವುದರಿಂದ, ಒಂದು ವರ್ಷದಲ್ಲಿ ಆರ್ಥಿಕ ಚಟುವಟಿಕೆಗಳಿಂದ ಪಡೆದ ಒಟ್ಟು ಆದಾಯವನ್ನು ರಾಷ್ಟ್ರೀಯ ಆದಾಯ ಎನ್ನುತ್ತಾರೆ. ಇದು ಎಲ್ಲ ವ್ಯಕ್ತಿಗಳಿಗೆ ನೀಡಿದ ಕೂಲಿ, ಬಡ್ಡಿ, ಗೇಣಿ ಮತ್ತು ಲಾಭ ಪಾವತಿಯಾಗಿದೆ. ಸ್ವಾಭಾವಿಕವಾಗಿ, ರಾಷ್ಟ್ರೀಯ ಆದಾಯವು ರಾಷ್ಟ್ರದ ಉತ್ಪಾದನಾ ವ್ಯವಸ್ಥೆಯ ಗಾತ್ರ, ಅನುಭೋಗದ ಗಾತ್ರ, ಉಳಿತಾಯ, ಮತ್ತು ವಿವಿಧ ವಲಯಗಳಲ್ಲಿ ಮಾಡಿದ ಹೂಡಿಕೆಯಲ್ಲದೇ ಇತರ ರಾಷ್ಟ್ರಗಳೊಂದಿಗಿನ ವ್ಯಾಪಾರ–ವ್ಯವಹಾರಗಳನ್ನು ಸೂಚಿಸುತ್ತದೆ. ಆದಾಗ್ಯೂ, ರಾಷ್ಟ್ರೀಯ ಆದಾಯದ ಮಾಪನವು ವ್ಯಕ್ತಿಯ ಆದಾಯದ ಮಾಪನದಂತಿರದೇ ಬಹು ಕಷ್ಟಕರವಾಗಿರುತ್ತದೆ ಮತ್ತು ಸಂಕೀರ್ಣ ವಿಧಾನವನ್ನು ಒಳಗೊಂಡಿರುತ್ತದೆ. ರಾಷ್ಟ್ರೀಯ ಆದಾಯದ ಪ್ರಮಾಣ ಮತ್ತು ದರ ಬೆಳವಣಿಗೆಯ ದರವನ್ನು ಮಾಪನ ಮಾಡುವುದರಿಂದ ಈ ಕೆಳಗಿನವುಗಳನ್ನು ಅವಲೋಕಿಸಬಹುದು:

©KTBS Not to be republished

i. ಆರ್ಥಿಕ ಬೆಳವಣಿಗೆಯ ದರ

ii. ಜೀವನ ಮಟ್ಟದಲ್ಲಿನ ಬದಲಾವಣೆ

iii. ಆದಾಯ ಹಂಚಿಕೆಯಲ್ಲಿನ ಬದಲಾವಣೆ

### ತಲಾ ಆದಾಯ

ಒಂದು ರಾಷ್ಟ್ರದ ಜನರ ಒಂದು ವರ್ಷದ ಅವಧಿಯ ಸರಾಸರಿ ಆದಾಯವು ಆ ವರ್ಷದ ತಲಾ ಆದಾಯವಾಗಿದೆ. ಉದಾಹರಣೆಗೆ, 2011ರಲ್ಲಿನ ತಲಾ ಆದಾಯವನ್ನು ಕಂಡುಹಿಡಿಯುವಾಗ, ಒಟ್ಟು ರಾಷ್ಟ್ರೀಯ ಆದಾಯವನ್ನು ರಾಷ್ಟ್ರದ ಆ ವರ್ಷದ ಒಟ್ಟು ಜನಸಂಖ್ಯೆಯಿಂದ ಭಾಗಿಸಲಾಗುತ್ತದೆ.

**2011 ತಲಾ ಆದಾಯ= (2011ರ ರಾಷ್ಟ್ರೀಯ ಆದಾಯ) ÷ 2011ರ ಜನಸಂಖ್ಯೆ**

ತಲಾ ಆದಾಯವು ಜನರ ಸರಾಸರಿ ಆದಾಯ ಮತ್ತು ಜೀವನ ಮಟ್ಟವನ್ನು ತಿಳಿಯಲು ಸಹಾಯ ಮಾಡುತ್ತದೆ. ಆದರೆ ಪ್ರತಿ ದೇಶದಲ್ಲಿ ರಾಷ್ಟ್ರೀಯ ಆದಾಯದ ಹಂಚಿಕೆಯು ಅಸಮಾನವಾಗಿದ್ದು ಹೆಚ್ಚಿನ ಭಾಗವು ಶ್ರೀಮಂತ ವರ್ಗ ಹೊಂದಿದ್ದು ಸಾಮಾನ್ಯ ವ್ಯಕ್ತಿಯು ಪಡೆಯುವ ಆದಾಯವು ಒಟ್ಟಾರೆ ತಲಾ ಆದಾಯಕ್ಕಿಂತ ಕಡಿಮೆ ಇರುತ್ತದೆ.

### ಭಾರತದಲ್ಲಿ ರಾಷ್ಟ್ರೀಯ ಮತ್ತು ತಲಾ ಆದಾಯ

ಭಾರತದಲ್ಲಿ, ಕೇಂದ್ರೀಯ ಅಂಕಿಸಂಖ್ಯಾ ಸಂಸ್ಥೆಯು (CSO) ರಾಷ್ಟ್ರೀಯ ಆದಾಯದ ಮೊತ್ತವನ್ನು ಅಂದಾಜಿಸಿ ಪ್ರಕಟಿಸುತ್ತದೆ. ಭಾರತದಲ್ಲಿನ ರಾಷ್ಟ್ರೀಯ ಮತ್ತು ತಲಾ ಆದಾಯಗಳಲ್ಲಿನ ವಿವರವನ್ನು ಕೋಷ್ಟಕದಲ್ಲಿ ತೋರಿಸಿದೆ.

**ಕೋಷ್ಟಕ 1 : ಭಾರತದಲ್ಲಿ 1950–51 ರಿಂದ 2014–15 ರಾಷ್ಟ್ರೀಯ ಮತ್ತು ತಲಾ ಆದಾಯ**

| ವರ್ಷ | ರಾಷ್ಟ್ರೀಯ ಆದಾಯ (ಕೋಟಿ ರೂಪಾಯಿಗಳಲ್ಲಿ) | | ತಲಾ ಆದಾಯ (ರೂಪಾಯಿಗಳಲ್ಲಿ) | |
|---|---|---|---|---|
| | ಪ್ರಚಲಿತ ಬೆಲೆಗಳು | ಸ್ಥಿರ ಬೆಲೆಗಳು | ಪ್ರಚಲಿತ ಬೆಲೆಗಳು | ಸ್ಥಿರ ಬೆಲೆಗಳು |
| 1950–51 | 9829 | 269724 | 274 | 7513 |
| 1960–61 | 17062 | 411519 | 393 | 9482 |
| 1970–71 | 44550 | 596470 | 823 | 11025 |
| 1980–81 | 138565 | 795193 | 2041 | 11711 |
| 1990–91 | 526017 | 1342031 | 6270 | 15996 |
| 2000–01 | 1947788 | 2291795 | 19115 | 22491 |
| 2010–11 | 6942089 | 4657438 | 58534 | 39270 |
| 2014–15 | 11217079 | 9400266 | 88533 | 74193 |

** ಮೂಲ: ಆರ್ಥಿಕ ಸಮೀಕ್ಷೆ 2014–15.*

ಭಾರತದ ರಾಷ್ಟ್ರೀಯ ಆದಾಯವು 1950–51ರಲ್ಲಿ 2,69,724 ಕೋಟಿ ರೂಪಾಯಿಗಳಿಂದ 2014–15ರ ವೇಳೆಗೆ 94,00,266 ಕೋಟಿ ರೂಪಾಯಿಗಳಿಗೆ (2011–12ರ ಸ್ಥಿರ ಬೆಲೆಗಳಲ್ಲಿ) ಹೆಚ್ಚಾಗಿದೆ.

©KTBS Not to be republished

ಅಂದರೆ 60 ವರ್ಷಗಳ ಅವಧಿಯಲ್ಲಿ 34 ಪಟ್ಟು ಹೆಚ್ಚಳವಾಗಿದ್ದನ್ನು ಇದು ತೋರಿಸುತ್ತದೆ. ಆದರೆ, ಈ ಅವಧಿ ಯಲ್ಲಿನ ಬೆಳವಣಿಗೆಯು ಏಕರೂಪದಲ್ಲಿ ಅಥವಾ ನಿರಂತರವಾಗಿ ಇರಲಿಲ್ಲ. ತಲಾ ಆದಾಯವು ಕೂಡ ಅದೇ ಅವಧಿಯಲ್ಲಿ 7513 ರೂಪಾಯಿಗಳಿಂದ 74,193 ರೂಪಾಯಿಗಳಿಗೆ ಸುಮಾರು 10 ಪಟ್ಟು ಏರಿಕೆಯಾಗಿದೆ.

**ಭಾರತದ ಅರ್ಥವ್ಯವಸ್ಥೆ ಕುರಿತಂತೆ ಜಾಗತಿಕ ಬ್ಯಾಂಕಿನ ಮೌಲ್ಯ ಮಾಪನ :**

i. ಭಾರತದ ರಾಷ್ಟ್ರೀಯ ಆದಾಯವು 2014ರಲ್ಲಿ $2 ಟ್ರಿಲಿಯನ್ ಗಡಿ ದಾಟಿದೆ. ಮೊದಲ ಟ್ರಿಲಿಯನ ಪ್ರಮಾಣ ತಲುಪಲು 60 ವರ್ಷ ತೆಗೆದುಕೊಂಡ ಭಾರತವು, ಎರಡನೆಯ ಟ್ರಿಲಿಯನ್ ಆದಾಯವನ್ನು ಕೇವಲ ಏಳು ವರ್ಷಗಳಲ್ಲಿ ಸೇರಿಸಿದೆ. $2.06 ಟ್ರಿಲಿಯನ್‌ನಷ್ಟು ಇರುವ ಭಾರತದ ಅರ್ಥವ್ಯವಸ್ಥೆಯು ಈ ಶತಮಾನದ ಪ್ರಾರಂಭದ ಅವಧಿಯಿಂದ ನಾಲ್ಕು ಪಟ್ಟು ಹೆಚ್ಚಳವನ್ನು ಸಾಧಿಸಿದೆ.

ii. ಜಾಗತಿಕ ಬ್ಯಾಂಕಿನ ಅಂಕಿಅಂಶಗಳು ತೋರಿಸುವಂತೆ, 2014ರಲ್ಲಿ ಭಾರತದ ತಲಾ ಆದಾಯವು $1,610ಕ್ಕೆ (ಸುಮಾರು 1ಲಕ್ಷ) ಏರಿಕೆಯಾಗಿದೆ. ಭಾರತವು ತನ್ನ 'ಕೆಳ ಮಧ್ಯಮ ಆದಾಯ' ಮಟ್ಟದಿಂದ 'ಮೇಲ್ಮಟ್ಟದ ಮಧ್ಯಮ ಆದಾಯ' ಮಟ್ಟಕ್ಕೆ ಏರಿಕೆಯಾಗಲು ಒಂದು ದಶಕಕ್ಕಿಂತ ಹೆಚ್ಚಿನ ಅವಧಿಯನ್ನು ತೆಗೆದುಕೊಂಡಿದೆ.

iii. 2014ರಲ್ಲಿ ಬೆಳವಣಿಗೆಯ ದರ ಪ್ರತಿಶತ 7.4ರಷ್ಟಿದ್ದ ಭಾರತವು ಚೀನಾ ಅಲ್ಲದೆ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಅರ್ಥವ್ಯವಸ್ಥೆಯಾಗಿದೆ.

## ಭಾರತದಲ್ಲಿ ವಲಯವಾರು ಆದಾಯದ ಬೆಳವಣಿಗೆ ಮತ್ತು ಅವುಗಳ ಪಾಲು

ಯಾವುದೇ ಅರ್ಥ ವ್ಯವಸ್ಥೆಯಲ್ಲಿ ಅನುಭೋಗಕ್ಕಾಗಿ ಜನರಿಗೆ ವಿವಿಧ ಸರಕುಗಳ ಮತ್ತು ಸೇವೆಗಳ ಅಗತ್ಯವಿರುವುದರಿಂದ, ಅದು ಹಲವಾರು ಚಟುವಟಿಕೆಗಳನ್ನು ಹೊಂದಿರುತ್ತದೆ. ಈ ಚಟುವಟಿಕೆಗಳನ್ನು ಬಳಸುವ ಕಚ್ಚಾ ಸರಕುಗಳು ಮತ್ತು ಉತ್ಪಾದನೆಯ ಉದ್ದೇಶಗಳ ಆಧಾರದ ಮೇಲೆ ವಿಂಗಡಿಸಬಹುದು. ಆಹಾರ ಪದಾರ್ಥಗಳು, ಧಾನ್ಯಗಳು, ತರಕಾರಿ, ಹಣ್ಣುಗಳು, ಹಾಲು, ಮೀನು ಇತ್ಯಾದಿಗಳನ್ನು ಪ್ರಮುಖವಾಗಿ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿ ಉತ್ಪಾದಿಸಲಾಗಿರುತ್ತದೆ ಮತ್ತು ಅವುಗಳನ್ನು ನೇರವಾಗಿ ಉಪಯೋಗಿಸಲಾಗುತ್ತದೆ. ಈ ಸರಕುಗಳು ಗಾತ್ರದಲ್ಲಿ ದೊಡ್ಡವಿದ್ದು ಅವುಗಳನ್ನು ಸುಲಭವಾಗಿ ಸಂಗ್ರಹಿಸಿಡಲು ಆಗುವುದಿಲ್ಲ.

ಇತರ ಹಲವಾರು ಸರಕುಗಳನ್ನು 'ಉತ್ಪಾದಿಸಲಾಗುತ್ತಿದೆ'. ಅಂದರೆ, ಕಚ್ಚಾ ಸರಕುಗಳನ್ನು ಹೆಚ್ಚು ಉಪಯುಕ್ತವಾಗುವ ಮತ್ತು ಸಂಗ್ರಹ ಮಾಡಬಹುದಾದ ರೀತಿಯಲ್ಲಿ ಪರಿವರ್ತಿಸಲಾಗುತ್ತದೆ. ಅಂದರೆ ಹತ್ತಿಯನ್ನು ಬಟ್ಟೆಯನ್ನಾಗಿ, ಕಬ್ಬಿಣದ ಅದಿರನ್ನು ಉಕ್ಕು ಆಗಿ, ಕಟ್ಟಿಗೆಯನ್ನು ಪಿಠೋಪಕರಣಗಳಾಗಿ, ಸುಣ್ಣವನ್ನು ಸಿಮೆಂಟಾಗಿ, ಇತ್ಯಾದಿ. ಇಂತಹ ಉತ್ಪಾದಿಸಿದ ವಸ್ತುಗಳನ್ನು ದೀರ್ಘಕಾಲದವರೆಗೆ ಸಂಗ್ರಹಿಸಿ ಇಡಬಹುದಲ್ಲದೇ ಸುಲಭವಾಗಿ ಸಾಗಾಟ ಮಾಡಬಹುದು.

ಅದರಂತೆ, ವಿವಿಧ ಜನರು ಸಲ್ಲಿಸುವ ಸೇವೆಗಳೂ ನಮಗೆ ಅವಶ್ಯ. ಸೇವೆಗಳನ್ನು ಸಂಗ್ರಹಿಸಲು ಸಾಧ್ಯವಿಲ್ಲವಾದ್ದರಿಂದ, ಅವುಗಳು ಒದಗುತ್ತಿರುವ ಸಂದರ್ಭದಲ್ಲಿಯೇ ಅವುಗಳ ಬಳಕೆ ಮಾಡಬೇಕಾಗುತ್ತದೆ. ಈ ಕಾರಣದಿಂದ ಅವುಗಳು ಹೆಚ್ಚು ಮೌಲ್ಯಯುತವಾದವುಗಳು ಆಗಿವೆ. ಶಿಕ್ಷಕರಿಂದ ತರಬೇತಿ, ವೈದ್ಯರಿಂದ ಉಪಚಾರ, ಚಾಲಕರಿಂದ ಸಾರಿಗೆ, ಬ್ಯಾಂಕರನಿಂದ ಹಣಕಾಸು, ಮೊಬೈಲ್ ಸೇವೆ ನೀಡುವವರಿಂದ ಸಂಪರ್ಕ ಇತ್ಯಾದಿಗಳು ಅವು ಸೃಷ್ಟಿಯಾಗುವ ಸಮಯದಲ್ಲಿಯೇ ಬಳಕೆಯಾಗುತ್ತವೆ. ಸೇವೆಗಳ ಗುಣಮಟ್ಟವು ಕೃಷಿ ಮತ್ತು ಉತ್ಪಾದನಾ ಚಟುವಟಿಕೆಗಳಲ್ಲಿರುವಂತೆ ಕಚ್ಚಾ ಸರಕುಗಳನ್ನು ಅವಲಂಬಿಸಿರದೇ ಒದಗಿಸುವವರ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ.

ಈ ಮೇಲಿನ ವಿವಿಧ ಚಟುವಟಿಕೆಗಳನ್ನು ಮೂರು ವಲಯಗಳಲ್ಲಿ ಅಂದರೆ, ಪ್ರಾಥಮಿಕ, ದ್ವಿತೀಯ ಮತ್ತು ತೃತೀಯ ವಲಯಗಳಲ್ಲಿ ವಿಂಗಡಿಸುವುದು ವಾಡಿಕೆಯಾಗಿದೆ. ಇವುಗಳನ್ನು ಸಂಕ್ಷಿಪ್ತವಾಗಿ ಕೆಳಗಿನಂತೆ ಚರ್ಚಿಸೋಣ.



© KTBS Not to be republished

**ಪ್ರಾಥಮಿಕ ವಲಯ:** ಪ್ರಾಥಮಿಕ ವಲಯವು ನಿಸರ್ಗ ಆಧಾರಿತ ಚಟುವಟಿಕೆಗಳು ಅಂದರೆ ಕೃಷಿ, ರೇಷ್ಮೆ ಕೃಷಿ, ತೋಟಗಾರಿಕೆ, ಪಶು ಸಂಗೋಪನೆ, ಕೋಳಿ ಸಾಕಾಣಿಕೆ, ಮೀನುಗಾರಿಕೆ, ಹೂವು ಬೆಳೆಸುವುದು, ಇತ್ಯಾದಿ ಕೃಷಿಗೆ ಪೂರಕವಿರುವ ಚಟುವಟಿಕೆಗಳನ್ನು ಒಳಗೊಂಡಿದೆ.

**ಮಹತ್ವ:** ಪ್ರಾಥಮಿಕ ವಲಯದಲ್ಲಿ, ಕೃಷಿಯು ಪ್ರಧಾನ ಚಟುವಟಿಕೆಯಾಗಿದ್ದು ರಾಷ್ಟ್ರೀಯ ಆದಾಯದಲ್ಲಿ ಹೆಚ್ಚಿನ ಪಾಲು ಹೊಂದಿದೆ. ಭಾರತದ ಅರ್ಥವ್ಯವಸ್ಥೆಯಲ್ಲಿ ಕೃಷಿಯ ಪಾತ್ರ ಮತ್ತು ಮಹತ್ವ ಕುರಿತು ಗಮನ ಹರಿಸೋಣ. ಇಂದಿಗೂ ಸಹ ಕೃಷಿಯು ನಮ್ಮ ರಾಷ್ಟ್ರದ ಬೆನ್ನೆಲುಬು ಎಂದು ಪರಿಗಣಿತವಾಗಿದೆ. ಅದು ಅತ್ಯಧಿಕ ಜನರಿಗೆ ಉದ್ಯೋಗ ನೀಡುತ್ತಿದೆಯಲ್ಲದೇ, ನಿರಂತರವಾಗಿ ಏರುತ್ತಿರುವ ಜನಸಂಖ್ಯೆಗೆ ಆಹಾರವನ್ನು ಒದಗಿಸಿದೆ. ಹಲವಾರು ಕೈಗಾರಿಕೆಗಳಿಗೆ ಕಚ್ಚಾ ಸರಕುಗಳನ್ನು ಪೂರೈಸುತ್ತಿದೆ ಮತ್ತು ಸೇವೆಗಳ ಬೆಳವಣಿಗೆಗೆ ಅತ್ಯಮೂಲ್ಯ ಕೊಡುಗೆ ನೀಡಿದೆ.

**ದ್ವಿತೀಯ ವಲಯ:** ದ್ವಿತೀಯ ವಲಯವನ್ನು ಉತ್ಪಾದನಾ ವಲಯ ಎಂತಲೂ ಕರೆಯುತ್ತಾರೆ. ಇದು ಕಚ್ಚಾ ಸರಕುಗಳನ್ನು ಸಿದ್ಧ ವಸ್ತುಗಳನ್ನಾಗಿ ಪರಿವರ್ತಿಸುತ್ತದೆ. ಸಾಮಾನ್ಯವಾಗಿ, ದ್ವಿತೀಯ ವಲಯವು ಕಟ್ಟಡ ನಿರ್ಮಾಣ ಮತ್ತು ವಿದ್ಯುತ್‌ಶಕ್ತಿ ಉತ್ಪಾದನೆ ಒಳಗೊಂಡಂತೆ ಎಲ್ಲ ಕೈಗಾರಿಕಾ ಚಟುವಟಿಕೆಯನ್ನು ಹೊಂದಿರುತ್ತದೆ. ಆದಾಗ್ಯೂ, ಕೈಗಾರಿಕಾ ಚಟುವಟಿಕೆಯು ಪ್ರಭಾವಶಾಲಿ ಮತ್ತು ಮಹತ್ವದ ಅಂಗವಾಗಿದೆ.

**ಕೈಗಾರಿಕಾ ವಲಯದ ಮಹತ್ವ:** ಕೈಗಾರಿಕಾ ವಲಯದ ಮಹತ್ವವು ಸ್ವಾತಂತ್ರ್ಯ ನಂತರದ ಅವಧಿಯಲ್ಲಿ ಅಧಿಕವಾಗಿದೆ. ಅದು ರಾಷ್ಟ್ರೀಯ ಆದಾಯಕ್ಕೆ ಮೂರನೆಯ ಒಂದು ಭಾಗದಷ್ಟು ಕೊಡುಗೆ ನೀಡುತ್ತದೆ, ಮೂಲಭೂತ ಸೌಕರ್ಯಗಳಾದ ಸಾರಿಗೆ, ಇಂಧನ ಮತ್ತು ಸಂಪರ್ಕಗಳನ್ನು ಸದೃಢಗೊಳಿಸಿದೆ ಮತ್ತು ನಾವು ದಿನನಿತ್ಯ ಬಳಸುವ ಹಲವಾರು ಸರಕುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಕೈಗಾರಿಕೆಗಳು ಉತ್ಪಾದಿಸಿವೆ.

**ತೃತೀಯ ವಲಯ:** ತೃತೀಯ ವಲಯವನ್ನು ಸೇವಾ ವಲಯ ಎಂತಲೂ ಕರೆಯುತ್ತಾರೆ. ಈ ವಲಯವು ಭಾರತವನ್ನು ಒಳಗೊಂಡಂತೆ ವಿಶ್ವದಾದ್ಯಂತ ತೀವ್ರ ದರದಲ್ಲಿ ಬೆಳೆಯುತ್ತಿದೆ. ನಿಮ್ಮ ಸುತ್ತಮುತ್ತ ಇರುವ ವಿವಿಧ ಅಂಗಡಿಗಳು, ದೂರವಾಣಿ ಸೇವೆಗಳು, ಶೈಕ್ಷಣಿಕ ಸಂಸ್ಥೆಗಳು, ಆಸ್ಪತ್ರೆಗಳು, ಆರೋಗ್ಯ ಕೇಂದ್ರಗಳು, ಹೋಟೆಲುಗಳು, ರೆಸ್ಟೋರೆಂಟ್‌ಗಳು, ಹಣಕಾಸು ಮತ್ತು ಬ್ಯಾಂಕಿನ ಸಂಸ್ಥೆಗಳು, ತರಬೇತಿ ಮತ್ತು ಸಲಹಾ ಚಟುವಟಿಕೆಗಳು ಮತ್ತು ಸಾಮಾಜಿಕ ಸೇವಾ ಸಂಸ್ಥೆಗಳನ್ನು ನೋಡಿ ನಿಮಗೆ ಆಶ್ಚರ್ಯವಾಗಬಹುದು. ಈ ಎಲ್ಲ ಸೇವೆಗಳು ನಿಮ್ಮ ಜೀವನವನ್ನು ಹೆಚ್ಚು ಆರಾಮದಾಯಕ ಮತ್ತು ಮೌಲ್ಯಯುತವಾಗಿಸಲು ಪ್ರಯತ್ನಿಸುತ್ತವೆ. ಆಗಿರುತ್ತದೆ.


ಭಾರತದ ರಾಷ್ಟ್ರೀಯ ಆದಾಯಕ್ಕೆ ಅತ್ಯಧಿಕ ಕೊಡುಗೆಯನ್ನು ಸೇವಾ ವಲಯ (ಶೇ.59) ನೀಡುತ್ತದೆಯಲ್ಲದೇ ಶೇ.28ರಷ್ಟು ಉದ್ಯೋಗ ನೀಡಿದೆ. ಈ ವಲಯವು ವಿದೇಶಿ ಬಂಡವಾಳವನ್ನು ಆಕರ್ಷಿಸುವಲ್ಲಿ ಮತ್ತು ರಫ್ತು ಗಳಿಕೆಯಲ್ಲೂ ಮುಂಚೂಣಿಯಲ್ಲಿದೆ. ಭಾರತವು ಸುಮಾರು 5 ಲಕ್ಷ ಕೋಟಿ ರೂಪಾಯಿಗಳಷ್ಟು ರಫ್ತು ಆದಾಯ ಗಳಿಸಿದೆ.

### ರಾಷ್ಟ್ರೀಯ ಆದಾಯದಲ್ಲಿ ವಿವಿಧ ವಲಯಗಳ ಪಾಲು ಮತ್ತು ಬೆಳವಣಿಗೆ ದರಗಳು

ಕಾಲಾಂತರದಲ್ಲಿ ವಿವಿಧ ಆರ್ಥಿಕ ವಲಯಗಳ ಪಾಲಿನಲ್ಲಿ ಗಮನಾರ್ಹ ಬದಲಾವಣೆ ಕಂಡುಬಂದಿದೆ. 1951 ರಿಂದ 2013 ರಲ್ಲಿ ನಮ್ಮ ರಾಷ್ಟ್ರೀಯ ಆದಾಯದಲ್ಲಿ ವಿವಿಧ ವಲಯಗಳ ಕೊಡುಗೆಯನ್ನು ಕೆಳಗಿನ ಚಿತ್ರವು ತೋರಿಸುತ್ತದೆ.

©KTBS Not to be republished

**ಭಾರತದ ಸಮಗ್ರ ಆಂತರಿಕ ಉತ್ಪನ್ನದಲ್ಲಿ ವಲಯವಾರು ಪಾಲುಗಳ ಬದಲಾವಣೆ, 1951 ರಿಂದ 2013 (%)**




ಚಿತ್ರದಲ್ಲಿ ಪ್ರಾಥಮಿಕ ವಲಯದ ಮಹತ್ವ ಕುಗ್ಗಿ ತೃತೀಯ ವಲಯದ ಮಹತ್ವ ಹೆಚ್ಚಾಗುತ್ತಿರುವುದನ್ನು ಸ್ಪಷ್ಟವಾಗಿ ತೋರಿಸುತ್ತಿದೆ. ಕೈಗಾರಿಕಾ ಚಟುವಟಿಕೆಯು ಕೂಡ ವಿಸ್ತರಿಸಲ್ಪಟ್ಟಿದೆ. ವಲಯಗಳ ಆದಾಯದ ಬೆಳವಣಿಗೆಯ ದರಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಿದೆ.

**ಕೋಷ್ಟಕ :** ವಲಯವಾರು ರಾಷ್ಟ್ರೀಯ ಆದಾಯದ ಸರಾಸರಿ ಬೆಳವಣಿಗೆಯ ದರ (%)

| ಅವಧಿ | ಕೃಷಿ | ಕೈಗಾರಿಕೆ | ಸೇವೆಗಳು | ರಾಷ್ಟ್ರೀಯ ಆದಾಯ |
|---|---|---|---|---|
| 1951–1965 | 3.13 | 6.61 | 4.58 | 4.09 |
| 1966–1980 | 2.55 | 3.90 | 4.33 | 3.41 |
| 1981–1995 | 4.21 | 5.44 | 6.37 | 5.26 |
| 1996–2013 | 3.23 | 7.10 | 8.61 | 7.01 |
| 1951–2013 | 3.00 | 5.14 | 6.13 | 4.97 |

** **ಮೂಲ :** ಯೋಜನಾ ಆಯೋಗದ ಅಂಕಿಸಂಖ್ಯೆಗಳಿಂದ ಲೆಕ್ಕ ಮಾಡಲಾಗಿದೆ.*

ಸೇವಾ ವಲಯದ ಬೆಳವಣಿಗೆಯು ಗರಿಷ್ಠ ಇದ್ದರೆ, ಕೃಷಿಯ ಬೆಳವಣಿಗೆಯ ದರವು ಅತ್ಯಂತ ಕಡಿಮೆ ಇದೆ. ವಿಶೇಷವಾಗಿ 1990ರ ನಂತರ, ಸೇವಾ ವಲಯದ ಬೆಳವಣಿಗೆಯು ತೀವ್ರಗೊಂಡು ಆರ್ಥಿಕ ಬೆಳವಣಿಗೆಯ ಪ್ರಮುಖ ಕಾರಣವಾಗಿ ಹೊರಹೊಮ್ಮಿದೆ. ಕೈಗಾರಿಕೆ ಬೆಳವಣಿಗೆಯು ಹಲವಾರು ಕಾರಣಗಳಿಂದ ಏರಿಳಿತಗಳನ್ನು ಕಂಡಿದೆ. ಕೃಷಿಯ ಪಾಲು ಇಳಿಕೆಯಾಗಿ ಅದರ ಬೆಳವಣಿಗೆ ದರವು ಕಡಿಮೆಯಾಗಿರುವುದರಿಂದ ಭಾರತದಲ್ಲಿ ಗ್ರಾಮೀಣ ಬಡತನದ ಸಮಸ್ಯೆಯು ಗಂಭೀರವಾಗಿದೆ.

## ಸಣ್ಣ ಕೈಗಾರಿಕೆಗಳು–ಮಹತ್ವ ಮತ್ತು ಸಮಸ್ಯೆಗಳು

ಕೈಗಾರಿಕಾ ಅಭಿವೃದ್ಧಿಯು ಅರ್ಥವ್ಯವಸ್ಥೆಯ ತ್ವರಿತಗತಿಯ ಅಭಿವೃದ್ಧಿಗೆ ಅತ್ಯವಶ್ಯವಾಗಿದೆ. ಯಾವ ಸ್ಥಳದಲ್ಲಿಯಾದರೂ, ಸರಳ ತಾಂತ್ರಿಕತೆಯೊಂದಿಗೆ, ಕಡಿಮೆ ಸಂಖ್ಯೆಯ ಜನರನ್ನು ಉದ್ಯೋಗಕ್ಕೆ ತೆಗೆದುಕೊಂಡು,

©KTBS Not to be re published

ಸ್ಥಳೀಯ ಮಾರುಕಟ್ಟೆಯನ್ನು ಗಮನದಲ್ಲಿಟ್ಟುಕೊಂಡು ಉತ್ಪಾದನೆಯಲ್ಲಿ ತೊಡಗುವ ಸಣ್ಣ ಕೈಗಾರಿಕೆಗಳು ಒಟ್ಟಾರೆ ಕೈಗಾರಿಕಾಭಿವೃದ್ಧಿಯಲ್ಲಿ ಬಹಳ ಪ್ರಮುಖವಾದವುಗಳು ಆಗಿವೆ. ಸಣ್ಣ ಮತ್ತು ಮಧ್ಯಮ ಉದ್ಯಮಗಳನ್ನು ಅವುಗಳು ಯಂತ್ರೋಪಕರಣದಲ್ಲಿ ಮಾಡಿದ ಹೂಡಿಕೆಯ ಪ್ರಮಾಣವನ್ನು ವ್ಯಾಖ್ಯಾನಿಸಲಾಗುತ್ತದೆ. 2006ರಲ್ಲಿ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ ಅಭಿವೃದ್ಧಿ (MSMED) ಕಾಯಿದೆಯು ನೀಡಿದ ವ್ಯಾಖ್ಯೆಯು ಈ ಕೆಳಗಿನಂತಿದೆ.

| ಉದ್ಯಮ | ಉತ್ಪಾದನಾ ವಲಯ | ಸೇವಾ ವಲಯ |
|---|---|---|
| | ಯಂತ್ರೋಪಕರಣಗಳಲ್ಲಿ ಹೂಡಿಕೆ | ಉಪಕರಣಗಳಲ್ಲಿ ಹೂಡಿಕೆ |
| ಅತಿ ಸಣ್ಣ ಉದ್ಯಮ | ರೂ. 25 ಲಕ್ಷಗಳವರೆಗೆ | ರೂ. 10 ಲಕ್ಷಗಳವರೆಗೆ |
| ಸಣ್ಣ ಉದ್ಯಮ | ರೂ. 25ಲಕ್ಷ ದಿಂದ ರೂ.5 ಕೋಟಿ | ರೂ. 10ಲಕ್ಷ ದಿಂದ ರೂ.2 ಕೋಟಿ |
| ಮಧ್ಯಮ ಉದ್ಯಮ | ರೂ. 5 ಕೋಟಿಯಿಂದ ರೂ.10 ಕೋಟಿ | ರೂ.2 ಕೋಟಿಯಿಂದ ರೂ.5 ಕೋಟಿ |

**ಸಣ್ಣ ಕೈಗಾರಿಕೆಗಳ ಮಹತ್ವ**

ಸಣ್ಣ ಕೈಗಾರಿಕೆಗಳ ಚಟುವಟಿಕೆಗಳನ್ನು ಹೆಚ್ಚಿಸುವುದು ಆರ್ಥಿಕ ಪ್ರಗತಿಗೆ ಮತ್ತು ರಾಷ್ಟ್ರದ ಅಭಿವೃದ್ಧಿಗೆ ಅವಶ್ಯವೆಂದು ಈ ಕೆಳಗಿನ ಅಂಶಗಳನ್ನು ತಿಳಿಯಬಹುದು.

i. **ಉದ್ಯೋಗ ಸೃಷ್ಟಿ:** ಸಣ್ಣ ಕೈಗಾರಿಕೆಗಳು ಸ್ವರೂಪದಲ್ಲಿ ಶ್ರಮ ಆಧಾರಿತವುಗಳಾಗಿದ್ದು ಅಪಾರ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಸುತ್ತವೆ.

ii. **ಸಂಪನ್ಮೂಲಗಳ ಮತ್ತು ಉದ್ಯಮ ಕೌಶಲ್ಯದ ಕ್ರೋಢೀಕರಣ:** ಸಣ್ಣ ಕೈಗಾರಿಕೆಗಳು ಗ್ರಾಮೀಣ ಮತ್ತು ಅರೆ–ನಗರ ಪ್ರದೇಶಗಳಿಂದ ದೊಡ್ಡ ಪ್ರಮಾಣದ ಉಳಿತಾಯಗಳನ್ನು ಮತ್ತು ಉದ್ಯಮಶೀಲತಾ ಕೌಶಲ್ಯವನ್ನು ಬಳಕೆ ಮಾಡುವಲ್ಲಿ ಯಶಸ್ವಿಯಾಗಿವೆ. ಸಣ್ಣ ಉದ್ಯಮದಾರರು ಸುಪ್ತ ಮತ್ತು ಕಡೆಗಣಿಸಲಾದ ಪ್ರತಿಭೆಗೆ ಚಾಲನೆಯನ್ನು ನೀಡುತ್ತಿರುವರು.

iii. **ಆದಾಯದ ಸಮ ಹಂಚಿಕೆ:** ಸಣ್ಣ ಕೈಗಾರಿಕೆಗಳು ಸಂಪತ್ತು, ಆದಾಯ ಮತ್ತು ರಾಜಕೀಯ ಶಕ್ತಿಯ ಹೆಚ್ಚು ಸಮಾನ ಮರುಹಂಚಿಕೆಗೆ ಕಾರಣವಾಗುತ್ತವೆ.

iv. **ಕೈಗಾರಿಕೆಗಳ ಪ್ರಾದೇಶಿಕ ವಿಸ್ತರಣೆ:** ಕೆಲವೇ ನಗರಗಳಲ್ಲಿ ಕೈಗಾರಿಕೆಗಳ ಕೇಂದ್ರೀಕರಣದಿಂದಾಗಿ ಅತಿಯಾದ ಜನದಟ್ಟಣೆ, ಮಾಲಿನ್ಯ, ಕೊಳಚೆ ಪ್ರದೇಶಗಳ ಉಗಮ, ಇತ್ಯಾದಿಗಳಿಗೆ ಕಾರಣವಾಗುತ್ತದೆ. ರಾಷ್ಟ್ರದ ಎಲ್ಲ ಪ್ರದೇಶಗಳಲ್ಲಿಯೂ ಹರಡುವ ಸಾಮರ್ಥ್ಯವಿರುವ ಸಣ್ಣ ಕೈಗಾರಿಕೆಗಳು ಈ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ಸರಿಪಡಿಸಿ ಪ್ರಾದೇಶಿಕ ಅಭಿವೃದ್ಧಿಗೆ ಉತ್ತೇಜನ ನೀಡಿವೆ.

v. **ತಂತ್ರಜ್ಞಾನದ ಅಭಿವೃದ್ಧಿ :** ಸಣ್ಣ ಕೈಗಾರಿಕೆಗಳು ಆವಿಷ್ಕಾರಗಳನ್ನು ಸೃಷ್ಟಿಸಿ ಅದನ್ನು ಅಳವಡಿಸಿಕೊಳ್ಳುವ ಹೆಚ್ಚಿನ ಸಾಮರ್ಥ್ಯ ಹೊಂದಿವೆ. ಸಣ್ಣ ಉದ್ದಿಮೆದಾರರು ಹೊಸ ಆವಿಷ್ಕಾರಗಳನ್ನು ಮತ್ತು ವಸ್ತುಗಳನ್ನು ವಾಣಿಜ್ಯೀಕರಣಗೊಳಿಸುವಲ್ಲಿ ಮಹತ್ವದ ಪಾತ್ರವನ್ನು ಹೊಂದಿರುವರು. ತಂತ್ರಜ್ಞಾನದ ವರ್ಗಾವಣೆಗೆ ಕೂಡ ಇವು ಅತ್ಯಂತ ಸೂಕ್ತವಾಗಿವೆ.

vi. **ರಫ್ತು ಉತ್ತೇಜನ :** ರಫ್ತುಗಳ ಹೆಚ್ಚಳಕ್ಕೆ ಮತ್ತು ಅಧಿಕ ವಿದೇಶಿ ವಿನಿಮಯ ಗಳಿಕೆಗೆ ಸಣ್ಣ ಕೈಗಾರಿಕೆಗಳು ಗಣನೀಯ ಕೊಡುಗೆಯನ್ನು ನೀಡುತ್ತಿವೆ. ಭಾರತದ ರಫ್ತುಗಳಲ್ಲಿ ಅವುಗಳ ಪಾಲು ಶೇ.40ರಷ್ಟಿದೆ.

Not to be re published ©KTBS

## ಭಾರತದಲ್ಲಿ ಸಣ್ಣ ಕೈಗಾರಿಕೆಗಳು

ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ (MSME) ವಿಭಾಗದ ವಾರ್ಷಿಕ ವರದಿಯ ಪ್ರಕಾರ, 2013–14ರಲ್ಲಿ ಭಾರತದಲ್ಲಿ 488.46 ಲಕ್ಷ ಉದ್ಯಮಗಳು ಕಾರ್ಯನಿರ್ವಹಿಸುತ್ತಿದ್ದವು ಮತ್ತು ಅವುಗಳು 13,63,700 ಕೋಟಿ ರೂಪಾಯಿಗಳ ಒಟ್ಟು ಹೂಡಿಕೆಯೊಂದಿಗೆ 11.14 ಕೋಟಿ ಜನರಿಗೆ ಉದ್ಯೋಗ ಒದಗಿಸಿದ್ದವು. ಅದೇ ವರ್ಷದಲ್ಲಿ ರಾಷ್ಟ್ರೀಯ ಆದಾಯದ ಶೇ.7.8ರಷ್ಟು ಪಾಲು ಹೊಂದಿದ್ದವು. ಅವು ಕೈಗಾರಿಕಾ ವಲಯದ ಒಟ್ಟು ಉತ್ಪನ್ನದ ಮೌಲ್ಯದ ಶೇ.35, ಒಟ್ಟು ಕೈಗಾರಿಕಾ ಉದ್ಯೋಗದ ಶೇ.80ರಷ್ಟು ಮತ್ತು ರಾಷ್ಟ್ರದ ಒಟ್ಟು ರಫ್ತಿನಲ್ಲಿ ಶೇ. 40ರಷ್ಟು ಹೊಂದಿವೆ.

## ಸಣ್ಣ ಕೈಗಾರಿಕೆಗಳ ಸಮಸ್ಯೆಗಳು :

ರಾಷ್ಟ್ರದ ಅರ್ಥವ್ಯವಸ್ಥೆಯಲ್ಲಿ ಸಣ್ಣ ಕೈಗಾರಿಕೆಗಳ ಮಹತ್ವ ಗಣನೀಯವಾಗಿದ್ದರೂ ಅವುಗಳು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿವೆ. ಅವುಗಳಲ್ಲಿ ಕೆಲವು:

1. **ಕಚ್ಚಾ ಸರಕುಗಳ ಅಲಭ್ಯತೆ :** ಭಾರತದಲ್ಲಿ ಸಣ್ಣ ಕೈಗಾರಿಕೆಗಳು ಕಚ್ಚಾ ಸರಕುಗಳ ಅಗತ್ಯ ಬಿಡಿ–ಭಾಗಗಳ ಮತ್ತು ಉಪಕರಣಗಳ ಕೊರತೆಯಿಂದ ನರಳುತ್ತಿವೆ.
2. **ಹಣಕಾಸಿನ ಸಮಸ್ಯೆ:** ಸಣ್ಣ ಉದ್ಯಮಗಳು ಸಮರ್ಪಕ ಪ್ರಮಾಣದ ಸ್ವಂತ ಬಂಡವಾಳವನ್ನು ಹೊಂದಿರುವುದಿಲ್ಲ ಮತ್ತು ಅವುಗಳು ಸಾಲ ಪಡೆಯುವ ಸಾಮರ್ಥ್ಯ ಕೂಡ ಕಡಿಮೆ ಇದೆ.
3. **ಕಡಿಮೆ ತಾಂತ್ರಿಕ ಕೌಶಲ್ಯ:** ಈ ಉದ್ದಿಮೆಗಳ ತಾಂತ್ರಿಕ ಕೌಶಲ್ಯ ಮತ್ತು ನಿರ್ವಹಣಾತ್ಮಕ ಸಾಮರ್ಥ್ಯವು ಅಸಮರ್ಪಕವಾಗಿದೆ. ಸುಧಾರಿತ ತಂತ್ರಜ್ಞಾನವನ್ನು ಕೊಂಡುಕೊಳ್ಳುವ ಮತ್ತು ಅಳವಡಿಸಿಕೊಳ್ಳುವ ಅವರ ಸಾಮರ್ಥ್ಯವು ತುಂಬಾ ಕಡಿಮೆ.
4. **ಮಾರುಕಟ್ಟೆ ಸಮಸ್ಯೆಗಳು:** ಸಣ್ಣ ಉತ್ಪಾದಕರಿಗೆ ದೊಡ್ಡ ಉತ್ಪಾದಕರಂತೆ ಸಂಘಟಿತ ಮಾರಾಟದಲ್ಲಿ ಮತ್ತು ಆಕ್ರಮಣಕಾರಿ ಜಾಹೀರಾತಿನಲ್ಲಿ ತೊಡಗಲು ಆಗುವುದಿಲ್ಲ. ಅವರು ತಮ್ಮ ಮಾರಾಟಗಳನ್ನು ಉತ್ತೇಜಿಸಲು ಮಾರುಕಟ್ಟೆ ಸಂಶೋಧನೆಯನ್ನು ಕೈಗೊಳ್ಳುವ ಸ್ಥಿತಿಯಲ್ಲಿಯೂ ಇರುವುದಿಲ್ಲ. ಹೀಗಾಗಿ ಅವುಗಳು ಮಾರಾಟದ ಸಮಸ್ಯೆಯನ್ನು ಎದುರಿಸುತ್ತವೆ.
5. **ಬೃಹತ್ ಕೈಗಾರಿಕೆಗಳಿಂದ ಪೈಪೋಟಿ:** ಹಲವಾರು ಸನ್ನಿವೇಶಗಳಲ್ಲಿ, ಬೃಹತ್ ಕೈಗಾರಿಕೆಗಳು ಸಣ್ಣ ಕೈಗಾರಿಕೆಗಳಿಗೆ ಹಾನಿಯನ್ನುಉಂಟು ಮಾಡುವ ರೀತಿಯಲ್ಲಿ ಆಕ್ರಮಣಕಾರಿ ಮಾರಾಟ ಅಥವಾ ಕಚ್ಚಾ ವಸ್ತುಗಳ ಖರೀದಿಯಲ್ಲಿ ಸಣ್ಣ ಕೈಗಾರಿಕೆಗಳನ್ನು ನಿಸ್ಸಹಾಯಕ ಮಾಡುತ್ತವೆ.

ಆದಾಗ್ಯೂ, ಭಾರತ ಸರ್ಕಾರವು ಹಲವಾರು ಕ್ರಮಗಳಾದ ಸ್ಟಾರ್ಟ್‌ಅಪ್ ಇಂಡಿಯಾ, ಸ್ಟ್ಯಾಂಡಪ್ ಇಂಡಿಯಾ, ಮುದ್ರಾ ಬ್ಯಾಂಕ್, ಇತ್ಯಾದಿಗಳಿಂದ ಸಣ್ಣ ಕೈಗಾರಿಕೆಗಳಿಗೆ ಸಹಾಯವನ್ನು ನೀಡುತ್ತಿದೆ.

## ಕೃಷಿ ಬಿಕ್ಕಟ್ಟು : ಕಾರಣಗಳು ಮತ್ತು ಪರಿಹಾರ ಕ್ರಮಗಳು

ನಾವು ಈಗಾಗಲೇ ಭಾರತದ ಅರ್ಥವ್ಯವಸ್ಥೆಯಲ್ಲಿ ಕೃಷಿಯ ಮಹತ್ವವನ್ನು ಗಮನಿಸಿದ್ದೇವೆ. ಜೀವನೋಪಾಯಕ್ಕಾಗಿ ಹೆಚ್ಚಿನ ಸಂಖ್ಯೆಯ ಜನರು ಇದನ್ನು ಅವಲಂಬಿಸಿರುವುದು ಈ ವಲಯದ ಉತ್ತಮ ಸಾಧನೆಯ ಅವಶ್ಯಕತೆಯನ್ನು ಬಿಂಬಿಸುತ್ತದೆ. ಆದರೆ, ಕೃಷಿಯು ಗಂಭೀರ ಬಿಕ್ಕಟ್ಟನ್ನು ಎದುರಿಸುತ್ತಿದೆ. ಗ್ರಾಮೀಣ ಜನರ ವಲಸೆ ಮತ್ತು ಹೆಚ್ಚುತ್ತಿರುವ ಆತ್ಮಹತ್ಯೆಯ ಸಂಖ್ಯೆಗಳು ಈ ಸಮಸ್ಯೆಯ ಕರಾಳ ಮುಖಗಳಾಗಿವೆ. ಕೃಷಿಯ ಈ ಬಿಕ್ಕಟ್ಟಿಗೆ ಕಾರಣಗಳನ್ನು ಮತ್ತು ಪರಿಹಾರಗಳನ್ನು ಈಗ ಸಂಕ್ಷಿಪ್ತವಾಗಿ ಅಧ್ಯಯನ ಮಾಡೋಣ.

©KTBS Not to be republished

**ಕೃಷಿ ಬಿಕ್ಕಟ್ಟಿಗೆ ಕಾರಣಗಳು :** ಹಲವಾರು ಅಂಶಗಳು ಈ ಕೃಷಿಯ ಸಮಸ್ಯೆಗಳನ್ನು ತೀವ್ರವಾಗಿಸಿವೆ. ಅವುಗಳಲ್ಲಿ ಪ್ರಮುಖವಾದವು ಕೆಳಗಿನಂತಿವೆ:

1. **ಸಣ್ಣ ಗಾತ್ರದ ಸಾಗುವಳಿ ಹಿಡುವಳಿಗಳು :** ಹಿಡುವಳಿ ಎಂದರೆ ಒಂದು ಕುಟುಂಬವು ಸಾಗುವಳಿ ಮಾಡುತ್ತಿರುವ ಭೂಮಿಯ ಗಾತ್ರವಾಗಿದೆ. ಕೃಷಿಯ ಮೇಲೆ ಅವಲಂಬಿತ ಜನಸಂಖ್ಯೆ ಏರಿಕೆಯಾಗಿದ್ದರಿಂದ, ಹಿಡುವಳಿಗಳು ಸಣ್ಣ ತುಂಡುಗಳಾಗಿ ವಿಭಜಿಸಲ್ಪಟ್ಟಿವೆ. 2011–12ರ ಕೃಷಿ ಗಣತಿಯ ಪ್ರಕಾರ, ಸಣ್ಣ (1ರಿಂದ 2 ಹೆಕ್ಟೇರ್) ಮತ್ತು ಅಂಚಿನ (1 ಹೆಕ್ಟೇರ್‌ಗಿಂತ ಕಡಿಮೆ) ಹಿಡುವಳಿಗಳು ಒಟ್ಟು ಹಿಡುವಳಿಗಳ ಶೇಕಡಾ 85ರಷ್ಟಿವೆ. ಅದರಂತೆ, 2011–12ರಲ್ಲಿ ಹಿಡುವಳಿಗಳ ಸರಾಸರಿ ಗಾತ್ರವು ಕೇವಲ 1.16 ಹೆಕ್ಟೇರ್ ಇತ್ತು. ಇಷ್ಟು ಸಣ್ಣ ಗಾತ್ರದ ಭೂಮಿಯಲ್ಲಿ ಯಾವುದೇ ತೆರನಾದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಆಗುವುದಿಲ್ಲ. ಆಧುನಿಕ ಉತ್ಪಾದನಾ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ತತ್ಪರಿಣಾಮವಾಗಿ ಉತ್ಪಾದಕತೆ ಕಡಿಮೆ ಇದ್ದು ಕೃಷಿಕರು ಬಡವರಾಗುತ್ತಿದ್ದಾರೆ.
2. **ಅಧಿಕ ಜನಸಂಖ್ಯೆಯ ಒತ್ತಡ:** ಅತಿ ಹೆಚ್ಚಿನ ಸಂಖ್ಯೆಯ ದುಡಿಮೆಗಾರರು ತುಂಡು ಭೂಮಿಯಲ್ಲಿ ಕೆಲಸ ಮಾಡುತ್ತಿರುವುದರಿಂದ ಪ್ರತಿ ವ್ಯಕ್ತಿಯ ಉತ್ಪಾದನೆ ಮತ್ತು ಆದಾಯ ಅತ್ಯಂತ ಕಡಿಮೆ ಇದೆ. ಹಲವಾರು ಸಣ್ಣ ಮತ್ತು ಅತಿ ಸಣ್ಣ ಕೃಷಿಕರು ಕೃಷಿ ಕಾರ್ಮಿಕರಾಗಿ ಅತ್ಯಂತ ಕಡಿಮೆ ಕೂಲಿಗೆ ದುಡಿಯುತ್ತಾರೆ.
3. **ಮಳೆ–ಆಧಾರಿತ ಕೃಷಿ ಮತ್ತು ಮೇಲಿಂದ ಮೇಲೆ ಬಂದೆರಗುವ ಬರಗಾಲ :** ಭಾರತದ ಕೃಷಿಯು ಮಳೆಯನ್ನು ಅವಲಂಬಿಸಿದ್ದು, ಅದು ಅನಿಶ್ಚಿತ, ಅನಿಯಮಿತ ಮತ್ತು ಅಸಮರ್ಪಕ ಇದೆ. ಕೃಷಿ ಭೂಮಿಯ ಶೇಕಡಾ 30ಕ್ಕೆ (143 ದಶಲಕ್ಷ ಹೆಕ್ಟೇರು ಸಾಗುವಳಿ ಭೂಮಿಯಲ್ಲಿ 43 ದಶಲಕ್ಷ ಹೆಕ್ಟೇರ್‌ಗಳು) ಮಾತ್ರ ನೀರಾವರಿ ಸೌಲಭ್ಯ ಹೊಂದಿದ್ದು, ಉಳಿದ ಭೂಮಿಯು ಮಳೆಯನ್ನೇ ಅವಲಂಬಿಸಿದೆ. 'ಭಾರತದ ಕೃಷಿಯನ್ನು ಮಾನ್ಸೂನ್ ನೊಂದಿಗೆ ಜೂಜಾಟ ಆಡುತ್ತದೆ' ಎಂದು ಹೇಳಲಾಗುತ್ತದೆ. ನೀರಾವರಿಯ ಕೊರತೆ ಮತ್ತು ಆಗಾಗ್ಗೆ ಉಂಟಾಗುತ್ತಿರುವ ಬರದಿಂದಾಗಿ ಕೃಷಿಕರ ಜೀವನ ನಿಕೃಷ್ಟವಾಗಿದೆ.
4. **ಹಸಿರು ಕ್ರಾಂತಿಯ ಭಾಗಶಃ ಪ್ರಭಾವ :** ಹಸಿರು ಕ್ರಾಂತಿಯು ನೀರಾವರಿ ಸೌಲಭ್ಯ ಹೊಂದಿರುವ ಪ್ರದೇಶಗಳಲ್ಲಿ, ಅಕ್ಕಿ ಮತ್ತು ಗೋಧಿ ಬೆಳೆಗಾರರಿಗೆ ಮಾತ್ರ ಪ್ರಯೋಜನ ಒದಗಿಸಿ, ಶುಷ್ಕ ಪ್ರದೇಶಗಳ ಇದು ಕೃಷಿಗೆ ಅದು ಅಷ್ಟೇನೂ ಅನುಕೂಲ ಒದಗಿಸಿಲ್ಲ. ಹಸಿರು ಕ್ರಾಂತಿಯ ತಂತ್ರಜ್ಞಾನವು ವೆಚ್ಚದಾಯಕವಾಗಿರುವುದರಿಂದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಅದನ್ನು ಅಳವಡಿಸಲು ಸಾಧ್ಯವಾಗಿಲ್ಲ. ಹೀಗೆ, ಬಹಳಷ್ಟು ಕೃಷಿಕರು ಬಡವರಾಗಿ ಮತ್ತು ಹಿಂದುಳಿದವರಾಗಿ ಇರುವರು.
5. **ನೀರಾವರಿ ಮತ್ತು ಇತರ ಮೂಲಸೌಕರ್ಯಗಳಲ್ಲಿ ಸಾರ್ವಜನಿಕ ಹೂಡಿಕೆಗಳ ಕುಗ್ಗುವಿಕೆ:** ಕೃಷಿಯಲ್ಲಿ ಸಾರ್ವಜನಿಕ ಹೂಡಿಕೆ ಇಳಿಕೆಯಾಗಿದ್ದು ಇದರಿಂದಾಗಿ ಕೃಷಿಯ ಬೆಳವಣಿಗೆ ಕ್ರಮೇಣ ಕಡಿಮೆಯಾಗಿದೆ. ವಿಶೇಷವಾಗಿ, ನೀರಾವರಿಯಲ್ಲಿ ಕಡಿಮೆಯಾಗುತ್ತಿರುವ ಹೂಡಿಕೆಯು ಕೃಷಿಯ ಬೆಳವಣಿಗೆಯನ್ನು ದುರ್ಬಲಗೊಳಿಸಿದೆ.
6. **ಸಾಂಸ್ಥಿಕ ಮೂಲಗಳಿಂದ ಅಸಮರ್ಪಕ ಸಾಲ:** ಬ್ಯಾಂಕುಗಳು ಮತ್ತು ಸಹಕಾರಿ ಸಂಘಗಳಂತಹ ಔಪಚಾರಿಕ ಮೂಲಗಳಿಂದ ಕೃಷಿ ವಲಯಕ್ಕೆ ಸಾಲ ಪೂರೈಕೆಯು ಅಸಮರ್ಪಕವಾಗಿರುವುದರಿಂದ, ಕೃಷಿಕರು ಅನೌಪಚಾರಿಕ ಮೂಲಗಳಿಂದ ಸಾಲಕ್ಕೆ ಮೊರೆ ಹೋಗಿ ಅಲ್ಲಿ ಅಧಿಕ ಬಡ್ಡಿ ದರ ನೀಡುತ್ತಿದ್ದಾರೆ. ಇದರಿಂದ ಕೃಷಿಯ ಲಾಭದಾಯಕತ್ವ ಮತ್ತಷ್ಟು ಕುಗ್ಗಿದೆ.

©KTBS Not to be republished

7. **ಲಾಭದಾಯಕ ಬೆಲೆ ಪಡೆಯಲು ಅಸಮರ್ಥತೆ:** ಕೃಷಿ ಸರಕುಗಳ ಮಾರಾಟವು ಹಲವಾರು ಸಮಸ್ಯೆಗಳಿಂದ ಬಾಧಿತವಾಗಿದೆ. ಕೃಷಿ ಸರಕುಗಳಿಗೆ ಉತ್ತಮ ಬೆಲೆ ದೊರೆಯುವುದಿಲ್ಲ, ಬೆಲೆ ಪಾವತಿಯು ಸರಿಯಾದ ಸಮಯದಲ್ಲಿ ಆಗುವುದಿಲ್ಲ, ಮತ್ತು ನಿಗದಿತ ಬೆಲೆ ಪಾವತಿಯಲ್ಲಿ ಹಲವಾರು ಕಡಿತಗಳು ಇರುವುದರಿಂದ ಕೃಷಿಕರಿಗೆ ದೊರೆಯುವ ಪ್ರತಿಫಲವು ಅತ್ಯಂತ ಕಡಿಮೆ ಇದೆ. ಸರ್ಕಾರದ ಬೆಂಬಲ ಬೆಲೆ ನೀತಿಯು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ.

ಹೀಗೆ ಕೃಷಿಯಲ್ಲಿ ಆದಾಯ, ಇಳುವರಿ, ಬೆಲೆ, ತಂತ್ರಜ್ಞಾನ ಮತ್ತು ಸಾಲ ಸಂಬಂಧಿತ ಬಹುವಿಧ ಸಮಸ್ಯೆಗಳು ಇರುವುದರಿಂದ ಕೃಷಿಯ ಆಕರ್ಷಣೆ ಕಡಿಮೆಯಾಗಿ ಅದನ್ನು ಎಲ್ಲರೂ ಬಿಡುತ್ತಿದ್ದಾರೆ.

**ಕೃಷಿ ಬಿಕ್ಕಟ್ಟಿಗೆ ಪರಿಹಾರಗಳು :** ಕೃಷಿ ಬಿಕ್ಕಟ್ಟಿನ ಕಾರಣಗಳೇ ಪರಿಹಾರಗಳನ್ನೂ ಸೂಚಿಸುತ್ತಿದ್ದು, ಅವುಗಳಲ್ಲಿ ಪ್ರಮುಖವಾದವೆಂದರೆ –

1. **ಸರ್ಕಾರದ ಹೂಡಿಕೆಯನ್ನು ಹೆಚ್ಚಿಸುವುದು :** ಬರಗಾಲ ತಡೆಯಲು, ನೀರಾವರಿ, ಬೀಜಗಳ ಹೊಸ ತಳಿಗಳ ಸಂಶೋಧನೆ, ಕಡಿಮೆ ನೀರನ್ನು ಉಪಯೋಗಿಸುವ ಹೊಸ ಸಾಗುವಳಿ ಪದ್ಧತಿ ಮತ್ತು ಭೂ ಫಲವತ್ತತೆಯ ಸಂರಕ್ಷಣೆ, ಸಮರ್ಥ ಬೆಳೆ ಉತ್ಪಾದನಾ ಪದ್ಧತಿಗಳ ಕುರಿತು ಕೃಷಿಕರಿಗೆ ತರಬೇತಿ ಮತ್ತು ವಿಸ್ತರಣಾ ಕಾರ್ಯಗಳಲ್ಲಿ ಸರ್ಕಾರದ ಹೆಚ್ಚಿನ ಹೂಡಿಕೆಯ ತುರ್ತು ಅಗತ್ಯವಿದೆ.
2. **ಸಾಲ ಸೌಲಭ್ಯಗಳ ವಿಸ್ತರಣೆ:** ಸಣ್ಣ ಮತ್ತು ಅತಿ ಸಣ್ಣ ಕೃಷಿಕರು ಬ್ಯಾಂಕ್ ಇತರ ಹಣಕಾಸು ಸಂಸ್ಥೆಗಳಿಂದ ಸಮರ್ಪಕ ಸಾಲ ನೀಡುವ ವ್ಯವಸ್ಥೆಯಾಗಬೇಕು. ಸಾಲವನ್ನು ನೀಡುವ ವಿಧಾನಗಳು ಸರಳ ಮತ್ತು ರೈತ ಸ್ನೇಹಿ ಆಗಿರಬೇಕು.
3. **ಮಾರುಕಟ್ಟೆ ಸುಧಾರಣೆಗಳು :** ಕೃಷಿಕರ ಉತ್ಪನ್ನಗಳಿಗೆ ಲಾಭದಾಯಕ ಬೆಲೆಯ ಭರವಸೆ ಇರಬೇಕು. ಈ ಉದ್ದೇಶಕ್ಕಾಗಿ, ಮಾರುಕಟ್ಟೆಗಳು ಮತ್ತು ಮಾರಾಟ ಸೌಕರ್ಯಗಳನ್ನು ಬಲಗೊಳಿಸುವುದರ ಅಗತ್ಯವಿದೆ.
4. **ಬೆಳೆ ವಿಮೆ :** ಎಲ್ಲ ಪ್ರಕಾರಗಳ ಗಂಡಾಂತರಗಳಿಂದ ಕೃಷಿಕರಿಗೆ ಉಂಟಾಗುವ ನಷ್ಟವನ್ನು ಭರಿಸುವ ಮತ್ತು ಸರಿದೂಗಿಸುವ ವಿಮಾ ನೀತಿಯ ಅಗತ್ಯವಿದೆ. ಅದರಂತೆ, ವಿಮೆಯ ವೆಚ್ಚದ ಜೊತೆಗೆ ಅನುಸರಿಸುವ ಕಾರ್ಯ ವಿಧಾನಗಳು ಮತ್ತು ವಿಧಿವಿಧಾನಗಳು ಕನಿಷ್ಠವಿರುವ ಅಗತ್ಯವಿದೆ.
5. **ಸಲಹೆ ಮತ್ತು ನೈತಿಕ ಬೆಂಬಲ :** ಹತಾಶೆಗೊಂಡ ಕೃಷಿಕರಿಗೆ ನೈತಿಕ ಬೆಂಬಲ ನೀಡಲು ಗ್ರಾಮೀಣ ಪ್ರದೇಶಗಳಲ್ಲಿ ಸಲಹಾ ಕೇಂದ್ರಗಳನ್ನು ಸ್ಥಾಪಿಸುವ ಅಗತ್ಯವಿದ್ದು, ಇವುಗಳ ಮೂಲಕ ರೈತರ ಆತ್ಮಹತ್ಯೆಗಳನ್ನು ತಡೆಯಬಹುದಾಗಿದೆ.
6. **ಖಾಸಗಿ ಲೇವಾದೇವಿಗಾರರ ನಿಯಂತ್ರಣ :** ಮೇಲಿನವುಗಳಲ್ಲದೇ, ಸಾಲಪಡೆದ ಬಡ ಕೃಷಿಕರನ್ನು ಶೋಷಿಸದಂತೆ ಲೇವಾದೇವಿ ವ್ಯವಹಾರಸ್ಥರ ಚಟುವಟಿಕೆಗಳನ್ನು ನಿಯಂತ್ರಿಸುವ ಅಗತ್ಯವಿದೆ.

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿರಿ.**

1. ತಲಾ ಆದಾಯ=ರಾಷ್ಟ್ರೀಯ ಆದಾಯವನ್ನು ____________ ದಿಂದ ಭಾಗಿಸುವುದು.
2. ಭಾರತದಲ್ಲಿ ರಾಷ್ಟ್ರೀಯ ಆದಾಯದ ಅಂದಾಜನ್ನು ಮಾಡುವ ಜವಾಬ್ದಾರಿ ಹೊಂದಿರುವ ಸಂಸ್ಥೆಯು____________ .

©KTBS Not to be republished

3. ಇಂದು ಭಾರತದ ರಾಷ್ಟ್ರೀಯ ಆದಾಯದಲ್ಲಿ ಅತ್ಯಂತ ಹೆಚ್ಚು ಪಾಲು __________ ವಲಯವು ಹೊಂದಿದೆ.
4. ಸಣ್ಣ ಕೈಗಾರಿಕೆಗಳು __________ ಗಳಲ್ಲಿ ವ್ಯಾಖ್ಯಾನಿಸಲಾಗುತ್ತದೆ.
5. ಭಾರತದ ಕೃಷಿಯನ್ನು __________ ಜೊತೆಗೆ ಜೂಜಾಟವಾಡುತ್ತದೆ ಎಂದು ಹೇಳುತ್ತಾರೆ.
6. ಭಾರತದಲ್ಲಿ ನೀರಾವರಿ ಕೃಷಿ ಭೂಮಿಯ ಪ್ರಮಾಣವು ಸಾಗುವಳಿ ಕ್ಷೇತ್ರದ __________ ಶೇಕಡಾ ಇದೆ.

**II. ಗುಂಪುಗಳಲ್ಲಿ ಚರ್ಚಿಸಿ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ.**

1. ರಾಷ್ಟ್ರೀಯ ಆದಾಯವನ್ನು ವ್ಯಾಖ್ಯಾನಿಸಿರಿ.
2. 2015 ರಲ್ಲಿ 5 ಸದಸ್ಯರಿರುವ ಕುಟುಂಬದ ಆದಾಯವು ರೂ. 567890 ಇದ್ದರೆ, ಕುಟುಂಬದ ಸದಸ್ಯರ ತಲಾ ಆದಾಯವನ್ನು ಲೆಕ್ಕ ಮಾಡಿರಿ.
3. ಭಾರತದಂತಹ ರಾಷ್ಟ್ರದಲ್ಲಿ ಸಣ್ಣ ಕೈಗಾರಿಕೆಗಳು ಹೇಗೆ ಸಹಾಯಕವಾಗಿವೆ ಎಂಬುದನ್ನು ಹೇಳಿರಿ.
4. ಭಾರತದಲ್ಲಿ ಕೃಷಿ ಹಿಡುವಳಿಗಳ ಗಾತ್ರವು ಇಳಿಕೆಯಾಗಲು ಕಾರಣಗಳು ಯಾವವು?
5. ಭಾರತದ ಕೃಷಿಯ ಬಿಕ್ಕಟ್ಟಿಗೆ ಕಾರಣಗಳು ಪರಿಶೀಲಿಸಿ.
6. ಭಾರತದಲ್ಲಿ ಕೃಷಿ ಬಿಕ್ಕಟ್ಟಿಗೆ ಪರಿಹಾರಗಳನ್ನು ಚರ್ಚಿಸಿರಿ.

**III. ಯೋಜನಾ ಕಾರ್ಯ**

ನಿಮ್ಮ ಹತ್ತಿರದ ಸಣ್ಣ ಕೈಗಾರಿಕೆಯನ್ನು ಭೇಟಿ ನೀಡಿರಿ ಮತ್ತು ಅದರ ಮಾಲೀಕ/ನಿರ್ವಾಹಕರ ಜೊತೆಗೆ ಸಮಸ್ಯೆಗಳನ್ನು ಚರ್ಚಿಸಿರಿ.

**IV. ಚಟುವಟಿಕೆ**

1. ಶಾಲೆಯಲ್ಲಿ ಯುವ ಸಂಸತ್ತು ನಡೆಸಿ, ಅಲ್ಲಿ ಕೃಷಿ ಕ್ಷೇತ್ರದ ಸಮಸ್ಯೆಗಳು ಮತ್ತು ಅವುಗಳ ಪರಿಹಾರಕ್ಕೆ ಸಂಬಂಧಿಸಿದಂತೆ ಸಮಗ್ರ ಚರ್ಚೆ ನಡೆಸಿ.

*****

© KTBS Not to be re published

## ಅಧ್ಯಾಯ – 4

# ಸರ್ಕಾರ ಮತ್ತು ಅರ್ಥವ್ಯವಸ್ಥೆ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಅಭಿವೃದ್ಧಿಯನ್ನು ಸಾಧಿಸುವಲ್ಲಿ ಯೋಜನೆಯ ಅರ್ಥ.*
- *ಭಾರತದಲ್ಲಿ ಯೋಜನೆಗಳ ಸಾಧನೆಗಳು.*
- *ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ಪರಿಕಲ್ಪನೆಗಳು.*
- *ಭಾರತದಲ್ಲಿನ ಪ್ರಮುಖ ಅಭಿವೃದ್ಧಿ ಕಾರ್ಯಕ್ರಮಗಳು.*

ರಾಷ್ಟ್ರದ ಆರ್ಥಿಕ ಅಭಿವೃದ್ಧಿಯಲ್ಲಿ ಮತ್ತು ಜನರ ಯೋಗಕ್ಷೇಮ ಹೆಚ್ಚಿಸುವಲ್ಲಿ ಸರ್ಕಾರ ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ. ಆರ್ಥಿಕ ಬೆಳವಣಿಗೆ, ಸ್ಥಿರತೆ, ಸಮಾನತೆ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡಲು ಹಲವು ಕ್ರಮಗಳನ್ನು ಸರ್ಕಾರ ಕೈಗೊಳ್ಳುತ್ತದೆ. ಅಲ್ಲದೇ ಆರ್ಥಿಕ ಪಿಡುಗುಗಳಾದ ಬಡತನ, ನಿರುದ್ಯೋಗ, ಹಣದುಬ್ಬರ, ಮೂಲಸೌಕರ್ಯಗಳ ಕೊರತೆ ಮತ್ತು ಅಸಮಾನತೆಗಳನ್ನು ತೊಡೆದುಹಾಕಲು ಯೋಜನೆಗಳನ್ನು ರೂಪಿಸುತ್ತದೆ.

1947ರಲ್ಲಿ ದೇಶ ಸ್ವಾತಂತ್ರ್ಯ ಪಡೆದಾಗ ಆರ್ಥಿಕ ಪರಿಸ್ಥಿತಿಯು ತುಂಬಾ ಗಂಭೀರವಾಗಿತ್ತು. ತಲಾ ಆದಾಯ ಅಲ್ಪವಾಗಿದ್ದಿತು; ಆಹಾರೋತ್ಪಾದನೆಯು ಅಗತ್ಯಕ್ಕಿಂತ ಕಡಿಮೆ ಇದ್ದಿತು; ತುಂಬಾ ಕಡಿಮೆ ಸಂಖ್ಯೆಯ ಉದ್ದಿಮೆಗಳಿದ್ದವು; ಯಂತ್ರೋಪಕರಣಗಳನ್ನು ನಾವು ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದೆವು; ಸಾರಿಗೆ, ಶಕ್ತಿ, ಸಂಪರ್ಕ ಸಾಧನಗಳು ಅಸಮರ್ಪಕವಾಗಿದ್ದವು; ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳು ಸ್ವಲ್ಪ ಜನರಿಗೆ ಮಾತ್ರ ದಕ್ಕುತ್ತಿದ್ದವು; ಮತ್ತು ಎಲ್ಲೆಡೆ ಹಿಂದುಳಿದ ವಾತಾವರಣವೇ ಇದ್ದಿತು. ಆದ್ದರಿಂದ ಅಭಿವೃದ್ಧಿಗೆ ಇರುವ ಅಡೆತಡೆಗಳನ್ನು ನಿವಾರಿಸಿ ಹಿಂದುಳಿದಿರುವಿಕೆಯನ್ನು ನಿವಾರಿಸಲು ಸರ್ಕಾರವು ಆದ್ಯ ಗಮನ ನೀಡಬೇಕಿತ್ತು. ಈ ಪರಿಸ್ಥಿತಿಯಲ್ಲಿ ಆಗಿನ ಮುಖಂಡರು ಸಕಾರಾತ್ಮಕವಾಗಿ ಸ್ಪಂದಿಸಿ ದೇಶದ ಒಟ್ಟಾರೆ ಸಾಮಾಜಿಕ–ಆರ್ಥಿಕ ಅಭಿವೃದ್ಧಿಗಾಗಿ ಬಹಳಷ್ಟು ಕ್ರಮಗಳನ್ನು ಆರಂಭಿಸಿದರು. ಈ ನಿಟ್ಟಿನಲ್ಲಿ ಪ್ರಮುಖವಾದುದು ಅಂದರೆ ಯೋಜನಾ ವಿಧಾನ.

### ಭಾರತದಲ್ಲಿ ಯೋಜನೆ

ಸರ್ವರ ಹಿತಾಸಕ್ತಿ ವೃದ್ಧಿಗೋಸ್ಕರ ಲಭ್ಯವಿರುವ ಸಂಪನ್ಮೂಲಗಳ ವ್ಯವಸ್ಥಿತ ವಿನಿಯೋಜನೆ ಮತ್ತು ಇತರ ಉದ್ದೇಶಪೂರ್ವಕ ಕ್ರಮಗಳನ್ನು ಅಳವಡಿಸಿಕೊಂಡು ಪೂರ್ವ ನಿಗದಿತ ಗುರಿಗಳ ಸಾಧನೆಯೆಡೆಗೆ ಸಾಗವುದೇ ಯೋಜನೆ. ಅಗತ್ಯತೆಗಳನ್ನು ಗುರುತಿಸುವುದು; ಗುರಿಗಳನ್ನು ನಿರ್ಧರಿಸುವುದು; ಸಂಪನ್ಮೂಲಗಳನ್ನು ಸಂಗ್ರಹಿಸುವುದು; ಸಂಪನ್ಮೂಲಗಳ ಬಳಕೆಗೆ ಕ್ರಿಯಾಯೋಜನೆಗಳನ್ನು ರೂಪಿಸಿ ಮೇಲುಸ್ತುವಾರಿ ಮಾಡುವುದು; ಮತ್ತು ಉದ್ದೇಶಗಳ ಈಡೇರಿಕೆಯನ್ನು ಮೌಲ್ಯಮಾಪನ ಮಾಡುವ ಕಾರ್ಯಗಳನ್ನು ಒಳಗೊಂಡ ಪ್ರಕ್ರಿಯೆಯನ್ನು ಯೋಜನಾ ವಿಧಾನ ಎಂದು ಕರೆಯುತ್ತೇವೆ.

ಈ ಚಟುವಟಿಕೆಗಳನ್ನು ಕಾರ್ಯಗತಗೊಳಿಸಲು ಭಾರತದಲ್ಲಿ 1950ರಲ್ಲಿ ಯೋಜನಾ ಆಯೋಗವನ್ನು ರಚಿಸಲಾಯಿತು. 2015ರಲ್ಲಿ ಯೋಜನಾ ಆಯೋಗದ ಜಾಗದಲ್ಲಿ ನೀತಿ (National Institute for Transforming India (NITI) Ayog) ಆಯೋಗವನ್ನು ಸ್ಥಾಪಿಸಲಾಯಿತು. ಯೋಜನಾ ಆಯೋಗವು ಮಿಶ್ರ ಆರ್ಥಿಕ ವ್ಯವಸ್ಥೆಯ ಚೌಕಟ್ಟಿನಲ್ಲಿ ರಾಷ್ಟ್ರದ ಪ್ರಗತಿಗೆ ನಿರ್ದಿಷ್ಟ ದಿಶೆ ನೀಡಲು ಪಂಚವಾರ್ಷಿಕ ಯೋಜನೆಗಳನ್ನು

©KTBS Not to be republished

ರೂಪಿಸಿ ಅನುಷ್ಠಾನಗೊಳಿಸಿದರೆ, ನೀತಿ ಆಯೋಗವು ಅರ್ಥವ್ಯವಸ್ಥೆಯನ್ನು ಅಪೇಕ್ಷಿತ ಗುರಿಗಳನ್ನು ಸಾಧಿಸಲು ದೀರ್ಘಾವಧಿ ಮುನ್ನೋಟ ತಂತ್ರಗಳನ್ನು ರೂಪಿಸುವತ್ತ ಒತ್ತು ನೀಡಿದೆ.

**ಭಾರತದಲ್ಲಿ ಯೋಜನೆಗಳ ಉದ್ದೇಶಗಳು**

1. **ಆರ್ಥಿಕ ಬೆಳವಣಿಗೆಯನ್ನು ವೃದ್ಧಿಸುವುದು:** ಬಡತನವನ್ನು ಕಡಿಮೆಗೊಳಿಸಲು ರಾಷ್ಟ್ರೀಯ ಆದಾಯದ ಬೆಳವಣಿಗೆಯನ್ನು ಅತ್ಯವಶ್ಯ ಗುರಿ ಎಂದು ಪಾಲಿಸಲಾಯಿತು.
2. **ಅರ್ಥವ್ಯವಸ್ಥೆಯನ್ನು ಆಧುನೀಕರಣಗೊಳಿಸುವುದು:** ಅಧಿಕ ಪ್ರಮಾಣದ ಸರಕು ಹಾಗೂ ಸೇವೆಗಳನ್ನು ಉತ್ಪಾದಿಸುವ ಸಾಮರ್ಥ್ಯ ಹೆಚ್ಚಿಸಲು ಆಧುನಿಕ ತಂತ್ರಜ್ಞಾನ ಬಳಕೆಯನ್ನು ವಿಸ್ತರಿಸುವುದು ಯೋಜನೆಗಳ ಮತ್ತೊಂದು ಉದ್ದೇಶವಾಗಿದ್ದಿತು.
3. **ಸ್ವಾವಲಂಬನೆ ಸಾಧಿಸುವುದು:** ನಮ್ಮ ಹಲವಾರು ಅವಶ್ಯಕತೆಗಳನ್ನು, ಮುಖ್ಯವಾಗಿ ತಂತ್ರಜ್ಞಾನ, ಆಹಾರ ಮತ್ತು ಇಂಧನಗಳನ್ನು ನಾವು ಇತರ ರಾಷ್ಟ್ರಗಳಿಂದ ಆಮದಿನ ಮೂಲಕ ಪೂರೈಸಿಕೊಳ್ಳುತ್ತಿದ್ದೆವು. ನಮ್ಮ ಆಂತರಿಕ ವಿಷಯಗಳಲ್ಲಿ ವಿದೇಶಿ ಹಸ್ತಕ್ಷೇಪಗಳನ್ನು ಕಡಿಮೆಗೊಳಿಸಲು ಯೋಜನಾ ನಿರೂಪಕರು ಆಮದನ್ನು ಕಡಿಮೆ ಮಾಡುವಂತಹ ದೇಶಿ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವ ಕ್ರಮ ಕೈಗೊಂಡರು.
4. **ಆದಾಯ ಹಾಗೂ ಸಂಪತ್ತಿನ ಅಸಮಾನತೆ ಕಡಿಮೆ ಮಾಡುವುದು:** ರಾಷ್ಟ್ರದಲ್ಲಿನ ಸಂಪತ್ತಿನ ಮರುಹಂಚಿಕೆಗೂ ಯೋಜನಾ ನಿರೂಪಕರು ಒತ್ತು ನೀಡಿದರು. ಆರ್ಥಿಕ ಬೆಳವಣಿಗೆಯ ಫಲಗಳು ಬಡಜನರಿಗೆ ತಲುಪಿ ಸರ್ವರಿಗೂ ಮೂಲ ಅವಶ್ಯಕತೆಗಳಾದ ಆಹಾರ, ವಸತಿ, ಶಿಕ್ಷಣ ಮತ್ತು ಆರೋಗ್ಯ ದೊರಕಿಸುವ ಕ್ರಮಗಳಿಗೆ ಹೆಚ್ಚಿನ ಮಹತ್ವ ನೀಡಲಾಯಿತು.
5. **ಮೂಲ ಸೌಕರ್ಯದ ವೃದ್ಧಿ:** ಸಾರಿಗೆ, ಸಂಪರ್ಕ, ಶಕ್ತಿ, ನೀರಾವರಿ, ಶಾಲೆಗಳು, ಆಸ್ಪತ್ರೆಗಳು, ಸಂಶೋಧನೆ ಹಾಗೂ ವಿಸ್ತರಣೆಗಳಂತಹ ಮೂಲ ಸೌಕರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಿ ರಾಷ್ಟ್ರವು ತೀವ್ರಗತಿಯಲ್ಲಿ ಬೆಳೆಯಲು ಅನುವು ಮಾಡಲಾಯಿತು.
6. **ಹಣಕಾಸು ಸಂಸ್ಥೆಗಳ ಅಭಿವೃದ್ಧಿ:** ವಿಶಾಲ ತಳಹದಿಯ ಹಣಕಾಸು ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಿ ಸಂಪನ್ಮೂಲ ಸಂಗ್ರಹಣೆ ಹಾಗೂ ಆ ಸಂಪನ್ಮೂಲಗಳನ್ನು ಆದ್ಯತಾ ವಲಯಗಳಿಗೆ ಒದಗಿಸುವ ಹಣಕಾಸು ಸಂಸ್ಥೆಗಳ ಸ್ಥಾಪನೆ ಮಾಡಿ ತನ್ಮೂಲಕ ಆರ್ಥಿಕ ಅಭಿವೃದ್ಧಿಗೆ ಪೂರಕ ವಾತಾವರಣ ಕಲ್ಪಿಸಲಾಯಿತು.
7. **ಸಮತೋಲಿತ ಪ್ರಾದೇಶಿಕ ಅಭಿವೃದ್ಧಿ:** ಹಲವಾರು ಕಾರಣಗಳಿಂದ ಕೆಲವು ಪ್ರದೇಶಗಳು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಹಿಂದುಳಿಯುತ್ತವೆ ಅಥವಾ ನಿಧಾನಗತಿಯಲ್ಲಿ ಬೆಳೆಯುತ್ತವೆ. ಅಂಥ ಪ್ರದೇಶಗಳ ಬೆಳವಣಿಗೆಯನ್ನು ವೃದ್ಧಿಸಿ ಮುಂದುವರೆದ ಪ್ರದೇಶಗಳ ಜೊತೆಗೆ ಸಾಗುವ ನಿಟ್ಟಿನಲ್ಲಿ ಸಮತೋಲಿತ ಪ್ರಾದೇಶಿಕ ಅಭಿವೃದ್ಧಿಯ ಉದ್ದೇಶವನ್ನೂ ಹೊಂದಲಾಯಿತು.
8. **ಖಾಸಗಿ ವಲಯದ ಉತ್ತೇಜನ:** ಭಾರತದ ಮಿಶ್ರ ಆರ್ಥಿಕ ಚೌಕಟ್ಟಿನಲ್ಲಿ ಯೋಜನಾ ವಿಧಾನದಲ್ಲಿ ಖಾಸಗಿ ವಲಯಕ್ಕೂ ಸಮರ್ಪಕ ಅವಕಾಶ ಕಲ್ಪಿಸಿ ಅದರ ಬೆಳವಣಿಗೆಗೂ ಉತ್ತೇಜನ ನೀಡಲಾಗಿದೆ.

ಇಲ್ಲಿಯವರೆಗೆ ಭಾರತದಲ್ಲಿ ಹನ್ನೊಂದು ಪಂಚವಾರ್ಷಿಕ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದು, ಸದ್ಯ ಹನ್ನೆರಡನೆಯ ಪಂಚವಾರ್ಷಿಕ ಯೋಜನೆಯ ಮುಕ್ತಾಯ ಹಂತದಲ್ಲಿದ್ದೇವೆ. ಪೂರ್ವನಿರ್ಧಾರಿತ ಉದ್ದೇಶಗಳ ಚೌಕಟ್ಟಿನಲ್ಲಿ ಈ ಯೋಜನೆಗಳು ಕಾರ್ಯಾನುಗತವಾಗಿವೆಯಾದರೂ ಪ್ರತಿಯೊಂದು ಯೋಜನೆಯೂ ಒಂದು ಮಹತ್ವದ ಗುರಿಯನ್ನು ಹೊಂದಿದ್ದಿತು. ಕೋಷ್ಟಕದಲ್ಲಿ ಭಾರತದ ಯೋಜನೆಗಳ ಬಗೆಗೆ ಸ್ಥೂಲ ಮಾಹಿತಿಯಿದೆ.

©KTBS Not to be republished

## ಕೋಷ್ಟಕ : ಭಾರತದ ಪಂಚವಾರ್ಷಿಕ ಯೋಜನೆಗಳು

| ಪಂಚವಾರ್ಷಿಕ ಯೋಜನೆ | ಅವಧಿ | ಪ್ರಮುಖ ಉದ್ದೇಶ | ಹೂಡಿಕೆ (ಕೋಟಿ ರೂಪಾಯಿಗಳಲ್ಲಿ) |
|---|---|---|---|
| ಒಂದು | 1951–1956 | ಆಹಾರ ಉತ್ಪಾದನೆ | 1,960 |
| ಎರಡು | 1956–1961 | ಕೈಗಾರಿಕಾ ಪ್ರಗತಿ | 4,672 |
| ಮೂರು | 1961–1966 | ಸ್ವಾವಲಂಬನೆ | 8,577 |
| ವಾರ್ಷಿಕ | 1966–1968 | ಆಹಾರ ಉತ್ಪಾದನೆ | 6,251 |
| ನಾಲ್ಕು | 1969–1974 | ಬೆಳವಣಿಗೆ ಮತ್ತು ಬಡತನ ನಿರ್ಮೂಲನೆ | 6,160 |
| ಐದು | 1974–1979 | ಬಡತನ ನಿರ್ಮೂಲನೆ ಮತ್ತು ಸ್ವಾವಲಂಬನೆ | 42,300 |
| ಆರು | 1980–1985 | ಬಡತನ ನಿರ್ಮೂಲನೆ ಮತ್ತು ಸ್ವಾವಲಂಬನೆ | 1,09,953 |
| ಏಳು | 1985–1989 | ಆಹಾರ ಉತ್ಪಾದನೆ ಮತ್ತು ಉದ್ಯೋಗ ನಿರ್ಮಾಣ | 2,22,169 |
| ವಾರ್ಷಿಕ | 1990–1991 | ------ | ಲಭ್ಯವಿಲ್ಲ |
| ಎಂಟು | 1992–1997 | ಉದ್ಯೋಗ ನಿರ್ಮಾಣ | 4,34,100 |
| ಒಂಭತ್ತು | 1997–2002 | ಬೆಳವಣಿಗೆ | 9,41,041 |
| ಹತ್ತು | 2002–2007 | ಸಮಗ್ರ ಮತ್ತು ವೇಗದ ಬೆಳವಣಿಗೆ | 15,25,639 |
| ಹನ್ನೊಂದು | 2007–2012 | ಒಳಗೊಳ್ಳುವ ಬೆಳವಣಿಗೆ | 36,44,718 |
| ಹನ್ನೆರಡು | 2012–2017 | ಒಳಗೊಳ್ಳುವ ಬೆಳವಣಿಗೆ | 76,69,807 |

ಹೂಡಿಕೆಯಲ್ಲಿನ ಅಗಾಧ ಪ್ರಮಾಣದ ಹೆಚ್ಚಳವನ್ನು ಗಮನಿಸಬಹುದು.

©KTBS Not to be re published

**ಭಾರತದ ಯೋಜನೆಗಳ ಸಾಧನೆಗಳು ಮತ್ತು ವಿಫಲತೆಗಳು**

ಭಾರತದ ಯೋಜನೆಗಳದ್ದು ಒಂದು ಗಮನಾರ್ಹ ಯಶೋಗಾಥೆಯಿದ್ದರೂ, ಅತ್ಯಂತ ಗಂಭೀರ ವಿಫಲತೆಗಳ ಪಟ್ಟಿಯೂ ಇದೆ. ಭಾರತವು ವಿಶ್ವದ ಅತಿದೊಡ್ಡ ಆರ್ಥಿಕತೆಗಳ ಪೈಕಿ ಒಂದಾಗಿದೆ ಮತ್ತು ಅತ್ಯಂತ ತೀವ್ರವಾಗಿ ಬೆಳೆಯುತ್ತಿದೆ ಎಂಬ ಸಂಗತಿಗಳು ಯೋಜನೆಗಳ ಯಶಸ್ಸನ್ನು ಸೂಚಿಸುತ್ತವೆ.

**ಸಾಧನೆಗಳು**

1. **ರಾಷ್ಟ್ರೀಯ ಮತ್ತು ತಲಾ ಆದಾಯದಲ್ಲಿ ಹೆಚ್ಚಳ :** ರಾಷ್ಟ್ರೀಯ ಮತ್ತು ತಲಾ ಆದಾಯದ ಗಾತ್ರ ಮತ್ತು ಬೆಳವಣಿಗೆ ದರಗಳೆರಡೂ ಏರಿಕೆಯಾಗಿವೆ. ಯೋಜನಾ ಅವಧಿಯಲ್ಲಿ ರಾಷ್ಟ್ರೀಯ ಆದಾಯವು ಹಲವಾರು ಪಟ್ಟು ಹೆಚ್ಚಳ ಸಾಧಿಸಿದೆ. 1950–51ರಲ್ಲಿ 7513 ರೂಪಾಯಿಗಳಾಗಿದ್ದ ತಲಾ ಆದಾಯವು 2014–15ರ ವೇಳೆಗೆ 74193 ರೂಪಾಯಿಗಳಿಗೆ (ಸ್ಥಿರ ಬೆಲೆಗಳಲ್ಲಿ) ಏರಿಕೆಯಾಗಿದೆ.

2. **ಕೃಷಿ ಅಭಿವೃದ್ಧಿ :** 1950–51ರಲ್ಲಿ 51 ಲಕ್ಷ ಟನ್ನುಗಳಿದ್ದ ಆಹಾರ ಧಾನ್ಯಗಳ ಉತ್ಪಾದನೆಯು 1990–91ರ ವೇಳೆಗೆ 176.4 ದಶಲಕ್ಷ ಟನ್ನುಗಳಿಗೆ ಮತ್ತು 2015–16ರ ವೇಳೆಗೆ 252 ದಶಲಕ್ಷ ಟನ್ನುಗಳಿಗೆ ಹೆಚ್ಚಾಗಿದೆ. ಹತ್ತಿ, ಕಬ್ಬು, ಎಣ್ಣೆ ಕಾಳುಗಳು, ತರಕಾರಿ, ಹಣ್ಣುಗಳು, ಹಾಲು ಮತ್ತು ಇತರ ಕೃಷಿ ಉತ್ಪನ್ನಗಳ ಉತ್ಪಾದನೆಯು ಹಲವು ಪಟ್ಟು ಹೆಚ್ಚಳವಾಗಿದೆ. ಅತ್ಯವಶ್ಯವಾಗಿದ್ದ ದೇಶದ ಆಹಾರ ಭದ್ರತೆ ಸಾಕಾರಗೊಂಡಿದೆ.

3. **ಕೈಗಾರಿಕೆಗಳ ಅಭಿವೃದ್ಧಿ:** ಕಬ್ಬಿಣ ಮತ್ತು ಉಕ್ಕು, ಯಂತ್ರೋಪಕರಣಗಳು, ರಾಸಾಯನಿಕ ಗೊಬ್ಬರಗಳು ಸೇರಿದಂತೆ ಬಂಡವಾಳ ಸರಕುಗಳನ್ನು ಉತ್ಪಾದಿಸುವ ಕೈಗಾರಿಕೆಗಳ ಗಣನೀಯ ವೃದ್ಧಿ ಆಗಿದೆ.

4. **ಆರ್ಥಿಕ ಮೂಲಸೌಕರ್ಯದ ಅಭಿವೃದ್ಧಿ:** ಸಾರಿಗೆ, ಶಕ್ತಿ ಉತ್ಪಾದನೆ, ಸಂಪರ್ಕ, ನೀರಾವರಿ ಸೇರಿದಂತೆ ಎಲ್ಲ ಆರ್ಥಿಕ ಮೂಲ ಸೌಕರ್ಯಗಳ ಅಭಿವೃದ್ಧಿಯೂ ಸಹ ಗಣನೀಯ ವೃದ್ಧಿ ಸಾಧಿಸಿವೆ.

5. **ಸಾಮಾಜಿಕ ಮೂಲಸೌಕರ್ಯದ ಅಭಿವೃದ್ಧಿ:** ಶಿಕ್ಷಣ, ಆರೋಗ್ಯ, ಕುಟುಂಬ ಕಲ್ಯಾಣ, ವಸತಿ, ಕಾರ್ಮಿಕ ಕಲ್ಯಾಣ, ದುರ್ಬಲರ ಕಲ್ಯಾಣದಂತಹ ಸಾಮಾಜಿಕ ಮೂಲ ಸೌಕರ್ಯಗಳ ಅಭಿವೃದ್ಧಿಗೂ ಸಹ ಯೋಜನೆಗಳು ಕಾರಣೀಭೂತವಾಗಿವೆ.

6. **ಸ್ವಾವಲಂಬನೆ:** ಮೂಲ ಅನುಭೋಗಿ ಸರಕುಗಳು ಮತ್ತು ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಭಾರತವು ಸ್ವಾವಲಂಬನೆ ಸಾಧಿಸಲು ಸಾಧ್ಯವಾದದ್ದು ಯೋಜನೆಗಳಿಂದಲೇ. ಉಕ್ಕು, ಶಕ್ತಿ ಮತ್ತು ರಾಸಾಯನಿಕ ಗೊಬ್ಬರಗಳಂತಹ ಮೂಲ ಉದ್ದಿಮೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿ ಇದನ್ನು ಸಾಕಾರಗೊಳಿಸಲಾಯಿತು.

7. **ಉದ್ಯೋಗ ನಿರ್ಮಾಣ:** ಸಣ್ಣ ಹಾಗೂ ಗುಡಿ ಕೈಗಾರಿಕೆಗಳ ಸ್ಥಾಪನೆ, ತಾಂತ್ರಿಕ ಶಿಕ್ಷಣದ ವಿಸ್ತರಣೆ, ಸ್ವ–ಉದ್ಯೋಗ ಕಾರ್ಯಕ್ರಮಗಳ ಅನುಷ್ಠಾನ, ಬೃಹತ್ ಉದ್ದಿಮೆಗಳ ಸ್ಥಾಪನೆ, ಕೃಷಿ ಮತ್ತು ಸೇವಾ ವಲಯಗಳ ಸುಧಾರಣೆ, ಮುಂತಾದ ಕ್ರಮಗಳ ಮೂಲಕ ಸಾಕಷ್ಟು ಪ್ರಮಾಣದ ಉದ್ಯೋಗಾವಕಾಶ ಸೃಷ್ಟಿಯಾಗಿದೆ.

©KTBS Not to be republished

8. **ಬಂಡವಾಳ ಸಂಚಯನ:** ಆರ್ಥಿಕ ಬೆಳವಣಿಗೆಯ ಜೊತೆಜೊತೆಗೆ ಆದಾಯ ವೃದ್ಧಿಯಾಗಿ ಬಂಡವಾಳ ಸಂಚಯನವೂ ಸಹ ಹೆಚ್ಚಿದೆ.

9. **ವಿಜ್ಞಾನ ಮತ್ತು ತಂತ್ರಜ್ಞಾನಗಳ ಅಭಿವೃದ್ಧಿ:** ಭಾರತವು ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಗಣನೀಯ ಪ್ರಗತಿ ಸಾಧಿಸಿದ್ದು, ವಿಶ್ವದಲ್ಲಿ ಮೂರನೆಯ ಸ್ಥಾನದಲ್ಲಿದೆ. ಭಾರತದ ಇಂಜಿನಿಯರುಗಳು ಮತ್ತು ವಿಜ್ಞಾನಿಗಳು ಸ್ವತಂತ್ರವಾಗಿ ಯಾವುದೇ ತಾಂತ್ರಿಕ ಕಾರ್ಯ ನಿಭಾಯಿಸುವ ಸಾಮರ್ಥ್ಯ ಹೊಂದಿದ್ದಾರೆ.

10. **ಸಾಮಾಜಿಕ ನ್ಯಾಯ:** ಭಾರತೀಯ ಯೋಜನೆಗಳ ಮೂಲಭೂತ ಉದ್ದೇಶವು ಬೆಳವಣಿಗೆಯ ಜೊತೆಗೆ ಸಾಮಾಜಿಕ ನ್ಯಾಯವನ್ನು ಸಾಧಿಸುವುದಾಗಿತ್ತು. ಭೂ ಸುಧಾರಣೆಗಳು, ಜೀತ ಪದ್ಧತಿಯ ನಿರ್ಮೂಲನೆ, ಗ್ರಾಮೀಣ ಸಾಲದ ರದ್ಧತಿ, ಕನಿಷ್ಠ ಕೂಲಿಯ ನಿಗದಿ, ಕನಿಷ್ಠ ಅವಶ್ಯಕತೆಗಳ ಪೂರೈಕೆ, ಆರ್ಥಿಕ ಶಕ್ತಿಯ ಕೇಂದ್ರೀಕರಣಕ್ಕೆ ತಡೆ ಮತ್ತು ಆರ್ಥಿಕ ಅಂತರಗಳನ್ನು ತೊಡೆದುಹಾಕುವ ಹಲವಾರು ಕ್ರಮಗಳ ಮೂಲಕ ಸಾಮಾಜಿಕ ನ್ಯಾಯ ಒದಗಿಸುವ ಕಾರ್ಯವನ್ನು ಯೋಜನೆಗಳ ಮೂಲಕ ಮಾಡಲಾಗಿದೆ.

**ವಿಫಲತೆಗಳು**

ಭಾರತೀಯ ಯೋಜನೆಗಳಲ್ಲಿ ಕೆಲವು ವಿಫಲತೆಗಳಿದ್ದು, ಅವುಗಳಲ್ಲಿ ಪ್ರಮುಖವಾದುವೆಂದರೆ:

1. **ಉತ್ಪಾದನೆಯ ಹಾಗೂ ಆದಾಯಗಳ ನಿಧಾನಗತಿಯ ಬೆಳವಣಿಗೆ :** ಯೋಜನೆಗಳಲ್ಲಿ ಉತ್ಪಾದನೆ ಹಾಗೂ ಆದಾಯದ ಬೆಳವಣಿಗೆ ದರಗಳು ನಿಧಾನ ಅಷ್ಟೇ ಅಲ್ಲದೇ ನಿಗದಿಗೊಳಿಸಿದ ಗುರಿಗಳಿಗಿಂತ ಕಡಿಮೆ ಇವೆ.

2. **ಬೆಲೆಗಳಲ್ಲಿ ಹೆಚ್ಚಳ:** ಉತ್ಪಾದನೆಯ ನಿಧಾನಗತಿಯ ಬೆಳವಣಿಗೆ ಆದರೆ ಜನಸಂಖ್ಯೆಯ ತೀವ್ರ ಬೆಳವಣಿಗೆಗಳ ದೆಸೆಯಿಂದಾಗಿ ಪ್ರತಿ ಯೋಜನೆಯಲ್ಲಿ ಬೆಲೆಗಳು ನಿರಂತರವಾಗಿ ಏರುತ್ತ ಸಾಗಿವೆ.

3. **ನಿರುದ್ಯೋಗದಲ್ಲಿ ಹೆಚ್ಚಳ:** ಯೋಜನಾ ಅವಧಿಯಲ್ಲಿ ನಿರುದ್ಯೋಗದ ಪ್ರಮಾಣವೂ ಅಧಿಕವಾಗುತ್ತಾ ಸಾಗಿದೆ. ಉದ್ಯೋಗಾವಕಾಶಗಳ ಸೃಷ್ಟಿಯಾದರೂ, ಅವು ಯುವ ಜನಸಂಖ್ಯೆಯು ಹೆಚ್ಚಳವಾದ ಪ್ರಮಾಣಕ್ಕನುಗುಣವಾಗಿ ಇರಲಿಲ್ಲ. ಹೀಗಾಗಿ ನಿರುದ್ಯೋಗ ಹೆಚ್ಚುತ್ತ ಹೋಗಿದೆ. ವಾಸ್ತವವಾಗಿ ಕಳೆದ ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ಜರುಗಿದ ಬೆಳವಣಿಗೆಯು 'ಉದ್ಯೋಗ ರಹಿತ ಬೆಳವಣಿಗೆ' ಎಂದು ವರ್ಣಿಸಲ್ಪಟ್ಟಿದೆ.

4. **ಬಡತನ ಹಾಗೂ ಅಸಮಾನತೆಯ ಮುಂದುವರಿಕೆ:** ಯೋಜನೆಗಳು ಬಡತನವನ್ನು ಕಡಿಮೆ ಮಾಡುವಲ್ಲಿಯೂ ವಿಫಲತೆ ಹೊಂದಿವೆ. ಬಡತನದ ಪ್ರತಿಶತ ಪ್ರಮಾಣ ಕಡಿಮೆಯಾಗಿದ್ದರೂ, ದೇಶದಲ್ಲಿರುವ ಒಟ್ಟು ಬಡಜನರ ಸಂಖ್ಯೆಯು ವಿಶ್ವದಲ್ಲಿಯೇ ಅತಿ ಹೆಚ್ಚಿನದು ಎಂದು ಹೇಳಲಾಗುತ್ತದೆ. ಅಸಮಾನತೆಗಳೂ ಕಡಿಮೆಯಾಗಿಲ್ಲ.

5. **ಮೂಲ ಸೌಕರ್ಯಗಳ ಅಸಮರ್ಪಕ ಅಭಿವೃದ್ಧಿ:** ತೀವ್ರ ಅಭಿವೃದ್ಧಿಗೆ ಅವಶ್ಯವಿರುವ ಪ್ರಮಾಣದಲ್ಲಿ ಅಥವಾ ಬೇರೆ ರಾಷ್ಟ್ರಗಳಲ್ಲಿ ಲಭ್ಯವಿರುವ ಮಟ್ಟದಲ್ಲಿ ಸಾರಿಗೆ, ಸಂಪರ್ಕ, ಶಕ್ತಿ, ನೀರಾವರಿ, ಶಿಕ್ಷಣ, ಆರೋಗ್ಯ, ಹಣಕಾಸು ಸೌಲಭ್ಯ ಮುಂತಾದವುಗಳು ಭಾರತದಲ್ಲಿ ಲಭ್ಯವಿಲ್ಲ.

©KTBS Not to be re published

6. **ಅದಕ್ಷ ಆಡಳಿತ:** ಭಾರತೀಯ ಯೋಜನೆಗಳ ಒಂದು ಪ್ರಮುಖ ಕೊರತೆ ಎಂದರೆ ಅವುಗಳ ದುರ್ಬಲ ಅನುಷ್ಠಾನ. ಆಡಳಿತಶಾಹಿಯಲ್ಲಿರುವ ಅದಕ್ಷತೆ, ಅಪ್ರಾಮಾಣಿಕತೆ, ಪಟ್ಟಭದ್ರ ಹಿತಾಸಕ್ತಿಯಲ್ಲದೇ, ಕೆಂಪು ಪಟ್ಟಿ ಮನೋಭಾವಗಳು ಯೋಜನೆಗಳ ಸದುದ್ದೇಶಗಳನ್ನೇ ಹಾಳು ಮಾಡಿವೆ.

7. **ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲದ ರಫ್ತು ಹೆಚ್ಚಳ:** ಉತ್ಪಾದನೆಯ ನಿಧಾನಗತಿಯ ಬೆಳವಣಿಗೆ, ಪುರಾತನ ತಾಂತ್ರಿಕತೆಯ ಬಳಕೆ ಮತ್ತು ಉತ್ಪಾದನೆಯಲ್ಲಿನ ಅದಕ್ಷತೆಯಿಂದಾಗಿ, ನಮ್ಮ ಸರಕುಗಳು ರಫ್ತು ಮಾರುಕಟ್ಟೆಗಳಲ್ಲಿ ಸ್ಪರ್ಧಾತ್ಮಕವಾಗಿಲ್ಲ. ಹಲವಾರು ವರ್ಷಗಳ ನಮ್ಮ ನೀತಿಯು ಆಮದು ನಿಯಂತ್ರಣದ ಕಡೆಗೆ ಇತ್ತು. ಈ ಎಲ್ಲ ಕಾರಣಗಳಿಂದಾಗಿ ರಫ್ತು ಮತ್ತು ರಫ್ತು ಗಳಿಕೆಯು ನಿರೀಕ್ಷಿತ ಪ್ರಮಾಣದಲ್ಲಿ ಆಗಿಲ್ಲ.

ಹೀಗೆ ಭಾರತೀಯ ಯೋಜನೆಗಳಿಗೆ ಸಂಬಂಧಿಸಿದಂತೆ ಬಹುವಿಧ ಕೊರತೆಗಳು ಮತ್ತು ಅಸಮರ್ಪಕತೆಗಳು ಕಂಡು ಬರುತ್ತವೆ. ಯೋಜನೆಗಳನ್ನು ಚೆನ್ನಾಗಿ ರೂಪಿಸಲಾಗಿತ್ತು, ಆದರೆ ಅವುಗಳ ಅನುಷ್ಠಾನ ನಿರೀಕ್ಷಿಸಿದಂತೆ ಆಗಿಲ್ಲ.

**ಆರ್ಥಿಕ ಸುಧಾರಣೆಗಳು (ಎಲ್‌ಪಿಜಿ ನೀತಿಗಳು)**

ಬಹಳಷ್ಟು ಅರ್ಥಶಾಸ್ತ್ರಜ್ಞರು ಭಾರತದ ಆರ್ಥಿಕ ಸಾಧನೆಯ ಅದರಲ್ಲೂ ಸಾರ್ವಜನಿಕ ಉದ್ದಿಮೆಗಳ ಸಾಧನೆಯ ಕುರಿತು ಅತೃಪ್ತಿ ಹೊಂದಿದ್ದರು. 1990–91ರ ವೇಳೆಗೆ ಭಾರತವು ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿಕೊಂಡಿತ್ತು. ವ್ಯಾಪಾರ ಶಿಲ್ಕಿನ ಅಗಾಧ ಕೊರತೆ, ಅತ್ಯಂತ ಕಡಿಮೆ ಪ್ರಮಾಣದ ವಿದೇಶೀ ವಿನಿಮಯ ಸಂಗ್ರಹ, ಹಣದುಬ್ಬರ ಮತ್ತು ಅತಿ ಹೆಚ್ಚು ಪ್ರಮಾಣದಲ್ಲಿದ್ದ ಮುಂಗಡಪತ್ರದ ಕೊರತೆಗಳು ಆರ್ಥಿಕತೆಯನ್ನು ಮತ್ತು ಜನರ ಜೀವನವನ್ನು ಸಂಕಷ್ಟಕ್ಕೆ ಸಿಲುಕಿಸಿದವು.

ಈ ಸಂದರ್ಭದಲ್ಲಿ ಆರ್ಥಿಕ ನೀತಿಗಳು ಸುಧಾರಣೆಗೊಳ್ಳಬೇಕು ಎಂಬ ಭಾವನೆ ವಿಸ್ತೃತವಾಗಿ ಬಲಗೊಂಡು 1991ರಲ್ಲಿ ಹೊಸ ಆರ್ಥಿಕ ನೀತಿಯು ಜಾರಿಗೆ ಬಂದಿತು. ಈ ಹೊಸ ಆರ್ಥಿಕ ನೀತಿಗಳನ್ನು 'ಆರ್ಥಿಕ ಸುಧಾರಣೆಗಳು' ಎಂದೂ ಕರೆಯಲಾಗುತ್ತದೆ. ಈ ನೀತಿಗಳು ಉದಾರೀಕರಣ (Liberalization), ಖಾಸಗೀಕರಣ (Privatization) ಮತ್ತು ಜಾಗತೀಕರಣಗಳ (Globalization) ಮೇಲೆ ಹೆಚ್ಚು ಒತ್ತನ್ನು ನೀಡಿದ್ದರಿಂದ ಅವುಗಳನ್ನು ಸಂಕ್ಷಿಪ್ತದಲ್ಲಿ ಎಲ್‌ಪಿಜಿ ನೀತಿಗಳು ಎಂದೂ ಕರೆಯುತ್ತಾರೆ.

**ಅರ್ಥ :** ಮಾರುಕಟ್ಟೆ ಅಡೆತಡೆಗಳನ್ನು ತೆಗೆದು ಹಾಕುವ, ಖಾಸಗಿ ವಲಯದ ಸಹಭಾಗಿತ್ವವನ್ನು ಹೆಚ್ಚಿಸುವ, ವಿತ್ತೀಯ ಕೊರತೆಯನ್ನು ಕಡಿಮೆ ಮಾಡುವ, ರಫ್ತು ಪ್ರಮಾಣದಲ್ಲಿ ಹೆಚ್ಚಳ ಸಾಧಿಸಿ ಆಮದು ಪ್ರಮಾಣದಲ್ಲಿ ಇಳಿಕೆ ಸಾಧಿಸುವ ಮೂಲಕ ಆರ್ಥಿಕ ಬೆಳವಣಿಗೆಗೆ ಪೂರಕವಾದ ನೀತಿಗಳ ಗುಚ್ಛವನ್ನು ಆರ್ಥಿಕ ಸುಧಾರಣೆ ಎಂದು ಕರೆಯುತ್ತೇವೆ.

ಈ ನೀತಿಗಳ ಗುಚ್ಛವು ಈ ಕೆಳಗಿನ ಅಂಶಗಳನ್ನು ಒಳಗೊಂಡಿದೆ:

1. ವಿದೇಶಿ ಹೂಡಿಕೆಗೆ ಅನುಕೂಲವಾಗುವಂಥ ಲೈಸೆನ್ಸಿಂಗ್ ಪದ್ಧತಿಯನ್ನು ನಿವಾರಿಸುವ ಮತ್ತು ಉದ್ದಿಮೆಗಳನ್ನು ಖಾಸಗೀಕರಣಗೊಳಿಸುವ ಉದಾರ ಔದ್ಯಮಿಕ ನೀತಿ.

©KTBS Not to be republished

2. ಹಲವು ಉದ್ದಿಮೆಗಳಲ್ಲಿ ವಿದೇಶಿ ನೇರ ಹೂಡಿಕೆಗೆ ಮುಕ್ತ ಅನುಮೋದನೆ.

3. ಭಾರತದ ರಫ್ತುಗಳನ್ನು ಸುಲಭವಾಗಿ ಕಳಿಸುವ ಹಾಗೂ ಅವಶ್ಯವಿರುವ ಕಚ್ಚಾ ಸರಕುಗಳನ್ನು ಸುಲಭವಾಗಿ ಆಮದು ಮಾಡಿಕೊಳ್ಳಬಹುದಾದ ಉದಾರ ಆಮದು–ರಫ್ತು ನೀತಿ.

4. ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ವೀಕೃತವಾದ ಮಾನದಂಡಗಳನುಸಾರ ಬ್ಯಾಂಕು ಮತ್ತು ಹಣಕಾಸು ವಲಯದ ಒಟ್ಟಾರೆ ಪುನಾರಚನೆ.

5. ತೆರಿಗೆ ಜಾಲವನ್ನು ವಿಸ್ತರಿಸುವ ಮತ್ತು ತೆರಿಗೆ ಆದಾಯ ಹೆಚ್ಚಿಗೆ ಬರುವಂಥ ತೆರಿಗೆ ಸುಧಾರಣೆಗಳು.

6. ಹೂಡಿಕೆಯ ಮೇಲಿರುವ ಸರ್ಕಾರದ ನಿರ್ಬಂಧಗಳನ್ನು ಹಿಂತೆಗೆದುಕೊಳ್ಳುವುದು ಮತ್ತು ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣಗೊಳಿಸುವುದು.

ಆರ್ಥಿಕ ಉದಾರೀಕರಣವು ಭಾರತದ ಆರ್ಥಿಕತೆಯನ್ನು ತೀವ್ರ ಬೆಳವಣಿಗೆಯ ಹಂತಕ್ಕೆ ಕೊಂಡೊಯ್ಯಲು ಕಾರಣೀಭೂತವಾಗಿದೆ. ಭಾರತವನ್ನು ಈಗ ಏಷ್ಯಾದ ಪ್ರಮುಖ ಆರ್ಥಿಕತೆಗಳಲ್ಲಿ ಒಂದು ಎಂದು ಪರಿಗಣಿಸಲಾಗುತ್ತದೆ. ಭಾರತಕ್ಕೆ ಹರಿದು ಬರುತ್ತಿರುವ ವಿದೇಶಿ ಹೂಡಿಕೆಯಲ್ಲಿ ಅಗಾಧ ಹೆಚ್ಚಳವಾಗಿದೆ. ಹಲವು ಬಹುರಾಷ್ಟ್ರೀಯ ಕಂಪೆನಿಗಳು ಭಾರತದಲ್ಲಿ ತಮ್ಮ ಕಛೇರಿಗಳನ್ನು ತೆರೆದಿವೆ. ಭಾರತದ ತಲಾ ಆದಾಯವು ಹೆಚ್ಚಾಗಿದ್ದುದು ಒಂದು ಸಕಾರಾತ್ಮಕ ಚಿಹ್ನೆಯಾಗಿದೆ. ಭಾರತವು ಸೇವೆಗಳ ಮತ್ತು ಮುಖ್ಯವಾಗಿ ಸಾಫ್ಟ್‌ವೇರ್ ಹಾಗೂ ಮಾಹಿತಿ ತಂತ್ರಜ್ಞಾನ ಸಂಬಂಧಿತ ರಫ್ತುಗಳ ಮುಂಚೂಣಿಯಲ್ಲಿದೆ. ವಿಪ್ರೋ, ಇನ್‌ಫೋಸಿಸ್, ಟಿಸಿಎಸ್, ಎಚ್‌ಸಿಎಲ್, ಟೆಕ್ ಮಹಿಂದ್ರಾ ಮತ್ತು ಇನ್ನೂ ಹಲವಾರು ಕಂಪನಿಗಳು ವಿಶ್ವವಿಖ್ಯಾತಿಯನ್ನು ಹೊಂದಿವೆ. ಹೀಗೆ ಹೊಸ ಆರ್ಥಿಕ ನೀತಿಗಳು ಭಾರತವನ್ನು ಉದಾರಿ ಅಥವಾ ಮಾರುಕಟ್ಟೆ ಆಧಾರಿತ ಅರ್ಥವ್ಯವಸ್ಥೆಯತ್ತ ಕೊಂಡೊಯ್ಯುತ್ತಿವೆ. 1990–91ರಲ್ಲಿ ಅನುಭವಿಸಿದ್ದ, ಬಹಳಷ್ಟು ಕಂಟಕಗಳಿಂದ ಭಾರತವನ್ನು ಈ ನೀತಿಗಳು ಮುಕ್ತಿಗೊಳಿಸಿವೆ. ಇವೆಲ್ಲಕ್ಕಿಂತ ಹೆಚ್ಚಾಗಿ 2008–09ರಲ್ಲಿ ಇಡೀ ವಿಶ್ವವನ್ನೇ ತಲ್ಲಣಗೊಳಿಸಿದ ಆರ್ಥಿಕ ಬಿಕ್ಕಟ್ಟನ್ನು ಭಾರತ ಸದೃಢತೆಯಿಂದ ಎದುರಿಸಿ ನಿಂತಿತು.

### ಆರ್ಥಿಕ ಅಭಿವೃದ್ಧಿಗಾಗಿ ಇರುವ ಸರ್ಕಾರದ ಪ್ರಸ್ತುತ ಕಾರ್ಯಕ್ರಮಗಳು

ಆರ್ಥಿಕ ಅಭಿವೃದ್ಧಿ ಸಾಧಿಸಲು ಸರ್ಕಾರಗಳು ಹಲವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಅವುಗಳಲ್ಲಿ ಈ ಕೆಳಗಿನವು ಪ್ರಮುಖವಾಗಿವೆ:

#### ಒಟ್ಟಾರೆ ಅಭಿವೃದ್ಧಿ

1. **ಡಿಜಿಟಲ್ ಇಂಡಿಯಾ:** ಜನರಿಗೆ ಸರ್ಕಾರಿ ಸೇವೆಗಳು ತ್ವರಿತವಾಗಿ ವಿದ್ಯುನ್ಮಾನ ರೂಪದಲ್ಲಿ ದೊರಕಿಸಿಕೊಡುವುದು ಮತ್ತು ಜನರು ಇತ್ತೀಚಿನ ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನದ ಪ್ರಯೋಜನ ಪಡೆದುಕೊಳ್ಳುವಂತೆ ಮಾಡುವುದು.

#### ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ

1. **ಪ್ರಧಾನ ಮಂತ್ರಿ ಫಸಲು ವಿಮಾ ಯೋಜನೆ :** ಬೆಳೆಗಳ ನಷ್ಟ ಸಂಭವಿಸಿದಲ್ಲಿ ರೈತರಿಗೆ ಮುಂಗಾರು ಮತ್ತು ಹಿಂಗಾರು ಬೆಳೆಗಳೆರಡಕ್ಕೂ ವಿಮಾ ಹಣಕಾಸು ಸೌಲಭ್ಯ ಒದಗಿಸುವುದು.



Not to be re published ©KTBS

2. **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ:** 'ಪ್ರತಿ ನೀರ ಹನಿಗೂ ಗರಿಷ್ಠ ಉತ್ಪಾದನೆ' ಸಾಧಿಸುವಂಥ ನೀರು ಸದ್ಬಳಕೆ ಮಾಡುವಂಥ ನೀರಾವರಿ ಸೌಲಭ್ಯ ಒದಗಿಸುವುದು.

3. **ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ:** ಪ್ರತಿ ವರ್ಷ ಯಾವುದೇ ಗ್ರಾಮೀಣ ಕುಟುಂಬದ ವಯಸ್ಕ ಕಾರ್ಮಿಕರಿಗೆ ಕನಿಷ್ಠ ಕೂಲಿ ದರದಲ್ಲಿ ಕೌಶಲ್ಯರಹಿತ ಸ್ವರೂಪದ ಕೆಲಸ ಮಾಡುವ ಉದ್ಯೋಗದ ಹಕ್ಕನ್ನು ನೀಡುವುದು.

4. **ಪ್ರಧಾನ ಮಂತ್ರಿ ಗ್ರಾಮ ಸಡಕ ಯೋಜನೆ:** ರಸ್ತೆ ಸಂಪರ್ಕವಿಲ್ಲದ ಹಳ್ಳಿಗಳಿಗೆ ಸರ್ವಋತು ರಸ್ತೆ ನಿರ್ಮಿಸಿ ಸಂಪರ್ಕ ಕಲ್ಪಿಸುವುದು.

**ಔದ್ಯಮಿಕ ಅಭಿವೃದ್ಧಿ**

1. **ಮೇಕ್ ಇನ್ ಇಂಡಿಯಾ :** 25 ಕ್ಷೇತ್ರಗಳಲ್ಲಿ ಭಾರತದಲ್ಲಿ ಉದ್ದಿಮೆ ಸ್ಥಾಪಿಸಿ ಉತ್ಪಾದನೆ ಆರಂಭಿಸಿ ಉದ್ಯೋಗ ಸೃಷ್ಟಿ ಮಾಡಲು ದೇಶಿ ಮತ್ತು ವಿದೇಶಿ ಕಂಪನಿಗಳನ್ನು ಪ್ರೋತ್ಸಾಹಿಸುವುದು.

2. **ಸ್ಟಾರ್ಟ್‌ಅಪ್ ಇಂಡಿಯಾ ಮತ್ತು ಸ್ಟ್ಯಾಂಡಪ್ ಇಂಡಿಯಾ :** ಪ್ರಾರಂಭಿಕ ಹಂತದ ಎಲ್ಲ ಉದ್ದಿಮೆಗಳಿಗೆ ವ್ಯವಹಾರ ನಡೆಸಲು ಬೇಕಾದ ಎಲ್ಲ ಬೆಂಬಲವನ್ನು ನೀಡುವುದು.

3. **ಪ್ರಧಾನ ಮಂತ್ರಿ ಮುದ್ರಾ ಯೋಜನೆ :** ಸಣ್ಣ ಉದ್ದಿಮೆಗಳಿಗೆ/ಸ್ಟಾರ್ಟ್ ಅಪ್‌ಗಳಿಗೆ ಶಿಶು, ಕಿಶೋರ, ತರುಣ ವರ್ಗಗಳಲ್ಲಿ 50 ಸಾವಿರ ರೂಪಾಯಿಗಳಿಂದ 10 ಲಕ್ಷ ರೂಪಾಯಿಗಳವರೆಗೆ ಉದ್ದಿಮೆ ಅಭಿವೃದ್ಧಿಪಡಿಸಲು ಸರಳ ನಿಯಮಾವಳಿಗಳ ಮೇಲೆ ಸಾಲ ಒದಗಿಸುವುದು.

**ಸಾಮಾಜಿಕ ವಲಯ**

1. **ಸ್ವಚ್ಛ ಭಾರತ ಅಭಿಯಾನ:** ಮಹಾತ್ಮಾ ಗಾಂಧೀಜಿಯವರ ಕನಸಾದ ಸ್ವಚ್ಛ ಹಾಗೂ ಸ್ವಸ್ಥ ಭಾರತದ ನಿರ್ಮಾಣ

2. **ಕೌಶಲ ಭಾರತ (ಸ್ಕಿಲ್ ಇಂಡಿಯಾ):** ಯುವಕರಿಗೆ ಉದ್ಯೋಗ ಗಳಿಸಲು ಅವಶ್ಯವಿರುವ ಕೌಶಲಗಳನ್ನು ತರಬೇತಿ ಮೂಲಕ ನೀಡುವುದು ಅಥವಾ ಅವುಗಳನ್ನು ಗಳಿಸಿಕೊಳ್ಳಲು ಧನಸಹಾಯ ನೀಡುವುದು.

3. **ಪ್ರಧಾನ ಮಂತ್ರಿ ಜನ ಧನ ಯೋಜನೆ :** ಹಣಕಾಸಿನ ಒಳಗೊಳ್ಳುವಿಕೆಯನ್ನು ಸಾಧಿಸಲು ರಾಷ್ಟ್ರೀಯ ಅಭಿಯಾನ ಇದಾಗಿದ್ದು, ಇದರ ಅಡಿಯಲ್ಲಿ ಹಣಕಾಸು ಸೇವೆಗಳಾದ ಉಳಿತಾಯ ಮತ್ತು ಠೇವಣಿ, ಹಣ ವರ್ಗಾವಣೆ, ಸಾಲ, ವಿಮೆ, ಪೆನ್ಶನ್ ಇವುಗಳನ್ನು ಬ್ಯಾಂಕ್ ಖಾತೆ ಮೂಲಕ ಪಡೆಯಲು ಸಹಾಯ ಮಾಡುವುದು.

4. **ಪ್ರಧಾನ ಮಂತ್ರಿ ಜೀವನ ಜ್ಯೋತಿ ಯೋಜನೆ :** ಜೀವ ವಿಮೆಯನ್ನು ಎಲ್ಲರಿಗೂ ಕಡಿಮೆ ದರದಲ್ಲಿ ವಿಸ್ತರಿಸುವ ಯೋಜನೆ ಇದಾಗಿದ್ದು 18ರಿಂದ 50 ವರ್ಷಗಳವರೆಗಿನ ಎಲ್ಲ ವ್ಯಕ್ತಿಗಳು ಅತ್ಯಂತ ಕನಿಷ್ಠ ಪ್ರಿಮಿಯಮ್ ನೀಡಿ ಜೀವ ವಿಮೆಯ ಪ್ರಯೋಜನ ಪಡೆದುಕೊಳ್ಳಬಹುದಾಗಿದೆ.

Not to be re published ©KTBS

5. **ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ :** ಇದೊಂದು ಅಪಘಾತ ವಿಮಾ ಯೋಜನೆಯಾಗಿದ್ದು 18ರಿಂದ 70 ವರ್ಷಗಳವರೆಗಿನ ಎಲ್ಲ ವ್ಯಕ್ತಿಗಳು ಕಡಿಮೆ ವೆಚ್ಚದಲ್ಲಿ ಇದರ ಪ್ರಯೋಜನ ಪಡೆದುಕೊಳ್ಳಬಹುದು.

6. **ಅಟಲ್ ಪೆನ್ಶನ್ ಯೋಜನೆ :** ಈ ಯೋಜನೆಯು ಅಸಂಘಟಿತ ವಲಯದಲ್ಲಿರುವ 18 ರಿಂದ 40 ವರ್ಷಗಳವರೆಗಿನ ವ್ಯಕ್ತಿಗಳಿಗೆ ಮಾಸಿಕ 1000 ರೂಪಾಯಿಗಳಿಂದ 5000 ರೂಪಾಯಿಗಳವರೆಗಿನ ಪೆನ್ಶನ್ ಹಣವನ್ನು ಅವರ ಕೊಡುಗೆ ಆಧರಿಸಿ ನೀಡುವ ಉದ್ದೇಶ ಹೊಂದಿದೆ.

### ನಗರ ಅಭಿವೃದ್ಧಿ

1. **ನಗರ ಪುನರುತ್ಥಾನ ಮತ್ತು ಪರಿವರ್ತನೆಯ ಅಟಲ್ ಅಭಿಯಾನ (Atal Mission on Rejuvention and Urban Transformation, AMRUT) :** ಜನ ಕೇಂದ್ರಿತ ನಗರ ಯೋಜನೆ ಮತ್ತು ಅಭಿವೃದ್ಧಿ ಮೂಲಕ ನಗರಗಳಲ್ಲಿ ಜೀವನದ ಸ್ಥಿತಿಯನ್ನು ಉತ್ತಮಗೊಳಿಸುವುದು.

2. **ಪ್ರಧಾನ ಮಂತ್ರಿ ಆವಾಸ್ ಯೋಜನೆ :** ನಗರ ಪ್ರದೇಶದಲ್ಲಿರುವ ಬಡವರಿಗೆ ಅಲ್ಪ ವೆಚ್ಚದಲ್ಲಿ ಮನೆ ಹೊಂದುವ ಯೋಜನೆ.

3. **ಸ್ಮಾರ್ಟ್ ಸಿಟಿ ಅಭಿಯಾನ :** ದೇಶದಾದ್ಯಂತ 100 ನಗರಗಳನ್ನು ನಾಗರಿಕ ಸ್ನೇಹಿಯಾಗಿ ಮತ್ತು ಸುಸ್ಥಿರತೆಯಿಂದ ಅಭಿವೃದ್ಧಿ ಪಡಿಸಲು ಇರುವ ಯೋಜನೆ.

ಭಾರತ ದೇಶವು ಹಲವಾರು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗಿಂತ ಅಧಿಕ ದರದ ಬೆಳವಣಿಗೆ ಸಾಧಿಸುತ್ತಿದೆಯಲ್ಲದೇ ಅದು ಭವಿಷ್ಯದ ಆರ್ಥಿಕ ಸೂಪರ್ ಪವರ್ ಆಗುವತ್ತ ಮುನ್ನಡೆದಿದೆ. ರಾಜ್ಯ ಸರ್ಕಾರಗಳೂ ಸಹ ಜನರ ಯೋಗಕ್ಷೇಮ ಹೆಚ್ಚಿಸುವಂಥ ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿವೆ.

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಭರ್ತಿಮಾಡಿರಿ.**

1. ಯೋಜನಾ ಆಯೋಗವನ್ನು ______ ವರ್ಷದಲ್ಲಿ ಸ್ಥಾಪಿಸಲಾಯಿತು.
2. ಹನ್ನೆರಡನೇ ಪಂಚ ವಾರ್ಷಿಕ ಯೋಜನೆಯ ಕಾಲಾವಧಿಯು ________ .
3. ಒಟ್ಟು ರಾಷ್ಟ್ರೀಯ ಆದಾಯವನ್ನು ಪರಿಗಣಿಸಿದಾಗ ವಿಶ್ವದ ಮೊದಲ ________ ರಾಷ್ಟ್ರಗಳಲ್ಲಿ ಒಂದಾಗಿದೆ.
4. ಭಾರತದಲ್ಲಿ ಪ್ರಸ್ತುತ ಬಡತನದ ಪ್ರಮಾಣವು ________ ರಷ್ಟಿದೆ.
5. ಬಹಳಷ್ಟು ವರ್ಷಗಳವರೆಗೆ ಭಾರತದ ಆರ್ಥಿಕ ನೀತಿಯು _______ ಆಗಿತ್ತು.

**II. ಈ ಕೆಳಗಿನ ಪ್ರಶ್ನೆಗಳನ್ನು ಎರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಯೋಜನೆಯ ವ್ಯಾಖ್ಯೆ ನೀಡಿ.
2. ಭಾರತೀಯ ಯೋಜನೆಗಳ ಪ್ರಮುಖ ಉದ್ದೇಶಗಳನ್ನು ಪಟ್ಟಿ ಮಾಡಿರಿ.

©KTBS Not to be republished

3. ಭಾರತೀಯ ಯೋಜನೆಗಳ ಪ್ರಮುಖ ವಿಫಲತೆಗಳು ಯಾವುವು?
4. 1990–91ರಲ್ಲಿನ ಭಾರತದ ಆರ್ಥಿಕ ಸ್ಥಿತಿಯ ಪ್ರಾಮುಖ್ಯತೆಯನ್ನು ವರ್ಣಿಸಿರಿ.
5. ಆರ್ಥಿಕ ಉದಾರೀಕರಣ ಕ್ರಮಗಳಡಿಯಲ್ಲಿನ ಪ್ರಮುಖ ಅಂಶಗಳನ್ನು ಪಟ್ಟಿ ಮಾಡಿರಿ.

**III. ಚಟುವಟಿಕೆ**

1. ಸದ್ಯ ಚಾಲ್ತಿಯಲ್ಲಿರುವ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತಾದ ಒಂದು ಚಿತ್ರ ತಯಾರಿಸಿ ಮತ್ತು ಅವುಗಳ ಕುರಿತು ನಿಮ್ಮ ಸ್ನೇಹಿತರ ಜೊತೆ ಚರ್ಚಿಸಿ.
2. ಕರ್ನಾಟಕ ಸರ್ಕಾರವು ಹಮ್ಮಿಕೊಂಡಿರುವ ಅಭಿವೃದ್ಧಿ ಮತ್ತು ಜನಕಲ್ಯಾಣ ಕಾರ್ಯಕ್ರಮಗಳ ಕುರಿತಾದ ಮಾಹಿತಿ ಸಂಗ್ರಹಿಸಿರಿ.

**IV. ಯೋಜಿತ ಕಾರ್ಯ**

ಆರ್ಥಿಕ ಸುಧಾರಣೆಗಳ ನಂತರ ಭಾರತದ ಆರ್ಥಿಕತೆಯು ಅನುಭವಿಸಿರುವ ಆರ್ಥಿಕ ಬೆಳವಣಿಗೆಯ ಕುರಿತು 1000–1500 ಶಬ್ದಗಳ ಒಂದು ವರದಿ ತಯಾರಿಸಿ.

*****

©KTBS Not to be re published

## ಅಧ್ಯಾಯ – 2

# ವ್ಯವಹಾರ ಮತ್ತು ಕೈಗಾರಿಕೆ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ವ್ಯವಹಾರದ ಉದ್ದೇಶಗಳು.
- ವ್ಯಾಪಾರದ ವಿಭಾಗಗಳಾದ, ದೇಶೀಯ ವ್ಯಾಪಾರ, ವಿದೇಶೀ ವ್ಯಾಪಾರ ಮತ್ತು ಪುನರ್‌ರಪ್ತು ವ್ಯಾಪಾರಗಳ ಅರ್ಥ ವಿಧಗಳು ಹಾಗೂ ಮಹತ್ವ.
- ಕೈಗಾರಿಕೆಗಳು–ವಿಧಗಳು.
- ಗೃಹ ಕೈಗಾರಿಕೆಗಳು ಮತ್ತು ಸಣ್ಣ ಕೈಗಾರಿಕೆಗಳು.
- ವ್ಯವಹಾರ, ವ್ಯಾಪಾರ ಮತ್ತು ಕೈಗಾರಿಕೆಗಳಿಗಿರುವ ಅಡಚಣೆಗಳು.
- ವ್ಯವಹಾರದ ನೀತಿ ತತ್ವಗಳನ್ನು ಗುರುತಿಸುವುದು.

ವ್ಯವಹಾರವು ಒಂದು ಪ್ರಮುಖ ಆರ್ಥಿಕ ಚಟುವಟಿಕೆಯಾಗಿದೆ. ಇದು ಮುಖ್ಯವಾಗಿ ವಸ್ತುಗಳ ಉತ್ಪಾದನೆ ಮತ್ತು ಸೇವೆಗಳನ್ನು ಗ್ರಾಹಕರಿಗೆ ಪೂರೈಸುವುದೇ ಆಗಿದೆ. ವ್ಯವಹಾರವು ಒಂದು ವ್ಯಾಪಾರ, ಕೈಗಾರಿ–ಕೆ ಅಥವಾ ವೃತ್ತಿಪರತೆ ಚಟುವಟಿಕೆಗಳಿಂದ ಕೂಡಿದ ಒಂದು ಸಂಸ್ಥೆಯಾಗಿದೆ. ವ್ಯಾಪಾರವು ಲಾಭದಾಯಕ ಅಥವಾ ಲಾಭದಾಯಕವಲ್ಲದ ಸಂಸ್ಥೆಯಾಗಿರುತ್ತದೆ.

**ಸ್ಟೀಫನ್ ಸನ್** ಅವರು ಹೇಳಿರುವಂತೆ ವ್ಯವಹಾರವು ಲಾಭ ಅಥವಾ  ಸಂಪತ್ತನ್ನು ಗಳಿಸುವ ಸಲುವಾಗಿ ನಿರಂತರವಾಗಿ ವಸ್ತುಗಳನ್ನು ಉತ್ಪಾದಿಸುವ ಅಥವಾ ಮಾರಾಟ ಅಥವಾ ಕೊಳ್ಳುವ ಪ್ರಕ್ರಿಯೆಯಿಂದ ಕೂಡಿದ್ದು ಮಾನವ ಬಯಕೆಗಳನ್ನು ಈಡೇರಿಸುವ ಉದ್ದೇಶವನ್ನು ಹೊಂದಿದೆ.

### ವ್ಯವಹಾರದ ಉದ್ದೇಶಗಳು

ವ್ಯವಹಾರವು ಮುಖ್ಯವಾಗಿ ಎರಡು ಉದ್ದೇಶಗಳಿಂದ ಕೂಡಿದೆ.  ಯಾವುವೆಂದರೆ :

(1) ಆರ್ಥಿಕ ಉದ್ದೇಶಗಳು  (2) ಸಾಮಾಜಿಕ ಉದ್ದೇಶಗಳು

**1. ಆರ್ಥಿಕ ಉದ್ದೇಶಗಳು :** ನಾವು ಸಾಮಾನ್ಯವಾಗಿ ವ್ಯವಹಾರದ ಮುಖ್ಯ ಉದ್ದೇಶ ಲಾಭಗಳಿಸುವುದೇ ಆಗಿದೆ ಎಂದುಕೊಂಡಿದ್ದೇವೆ. ಆದರೆ ವ್ಯವಹಾರದ ಉದ್ದೇಶ ಒಂದು ನ್ಯಾಯಯುಕ್ತ ಲಾಭಗಳಿಕೆಯಾಗಿದ್ದು ಇದು ವ್ಯವಹಾರವು ಸಮರ್ಪಕವಾಗಿ ನಡೆಯಲು ಸಾಕಾಗುವ ವೆಚ್ಚವನ್ನು ಭರಿಸಿ ವ್ಯವಹಾರಸ್ಥನು ಸುಖಮಯ ಜೀವನ ಸಾಗಿಸುವಷ್ಟಿರಬೇಕು. ವ್ಯವಹಾರವು ವಸ್ತುಗಳನ್ನು ಮತ್ತು ಸೇವೆಗಳನ್ನು ಗ್ರಾಹಕರಿಗೆ ಪೂರೈಸುತ್ತದೆ ಮತ್ತು ಗ್ರಾಹಕರನ್ನು ಸೃಷ್ಟಿಸುತ್ತದೆ (Creates). ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ವಸ್ತುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಉತ್ಪಾದಿಸುತ್ತದೆ.  ಗ್ರಾಹಕರಿಗೆ ಕಾಲಕಾಲಕ್ಕೆ ಬೇಕಾದ ಹೊಸ ಹೊಸ ಬದಲಾವಣೆಗಳಿಗನುಸಾರವಾಗಿ ವಸ್ತುಗಳನ್ನು ಉತ್ಪಾದಿಸಿ ಪೂರೈಸುತ್ತದೆ. ಹೊಸ ಹೊಸ ಸಂಶೋಧನೆಗಳ

©KTBS Not to be republished

ಮೂಲಕ ಉತ್ಪಾದನೆಯಲ್ಲಿ ಬದಲಾವಣೆಗಳನ್ನು ತರುತ್ತದೆ. ಹೊಸ ಉತ್ಪಾದನೆಗಳ ಬಗ್ಗೆ ಗ್ರಾಹಕರಿಗೆ ಜಾಹೀರಾತಿನ ಮೂಲಕ ತಿಳಿಸುತ್ತದೆ.

**2. ಸಾಮಾಜಿಕ ಉದ್ದೇಶಗಳು :** ವ್ಯವಹಾರವು ದೇಶದ ಪ್ರಗತಿಗೆ ಬೇಕಾದ ವಸ್ತುಗಳನ್ನು ಉತ್ಪಾದಿಸುತ್ತದೆ ಮತ್ತು ಒದಗಿಸುತ್ತದೆ. ಅನೇಕ ಜನರಿಗೆ ಉದ್ಯೋಗಗಳನ್ನು ಕಲ್ಪಿಸಿ ಅವರಿಗೆ ಸಂಬಳ ಅಥವಾ ಮಜೂರಿಗಳ ಮೂಲಕ ವರಮಾನ ಕೊಟ್ಟು ಅವರ ಜೀವನ ಮಟ್ಟ ಸುಧಾರಿಸಲು ಸಹಾಯ ಮಾಡುತ್ತದೆ. ಕರ ಮತ್ತು ತೆರಿಗೆಗಳನ್ನು ಪಾವತಿ ಮಾಡುವುದರ ಮೂಲಕ ಸರ್ಕಾರದ ಆದಾಯ ಹೆಚ್ಚಿಸಿ ರಾಷ್ಟ್ರದ ಅಭಿವೃದ್ಧಿಗೆ ಸಹಾಯ ಮಾಡುತ್ತದೆ. ಶಾಲಾ ಕಾಲೇಜುಗಳನ್ನು, ಆಸ್ಪತ್ರೆಗಳನ್ನು, ಸಮುದಾಯ ಭವನಗಳನ್ನು ಪ್ರಾರಂಭಿಸಿ ಅವುಗಳನ್ನು ನಿರ್ವಹಿಸುವ ಜವಾಬ್ದಾರಿ ಹೊಂದಿರುತ್ತದೆ. ಉದ್ಯಾನವನ, ಕ್ರೀಡಾಂಗಣಗಳ ನಿರ್ವಹಣೆ ಮುಂತಾದವುಗಳ ಮೂಲಕ ಸಮಾಜ ಕಲ್ಯಾಣಕ್ಕಾಗಿ ಶ್ರಮಿಸುತ್ತದೆ.

**ವ್ಯಾಪಾರ, ಕೈಗಾರಿಕೆ ಮತ್ತು ಸೇವೆಗಳು :**

ವ್ಯಾಪಾರವು ವಾಣಿಜ್ಯದ ಒಂದು ಭಾಗವಾಗಿದೆ. ಸರಕುಗಳನ್ನು ಕೊಳ್ಳುವುದು ಮತ್ತು ಗ್ರಾಹಕರಿಗೆ ಮಾರುವುದನ್ನು ವ್ಯಾಪಾರವೆನ್ನುತ್ತೇವೆ.

ಈ ವ್ಯಾಪಾರವನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು. ಅವು ಯಾವುವೆಂದರೆ :

(1) ಆಂತರಿಕ ಅಥವಾ ದೇಶೀಯ ವ್ಯಾಪಾರ

(2) ವಿದೇಶ ಅಥವಾ ಅಂತಾರಾಷ್ಟ್ರೀಯ ವ್ಯಾಪಾರ

(3) ಪುನರ್ ರಫ್ತು ವ್ಯಾಪಾರ (Entrepot Trade)

**1. ಆಂತರಿಕ ಅಥವಾ ದೇಶೀಯ ವ್ಯಾಪಾರ :** ಒಂದು ದೇಶದ ಎಲ್ಲೆಗಳ ಒಳಗಡೆ ನಡೆಯುವ ವ್ಯಾಪಾರವನ್ನು ಆಂತರಿಕ ವ್ಯಾಪಾರವೆನ್ನುತ್ತೇವೆ. ಈ ವ್ಯಾಪಾರವು ಚಿಲ್ಲರೆ ಮಾರಾಟಗಾರರು ಮತ್ತು ಸಗಟು ವ್ಯಾಪಾರಗಾರರಿಂದ ನಡೆಯುತ್ತದೆ.

**ಚಿಲ್ಲರೆ ಮಾರಾಟಗಾರರು :** ಇವರು ಸಾಮಾನ್ಯವಾಗಿ ಗ್ರಾಹಕರು ನೆಲೆಸಿರುವ ಜಾಗಗಳಲ್ಲಿ ತಮ್ಮ ವ್ಯಾಪಾರ ನಡೆಸುತ್ತಾರೆ. ಇವರು ಸಗಟು ವ್ಯಾಪಾರಿಗಳಿಂದ ದೊಡ್ಡ ಪ್ರಮಾಣದಲ್ಲಿ ಸರಕುಗಳನ್ನು ಕೊಂಡು ಸಣ್ಣ ಪ್ರಮಾಣದಲ್ಲಿ ಗ್ರಾಹಕರಿಗೆ ಮಾರುತ್ತಾರೆ. ಇವರಿಂದ ನಮಗೆ ಅನೇಕ ಉಪಯೋಗಗಳಿವೆ. ಅವುಗಳು ಯಾವುವೆಂದರೆ, ಚಿಲ್ಲರೆ ವ್ಯಾಪಾರಿಗಳು ವಸ್ತುಗಳ ವಿತರಣೆಯ ಕೊನೆಯ ಕೊಂಡಿಯಾಗಿದ್ದಾ-ರೆ, ಬೇರೆ ಬೇರೆ ಉತ್ಪಾದಕರಿಂದ ಉತ್ಪಾದನೆಯಾಗುವ ವಸ್ತುಗಳನ್ನು ಸಗಟು ವ್ಯಾಪಾರಿಗಳಿಂದ ಕೊಂಡು ಗ್ರಾಹಕರಿಗೆ ಒದಗಿಸುತ್ತಾರೆ. ಅನೇಕ ಸಾರಿ ಉಂಟಾಗುವ ವ್ಯಾಪಾರ ನಷ್ಟಗಳನ್ನು ತಾವೇ ಭರಿಸುತ್ತಾರೆ, ವಸ್ತುಗಳನ್ನು ಅವುಗಳ ಪ್ರಮಾಣಕ್ಕನುಗುಣವಾಗಿ ವಿಂಗಡಿಸಿ ಗ್ರಾಹಕರ ಇಷ್ಟದಂತೆ ಅವರಿಗೆ ಒದಗಿಸುತ್ತಾರೆ, ಗ್ರಾಹಕರಿಗೆ ಸಾಲ ಸೌಲಭ್ಯಗಳನ್ನು ಕೊಡುತ್ತಾರೆ. ಮಾರುಕಟ್ಟೆಗೆ ಹೊಸದಾಗಿ ಬಂದ ವಸ್ತುಗಳ ಬಗ್ಗೆ ಗ್ರಾಹಕರಿಗೆ ಮಾಹಿತಿ ನೀಡುತ್ತಾರೆ ಮತ್ತು ಯಾವುದೇ ಒಂದು ನಿರ್ದಿಷ್ಟ ವಸ್ತು ದೊರೆಯದಿದ್ದಲ್ಲಿ ಪರ್ಯಾಯ ವಸ್ತುಗಳ ಬಗ್ಗೆ ತಿಳಿಸುತ್ತಾರೆ. ಈ ಚಿಲ್ಲರೆ ವ್ಯಾಪಾರವು ಬೇರೆ ಬೇರೆ ರೀತಿಗಳಲ್ಲಿ ನಡೆಯುತ್ತದೆ. ಅವುಗಳಲ್ಲಿ ಮುಖ್ಯವಾದವು ಯಾವುವೆಂದರೆ, ಖಾಯಂ ಅಂಗಡಿಗಳು ಮತ್ತು ಸಂಚಾರಿ ವ್ಯಾಪಾರಿಗಳು.

©KTBS Not to be republished

**ಖಾಯಂ ಅಂಗಡಿಗಳು :** ಇವರು ಒಂದು ನಿರ್ದಿಷ್ಟ ಜಾಗದಲ್ಲಿ ಅಂಗಡಿಗಳನ್ನು ತೆರೆದು ವಸ್ತುಗಳನ್ನು ಮಾರುತ್ತಾರೆ. (ವ್ಯಾಪಾರಿಗಳನ್ನು ವರ್ತಕರೆಂದೂ ಕರೆಯುವ ರೂಢಿ ಇದೆ)



ಖಾಯಂ ಅಂಗಡಿಗಳು

**ಸಂಚಾರಿ ವ್ಯಾಪಾರಿಗಳು :** ಇವರು ಒಂದು ನಿರ್ದಿಷ್ಟ ಜಾಗದಲ್ಲಿ ವ್ಯಾಪಾರ ಮಾಡುವುದಿಲ್ಲ. ಇವರಲ್ಲಿ ಮುಖ್ಯ ವಾದವೆಂದರೆ. ತಲೆಹೊರೆ ವ್ಯಾಪಾರಿಗಳು, ತಳ್ಳುಗಾಡಿ ವ್ಯಾಪಾರಿಗಳು, ರಸ್ತೆ ಬದಿ ವ್ಯಾಪಾರಿಗಳು (ಮಾರುಕಟ್ಟೆ ವ್ಯಾಪಾರಿಗಳು) ಮತ್ತು ಸಂತೆ ವ್ಯಾಪಾರಿಗಳು.




ತಲೆಹೊರೆ ವ್ಯಾಪಾರಿಗಳು

**ತಲೆಹೊರೆ ವ್ಯಾಪಾರಿಗಳು :** ಇವರು ಸರಕುಗಳನ್ನು ತಲೆಯ ಮೇಲೆ ಹೊತ್ತು ಬೀದಿ ಬೀದಿಗಳಲ್ಲಿ ಸುತ್ತಿ ಮನೆ ಬಾಗಿಲುಗಳಿಗೆ ಬಂದು ಸರಕುಗಳನ್ನು ಮಾರುತ್ತಾರೆ. ಇವರು ಸಾಮಾನ್ಯವಾಗಿ ಒಂದೇ ರೀತಿಯ ಸರಕುಗಳನ್ನು ಮಾರುತ್ತಾರೆ. ಉದಾ: ತರಕಾರಿ ಮಾರುವವರು, ಹೂ ಮಾರುವವರು.

**ತಳ್ಳುಗಾಡಿ ವ್ಯಾಪಾರಿ**

**ತಳ್ಳುಗಾಡಿ ವ್ಯಾಪಾರಿಗಳು :** ಇವರು ಅನೇಕ ಸರಕುಗಳನ್ನು ತಳ್ಳು ಗಾಡಿಗಳಲ್ಲಿ ತುಂಬಿ ಬೀದಿ ಬೀದಿಗಳಲ್ಲಿ ಸುತ್ತಿ ಮನೆ ಬಾಗಿಲುಗಳಿಗೆ ಬಂದು ಸರಕುಗಳನ್ನು ಮಾರುತ್ತಾರೆ.



ತಳ್ಳುಗಾಡಿ ವ್ಯಾಪಾರಿ

©KTBS Not to be republished



**ರಸ್ತೆ ಬದಿ ವ್ಯಾಪಾರಿಗಳು**

**ರಸ್ತೆ ಬದಿ ವ್ಯಾಪಾರಿಗಳು :** ಇವರು ಹೆಚ್ಚು ಜನಜಂಗುಳಿ ಇರುವ ಬೀದಿಗಳ ಮೂಲೆಗಳಲ್ಲಿ ಅಥವಾ ರಸ್ತೆ ಬದಿಗಳಲ್ಲಿ ತಮ್ಮ ಸರಕುಗಳನ್ನು ಹರಡಿಕೊಂಡು ವ್ಯಾಪಾರ ಮಾಡುತ್ತಾರೆ.



**ಸಂತೆ ವ್ಯಾಪಾರಿಗಳು**

**ಸಂತೆ ವ್ಯಾಪಾರಿಗಳು :** ಕೆಲವು ಊರುಗಳಲ್ಲಿ ವಾರಕ್ಕೊಮ್ಮೆ ಸಂತೆ ನಡೆಯುತ್ತದೆ. ವಿವಿಧ ವಸ್ತುಗಳ ವ್ಯಾಪಾರಿಗಳು ತಮ್ಮ ವಸ್ತುಗಳನ್ನು ಸಂತೆಗಳಿಗೆ ಕೊಂಡೊಯ್ದು ಅಲ್ಲಿಗೆ ಬರುವ ಸುತ್ತ ಮುತ್ತಲಿನ ಗ್ರಾಮಗಳ ಜನರಿಗೆ ವಸ್ತುಗಳನ್ನು ಮಾರುತ್ತಾರೆ. ಇಲ್ಲಿನ ಮತ್ತೊಂದು ವೈಶಿಷ್ಟ್ಯವೇನೆಂದರೆ ಗ್ರಾಮಗಳ ಜನರು ತಾವು ಬೆಳೆದ ಅಥವಾ ಉತ್ಪಾದಿಸಿದ ವಸ್ತುಗಳನ್ನು ಸಂತೆಗಳಿಗೆ ಕೊಂಡೊಯ್ದು ಮಾರುತ್ತಾರೆ. ಉದಾ : ತರಕಾರಿ, ಮೊಟ್ಟೆ, ಬೆಣ್ಣೆ, ತುಪ್ಪ, ಕಬ್ಬಿಣದ ಉಪಕರಣಗಳು, ಬುಟ್ಟಿಗಳು, ಕಂಬಳಿ ಮುಂತಾದವು. ಇವುಗಳಿಂದ ಬಂದ ಹಣದಿಂದ ತಮಗೆ ಬೇಕಾದ ವಸ್ತುಗಳನ್ನು ಕೊಳ್ಳುತ್ತಾರೆ. ಇದಲ್ಲದೆ ಕೆಲವು ಊರುಗಳಲ್ಲಿ ವರ್ಷಕ್ಕೊಮ್ಮೆ ಜಾತ್ರೆಗಳು ನಡೆಯುತ್ತವೆ. ಅಲ್ಲಿಯೂ ಕೂಡ ವಸ್ತುಗಳ ಮಾರಾಟಗಾರರು ಬಂದು ತಮ್ಮ ವಸ್ತುಗಳನ್ನು ಗ್ರಾಹಕರಿಗೆ ಮಾರುತ್ತಾರೆ.

**ಸಗಟು ವ್ಯಾಪಾರ : (Whole Sale Trade)** ಈ ವ್ಯಾಪಾರದಲ್ಲಿ ವ್ಯಾಪಾರಿಗಳು ಸರಕುಗಳನ್ನು ಹೆಚ್ಚು ಪ್ರಮಾಣದಲ್ಲಿ ಉತ್ಪಾದಕರಿಂದ ಕೊಂಡು, ಸಣ್ಣ ಪ್ರಮಾಣದಲ್ಲಿ ಚಿಲ್ಲರೆ ವ್ಯಾಪಾರಿಗಳಿಗೆ ಮಾರುತ್ತಾರೆ. ಸಗಟು ವ್ಯಾಪಾರಿಗಳು ಯಾವುದಾದರು ಒಂದು ಅಥವಾ ಎರಡು ಬಗೆಯ ವಸ್ತುಗಳನ್ನು ಮಾರಾಟ ಮಾಡುತ್ತಾರೆ. ಇವರು ಚಿಲ್ಲರೆ ವ್ಯಾಪಾರಿಗಳಿಗೆ ಅನೇಕ ರೀತಿಗಳಲ್ಲಿ ಸಹಾಯ ಮಾಡುತ್ತಾರೆ. ಸಣ್ಣ ಪ್ರಮಾಣದಲ್ಲಿ ಕಾಲಕಾಲಕ್ಕೆ ತಕ್ಕಂತೆ ಸರಕುಗಳನ್ನು ಒದಗಿಸುವುದೇ ಅಲ್ಲದೆ ಅವರಿಗೆ ಸಾಲ ಸೌಲಭ್ಯಗಳನ್ನು ಒದಗಿಸುತ್ತಾರೆ. ಅವರ ಪರವಾಗಿ ಜಾಹೀರಾತು ಮಾಡುತ್ತಾರೆ. ಮಾರುಕಟ್ಟೆಯ ವಿವರಗಳನ್ನು ಕೊಡುತ್ತಾರೆ. ಹೆಚ್ಚು ಲಾಭದ ಪ್ರಮಾಣ ಇಟ್ಟಿರುವುದಿಲ್ಲ. ಉತ್ಪಾದಕರಿಗೂ ಕೂಡ ಮಾರುಕಟ್ಟೆಯ ವಿವರಗಳನ್ನು, ಬೆಲೆಯ ಏರಿಳಿತಗಳನ್ನು, ಗ್ರಾಹಕರ ಇಷ್ಟಗಳನ್ನು ತಿಳಿಸುತ್ತಾರೆ. ಉತ್ಪಾದಕರ ಪರವಾಗಿಯೂ ಕೂಡ ಜಾಹೀರಾತು ಮಾಡುತ್ತಾರೆ ಮತ್ತು ಉತ್ಪಾದನಾ ವಸ್ತುಗಳನ್ನು ಶೇಖರಿಸಿಟ್ಟುಕೊಳ್ಳಲು ಸಹಾಯ ಮಾಡುತ್ತಾರೆ.

©KTBS Not to be re published

**ವಿದೇಶ ವ್ಯಾಪಾರ :** ಎರಡು ದೇಶಗಳ ನಡುವೆ ನಡೆಯುವ ವ್ಯಾಪಾರವನ್ನು ವಿದೇಶ ವ್ಯಾಪಾರವೆನ್ನುತ್ತೇವೆ. ವಿದೇಶಿ ವ್ಯಾಪಾರವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಅವು ಯಾವುವೆಂದರೆ, ಆಮದು ರಫ್ತು ಮತ್ತು ಪುನರ್ ರಫ್ತು.


- **ಆಮದು:** ಒಂದು ದೇಶವು ತನ್ನ ಬಳಕೆಗಾಗಿ ಬೇರೆ ದೇಶಗಳಿಂದ ಸರಕುಗಳನ್ನು ಕೊಂಡರೆ ಅದನ್ನು ಆಮದು ಎನ್ನುತ್ತೇವೆ.
- **ರಫ್ತು:** ಒಂದು ದೇಶವು ಬೇರೆ ದೇಶಗಳಿಗೆ ಆ ದೇಶಗಳ ಬಳಕೆಗಾಗಿ ವಸ್ತುಗಳನ್ನು ಮಾರಿದರೆ ಅದನ್ನು ರಫ್ತು ಎನ್ನುತ್ತೇವೆ.
- **ಪುನರ್ ರಫ್ತು:** ಕೆಲವು ದೇಶಗಳು ಬೇರೆ ದೇಶಗಳಿಂದ ವಸ್ತುಗಳನ್ನು ಕೊಂಡು ಅವನ್ನು ಮತ್ತೊಂದು ದೇಶಕ್ಕೆ ಮಾರುತ್ತಾರೆ. ಅದನ್ನು ಪುನರ್‌ರಫ್ತು ಎನ್ನುತ್ತೇವೆ. ಉದಾಃ– ಸಿಂಗಾಪುರ, ಮಧ್ಯ ಏಷ್ಯದ ಕೆಲವು ದೇಶಗಳು. ಇತ್ತೀಚೆಗೆ ಪ್ರಪಂಚದ ಅನೇಕ ದೇಶಗಳು ಈ ರೀತಿಯ ವ್ಯಾಪಾರ ಮಾಡುತ್ತಿವೆ.

### ವಿದೇಶಿ ವ್ಯಾಪಾರದ ಅವಶ್ಯಕತೆ

ಪ್ರಪಂಚದ ಯಾವುದೇ ದೇಶವಾಗಲಿ ಎಲ್ಲ ಸಂಪನ್ಮೂಲಗಳಲ್ಲೂ ಸ್ವಯಂಪೂರ್ಣತೆ ಹೊಂದಿಲ್ಲ. ಕೆಲವು ದೇಶಗಳಲ್ಲಿ ಕೆಲವು ಸಂಪನ್ಮೂಲಗಳು ಹೇರಳವಾಗಿ ದೊರೆಯುತ್ತವೆ. ಆ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಕೆಲವೇ ವಸ್ತುಗಳನ್ನು ಅಧಿಕವಾಗಿ ಉತ್ಪಾದನೆ ಮಾಡುತ್ತಾರೆ. ದೇಶದ ಬೇಡಿಕೆ–ಯು ಮುಗಿದ ಬಳಿಕ ಉಳಿದ ವಸ್ತುಗಳನ್ನು ಬೇರೆ ದೇಶಗಳಿಗೆ ರಫ್ತು ಮಾಡುತ್ತಾರೆ. ಹಾಗೆಯೇ ಯಾವ ದೇಶಗಳಲ್ಲಿ ಸಂಪನ್ಮೂಲಗಳ ಅಭಾವವಿದೆಯೋ ಆ ದೇಶಗಳು ತಮಗೆ ಅಭಾವವಿರುವ ವಸ್ತುಗಳನ್ನು ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುತ್ತಾರೆ. ಇದರಿಂದಾಗಿ ಪ್ರತಿದೇಶಕ್ಕೂ ವಿದೇಶ ವ್ಯಾಪಾರದ ಅವಶ್ಯಕತೆ ಇದೆ. ಹಾಗೂ ಇದು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ಅವಶ್ಯಕತೆ ಪಡೆದಿದೆ. ವಿದೇಶ ವ್ಯಾಪಾರವು ದೇಶಗಳ ಪರಸ್ಪರ ಸೌಹಾರ್ದಯುತ ಸಂಬಂಧಕ್ಕೆ ಸಹಾಯ ಮಾಡುತ್ತದೆ.

### ಕೈಗಾರಿಕೆ : (ಉದ್ಯಮಗಳು)

ಕೈಗಾರಿಕೆಯು ಒಂದು ಆರ್ಥಿಕ ಚಟುವಟಿಕೆಯಾಗಿದೆ. ಕೈಗಾರಿಕೆ ವಸ್ತುಗಳ ಉತ್ಪಾದನೆ, ಖನಿಜಗಳನ್ನು ತೆಗೆಯುವುದು ಮತ್ತು ಕೆಲವು ಸೇವೆಗಳನ್ನು ಒದಗಿಸುವ ಚಟುವಟಿಕೆಗಳನ್ನು ಹೊಂದಿದೆ. ಕೈಗಾರಿಕೆಗಳನ್ನು ಪ್ರಾಥಮಿಕ ಉದ್ಯಮಗಳು ಮತ್ತು ದ್ವಿತೀಯ ಉದ್ಯಮಗಳೆಂದು ಎರಡು ಭಾಗಗಳಾಗಿ ವಿಂಗಡಿಸಬಹುದು. (ಕೈಗಾರಿಕೆಗಳನ್ನು ಉದ್ಯಮಗಳೆಂದೂ ಕರೆಯುತ್ತಾರೆ.)




©KTBS Not to be republished

**ಪ್ರಾಥಮಿಕ ಉದ್ಯಮಗಳು :** ಈ ಉದ್ಯಮಗಳು ನಿಸರ್ಗದ ನೆರವಿನಿಂದ ವಸ್ತುಗಳನ್ನು ಉತ್ಪಾದಿಸುತ್ತವೆ. ಉದಾ: ಕೃಷಿ, ಮೀನುಗಾರಿಕೆ, ಹೈನುಗಾರಿಕೆ, ಗಣಿಗಾರಿಕೆ ಮುಂತಾದವು. ಈ ಉದ್ಯಮಗಳನ್ನು ತಳಿವೈಜ್ಞಾನಿಕ (Genetic) ಮತ್ತು ಕಚ್ಚಾವಸ್ತುಗಳನ್ನು ಹೊರತೆಗೆಯುವ ಗಣಿ ಉದ್ಯಮಗಳೆಂದು ವಿಭಾಗಿಸಬಹುದು.

**(ಅ) ತಳಿ ವೈಜ್ಞಾನಿಕ ಉದ್ಯಮಗಳು :** ಈ ಉದ್ಯಮ ಕೆಲವು ವಿಧದ ಧಾನ್ಯಗಳು, ಸಸ್ಯಗಳು ಹಾಗೂ ಪ್ರಾಣಿಗಳ ಪುನರ್‌ಉತ್ಪಾದನೆಯಲ್ಲಿ ತೊಡಗಿರುತ್ತವೆ. ಇವುಗಳ ಮಾರಾಟದಿಂದ ಲಾಭಗಳಿಸುವ ಮೂಲಕ ಸಂಪತ್ತನ್ನು ವೃದ್ಧಿಗೊಳಿಸುತ್ತದೆ. ಉದಾಃ ತೋಟಗಾರಿಕೆ, ಹೈನುಗಾರಿಕೆ, ಕೋಳಿ ಸಾಕಾಣಿಕೆ ಮುಂತಾದವು.

**(ಆ) ಗಣಿ ಉದ್ಯಮಗಳು :** ಈ ಉದ್ಯಮವು ಭೂಮಿಯ ಮೇಲ್ಮೆಯ ತಳದಿಂದ ವಿವಿಧ ರೂಪದ ಕಚ್ಚಾವಸ್ತುಗಳನ್ನು ಹೊರತೆಗೆಯುವುದರಲ್ಲಿ ನಿರತವಾಗಿರುತ್ತದೆ. (ಇದನ್ನು ಮುಗಿದುಹೋಗುವ ಉದ್ಯಮವೆಂದು ಕರೆಯುತ್ತಾರೆ.) ಉದಾಃ ವಿವಿಧ ಅದಿರುಗಳನ್ನು ಹೊರತೆಗೆಯುವುದು, ತೈಲ ಭಾವಿಗಳು ಮುಂತಾದವು.


**ದ್ವಿತೀಯ ಉದ್ಯಮಗಳು :** ಈ ಉದ್ಯಮಗಳು ಶ್ರಮ ಪ್ರಧಾನವಾಗಿದ್ದು ಮಾನವನ ಪಾತ್ರ ಮುಖ್ಯವಾಗಿರುತ್ತದೆ. ಈ ಉದ್ಯಮಗಳನ್ನು ಉತ್ಪಾದನಾ ಉದ್ಯಮಗಳು ಮತ್ತು ನಿರ್ವಹಣ ಉದ್ಯಮಗಳೆಂದು ವಿಭಾಗಿಸಬಹುದು.

**(ಅ) ಉತ್ಪಾದನ ಉದ್ಯಮಗಳು :** ಈ ಉದ್ಯಮಗಳು ಕಚ್ಚಾ ಪದಾರ್ಥಗಳನ್ನು ಅಥವಾ ತಯಾರಿಸಿದ ವಸ್ತುಗಳನ್ನು ಅಂತಿಮ ಉತ್ಪನ್ನವಾಗಿ ಪರಿವರ್ತಿಸುತ್ತವೆ. ಈ ಉದ್ಯಮಗಳು ಹೆಚ್ಚಾಗಿ ಮಾನವ ಶ್ರಮವನ್ನು ಬಳಸಿಕೊಳ್ಳುತ್ತವೆ ಹಾಗೂ ಗ್ರಾಹಕರ ಬಹುಪಾಲು ಅಗತ್ಯಗಳನ್ನು ಪೂರೈಸುತ್ತವೆ. ಉದಾಃ ಕಬ್ಬಿಣದ ಅದಿರನ್ನು ಉಕ್ಕಾಗಿ ಪರಿವರ್ತಿಸುವುದು, ಕಬ್ಬನ್ನು ಸಕ್ಕರೆಯಾಗಿ ಪರಿವರ್ತಿಸುವುದು ಇತ್ಯಾದಿ...

**(ಆ) ನಿರ್ವಹಣೆ ಉದ್ಯಮಗಳು :** ಈ ಉದ್ಯಮಗಳು ರಸ್ತೆ, ಕಾಲುವೆ, ಸೇತುವೆ ಮುಂತಾದ ಮೂಲ ಸೌಕರ್ಯಗಳನ್ನು ನಿರ್ಮಿಸಲು ಶ್ರಮಿಸುತ್ತವೆ. ಇದರಿಂದ ಪ್ರಧಾನ ಆರ್ಥಿಕ ಚಟುವಟಿಕೆಗಳಾದ ಸಾರಿಗೆ ಸಂಪರ್ಕ ಇತ್ಯಾದಿಗಳು ತೀವ್ರ ಗತಿಯಲ್ಲಿ ಬೆಳವಣಿಗೆಯಾಗುತ್ತವೆ.

## ಗೃಹಕೈಗಾರಿಕೆಗಳು ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು

**ಗೃಹಕೈಗಾರಿಕೆಗಳು :** ಗೃಹಕೈಗಾರಿಕೆಗಳನ್ನು ಗುಡಿಕೈಗಾರಿಕೆಗಳೆಂದೂ ಕರೆಯುತ್ತಾರೆ. ಇವುಗಳನ್ನು ಕುಶಲ ಕರ್ಮಿಗಳು ತಮ್ಮ ಮನೆಗಳಲ್ಲೇ ನಡೆಸುತ್ತಾರೆ. ಇವರಿಗೆ ತಮ್ಮ ಕುಟುಂಬದ ಇತರ ಸದಸ್ಯರು ಮತ್ತು ಕೆಲಸ ಕಲಿಯುವವರು (Apprentice) ಸಹಾಯ ಮಾಡುತ್ತಾರೆ. ಇವು ಪ್ರಧಾನವಾಗಿ ಹಳ್ಳಿಗಳಲ್ಲಿ ಕೇಂದ್ರೀಕೃತವಾಗಿರುತ್ತವೆ.



ಗೃಹಕೈಗಾರಿಕೆಗಳು

©KTBS Not to be re published

ಈ ಕೈಗಾರಿಕೆಗಳು ಸಾಮಾನ್ಯವಾಗಿ ಸ್ಥಳೀಯ ಮಾರುಕಟ್ಟೆಗೆ ವಸ್ತುಗಳನ್ನು ಉತ್ಪಾದಿಸುತ್ತವೆ. ಈ ಕೈಗಾರಿಕೆಗಳಲ್ಲಿ ಉತ್ಪಾದನೆಯಾಗುವ ಕೆಲವು ವಸ್ತುಗಳೆಂದರೆ ಬಿದಿರಿನ ಬುಟ್ಟಿಗಳು, ಮರಮುಟ್ಟುಗಳು, ಚಾಪೆಗಳು, ಕಲ್ಲಿನ ಕೆತ್ತನೆಗಳು, ಕಮ್ಮಾರಿಕೆ, ಮಡಿಕೆಗಳನ್ನು ಮಾಡುವುದು ಮುಂತಾದವು.

**ಸಣ್ಣ ಪ್ರಮಾಣದ ಕೈಗಾರಿಕೆಗಳು :** ಒಂದು ನಿರ್ದಿಷ್ಟ ಕಟ್ಟಡಗಳಲ್ಲಿ ಸ್ಥಾಪಿತವಾಗಿರುತ್ತವೆ. ಕೂಲಿ ಕಾರ್ಮಿಕರನ್ನು ನೇಮಿಸಿಕೊಳ್ಳುತ್ತವೆ. ಕಚ್ಚಾ ವಸ್ತುಗಳನ್ನು ಸಂಗ್ರಹಿಸಿ ಸಣ್ಣ ಪ್ರಮಾಣದಲ್ಲಿ ವಸ್ತುಗಳನ್ನು ಉತ್ಪಾದಿಸುತ್ತವೆ. ಸಣ್ಣ ಯಂತ್ರಗಳನ್ನು ಮತ್ತು ವಿದ್ಯುಚ್ಛಕ್ತಿಯನ್ನು ಬಳಸುತ್ತವೆ. ಇಲ್ಲಿ ಉತ್ಪಾದನೆಯಾಗುವ ವಸ್ತುಗಳು ಸ್ಥಳೀಯ ಮಾರುಕಟ್ಟೆಗೆ ಅಲ್ಲದೆ ವಿದೇಶ ಮಾರುಕಟ್ಟೆಗಳಿಗೂ ಸರಬರಾಜಾಗುತ್ತವೆ. ಇಲ್ಲಿ ಉತ್ಪಾದನೆಯಾಗುವ ಕೆಲವು ವಸ್ತುಗಳಿಗೆ ಉದಾಹರಣೆಗಳೆಂದರೆ ರಾಸಾಯನಿಕ ವಸ್ತುಗಳು, ಇಂಜಿನಿಯರಿಂಗ್ ವಸ್ತುಗಳು, ಪಾದರಕ್ಷೆಗಳು, ಬೈಸಿಕಲ್ಲುಗಳು, ರೇಡಿಯೋ, ಹೊಲಿಗೆಯಂತ್ರಗಳು ಮುಂತಾದವು.

## ವ್ಯವಹಾರ, ವ್ಯಾಪಾರ ಮತ್ತು ಕೈಗಾರಿಕೆಗಳಿಗೆ ಆಡಚಣೆಗಳು :

ವ್ಯವಹಾರವು ಸುಗಮವಾಗಿ ನಡೆಯಲು ವ್ಯಾಪಾರ ಪೂರಕ ಸೇವೆಗಳು ರೂಢಿಗೆ ಬಂದವು. ಇವುಗಳನ್ನು ವಾಣಿಜ್ಯ ಸಾಧನಗಳೆಂದು ಅಥವಾ ವಾಣಿಜ್ಯದ ಸೇವೆಗಳೆಂದೂ ಕರೆಯುತ್ತಾರೆ. ಸರಕುಗಳನ್ನು ಉತ್ಪಾದಕ ಸ್ಥಳಗಳಿಂದ ಗ್ರಾಹಕರಿಗೆ ದೊರೆಯುವಂತಾಗಲು ಕೆಲವು ಅಡಚಣೆಗಳಿವೆ. ಅವುಗಳಲ್ಲಿ ಮುಖ್ಯವಾದುವೆಂದರೆ ಸ್ಥಳದ ಅಡಚಣೆ, ನಷ್ಟಭಯದ ಅಡಚಣೆ, ಸಮಯದ ಅಭಾವ, ಹಣಕಾಸಿನ ಕೊರತೆ, ತಿಳುವಳಿಕೆಯ ಅಭಾವ ಮುಂತಾದವು. ಈ ಅಡಚಣೆಗಳ ನಿವಾರಣೆಗೆ ಕೆಲವು ಸೇವೆಗಳು ಸೌಕರ್ಯ ಕಲ್ಪಿಸುತ್ತವೆ. ಇವುಗಳನ್ನು ವ್ಯಾಪಾರದ ಪೂರಕಗಳೆಂದು ಕರೆಯುತ್ತಾರೆ.

- **ಸ್ಥಳದ ಅಡಚಣೆ – ಸಾರಿಗೆ:** ಸ್ಥಳದ ಅಡಚಣೆಯನ್ನು ನಿವಾರಿಸಲು ಸಾಗಾಟದ ವ್ಯವಸ್ಥೆಯ ಸಾರಿಗೆ ಸೇವೆಗಳನ್ನು ಬಳಸಲಾಗುತ್ತದೆ. ರಸ್ತೆಸಾರಿಗೆ, ರೈಲುಸಾರಿಗೆ, ಜಲಸಾರಿಗೆ ಮತ್ತು ವಾಯುಸಾರಿಗೆ ಸಾಗಾಟದ ಬೇರೆ ಬೇರೆ ಮಾಧ್ಯಮಗಳಾಗಿವೆ. ಈ ಮಾಧ್ಯಮಗಳು ಉತ್ಪಾದಕರಿಂದ ವ್ಯಾಪಾರಿಗಳಿಗೆ ಹಾಗೂ ವ್ಯಾಪಾರಿಗಳಿಂದ ಗ್ರಾಹಕರಿಗೆ ಉತ್ಪಾದಿಸಿದ ವಸ್ತುಗಳನ್ನು ವಿತರಣೆ ಮಾಡಲು ಸಹಾಯ ಮಾಡುತ್ತದೆ.

- **ಹಣಕಾಸಿನ ಸೇವೆ – ಬ್ಯಾಂಕುಗಳು :** ಉತ್ಪಾದಕರಿಂದ ಅನುಭೋಗಿಗಳಿಗೆ ಸರಕುಗಳನ್ನು ವಿತರಣೆ ಮಾಡುವ ಕಾರ್ಯದಲ್ಲಿ ಹಣಕಾಸಿನ ಸಮಸ್ಯೆ ಉಂಟಾಗುತ್ತದೆ. ಹಣಕಾಸಿನ ಪೂರೈಕೆ ಎಲ್ಲ ಹಂತಗಳಿಗೂ ಅತ್ಯಾವಶ್ಯಕವಾಗಿದೆ. ಸರಕುಗಳನ್ನು ಹಣಕ್ಕೆ ವಿನಿಮಯ ಮಾಡಿಕೊಳ್ಳಲು ಸಹ ಹಣದ ಮಾಧ್ಯಮ ಅವಶ್ಯಕವಾಗಿದೆ. ಈ ಸಮಸ್ಯೆಗಳು ಬ್ಯಾಂಕುಗಳು ಮತ್ತು ಮತ್ತಿತರ ಹಣಕಾಸು ಸಂಸ್ಥೆಗಳಿಂದ ನಿವಾರಣೆಯಾಗುತ್ತವೆ. ಬ್ಯಾಂಕುಗಳು ವ್ಯಾಪಾರಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಹಣಕಾಸಿನ ಸೌಲಭ್ಯ ಒದಗಿಸುತ್ತಾರೆ ಮತ್ತು ವ್ಯವಹಾರ ಸುಗಮವಾಗಿ ನಡೆಯುವಂತೆ ಸೇವೆ ಸಲ್ಲಿಸುತ್ತವೆ.

- **ನಷ್ಟದ ಭಯ–ವಿಮಾ ಕಂಪನಿಗಳು :** ಸರಕುಗಳನ್ನು ಉತ್ಪಾದಕರಿಂದ ಅನುಭೋಗಿಗಳಿಗೆ ಸಾಗಿಸುವಾಗ ಅಥವಾ ಅವುಗಳನ್ನು ಉಗ್ರಾಣಗಳಲ್ಲಿ ಶೇಖರಿಸಿಟ್ಟಾಗ ಅವು ನಾಶ ಹೊಂದುವುದು, ಹಾನಿಗೊಳಗಾಗುವುದು ಅಥವಾ ಗುಣಮಟ್ಟದಲ್ಲಿ ಕ್ಷೀಣತೆ ಮುಂತಾದ ಅನೇಕ

Not to be re published ©KTBS

ಅಪಾಯಗಳಿಗೊಳಗಾಗುತ್ತವೆ. ಈ ನಷ್ಟದ ತೊಡಕುಗಳನ್ನು ನಿವಾರಿಸಲು ವಿಮಾ ಸೌಲಭ್ಯಗಳಿವೆ ಇವುಗಳಲ್ಲಿ ಮುಖ್ಯವಾದುವು. ಅಗ್ನಿವಿಮೆ ಮತ್ತು ಜಲವಿಮೆ. ಈ ರೀತಿಯಲ್ಲಿ ವಿಮಾ ಕಂಪನಿಗಳು ವ್ಯಾಪಾರ ಸುಗಮ ರೀತಿಯಲ್ಲಿ ನಡೆಯಲು ಸೇವೆಗಳನ್ನು ಸಲ್ಲಿಸುತ್ತವೆ.

- **ಸಮಯದ ಅಡಚಣೆ – ಶೇಖರಣೆ :** ಸರಕುಗಳ ಉತ್ಪಾದನೆ ಮತ್ತು ಅನುಭೋಗ ಬೇರೆ ಬೇರೆ ಸಮಯಗಳಲ್ಲಾಗುತ್ತವೆ. ಆದರೆ ಇವುಗಳನ್ನು ಕಾಲ ಕಾಲಕ್ಕೆ ಅನುಭೋಗಿಗಳಿಗೆ ಒದಗಿಸಲು ಶೇಖರಿಸಿಡಬೇಕಾಗುತ್ತದೆ. ಇದಕ್ಕಾಗಿ ಉಗ್ರಾಣ ವ್ಯವಸ್ಥೆ ಸೇವೆ ಒದಗಿಸುತ್ತವೆ. ಈ ಉಗ್ರಾಣಗಳು ವೈಜ್ಞಾನಿಕ ರೀತಿಯಲ್ಲಿ ನಿರ್ಮಾಣವಾಗಿರುತ್ತವೆ. ಕೆಲವು ಉಗ್ರಾಣಗಳಲ್ಲಿ ಶೈತ್ಯಾಗಾರದ ವ್ಯವಸ್ಥೆಯು ಇರುತ್ತದೆ.

- **ಜ್ಞಾನದ ಕೊರತೆ – ಜಾಹೀರಾತು:** ಉತ್ಪಾದಕರಿಂದ ಅನುಭೋಗಿಗಳಿಗೆ ಸರಕುಗಳನ್ನು ವಿತರಣೆ ಮಾಡುವ ಸಂದರ್ಭದಲ್ಲಿ ಅನೇಕ ವೇಳೆ ಸರಕುಗಳ ಬಗ್ಗೆ ಜ್ಞಾನ ಅಥವಾ ತಿಳುವಳಿಕೆ ಕೊಡಬೇಕಾಗುತ್ತದೆ. ಹೊಸ ಹೊಸ ಸರಕುಗಳ ಉತ್ಪಾದನೆಯಲ್ಲಿ ಅಥವಾ ಪರ್ಯಾಯ ವಸ್ತುಗಳನ್ನು ಉಪಯೋಗಿಸಬಹುದಾದ ಸಂದರ್ಭಗಳಲ್ಲೂ ಜಾಹೀರಾತು ಸೇವೆ ಜ್ಞಾನ ಅಥವಾ ತಿಳುವಳಿಕೆ ಕೊಟ್ಟು ವ್ಯಾಪಾರಕ್ಕೆ ಸೇವೆ ಮಾಡುವ ಒಂದು ಅಂಗವಾಗಿದೆ.

### ವ್ಯವಹಾರದ ನೀತಿತತ್ವಗಳು (Business Ethics)

ಸಾಮಾನ್ಯವಾಗಿ ವ್ಯಾಪಾರ ಮತ್ತು ವಾಣಿಜ್ಯದ ಮುಖ್ಯ ಉದ್ದೇಶ ಲಾಭಗಳಿಕೆಯಾಗಿದೆ ಎಂದು ತಿಳಿದಿದ್ದೇವೆ. ಆದರೆ ಈ ಗ್ರಹಿಕೆ ಸರಿಯಲ್ಲ. ವ್ಯವಹಾರದ ಮುಖ್ಯ ಉದ್ದೇಶ ವ್ಯವಹಾರ ನಡೆಸಲು ಸಮಂಜಸವಾದ ಮತ್ತು ನ್ಯಾಯಯುಕ್ತ ಲಾಭಗಳಿಕೆ ಆಗಿರಬೇಕು. ಇವುಗಳು ಬಹಳ ಹಿಂದಿನ ಕಾಲದಿಂದಲೂ ನಡೆದುಕೊಂಡು ಬಂದಿರುವ ವೃತ್ತಿಗಳಾಗಿವೆ. ಇವು ಗ್ರಾಹಕರಿಗೆ ವಸ್ತುಗಳನ್ನು ಮತ್ತು ಸೇವೆಗಳನ್ನು ಒದಗಿಸುತ್ತವೆ. ವ್ಯಾಪಾರಗಾರರು ತಮ್ಮ ವ್ಯವಹಾರ ನಡೆಸಲು ಸಾಕಾಗುವಷ್ಟು ಲಾಭ ಮಾತ್ರ ಇಟ್ಟುಕೊಳ್ಳಬೇಕು. ಹೀಗೆ ಮಾಡುವುದರಿಂದ ವ್ಯವಹಾರದ 'ವೃತ್ತಿಧರ್ಮ' ಪಾಲಿಸಿದಂತಾಗುತ್ತದೆ. ಸಮಾಜಕ್ಕೆ ತಮ್ಮ ಸೇವೆ ಮಾಡಿದಂತಾಗುತ್ತದೆ. ಆದರೆ ಇಂದು ಹಣಗಳಿಕೆಗಾಗಿ ಲಾಭಕೋರತನ ವ್ಯವಹಾರದೊಳಕ್ಕೆ ಹೊಕ್ಕಿದೆ. ಕೆಲವು ವ್ಯಾಪಾರಗಾರರು ಅಹಿತಕರ ವ್ಯವಹಾರ ಪದ್ಧತಿಗಳನ್ನು ಅನುಸರಿಸುತ್ತಾರೆ. ಈ ಅಹಿತಕರ ಪದ್ಧತಿಗಳಲ್ಲಿ ಮುಖ್ಯವಾದುವು ವಸ್ತುಗಳ ಕಲಬೆರಿಕೆ, ಹೆಚ್ಚು ಲಾಭ, ತೂಕ ಮತ್ತು ಅಳತೆಗಳಲ್ಲಿ ಮೋಸ, ಅಕ್ರಮ ದಾಸ್ತಾನು ಮಾಡಿ ಕೃತಕ ಅಭಾವ ಪರಿಸ್ಥಿತಿ ಏರ್ಪಡಿಸುವುದು, ಕಾಳ ಸಂತೆ (Black Marketing)ಯಲ್ಲಿ ವಸ್ತುಗಳನ್ನು ಮಾರುವುದು ಮುಂತಾದುವು. ಈ ವಿಧಾನಗಳಿಂದ ಗ್ರಾಹಕರಿಗೆ ಅನೇಕ ತೊಂದರೆಗಳುಂಟಾಗುತ್ತವೆ. ವ್ಯಾಪಾರದಲ್ಲಿ ಈ ರೀತಿಯ ಮೋಸ ವಿಧಾನಗಳನ್ನು ಅನುಸರಿಸದೆ ವ್ಯಾಪಾರ ನೀತಿ ತತ್ವಗಳನ್ನು ಅನುಸರಿಸಬೇಕು. ಸಮಾಜದ ಹಿತವೇ ತಮ್ಮ ಹಿತವೆಂದು ಭಾವಿಸಬೇಕು.

ನಮ್ಮ ದೇಶದಲ್ಲಿ ಈ ಅನಿಷ್ಟ ಪದ್ಧತಿಗಳನ್ನು ದೂರ ಮಾಡಲು ಸರ್ಕಾರ ಸಾರ್ವಜನಿಕ ವಿತರಣಾ ಪದ್ಧತಿಯನ್ನು ರೂಢಿಗೆ ತಂದಿದೆ. ಅಗತ್ಯ ವಸ್ತುಗಳ ಸರಬರಾಜಿನ ಬಗ್ಗೆ ಕಾನೂನನ್ನು ರಚಿಸಿದೆ. ಕೈಗಾರಿಕಾ ವಸ್ತುಗಳ ಮೇಲಿನ ಕಾನೂನಿನ ಪ್ರಕಾರ ಪ್ರತಿ ಉತ್ಪಾದನಾ ವಸ್ತುಗಳ ಪೊಟ್ಟಣಗಳ ಮೇಲೆ ಉತ್ಪಾದನಾ ತಾರೀಖು ಬಳಕೆಯ ದಿನ ಮಿತಿ (Date of Expiry) ತೂಕ ಅಥವಾ ಅಳತೆ ಮತ್ತು

©KTBS Not to be republished

ಗರಿಷ್ಠ ಬೆಲೆಯನ್ನು ಮುದ್ರಿಸಬೇಕು. ಪದಾರ್ಥಗಳ ಗುಣಮಟ್ಟ ಕಾಪಾಡಲು ಭಾರತೀಯ ಮಾನಕ ಸಂಸ್ಥೆ (Bureau of Indian Standarads) ಯನ್ನು ಸ್ಥಾಪಿಸಿದೆ. ಈ ಸಂಸ್ಥೆ ಪದಾರ್ಥಗಳ ಗುಣಮಟ್ಟ ಪರೀಕ್ಷಿಸಿ ಗುಣಮಟ್ಟ ಸರಿಯಾಗಿರುವ ವಸ್ತುಗಳ ಮೇಲೆ (ISI) ಚಿಹ್ನೆ ಮುದ್ರಿಸುತ್ತವೆ. ವ್ಯವಸಾಯ ಉತ್ಪನ್ನ ವಸ್ತುಗಳ ಮೇಲೆ ಗುಣಮಟ್ಟ ತಿಳಿಯಲು ಅಗ್‌ಮಾರ್ಕ್ ಚಿಹ್ನೆ ಮುದ್ರಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಸರ್ಕಾರ ಅಗತ್ಯ ವಸ್ತುಗಳನ್ನು ಒದಗಿಸಲು ಗ್ರಾಹಕರ ಸಹಕಾರಿ ಸಂಘಗಳನ್ನು, ಜನತಾ ಬಜಾರುಗಳನ್ನು ಸ್ಥಾಪಿಸಿದೆ. ಏನೆಲ್ಲ ಕ್ರಮಗಳನ್ನು ಕೈಗೊಂಡರೂ ವ್ಯಾಪಾರಿಗಳಲ್ಲಿ ಸಮಾಜದ ಹಿತದೃಷ್ಟಿಯಿಂದ "ವೃತ್ತಿಧರ್ಮ"ದ ಆಚರಣೆ ಇಲ್ಲವಾದಲ್ಲಿ ವ್ಯಾಪಾರವು ದ್ರೋಹ ಅಥವಾ ಮೋಸದ ಚಿಂತನೆಯಾಗುತ್ತದೆ. ಇದು ಒತ್ತಾಯದಿಂದ ಬರುವಂತಹದಲ್ಲ, ಆತ್ಮವಿಶ್ವಾಸದಿಂದ ಬರಬೇಕಾಗುತ್ತದೆ. ವ್ಯಾಪಾರವು ದ್ರೋಹದ ಚಿಂತನೆ ಆಗಬಾರದು. ವ್ಯಾಪಾರವು ಸಾರ್ವಜನಿಕ ಹಿತದೃಷ್ಟಿಯಿಂದ ನಡೆಯಬೇಕು.

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಬಿಟ್ಟಿರುವ ಜಾಗಗಳನ್ನು ಸರಿಯಾದ ಪದಗಳಿಂದ ತುಂಬಿರಿ.**

1. ಪುನರ್ ರಫ್ತು ವ್ಯಾಪಾರಕ್ಕೆ ________ ಪಟ್ಟಣವು ಒಂದು ಮುಖ್ಯ ನಿದರ್ಶನವಾಗಿದೆ.
2. ಗೃಹ ಕೈಗಾರಿಕೆಗಳು ಸಾಮಾನ್ಯವಾಗಿ ________ ಗಳಲ್ಲಿ ಕೇಂದ್ರಿಕೃತವಾಗಿರುತ್ತವೆ.
3. ರಾಸಾಯನಿಕ ವಸ್ತುಗಳ ತಯಾರಿಕೆ ಸಾಮಾನ್ಯವಾಗಿ ________ ಕೈಗಾರಿಕೆಗಳಲ್ಲಿ ಆಗುತ್ತದೆ.
4. ವ್ಯಾಪಾರದ ಮುಖ್ಯ ಉದ್ದೇಶ ________ ಲಾಭಗಳಿಸುವುದಾಗಿರಬೇಕು.
5. ಪದಾರ್ಥಗಳ ಗುಣಮಟ್ಟ ಕಾಪಾಡಲು ________ ಸಂಸ್ಥೆಯನ್ನು ಸ್ಥಾಪಿಸಲಾಗಿದೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1. ವ್ಯಾಪಾರ ಎಂದರೇನು?
2. ಸಂಚಾರಿ ಅಂಗಡಿಗಳ ವಿವಿಧ ವಿಧಗಳಾವುವು?
3. ಸಗಟು ವ್ಯಾಪಾರಿಗಳೆಂದರೆ ಯಾರು?
4. ವಿದೇಶ ವ್ಯಾಪಾರದ ಮೂರು ವಿಧಗಳನ್ನು ತಿಳಿಸಿ.
5. ಗೃಹ ಕೈಗಾರಿಕೆಗಳು ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು ಉತ್ಪಾದಿಸುವ ವಸ್ತುಗಳನ್ನು ತಿಳಿಸಿ.
6. ಸ್ಥಳದ ಅಭಾವ ಮತ್ತು ನಷ್ಟ ಭಯ ನಿವಾರಿಸಲು ಸ್ಥಾಪಿತವಾಗಿರುವ ಸೇವೆಗಳಾವುವು?
7. ಲಾಭದ ಆಸೆಯಿಂದ ಕೆಲವು ವ್ಯಾಪಾರಗಾರರು ಕೆಲವು ಅಹಿತಕರ ಪದ್ಧತಿಗಳನ್ನು ಅನುಸರಿಸುತ್ತಾರೆ. ಇವು ಯಾವುವು?
8. ಲಾಭದ ಆಸೆಯಿಂದ ಕೆಲವು ವ್ಯಾಪಾರಗಾರರು ಅಹಿತಕರ ಪದ್ಧತಿಗಳನ್ನು ಅನುಸರಿಸುತ್ತಾರೆ. ಇವುಗಳನ್ನು ತಪ್ಪಿಸಲು ಕೈಗೊಂಡಿರುವ ಕ್ರಮಗಳಾವುವು?

©KTBS Not to be re published

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1. ವ್ಯವಹಾರದ ಆರ್ಥಿಕ ಉದ್ದೇಶಗಳೇನು?
2. ವ್ಯವಹಾರದ ಸಾಮಾಜಿಕ ಉದ್ದೇಶಗಳೇನು?
3. ಚಿಲ್ಲರೆ ವ್ಯಾಪಾರಿಗಳಿಂದಾಗುವ ಸೇವೆಗಳನ್ನು ತಿಳಿಸಿ.
4. ವಿವಿಧ ರೀತಿಯ ಚಿಲ್ಲರೆ ವ್ಯಾಪಾರಿಗಳನ್ನು ಪಟ್ಟಿ ಮಾಡಿ ಪ್ರತಿಯೊಂದಕ್ಕೂ ಒಂದೆರಡು ವಾಕ್ಯಗಳಲ್ಲಿ ಉತ್ತರ ಬರೆಯಿರಿ.
5. ಉದ್ಯಮಗಳು ಅಥವಾ ಕೈಗಾರಿಕೆಗಳ ಎರಡು ವಿಧಗಳನ್ನು ಸ್ಥೂಲವಾಗಿ ಪರಿಚಯಿಸಿ.
6. ಒಂದು ದೇಶಕ್ಕೆ ವಿದೇಶಿ ವ್ಯಾಪಾರದ ಅವಶ್ಯಕತೆಯನ್ನು ಕುರಿತು ವಿವರಿಸಿ.

**IV. ಚಟುವಟಿಕೆ.**

ನಿಮ್ಮ ಸ್ಥಳದ ಹತ್ತಿರದ ಯಾವುದಾದರೂ ಸಂತೆ ಅಥವಾ ಜಾತ್ರೆಗೆ ಭೇಟಿಕೊಡಿ. ಅಲ್ಲಿ ನಡೆಯುವ ವ್ಯವಹಾರಗಳ ಬಗ್ಗೆ ಅರ್ಥೈಸಿಕೊಂಡು ಒಂದು ಪ್ರಬಂಧವನ್ನು ಬರೆಯಿರಿ.

*****

©KTBS Not to be re published

## ಅಧ್ಯಾಯ – 3

# ವಿವಿಧ ವ್ಯವಹಾರ ಸಂಘಟನೆಗಳು

**ಈ ಅಧ್ಯಾಯದದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ವ್ಯವಹಾರ ಸಂಘಟನೆಗಳ ವಿಧಗಳು.*
- *ಏಕವ್ಯಕ್ತಿ ಮಾಲೀಕತ್ವ ಮತ್ತು ಪಾಲುಗಾರಿಕೆ ವ್ಯವಹಾರ ಸಂಸ್ಥೆಗಳ ಸ್ವರೂಪ ವಿಧಗಳು ಮತ್ತು ಅನುಕೂಲ, ಅನನುಕೂಲಗಳು.*
- *ಪಾಲುಗಾರಿಕೆ ಸಂಸ್ಥೆಗಳ ನೋಂದಣಿಯ ಕ್ರಮ.*
- *ಭಾರತದಲ್ಲಿ ಹಿಂದೂ ಅವಿಭಕ್ತ ವ್ಯವಹಾರ ಕುಟುಂಬಗಳು.*

**ವಿವಿಧ ವ್ಯವಹಾರ ಸಂಘಟನೆಗಳು**

ಇಂದು ನಾವು ವಿವಿಧ ರೀತಿಯ ವ್ಯವಹಾರ ಸಂಘಟನೆಗಳನ್ನು ಕಾಣುತ್ತೇವೆ. ಅವು ಯಾವುವೆಂದರೆ:

1. ಏಕ ಮಾಲೀಕತ್ವದ ಸಂಸ್ಥೆಗಳು.
2. ಪಾಲುದಾರಿಕೆ ಸಂಸ್ಥೆಗಳು
3. ಹಿಂದೂ ಅವಿಭಕ್ತ ಕುಟುಂಬ ಸಂಸ್ಥೆಗಳು
4. ಸಹಕಾರ ಸಂಘಗಳು
5. ಕೂಡು ಬಂಡವಾಳ ಸಂಸ್ಥೆಗಳು

ಈ ಅಧ್ಯಾಯದಲ್ಲಿ ಖಾಸಗಿ ರಂಗದ ಸಂಘಟನೆಗಳ ಮುಖ್ಯ ವಿಧಗಳಾದ ಏಕಮಾಲೀಕತ್ವ, ಪಾಲುಗಾರಿಕೆ ಸಂಸ್ಥೆಗಳು ಮತ್ತು ಹಿಂದೂ ಅವಿಭಕ್ತ ಕುಟುಂಬ ಸಂಸ್ಥೆಗಳ ಬಗ್ಗೆ ಸಂಕ್ಷಿಪ್ತವಾಗಿ ಪರಿಚಯಮಾಡಿಕೊಳ್ಳೋಣ.

**ಏಕವ್ಯಕ್ತಿ ಮಾಲೀಕತ್ವದ ಸಂಸ್ಥೆಗಳು (Sole Trading Concerns) :**

ಇವು ಒಬ್ಬನೇ ವ್ಯಕ್ತಿಯಿಂದ ನಡೆಸಲ್ಪಡುತ್ತವೆ. ಆತನೇ ಮಾಲೀಕ, ನಿಯಂತ್ರಕ, ನಷ್ಟಭರಿಸುವವನು ಮತ್ತು ಬಂಡವಾಳ ಹೂಡಿರುವವನು ಆಗಿರುತ್ತಾನೆ.

**ಲಕ್ಷಣಗಳು:** ಇವು ಬಹಳ ಹಿಂದಿನ ಕಾಲದಿಂದಲೂ ರೂಢಿಯಲ್ಲಿರುವ ವ್ಯವಹಾರ ಸಂಸ್ಥೆಗಳಾಗಿವೆ. ಇವುಗಳನ್ನು ಸುಲಭವಾಗಿ ಸ್ಥಾಪಿಸಬಹುದು. ಇವುಗಳ ಮಾಲೀಕತ್ವ ಒಬ್ಬನೇ ವ್ಯಕ್ತಿಗೆ ಸೇರಿರುತ್ತದೆ. ಇವು ಮಾಲೀಕನ ಲಾಭಕ್ಕಾಗಿ ನಿರ್ವಹಿಸಲ್ಪಡುತ್ತವೆ. ಇವುಗಳ ಮಾಲೀಕರು ತಮ್ಮ ಸ್ವಂತ ಬಂಡವಾಳವನ್ನು ಹೂಡಿ, ಸ್ವಂತ ಕೌಶಲ್ಯಗಳನ್ನು ಉಪಯೋಗಿಸಿ ವ್ಯವಹಾರ ನಡೆಸುತ್ತಾರೆ. ಇವುಗಳನ್ನು ಪ್ರಾರಂಭಿಸುವುದಕ್ಕಾಗಲಿ ಅಥವಾ ಮುಚ್ಚುವುದಕ್ಕಾಗಲೀ ಯಾವುದೇ ಕಾನೂನಿನ ನಿಬಂಧನೆಗಳಿರುವುದಿಲ್ಲ. ಇವುಗಳ ಮಾಲೀಕರು ವ್ಯವಹಾರಗಳಲ್ಲಿ ಉಂಟಾಗುವ ಎಲ್ಲ ನಷ್ಟಗಳಿಗೂ ಹೊಣೆಗಾರರಾಗಿರುತ್ತಾರೆ. ಇವರು ತಮ್ಮ ಕುಟುಂಬದ ಸದಸ್ಯರ ಸಹಾಯವನ್ನು ಪಡೆದುಕೊಳ್ಳುತ್ತಾರೆ. ಕೆಲವು ಸಂದರ್ಭಗಳಲ್ಲಿ ತಮ್ಮ ಸಹಾಯಕ್ಕಾಗಿ ಕೆಲಸಗಾರರನ್ನು

©KTBS Not to be re published

ನೇಮಿಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ಇವು ಸಣ್ಣ ಪ್ರಮಾಣದಲ್ಲಿರುತ್ತವೆ. ಆದರೆ ಇತ್ತೀಚಿನ ದಿನಗಳಲ್ಲಿ ದೊಡ್ಡ ಪ್ರಮಾಣದಲ್ಲೂ ಈ ವ್ಯವಹಾರ ಸಂಸ್ಥೆಗಳು ಸಂಘಟಿತವಾಗಿರುತ್ತವೆ.

**ಏಕವ್ಯಕ್ತಿ ಮಾಲೀಕತ್ವ ವ್ಯವಹಾರ ಸಂಸ್ಥೆಗಳ ಅನುಕೂಲಗಳು**

- ಇವುಗಳನ್ನು ಪ್ರಾರಂಭಿಸಲು ಯಾವುದೇ ಕಾನೂನಿನ ಕಟ್ಟಲೆಗಳ ಅವಶ್ಯಕತೆ ಬೇಕಾಗಿಲ್ಲ.
- ಸ್ವಂತ ಬಂಡವಾಳದಿಂದಲೇ ಪ್ರಾರಂಭಿಸಬಹುದು.
- ಅನುದಿನದ ವಹಿವಾಟುಗಳನ್ನು ನಡೆಸುವುದು ಅಷ್ಟೇನು ಕಷ್ಟವಲ್ಲ. ಸಂಸ್ಥೆ ಗಳಿಸಿದ ಎಲ್ಲ ಲಾಭಗಳನ್ನು ಏಕವ್ಯಕ್ತಿ ಮಾಲೀಕರೆ ಅನುಭವಿಸುತ್ತಾರೆ.
- ವ್ಯಾಪಾರದ ಮೇಲ್ವಿಚಾರಣೆ ಸ್ವತ: ತಾವೇ ನೋಡಿಕೊಳ್ಳುತ್ತಾರೆ.
- ಇವರು ಗ್ರಾಹಕರ ಜೊತೆಯಲ್ಲಿ ನೇರ ಸಂಪರ್ಕ ಇಟ್ಟುಕೊಂಡಿರುತ್ತಾರೆ. ಅನೇಕ ಸಾಮಾಜಿಕ ಸೇವೆಗಳನ್ನು ಮಾಡುತ್ತಾರೆ. ಅವುಗಳಲ್ಲಿ ಮುಖ್ಯವಾದುವುವೆಂದರೆ, ಕೆಲವರಿಗೆ ಉದ್ಯೋಗಾವಕಾಶ ಕಲ್ಪಿಸುತ್ತಾರೆ. ಸಂಪತ್ತು ಹಾಗೂ ಆರ್ಥಿಕ ಅಧಿಕಾರ ಶಕ್ತಿಗಳನ್ನು ಹಂಚಲು ಸಹಾಯ ಮಾಡುತ್ತಾರೆ.
- ಗ್ರಾಹಕರಿಗೆ ಬೇಕಾದ ದೈನಂದಿನ ಇಷ್ಟಗಳನ್ನು ಅರಿತು ವಸ್ತುಗಳನ್ನು ಸರಬರಾಜು ಮಾಡುತ್ತಾರೆ.
- ಸರ್ಕಾರಕ್ಕೆ ಸಕಾಲದಲ್ಲಿ ತೆರಿಗೆಗಳನ್ನು ಪಾವತಿ ಮಾಡುತ್ತಾರೆ.
- ಶೀಘ್ರ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ ಮತ್ತು ವ್ಯವಹಾರದ ಗುಟ್ಟನ್ನು ಕಾಪಾಡಿಕೊಳ್ಳಬಹುದು.
- ತನ್ನ ಆಲೋಚನೆಗೆ ಬಂದ ಹೊಸ ಕಲ್ಪನೆಗಳನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸಬಹುದು.

ಏಕವ್ಯಕ್ತಿ ಮಾಲೀಕತ್ವ ವ್ಯವಹಾರ ಸಂಸ್ಥೆಗಳ ದೋಷಗಳು :

ಈ ಸಂಸ್ಥೆಗಳು ಕೆಲವು ಪರಿಮಿತಿಗಳಿಂದ ದೂರವಾಗಿಲ್ಲ. ಅವುಗಳಲ್ಲಿ ಮುಖ್ಯವಾದುವೆಂದರೆ –

- ಬಂಡವಾಳ ಮಿತಿಯಾಗಿದ್ದು ದೊಡ್ಡದಾಗಿ ಬೆಳೆಸಲು ಕಷ್ಟವಾಗುವುದು,
- ಆಡಳಿತ ಕೌಶಲ್ಯಗಳು ಸೀಮಿತವಾಗಿರುತ್ತವೆ.
- ಯಾವಾಗಲೂ ಒಬ್ಬರಿಗಿಂತ ಇಬ್ಬರು ಅಥವಾ ಜಾಸ್ತಿ ವ್ಯಕ್ತಿಗಳು ನಿರ್ಧಾರಗಳನ್ನು ತೆಗೆದುಕೊಳ್ಳುವುದು ಸೂಕ್ತವಾಗಿರುತ್ತದೆ.
- ಎಲ್ಲ ನಷ್ಟ ಅಥವಾ ಹೊಣೆಗಾರಿಕೆಗಳನ್ನು ಒಬ್ಬನೇ ಹೊರಬೇಕಾಗುತ್ತದೆ.
- ಮಾಲೀಕನ ನಿಧನ ಅಥವಾ ದಿವಾಳಿಯಿಂದಾಗಿ ಸಂಸ್ಥೆಯನ್ನು ಮುಚ್ಚಬೇಕಾದ ಪರಿಸ್ಥಿತಿ ಉಂಟಾಗುತ್ತದೆ.

**ಪಾಲುಗಾರಿಕೆ ವ್ಯವಹಾರ ಸಂಸ್ಥೆಗಳು (Partnership Firms)**

ಏಕವ್ಯಕ್ತಿ ಮಾಲೀಕತ್ವದ ಪರಿಮಿತಿಗಳನ್ನು ನಿವಾರಿಸಲು ಹಲವಾರು ವಿಧದ ವ್ಯವಹಾರ ಸಂಸ್ಥೆಗಳು

©KTBS Not to be re published

ರೂಢಿಗೆ ಬಂದವು. ಅವುಗಳಲ್ಲಿ ಪಾಲುಗಾರಿಕೆ ಸಂಸ್ಥೆಗಳು ಒಂದಾಗಿವೆ. ಈ ಸಂಸ್ಥೆಗಳಲ್ಲಿ ಒಬ್ಬರಿಗಿಂತ ಹೆಚ್ಚು ಜನ ಕಲೆತು ವ್ಯವಹಾರ ಮಾಡುತ್ತಾರೆ. ಪಾಲುಗಾರಿಕೆ ಸಂಸ್ಥೆಗಳನ್ನು ಪ್ರಾರಂಭಿಸಲು ಹಾಗೂ ನಡೆಸಿಕೊಂಡು ಹೋಗಲು 1932 ರಲ್ಲಿ ಪಾಲುಗಾರಿಕೆ ಸಂಸ್ಥೆಯ ಕಾನೂನು ಜಾರಿಗೆ ಬಂದಿತು. ಈ ಕಾಯ್ದೆಯ 4ನೇ ಸೆಕ್ಷನ್ ಪ್ರಕಾರ ಎಲ್ಲರೂ ಕೈಗೊಂಡಿರುವ ಅಥವಾ ಅದರಲ್ಲಿ ಎಲ್ಲರ ಪರವಾಗಿ ಒಬ್ಬ ವ್ಯವಹರಿಸುತ್ತಿರುವ ವ್ಯವಹಾರದ ಲಾಭಗಳನ್ನು ಹಂಚಿಕೊಳ್ಳಲು ಒಪ್ಪಿಕೊಂಡಿರುವ ವ್ಯಕ್ತಿಗಳ ನಡುವಿನ ಸಂಬಂಧ ಪಾಲುಗಾರಿಕೆಯಾಗಿದೆ. ಹಣಕಾಸಿನ ವ್ಯವಹಾರ ಮಾಡುವುದಾದರೆ ಗರಿಷ್ಟ ಹತ್ತು ಜನ ಪಾಲುಗಾರರು ಹಾಗೂ ಸಾಮಾನ್ಯ ಪಾಲುಗಾರಿಕೆ ವ್ಯವಹಾರ ಮಾಡುವುದಾದರೆ ಗರಿಷ್ಠ ಇಪ್ಪತ್ತು ಜನ ಪಾಲುಗಾರರಿಗೂ ಸೀಮಿತವಾಗಿರುತ್ತದೆ. ಈ ಸಂಸ್ಥೆಗಳನ್ನು ಪಾಲುದಾರಿಕೆ ಸಂಸ್ಥೆಗಳೆಂದೂ ಪಾಲುಗಾರರನ್ನು ಪಾಲುಗಾರರೆಂದು ಕರೆಯುತ್ತಾರೆ.

**ಪಾಲುಗಾರರ ವಿಧಗಳು :** ಪಾಲುಗಾರರಲ್ಲಿ ಕೆಲವು ವಿಧಗಳಿವೆ. ಅವುಗಳಲ್ಲಿ ಸಾಮಾನ್ಯವಾಗಿ ಕಂಡುಬರುವವೆಂದರೆ:

- **ಕ್ರಿಯಾಶೀಲ ಅಥವ ಸಕ್ರಿಯ ಪಾಲುಗಾರರು :** ಇವರು ನಿಗದಿತ ಬಂಡವಾಳ ಹೂಡಿರುತ್ತಾರೆ. ಲಾಭನಷ್ಟಗಳನ್ನು ಅನುಪಾತಕ್ಕನುಗುಣವಾಗಿ ಹಂಚಿಕೊಳ್ಳುತ್ತಾರೆ. ಸಂಸ್ಥೆಯ ದಿನವಹಿ ವಹಿವಾಟು ಗಳನ್ನು ಸಕ್ರಿಯವಾಗಿ ನಡೆಸಿಕೊಂಡು ಹೋಗುತ್ತಾರೆ.
- **ತಟಸ್ಥ ಪಾಲುಗಾರರು :** ಇವರು ಬಂಡವಾಳನ್ನು ಹೂಡಿರುತ್ತಾರೆ. ಆದರೆ ದಿನವಹಿ ವಹಿವಾಟುಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದಿಲ್ಲ. ಅನುಪಾತಕ್ಕನುಗುಣವಾಗಿ ಲಾಭಗಳನ್ನು ಹಂಚಿಕೊಳ್ಳುತ್ತಾರೆ ಹಾಗೆಯೆ ನಷ್ಟ ಅಥವಾ ಜವಾಬ್ದಾರಿಗಳಿಗೂ ಕೂಡ ಹೊಣೆಯಾಗಿರುತ್ತಾರೆ.
- **ನಾಮಮಾತ್ರ ಪಾಲುಗಾರರು :** ಇವರು ಬಂಡವಾಳವನ್ನು ಹೂಡುವುದಿಲ್ಲ. ಸಕ್ರಿಯವಾಗಿ ದೈನಂದಿನ ವಹಿವಾಟುಗಳಲ್ಲಿ ಭಾಗವಹಿಸುವುದಿಲ್ಲ. (ಯಾವುದೇ ಲಾಭಕ್ಕೂ ಹಕ್ಕುದಾರರಲ್ಲ). ಆದರೆ ಸಾಲಗಳಿಗೆ ಅನುಪಾತಕ್ಕನುಗುಣವಾಗಿ ಹೊಣೆಯಾಗಿರುತ್ತಾರೆ.
- **ಅಪ್ರಾಪ್ತವಯಸ್ಕ ಪಾಲುದಾರರು:** ಹದಿನೆಂಟು ವರ್ಷ ವಯಸ್ಸಿಗಿಂತ ಕಡಿಮೆ ಇರುವವರು ಪಾಲುಗಾರರಾಗಲು ಸಾಧ್ಯವಿಲ್ಲ. ಆದರೆ ಎಲ್ಲ ಪಾಲುಗಾರರ ಸಮ್ಮತಿಯಂತೆ ಹಾಗೂ ಕರಾರಿನಂತೆ, ಸಂಸ್ಥೆಯ ಹಿತದೃಷ್ಟಿಯಿಂದ ಹದಿನೆಂಟು ವರ್ಷ ಮೀರದವರನ್ನೂ ಪಾಲುಗಾರರಾಗಿ ಸೇರಿಸಿಕೊಳ್ಳಬಹುದು. ಇವರು ಲಾಭಗಳಲ್ಲಿ ಮಾತ್ರ ತಮ್ಮ ಪಾಲನ್ನು ಪಡೆಯುತ್ತಾರೆ. ನಷ್ಟಗಳಿಗೆ ಹೊಣೆಯಾಗುವುದಿಲ್ಲ. ಹೊಸದಾಗಿ ಪ್ರಾರಂಭವಾಗುವ ಸಂಸ್ಥೆಗಳು ಅಪ್ರಾಪ್ತ ವಯಸ್ಕರನ್ನು ಪಾಲುದಾರರಾಗಿ ಸೇರಿಸಿಕೊಳ್ಳಲು ಅವಕಾಶವಿಲ್ಲ.

ಈ ವಿಧಗಳೇ ಅಲ್ಲದೆ ರಹಸ್ಯಪಾಲುದಾರರು, ಸೀಮಿತಪಾಲುಗಾರರು, ಅರೆಪಾಲುಗಾರರು, ಲಾಭದಲ್ಲಿ ಮಾತ್ರ ಪಾಲುಗಾರರು ಮುಂತಾದವರು ಇರುತ್ತಾರೆ.

**ಪಾಲುಗಾರಿಕೆಯ ಕರಾರು (Partnership Deed)**

ಈ ಕರಾರು ಪತ್ರ ಸಾಮಾನ್ಯವಾಗಿ ಬರಹದಲ್ಲಿರುತ್ತದೆ. ಕೆಲವು ಸಂದರ್ಭಗಳಲ್ಲಿ ಬಾಯಿ ಮಾತಿನಲ್ಲೂ ಕರಾರನ್ನು ಮಾಡಿಕೊಳ್ಳಬಹುದು. ಬರಹದ ಕರಾರು ದಸ್ತಾವೇಜು ಕಾಗದದಲ್ಲಿ ಬರೆಯಲ್ಪಟ್ಟಿರುತ್ತದೆ ಹಾಗೂ

©KTBS Not to be republished

ಸಂಸ್ಥೆಯಿಂದ ಸಂಸ್ಥೆಗೆ ವ್ಯತ್ಯಾಸ ಹೊಂದಿರುತ್ತದೆ. ಈ ಕರಾರಿನಲ್ಲಿ ಸಾಮಾನ್ಯವಾಗಿ ಅಡಕವಾಗಿರುವ ಅಂಶಗಳಾವುವೆಂದರೆ, ಸಂಸ್ಥೆಯ ಹೆಸರು, ಪಾಲುಗಾರರ ಹೆಸರು, ವಿಳಾಸ, ವ್ಯವಹಾರ ನಡೆಯುವ ಸ್ಥಳ, ವ್ಯವಹಾರದ ಸ್ವರೂಪ, ಉಪಶಾಖೆಗಳೇನಾದರೂ ಇದ್ದರೆ ಅವುಗಳ ವಿಳಾಸ, ಪ್ರಾರಂಭವಾಗುವ ದಿನಾಂಕ, ಪ್ರತಿಪಾಲುಗಾರರೂ ಹೂಡಿರುವ ಬಂಡವಾಳ. ಲಾಭನಷ್ಟಗಳನ್ನು ಹಂಚಿಕೊಳ್ಳುವ ಅನುಪಾತ, ಪ್ರತಿ ಪಾಲುಗಾರರ ಕರ್ತವ್ಯಗಳು, ಕೆಲಸಗಳ ಹಂಚಿಕೆ. ಹೊಸ ಪಾಲುಗಾರರನ್ನೇನಾದರೂ ಸೇರಿಸಿಕೊಳ್ಳಬೇಕಾದಲ್ಲಿ ಅನುಸರಿಸಬೇಕಾದ ನಿಯಮಗಳು, ಪಾಲುಗಾರರಲ್ಲಿ ಯಾರಾದರೂ ನಿವೃತ್ತಿ ಹೊಂದಿದರೆ ಅಥವಾ ಮರಣಹೊಂದಿದರೆ ಪುನರ್‌ಮೌಲ್ಯ (Goodwill) ನಿರ್ಧರಿಸುವ ವಿಧಾನ, ಪಾಲುಗಾರರಲ್ಲೇನಾದರೂ ಭಿನ್ನಾಭಿಪ್ರಾಯಗಳು ಬಂದಾಗ ಬಗೆಹರಿಸಿಕೊಳ್ಳಲು ಪಾಲಿಸಬೇಕಾದ ವಿಧಾನಗಳು ಮುಂತಾದವು.

**ಪಾಲುಗಾರಿಕೆ ಸಂಸ್ಥೆಯ ಅನುಕೂಲಗಳು**

- **ಸುಲಭ ರಚನೆ:** ಈ ಸಂಸ್ಥೆಯನ್ನು ನೋಂದಾಯಿಸುವುದು ಪಾಲುಗಾರರ ಐಚ್ಛಿಕ ನಿರ್ಧಾರಕ್ಕೆ ಸೇರಿದ್ದರಿಂದ ಹೆಚ್ಚಿನ ಕಾನೂನಿನ ನಿಬಂಧನೆಗಳಿರುವುದಿಲ್ಲ. ಹೀಗಾಗಿ ಈ ರೀತಿಯ ಸಂಸ್ಥೆಯ ಸುಲಭವಾಗಿ ರಚನೆಯಾಗುತ್ತದೆ.
- **ಹೆಚ್ಚಿನ ಬಂಡವಾಳ:** ಈ ಸಂಸ್ಥೆಯು ಇಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳಿಂದ ರಚಿಸಲ್ಪಡುವುದರಿಂದ ಬಂಡವಾಳದ ಹೂಡಿಕೆ ಹೆಚ್ಚಾಗಿರುತ್ತದೆ.
- **ಹೆಚ್ಚಿನ ಪರಿಣತಿ:** ಈ ಸಂಸ್ಥೆಯಲ್ಲಿ ಒಬ್ಬರಿಗಿಂತ ಹೆಚ್ಚಿನ ಮಾಲೀಕರಿದ್ದು ಶ್ರಮದ ವಿಭಜನೆಯ ತತ್ವವನ್ನು ಅಳವಡಿಸುವ ಸಾಧ್ಯತೆ ಇರುತ್ತದೆ. ಇದರಿಂದ ಪರಿಣತಿ ಹೆಚ್ಚಿಸುತ್ತದೆ.
- **ವಿಶ್ವಾಸಾರ್ಹತೆ :** ಪಾಲುಗಾರರ ಹೊಣೆಗಾರಿಕೆಯು ಅಪರಿಮಿತವಾದುದರಿಂದ, ಅದು ಸಂಸ್ಥೆಯ ವಿಶ್ವಾಸಾರ್ಹತೆಯನ್ನು ಹೆಚ್ಚಿಸುತ್ತದೆ.
- **ನಷ್ಟದ ಹಂಚಿಕೆ:** ಪಾಲುಗಾರಿಕಾ ಸಂಸ್ಥೆಯಲ್ಲಿ ನಷ್ಟ ಉಂಟಾದಾಗ ಎಲ್ಲ ಪಾಲುಗಾರರೂ ಲಾಭ ಹಂಚಿಕೆಯ ಅನುಪಾತದಲ್ಲಿ ನಷ್ಟವನ್ನು ಹಂಚಿಕೊಳ್ಳುತ್ತಾರೆ ಹಾಗೂ ನಷ್ಟದ ಹೊರೆ ಒಬ್ಬನೇ ಪಾಲುದಾರನ ಮೇಲೆ ಬೀಳುವುದಿಲ್ಲ.
- **ವ್ಯವಹಾರದ ರಹಸ್ಯ:** ಈ ಸಂಸ್ಥೆಯು ಲೆಕ್ಕಪತ್ರಗಳ ದಾಖಲೆಯನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕಾಗಿಲ್ಲದಿರುವುದರಿಂದ ವ್ಯವಹಾರದ ರಹಸ್ಯ ಪಾಲನೆ ಸಾಧ್ಯವಾಗುತ್ತದೆ.
- **ಸರಳ ವಿಸರ್ಜನೆ:** ಈ ಸಂಸ್ಥೆಯನ್ನು ಸುಲಭವಾಗಿ ವಿಸರ್ಜಿಸಬಹುದು. ಯಾವುದೇ ಪಾಲುಗಾರ ಇತರ ಪಾಲುಗಾರರಿಗೆ 14 ದಿನಗಳ ಮುನ್ಸೂಚನೆ ಕೊಡಬಹುದು ಹಾಗೂ ಇತರ ಪಾಲುಗಾರರ ಸಮ್ಮತಿಯ ಮೇಲೆ ವಿಸರ್ಜಿಸಬಹುದು.

**ಪಾಲುಗಾರಿಕೆ ವ್ಯವಹಾರ ಸಂಸ್ಥೆಯ ದೋಷಗಳು**

- ಕೆಲವು ಸಂದರ್ಭಗಳಲ್ಲಿ ಪಾಲುಗಾರರ ನಡುವೆ ಒಮ್ಮತ ಇಲ್ಲದೆ ಹೋದಾಗ ಅವರವರಲ್ಲಿ ತಾರತಮ್ಯಗಳು ಉಂಟಾಗುತ್ತವೆ.

© KTBS Not to be re published

- ಪಾಲುಗಾರರ ಸಂಖ್ಯೆಯಲ್ಲಿ ಗರಿಷ್ಠ ಮಿತಿ ಇರುವುದರಿಂದ ಹೆಚ್ಚು ಬಂಡವಾಳದ ಹೂಡಿಕೆಗೆ ಸಾಧ್ಯವಾಗದೆ ಹೋಗುತ್ತದೆ.
- ನಷ್ಟದ ಹೊಣೆಗಾರಿಕೆ ಅಪರಿಮಿತವಾಗಿದ್ದು ಹೆಚ್ಚು ಜನ ಪಾಲುಗಾರರಾಗಲು ಇಷ್ಟಪಡುವುದಿಲ್ಲ.
- ಕೆಲವು ಪಾಲುಗಾರರ ಅಜಾಗರೂಕತೆ ಅಥವಾ ಅವಿವೇಕತನದ ನಿರ್ಧಾರಗಳು ಸಂಸ್ಥೆಯ ಹಿನ್ನಡೆಗೆ ಕಾರಣವಾಗುತ್ತದೆ.
- ಪಾಲುದಾರಿಕೆ ಸಂಸ್ಥೆ ಸ್ಥಿರತೆಯ ಅಭಾವ ಹೊಂದಿರುತ್ತದೆ. ಯಾರಾದರೂ ಒಬ್ಬ ಪಾಲುಗಾರ ಮರಣ ಹೊಂದಿದರೆ ಅಥವಾ ದಿವಾಳಿಯಾದರೆ ಸಂಸ್ಥೆಯನ್ನು ವಿಸರ್ಜಿಸಬೇಕಾಗುತ್ತದೆ.
- ಪಾಲುಗಾರರು ತಮ್ಮ ಪಾಲನ್ನು ಬೇರೆಯವರಿಗೆ ಸುಲಭವಾಗಿ ವರ್ಗಾಯಿಸಲು ಸಾಧ್ಯವಿಲ್ಲ.
- ಸರ್ಕಾರದ ಹಿಡಿತ ಹೆಚ್ಚಾಗಿಲ್ಲದೆ ಇರುವುದರಿಂದ ಹಾಗೂ ಲೆಕ್ಕಪತ್ರಗಳನ್ನು ಪ್ರಕಟಪಡಿಸಬೇಕಾಗಿಲ್ಲದೆ ಇರುವುದರಿಂದ ಸಾರ್ವಜನಿಕರ ಬೆಂಬಲ ಸಿಗುವುದಿಲ್ಲ.
- ಎರಡು ಅಥವಾ ಹೆಚ್ಚು ಪಾಲಗಾರರು ಇರುವುದರಿಂದ ವ್ಯವಹಾರ ಗೌಪ್ಯತೆ ನಿರ್ವಹಣೆ ಕಷ್ಟಸಾಧ್ಯ.

### ಪಾಲುಗಾರಿಕೆ ಸಂಸ್ಥೆಗಳ ನೋಂದಣಿ (Registration of Partnership Firms) :

ಏಕವ್ಯಕ್ತಿ ಮಾಲೀಕತ್ವದ ಸಂಸ್ಥೆಗಳ ನೋಂದಣಿಗೆ ಅವಶ್ಯಕತೆಯಿಲ್ಲ. ಭಾರತದ ಪಾಲುಗಾರಿಕೆ ಸಂಸ್ಥೆಗಳ 1932ನೇ ಕಾಯ್ದೆಯ ಪ್ರಕಾರ ಪಾಲುಗಾರಿಕೆ ಸಂಸ್ಥೆಗಳ ನೋಂದಣಿಗೆ ಅವಕಾಶವಿದೆ. ಆದರೆ ಇದರ ನಿರ್ಬಂಧವಿಲ್ಲ. ನೋಂದಣಿ ಮಾಡುವುದು ಪಾಲುಗಾರರ ನಿರ್ಧಾರಕ್ಕೆ ಬಿಟ್ಟದ್ದು. ನೋಂದಣಿಯನ್ನು ಯಾವ ಸಂದರ್ಭದಲ್ಲಿ ಬೇಕಾದರೂ ಮಾಡುವ ಅವಕಾಶವಿದೆ. ನೋಂದಣಿಗೆ ನಿರ್ದಿಷ್ಟ ನಮೂನೆಯಲ್ಲಿ ಸರಿಯಾದ ವಿವರಗಳನ್ನು ಭರ್ತಿ ಮಾಡಿ, ನಿಗದಿತ ಶುಲ್ಕದೊಂದಿಗೆ ಸರ್ಕಾರದಿಂದ ನೇಮಿಸಲ್ಪಟ್ಟಿರುವ ನೋಂದಣಾಧಿಕಾರಿಗೆ ಸಲ್ಲಿಸಬೇಕು. ನೋಂದಣಾಧಿಕಾರಿಗಳು ವಿವರಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಎಲ್ಲವು ಸರಿಯಾಗಿದೆ ಎಂದು ಖಾತರಿ ಪಡೆದ ಮೇಲೆ ಸಂಸ್ಥೆಗೆ ನೋಂದಣಿ ಪತ್ರವನ್ನು ನೀಡುತ್ತಾರೆ.

### ಸಂಸ್ಥೆಗಳ ನೋಂದಣಿಯಿಂದಾಗುವ ಉಪಯೋಗಗಳು

- ನೋಂದಣಿ ಹೊಂದಿರುವ ಸಂಸ್ಥೆಯು ಒಂದು ನೂರು ರೂಪಾಯಿಗಳನ್ನು ಮೀರಿದ ಸಾಲದ ವಸೂಲಾತಿಗಾಗಿ ಮೂರನೇ ವ್ಯಕ್ತಿಗಳ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಬಹುದು.
- ನೋಂದಣಿಯಾಗಿರುವ ಸಂಸ್ಥೆಗಳು ಸಾಲಗಳ ವಸೂಲಿಗಾಗಿ ಇತರೆ ಪಾಲುಗಾರನ ವಿರುದ್ಧವೂ ದಾವೆ ಹೂಡಬಹುದು.
- ನೋಂದಣಿಯಾಗದ ಸಂಸ್ಥೆಯ ವಿರುದ್ಧ ಅಥವಾ ಅದರ ಪಾಲುಗಾರರ ವಿರುದ್ಧ ಮೂರನೇ ವ್ಯಕ್ತಿ ದಾವೆ ಹೂಡಬಹುದು.
- ನೋಂದಣಿಯಾಗದ ಸಂಸ್ಥೆ ಅಥವಾ ಅದರ ಪಾಲುಗಾರರ ವಿರುದ್ಧ ಯಾವುದೇ ಪಾಲುಗಾರನಾಗಲಿ ಸಂಸ್ಥೆಯ ವಿಸರ್ಜನೆಗೆ ಅಥವಾ ಲೆಕ್ಕಪತ್ರಗಳ ಇತ್ಯರ್ಥಕ್ಕಾಗಿ ನ್ಯಾಯಾಲಯದಲ್ಲಿ ದಾವೆ ಹೂಡಬಹುದು.

© KTBS Not to be republished

**ಹಿಂದು ಅವಿಭಕ್ತ ಕುಟುಂಬ ವ್ಯವಹಾರ ಸಂಸ್ಥೆಗಳು (Hindu Undivided family firms)**

ಈ ರೀತಿಯ ವ್ಯವಹಾರ ಸಂಸ್ಥೆಗಳು ಭಾರತದಲ್ಲಿ ಮಾತ್ರ ಅಸ್ತಿತ್ವದಲ್ಲಿವೆ. ಇವು ಹಿಂದೂ ಕಾನೂನಿನ ಅನ್ವಯ ಜಾರಿಗೆ ಬರುತ್ತವೆ. ಇವು ಹಿಂದೂ ಕುಟುಂಬದ ಎಲ್ಲ ಗಂಡಸರಿಂದ ಕೂಡಿದ ಸಂಸ್ಥೆಗಳಾಗಿರುತ್ತವೆ. ನಿರಂತರವಾಗಿ ಮೂರು ತಲೆಮಾರುಗಳ ಗಂಡು ಸದಸ್ಯರು ಈ ವ್ಯವಹಾರ ಸಂಸ್ಥೆಗಳ ಸದಸ್ಯರಾಗುತ್ತಾರೆ. ಅವಿಭಕ್ತ ಕುಟುಂಬದ ಅತ್ಯಂತ ಹಿರಿಯ ಗಂಡು ಸದಸ್ಯ ವ್ಯವಹಾರದ ಮೇಲ್ವಿಚಾರಣೆ ನೋಡಿಕೊಳ್ಳುತ್ತಾನೆ. ಅವನನ್ನು 'ಕರ್ತ' ಎಂದು ಕರೆಯುತ್ತಾರೆ. ಮಾಲೀಕತ್ವವು ಎಲ್ಲ ಸದಸ್ಯರದಾಗಿದ್ದರೂ ಆಡಳಿತವನ್ನು ಕರ್ತನು ನಿರ್ವಹಿಸುತ್ತಾನೆ. ಕರ್ತನ ಹೊಣೆಗಾರಿಕೆ ಅಪರಿಮಿತವಾಗಿರುತ್ತದೆ. ಇತರೆ ಸದಸ್ಯರ ಹೊಣೆಗಾರಿಕೆ ಅವರು ಹೂಡಿರುವ ಬಂಡವಾಳದ ಪ್ರಮಾಣಕ್ಕೆ ಸೀಮಿತವಾಗಿರುತ್ತದೆ.

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಬಿಟ್ಟಿರುವ ಜಾಗಗಳನ್ನು ಸರಿಯಾದ ಪದಗಳಿಂದ ತುಂಬಿರಿ.**

1. ಒಬ್ಬನೇ ವ್ಯಕ್ತಿಯಿಂದ ನಡೆಸಲ್ಪಡುವ ವ್ಯಾಪಾರಿ ಸಂಸ್ಥೆಯನ್ನು ——— ಎಂದು ಕರೆಯುತ್ತಾರೆ.
2. ಪಾಲುಗಾರಿಕೆ ಸಂಸ್ಥೆಗಳನ್ನು ನಡೆಸಿಕೊಂಡು ಹೋಗಲು ———ರಲ್ಲಿ ಪಾಲುಗಾರಿಕಾ ಸಂಸ್ಥೆಯ ಕಾನೂನು ಜಾರಿಗೆ ಬಂದಿತು.
3. ಹಣಕಾಸಿನ ವ್ಯವಹಾರ ಮಾಡುವ ಪಾಲುಗಾರಿಕಾ ಸಂಸ್ಥೆಯಲ್ಲಿ ಗರಿಷ್ಠ ——— ಪಾಲುಗಾರರಿಗೆ ಸೀಮಿತವಾಗಿರುತ್ತದೆ.
4. ಹಿಂದೂ ಅವಿಭಕ್ತ ಕುಟುಂಬ ವ್ಯವಹಾರ ಸಂಸ್ಥೆಗಳ ಮೇಲ್ವಿಚಾರಣೆ ನೋಡಿಕೊಳ್ಳುವವನನ್ನು ——— ಎಂದು ಕರೆಯುತ್ತಾರೆ.
5. ಭಾರತದಲ್ಲಿ ಮಾತ್ರ ಅಸ್ತಿತ್ವದಲ್ಲಿರುವ ಸಣ್ಣ ಪ್ರಮಾಣದ ವ್ಯವಹಾರ ಸಂಸ್ಥೆ ಎಂದರೆ ——— ಆಗಿದೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೆರಡು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1. ಸಣ್ಣ ಪ್ರಮಾಣದ ವ್ಯವಹಾರ ಸಂಸ್ಥೆಗಳಲ್ಲಿ ಮುಖ್ಯವಾದುವು ಯಾವುವು?
2. ಸಣ್ಣ ಪ್ರಮಾಣದ ವ್ಯವಹಾರ ಸಂಸ್ಥೆಗಳು ಗ್ರಾಹಕರಿಗೆ ಹೇಗೆ ಸಹಾಯ ಮಾಡುತ್ತವೆ?
3. ಪಾಲುಗಾರಿಕೆ ಸಂಸ್ಥೆಯೆಂದರೇನು?
4. ತಟಸ್ಥ ಪಾಲುಗಾರರೆಂದರೆ ಯಾರು? ತಿಳಿಸಿ.
5. ಪಾಲುಗಾರಿಕೆ ಸಂಸ್ಥೆಯ ವಿಸರ್ಜನೆ ಹೇಗೆ ಸರಳವಾಗಿದೆ ಬರೆಯಿರಿ.

©KTBS Not to be re published

**III. ಈ ಕೆಳಗಿನ ಪ್ರಶ್ನೆಗಳನ್ನು ಸೂಕ್ತ ರೀತಿಯಲ್ಲಿ ಉತ್ತರಿಸಿ.**

1. ಏಕ ಮಾಲೀಕತ್ವ ಸಂಸ್ಥೆಯ ಯಾವುದಾದರೂ ನಾಲ್ಕು ಅನುಕೂಲತೆಗಳನ್ನು ತಿಳಿಸಿ.
2. ಏಕ ಮಾಲೀಕತ್ವ ಸಂಸ್ಥೆಯ ಯಾವುದಾದರೂ ನಾಲ್ಕು ದೋಷಗಳನ್ನು ತಿಳಿಸಿ.
3. ಪಾಲುಗಾರಿಕೆ ಸಂಸ್ಥೆಗಳು ಹೇಗೆ ಪ್ರಾರಂಭವಾಗುತ್ತವೆ? ಸಂಕ್ಷಿಪ್ತವಾಗಿ ವಿವರಿಸಿ.
4. ಪಾಲುಗಾರಿಕೆ ಸಂಸ್ಥೆಗಳ ವಿವಿಧ ರೀತಿಯ ಪಾಲುಗಾರರನ್ನು ತಿಳಿಸಿ.
5. ಪಾಲುಗಾರಿಕೆ ಸಂಸ್ಥೆಗಳ ಯಾವುದಾದರೂ ನಾಲ್ಕು ಅನುಕೂಲತೆಗಳನ್ನು ತಿಳಿಸಿ.
6. ಪಾಲುಗಾರಿಕೆ ಸಂಸ್ಥೆಗಳ ಯಾವುದಾದರೂ ನಾಲ್ಕು ದೋಷಗಳನ್ನು ತಿಳಿಸಿ.
7. ಪಾಲುಗಾರಿಕೆ ಸಂಸ್ಥೆಗಳನ್ನು ನೋಂದಾಯಿಸುವುದರಿಂದಾಗುವ ಅನುಕೂಲತೆಗಳೇನು?
8. ಹಿಂದೂ ಅವಿಭಕ್ತ ಕುಟುಂಬ ಪದ್ಧತಿಯ ವ್ಯವಹಾರ ಸಂಸ್ಥೆಯ ಬಗ್ಗೆ ಬರೆಯಿರಿ.

**IV. ಚಟುವಟಿಕೆ.**

ಉತ್ತಮವಾಗಿ ಪ್ರಚುರಪಡಿಸಿರುವ ಯಾವುದಾದರೂ ಎರಡು ಜಾಹೀರಾತುಗಳನ್ನು ಸಂಗ್ರಹಿಸಿ.

*****

©KTBS Not to be re published